
ಶನಿವಾರ, ಜೂನ್ 11, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 161 | ಪುಟ 22
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಎಲ್ಲವನ್ನೂ ತಾನೊಬ್ಬಳೇ ಮಾಡಬೇಕು, ಎಲ್ಲರಿಂದಲೂ ಸೈ ಎನಿಸಿಕೊಳ್ಳಬೇಕು ಎನ್ನುವ ಅತಿನಿರೀಕ್ಷೆ ಸ್ವಾಭಾವಿಕವಂತೂ ಅಲ್ಲ. ಇದು ಮನೋದೈಹಿಕ ಸಮಸ್ಯೆ. ಇದಕ್ಕೆ ಪರಿಹಾರವೇನು?



ಚರ್ಚೆ
ಪರಿಷ್ಕೃತ ಪಠ್ಯದ ಕುರಿತು ಸಾರ್ವಜನಿಕರಿಂದ ಆಕ್ಷೇಪ ಆಹ್ವಾನ ಸರಿಯಾದ ಕ್ರಮವೇ?

ಬಡ್ಡಿ ದರ ಹೆಚ್ಚಿಸಿದ ಬ್ಯಾಂಕ್‌ಗಳು 8

ಔರಾದಕರ ಕೆಎಟಿಗೆ ನೇಮಕ 5A

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
54,303	16,202	₹52, 890 (ಬೆಂಗಳೂರು)	₹62,800 (ಬೆಂಗಳೂರು)	77.93

ಒಳ ಪುಟಗಳು



ನೂಪುರ್, ನವೀನ್ ಬಂಧನಕ್ಕೆ ಆಗ್ರಹ: ದೇಶದ ವಿವಿಧೆಡೆ ಘರ್ಷಣೆ

ಮುಸ್ಲಿಮರ ದಿಢೀರ್ ಪ್ರತಿಭಟನೆ

ದೆಹಲಿ/ಕೋಲ್ಕತ್ತ/ರಾಂಚಿ/ಶ್ರೀನಗರ/ಮುಂಬೈ (ಪಿಟಿಐ): ಪ್ರವಾದಿ ಮಹಮ್ಮದರ ಕುರಿತು ಅವಹೇಳನಕಾರಿ ಹೇಳಿಕೆ ನೀಡಿದ ಬಿಜೆಪಿಯ ನೂಪುರ್ ಶರ್ಮಾ ಮತ್ತು ನವೀನ್ ಜಿಂದಾಲ್ ಅವರನ್ನು ತಕ್ಷಣವೇ ಬಂಧಿಸಬೇಕು ಎಂದು ಒತ್ತಾಯಿಸಿ ಮುಸ್ಲಿಮರು ದೇಶದ ಹಲವೆಡೆ ಶುಕ್ರವಾರ ದಿಢೀರ್ ಪ್ರತಿಭಟನೆ ನಡೆಸಿದ್ದಾರೆ. ಉತ್ತರ ಪ್ರದೇಶದ ಹಲವೆಡೆ ಪ್ರತಿಭಟನೆ ವೇಳೆ ಪೊಲೀಸರು ಮತ್ತು ಪ್ರತಿಭಟನಕಾರರ ಮಧ್ಯೆ ಘರ್ಷಣೆ ನಡೆದಿದೆ. ರಾಂಚಿಯಲ್ಲಿ ಪ್ರತಿಭಟನಕಾರರನ್ನು ನಿಯಂತ್ರಿಸಲು ಪೊಲೀಸರು ಗಾಳಿಯಲ್ಲಿ ಗುಂಡು ಹಾರಿಸಿದ್ದಾರೆ.

ಶುಕ್ರವಾರ ಮಧ್ಯಾಹ್ನದ ನಮಾಜ್‌ನ ನಂತರ ದೇಶದ ಹಲವೆಡೆ ಪ್ರತಿಭಟನೆ ನಡೆಸಲಾಗಿದೆ. ಉತ್ತರ ಪ್ರದೇಶದ ಪ್ರಯಾಗ್‌ರಾಜ್ ಜಿಲ್ಲೆಯಲ್ಲಿ ಪ್ರತಿಭಟನಕಾರರು ಕಲ್ಲು ತೂರಿದ್ದಾರೆ. ಅವರನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿದ್ದಾರೆ.

ಪ್ರತಿಭಟನೆ ವೇಳೆ ದುಷ್ಕರ್ಮಿಗಳು ಪೊಲೀಸ್ ವಾಹನಕ್ಕೆ ಬೆಂಕಿ ಹಚ್ಚಿದ್ದಾರೆ. ಪರಿಸ್ಥಿತಿ ನಿಯಂತ್ರಣಕ್ಕೆ ಬಾರದೇ ಇದ್ದಾಗ, ಪೊಲೀಸರು ರಬ್ಬರ್ ಗುಂಡುಗಳನ್ನು ಹಾರಿಸಿದ್ದಾರೆ. ಈ ವೇಳೆ ಹಲವು ಪ್ರತಿಭಟನಕಾರರು ಮತ್ತು ಪೊಲೀಸರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ‘ಹಿಂಸಾಚಾರದಲ್ಲಿ ತೊಡಗಿದ್ದ ಹಲವರನ್ನು ವಶಕ್ಕೆ ಪಡೆದಿದ್ದೇವೆ. ಪರಿಸ್ಥಿತಿ ನಿಯಂತ್ರಣದಲ್ಲಿ ಇದೆ’ ಎಂದು ಉತ್ತರ ಪ್ರದೇಶ ಪೊಲೀಸರು ಮಾಹಿತಿ ನೀಡಿದ್ದಾರೆ.



ನೂಪುರ್ ಶರ್ಮಾ ಹೇಳಿಕೆ ಖಂಡಿಸಿ ಜಾರ್ಖಂಡ್‌ನ ರಾಂಚಿಯಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದವರನ್ನು ಪೊಲೀಸರು ಚದುರಿಸಿದರು –ಪಿಟಿಐ ಚಿತ್ರ

8ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 8

‘ಶಾ ಅಧಿಕಾರದಲ್ಲಿ ಇರಬೇಕೇ?’

‘ಕಾಶ್ಮೀರವು ಭಾರತದ ಬೇರೆ ಭಾಗಗಳಂತೆ ಕಾಣಬೇಕು ಎಂದು ನಾವು ಬಯಸಿದ್ದೆವು. ಆದರೆ, ಇಂದು ಇಡೀ ಭಾರತವು ಕಾಶ್ಮೀರದಂತೆ ಕಾಣುತ್ತಿದೆ. ಇದಕ್ಕೆ ಪರಿಹಾರ ಕಂಡುಕೊಳ್ಳುವುದು ಹೇಗೆ ಎಂಬ ಬಗ್ಗೆ ಗೃಹ ಸಚಿವ ಅಮಿತ್ ಶಾ ಅವರಿಗೆ ಏನಾದರೂ ಅರಿವು ಇದೆಯೇ? ಮುಂದಿನ 48 ಗಂಟೆಗಳಲ್ಲಿ ಪರಿಸ್ಥಿತಿ ನಿಯಂತ್ರಣಕ್ಕೆ ಬರದೇ ಇದ್ದರೆ, ಶಾ ಅಧಿಕಾರದಲ್ಲಿ ಇರಬೇಕೇ? ಮೋದಿ ಅವರು ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಬೇಕು’ ಎಂದು ಬಿಜೆಪಿ ಹಿರಿಯ ನಾಯಕ ಸುಬ್ರಮಣಿಯನ್ ಸ್ವಾಮಿ ಆಗ್ರಹಿಸಿದ್ದಾರೆ.

ಕೈ–ದಳ ಜಿದ್ದು: ಲಹರ್‌ಗೆ ಲಾಟರಿ

ರಾಜ್ಯಸಭೆ ಚುನಾವಣೆ: ಬಿಜೆಪಿಗೆ 3, ಕಾಂಗ್ರೆಸ್‌ಗೆ 1 ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳ ಜಿದ್ದಾಜಿದ್ದಿನ ಕಿತ್ತಾಟದಿಂದ ಬಿಜೆಪಿಗೆ ಲಾಭವಾಗಿದೆ. ‘ಕಮಲ’ ಪಕ್ಷದ ಮೂರನೇ ಅಭ್ಯರ್ಥಿ ಲಹರ್ ಸಿಂಗ್ ಗೆಲುವು ಸಾಧಿಸಿದ್ದಾರೆ. ನಾಲ್ಕು ಸ್ಥಾನಗಳ ಪೈಕಿ ಬಿಜೆಪಿ ಮೂರು ಹಾಗೂ ಕಾಂಗ್ರೆಸ್ ಒಂದು ಸ್ಥಾನ ದಕ್ಕಿಸಿಕೊಂಡಿವೆ.

ಬಿಜೆಪಿಯ ನಿರ್ಮಲಾ ಸೀತಾರಾಮನ್ 46, ಜಗ್ಗೇಶ್ 44, ಲಹರ್ ಸಿಂಗ್ 33 ಮತ್ತು ಕಾಂಗ್ರೆಸ್‌ನ ಜೈರಾಂ ರಮೇಶ್ ಅವರು 46 ಮತಗಳನ್ನು ಪಡೆದು ಗೆಲುವು ಸಾಧಿಸಿದರು. ಜೆಡಿಎಸ್‌ನ ಕುಪೇಂದ್ರ ರೆಡ್ಡಿ 30 ಮತ್ತು ಕಾಂಗ್ರೆಸ್‌ನ ಎರಡನೇ ಅಭ್ಯರ್ಥಿ ಮನ್ಸೂರ್ ಖಾನ್ 25 ಮತಗಳನ್ನಷ್ಟೇ ಪಡೆಯಲು ಶಕ್ಯರಾದರು.

ನಿರ್ಮಲಾ ಮತ್ತು ಜೈರಾಂ ರಮೇಶ್ ತಲಾ 46 ಪ್ರಥಮ ಪ್ರಾಶಸ್ತ್ಯ ಮತಗಳನ್ನು ಪಡೆದು ಜಯಗಳಿಸಿದರು. ಜಗ್ಗೇಶ್ ಮೊದಲ ಪ್ರಾಶಸ್ತ್ಯದ 44 ಮತಗಳನ್ನು ಪಡೆದರೆ, ಲಹರ್‌ಸಿಂಗ್ ಮೊದಲ ಪ್ರಾಶಸ್ತ್ಯದಲ್ಲಿ (33) ಒಂದು ಹೆಚ್ಚುವರಿ ಮತ, ಎರಡನೇ ಪ್ರಾಶಸ್ತ್ಯದಲ್ಲಿ ಎರಡು ಹೆಚ್ಚುವರಿ ಮತಗಳನ್ನು ಪಡೆದರು. ಆ ಎರಡೂ ಮತಗಳು ಕಾಂಗ್ರೆಸ್ ಕಡೆಯಿಂದ ಬಂದಿವೆ ಎಂದು ಮೂಲಗಳು ಹೇಳಿವೆ.

ತಮ್ಮ ಎರಡನೇ ಅಭ್ಯರ್ಥಿ ಮನ್ಸೂರ್ ಖಾನ್ ಗೆಲುವಿಗಾಗಿ ಕಾಂಗ್ರೆಸ್ ಮತ್ತು ಕುಪೇಂದ್ರ ರೆಡ್ಡಿ ಗೆಲುವಿಗಾಗಿ ಜೆಡಿಎಸ್ ಹೆಣೆದ ತಂತ್ರಗಳು ಫಲ ನೀಡಲಿಲ್ಲ. ಅಡ್ಡ ಮತದಾನದ ಭೀತಿ ಮತ್ತು ಸಿದ್ದರಾಮಯ್ಯ– ಎಚ್.ಡಿ. ಕುಮಾರಸ್ವಾಮಿ ಪರಸ್ಪರ ಜಗ್ಗಾಟದ ಮಧ್ಯೆಯೂ ಮತದಾನದ ವೇಳೆ ದೊಡ್ಡ ಮಟ್ಟದ ನಾಟಕೀಯ ಬೆಳವಣಿಗೆಗಳೂ ನಡೆಯಲಿಲ್ಲ. ಆದರೆ, ಜೆಡಿಎಸ್‌ನ ಕೋಲಾರ ಶಾಸಕ ಕೆ.ಶ್ರೀನಿವಾಸಗೌಡ ಕಾಂಗ್ರೆಸ್‌ಗೂ, ಗುಬ್ಬಿ ಶಾಸಕ ಎಸ್.ಆರ್. ಶ್ರೀನಿವಾಸ್ ಬಿಜೆಪಿ ಅಭ್ಯರ್ಥಿಗೆ ಅಡ್ಡ ಮತದಾನ ಮಾಡಿದರು. ‘ಆತ್ಮಸಾಕ್ಷಿ’ಯ ಮತವನ್ನು ಹಾಕಿ ಎಂದು ಸಿದ್ದರಾಮಯ್ಯ ಅವರು ಜೆಡಿಎಸ್ ಶಾಸಕರಿಗೆ ಮನವಿ ಮಾಡಿ ಬರೆದ ಪತ್ರ ಯಾವುದೇ ಪರಿಣಾಮ ಬೀರಲಿಲ್ಲ.

7ನೇ ಪುಟ ನೋಡಿ
ಬೊಮ್ಮಾಯಿಗೆ ಮೋದಿ ಶ್ಲಾಘನೆ 5



ನಿರ್ಮಲಾ | ಲಹರ್ ಸಿಂಗ್ | ಜಗ್ಗೇಶ್ | ಜೈರಾಂ ರಮೇಶ್

- ಜೆಡಿಎಸ್‌ನ ಕೆ. ಶ್ರೀನಿವಾಸಗೌಡ ಕಾಂಗ್ರೆಸ್‌ಗೆ ಅಡ್ಡ ಮತದಾನ ಮಾಡಿದ್ದೂ ಅಲ್ಲದೇ, ತಾವು ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸುವುದಾಗಿ ಹೇಳಿದರು. ಇದರಿಂದ ಸಿಟ್ಟಿಗೆದ್ದ ಎಚ್.ಡಿ.ಕುಮಾರಸ್ವಾಮಿ ಪಕ್ಷ ಬಿಟ್ಟು ಹೋಗುವಂತೆ ಶ್ರೀನಿವಾಸಗೌಡ ಅವರಿಗೆ ಹೇಳಿದರು.
- ಜೆಡಿಎಸ್‌ನ ಎಸ್.ಆರ್.ಶ್ರೀನಿವಾಸ್ ಅವರು ಚಾಣಾಕ್ಷತೆಯಿಂದ ಮತ ಪತ್ರವನ್ನು ಮಡಚಿ ಖಾಲಿ ಭಾಗವನ್ನು ಮಾತ್ರ ಎಚ್.ಡಿ.ರೇವಣ್ಣ ಅವರಿಗೆ ತೋರಿಸಿ, ಬಳಿಕ ಲಹರ್ ಸಿಂಗ್ ಅವರಿಗೆ ಮತ ಚಲಾಯಿಸಿದ್ದಾರೆ ಎಂದು ಜೆಡಿಎಸ್ ನಾಯಕರು ದೂರಿದ್ದಾರೆ.
- ಜೆಡಿಎಸ್‌ನ ಎಚ್.ಡಿ.ರೇವಣ್ಣ ಅವರು ತಾವು ಮತವನ್ನು ಚಲಾಯಿಸುವುದಕ್ಕೆ ಮುನ್ನ ಮತ ಪತ್ರವನ್ನು ಕಾಂಗ್ರೆಸ್‌ನ ಡಿ.ಕೆ.ಶಿವಕುಮಾರ್ ತೋರಿಸಿದ್ದು ವಿವಾದಕ್ಕೆ ಕಾರಣವಾಯಿತು. ರೇವಣ್ಣ ಅವರ ಮತವನ್ನು ಅಸಿಂಧುಗೊಳಿಸಬೇಕು ಎಂದು ಚುನಾವಣಾ ಆಯೋಗಕ್ಕೆ ಬಿಜೆಪಿ ಮತ್ತು ಕಾಂಗ್ರೆಸ್ ದೂರು ಸಲ್ಲಿಸಿದವು.

ಇನ್ನಷ್ಟು ಸುದ್ದಿಗಳು 7

ಚಿನಕುರಳಿ
ಪ್ರಕಾಶ್ ಶೆಟ್ಟಿ



ಬಿಬಿಎಂಪಿ: ಶೇ 50ರಷ್ಟು ಮೀಸಲಾತಿಗೆ ಸುಗ್ರೀವಾಜ್ಞೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಚುನಾವಣೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ನೀಡುವ ಮೀಸಲಾತಿಯ ಪ್ರಮಾಣವನ್ನು ಶೇಕಡ 50ಕ್ಕೆ ಸೀಮಿತಗೊಳಿಸಿ ಶುಕ್ರವಾರ ಸುಗ್ರೀವಾಜ್ಞೆ ಹೊರಡಿಸಲಾಗಿದೆ.

ಮೀಸಲಾತಿಯ ಪ್ರಮಾಣಕ್ಕೆ ಮಿತಿ ವಿಧಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಯ್ದೆ 2020ಕ್ಕೆ ತಿದ್ದುಪಡಿ ತರಲಾಗಿದೆ. ಅದನ್ನು ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸಿ ಅಧಿಸೂಚನೆ ಹೊರಡಿಸಲಾಗಿದೆ. ಸುಪ್ರೀಂ ಕೋರ್ಟ್ ಆದೇಶದಂತೆ ವಾರ್ಡ್‌ಗಳ ಪುನರ್ ವಿಂಗಡಣೆ ಮತ್ತು ಮೀಸಲಾತಿ ನಿಗದಿ ಪ್ರಕ್ರಿಯೆ ನಡೆಸಬೇಕಿರುವುದರಿಂದ ಸರ್ಕಾರ ಈ ಕ್ರಮ ಕೈಗೊಂಡಿದೆ.



‘ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ಕಲ್ಪಿಸುವುದರ ಜತೆಗೆ ನೇರ ಚುನಾವಣೆಯಲ್ಲಿ ಭರ್ತಿಮಾಡುವ ಒಟ್ಟು ಸ್ಥಾನಗಳ ಮೂರನೇ ಒಂದರಷ್ಟು ಸ್ಥಾನಗಳು ಮೀರದಂತೆ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸಬೇಕು’ ಎಂಬ ಅಂಶ 2020ರ ಬಿಬಿಎಂಪಿ ಕಾಯ್ದೆಯಲ್ಲಿತ್ತು.

‘ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ಮೀಸಲಿರಿಸಿದ ಪಾಲಿಕೆಯ ಒಟ್ಟು ಸ್ಥಾನಗಳ ಸಂಖ್ಯೆಯು ಶೇ 50ರಷ್ಟನ್ನು ಮೀರುವಂತಿಲ್ಲ’ ಎಂಬ ತಿದ್ದುಪಡಿಯನ್ನು ಸುಗ್ರೀವಾಜ್ಞೆ ಮೂಲಕ ಜಾರಿಗೆ ತರಲಾಗಿದೆ.

ಒಟ್ಟು ಮೀಸಲಾತಿಯ ಪ್ರಮಾಣ ಶೇ 50ರಷ್ಟನ್ನು ಮೀರುವಂತಿಲ್ಲ ಎಂಬ ಸುಪ್ರೀಂ ಕೋರ್ಟ್ ಆದೇಶ ಪಾಲನೆ ಭಾಗವಾಗಿ ಈ ಕ್ರಮ ಕೈಗೊಳ್ಳಲಾಗಿದೆ. ಈ ಸುಗ್ರೀವಾಜ್ಞೆಯ ವ್ಯಾಪ್ತಿಯಲ್ಲೇ ವಾರ್ಡ್‌ಗಳ ಪುನರ್ ವಿಂಗಡಣೆ ಮತ್ತು ಮೀಸಲಾತಿ ನಿಗದಿ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ರಾಜಸ್ಥಾನ: 3 ಸ್ಥಾನ ಗೆದ್ದ ಕಾಂಗ್ರೆಸ್

ಜೈಪುರ/ನವದೆಹಲಿ (ಪಿಟಿಐ): ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ರಾಜಸ್ಥಾನದಿಂದ ನಡೆದ ದ್ವೈವಾರ್ಷಿಕ ಚುನಾವಣೆಯಲ್ಲಿ ಮೂರು ಸ್ಥಾನಗಳನ್ನು ಕಾಂಗ್ರೆಸ್ ಗೆದ್ದುಕೊಂಡಿದೆ ಎಂದು ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಶುಕ್ರವಾರ ಹೇಳಿದ್ದಾರೆ. ಒಂದು ಸ್ಥಾನ ಬಿಜೆಪಿ ಪಾಲಾಗಿದೆ. ಝೀ ಸಮೂಹದ ಅಧ್ಯಕ್ಷ ಸುಭಾಷ್ ಚಂದ್ರ ಅವರು ಬಿಜೆಪಿ ಬೆಂಬಲದಲ್ಲಿ ಪಕ್ಷೇತರರಾಗಿ ಐದನೇ ಅಭ್ಯರ್ಥಿಯಾಗಿ ಕಣಕ್ಕೆ ಇಳಿದಿದ್ದರು. ಸುಭಾಷ್ ಚಂದ್ರ ಅವರಿಗೆ ಸೋಲಾಗಿದೆ.

ಕಾಂಗ್ರೆಸ್‌ನ ರಣದೀಪ್ ಸುರ್ಜೇವಾಲಾ, ಮುಕುಲ್ ವಾಸ್ನಿಕ್ ಮತ್ತು ಪ್ರಮೋದ್ ತಿವಾರಿ, ಬಿಜೆಪಿಯ ಘನಶ್ಯಾಮ್ ತಿವಾರಿ ಗೆದ್ದವರು. ಬಿಜೆಪಿಯ ಶಾಸಕಿ ಶೋಭಾರಾಣಿ ಕುಶ್ವಾಹಾ ಅವರನ್ನು ಕಾಂಗ್ರೆಸ್ ಅಭ್ಯರ್ಥಿಗೆ ‘ಅಡ್ಡ ಮತ’ ಹಾಕಿದ ಕಾರಣಕ್ಕೆ ಪಕ್ಷದಿಂದ ಅಮಾನತು ಮಾಡಲಾಗಿದೆ.

ಮಹಾರಾಷ್ಟ್ರದ ಆರು, ಹರಿಯಾಣದ ಎರಡು ಸ್ಥಾನಗಳಿಗೂ ಚುನಾವಣೆ ನಡೆದಿದೆ. ನಿಯಮ ಉಲ್ಲಂಘಿಸಲಾಗಿದೆ ಎಂದು ಬಿಜೆಪಿ ಆರೋಪಿಸಿದ ಕಾರಣ ಎರಡೂ ರಾಜ್ಯಗಳಲ್ಲಿ ಮತ ಎಣಿಕೆ ನಿಲ್ಲಿಸಲಾಗಿತ್ತು. ಆದರೆ ಮತ ಎಣಿಕೆಗೆ ಆಯೋಗವು ಮಧ್ಯರಾತ್ರಿ ವೇಳೆಗೆ ಆದೇಶ ನೀಡಿದೆ. ಶಿವಸೇನಾ ಶಾಸಕ ಸುಹಾಸ್ ಹಾಕಿದ್ದ ಮತ ತಿರಸ್ಕರಿಸಲು ಚುನಾವಣಾಧಿಕಾರಿಗೆ ಸೂಚಿಸಿದೆ. ಮಹಾ ವಿಕಾಸ ಆಘಾಡಿಯ ಮೂವರು ಶಾಸಕರು ಮತಪತ್ರಗಳನ್ನು ಏಜೆಂಟರಿಗೆ ತೋರಿಸುವ ಬದಲು ಅವರ ಕೈಗೆ ಕೊಟ್ಟಿದ್ದಾರೆ ಎಂದು ಬಿಜೆಪಿ ದೂರು ನೀಡಿತ್ತು.


ಜನಪರ ವಿದೇಶಾಂಗ ನೀತಿ: ಜೈಶಂಕರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿಯ ಪರಿಣಾಮ ಕಳೆದ 8 ವರ್ಷಗಳಲ್ಲಿ ಜನಪರ ವಿದೇಶಾಂಗ ನೀತಿಯನ್ನು ಭಾರತ ಅಳವಡಿಸಿಕೊಂಡಿದೆ ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ತಿಳಿಸಿದರು.

ಬಿಜೆಪಿ ರಾಜ್ಯ ಘಟಕದ ವತಿಯಿಂದ ಶುಕ್ರವಾರ ಹಮ್ಮಿಕೊಂಡಿದ್ದ ‘2014ರ ಬಳಿಕ ಭಾರತದ ವಿದೇಶಾಂಗ ನೀತಿ’ ವಿಷಯದ ಕುರಿತು ಅವರು ಮಾತನಾಡಿದರು. ‘ಬೆಂಗಳೂರು ಉತ್ತಮ ಹೆಸರು ಮತ್ತು ಬ್ರ್ಯಾಂಡಿಂಗ್ ಮೂಲಕ ಭಾರತಕ್ಕೆ ಮಹತ್ವದ ಕೊಡುಗೆ ನೀಡಿದೆ. ದೇಶದಲ್ಲಿ ಬೇಗನೆ ಪಾಸ್‌ಪೋರ್ಟ್ ಸಿಗುವಂತೆ ಮಾಡಿದ್ದು ಸೇರಿ ಆದ್ಯತೆಗಳು ಕೂಡ ಬದಲಾಗಿವೆ. ಇದು ನಮ್ಮ ಸರ್ಕಾರ ಮಹತ್ವದ ಕೊಡುಗೆ’ ಎಂದು ಹೇಳಿದರು.

ಹಿಂದೆ ಪಾಸ್‌ಪೋರ್ಟ್ ಪಡೆಯಲು ಹಲವು ತಿಂಗಳ ಕಾಲ ಕಾಯಬೇಕಾಗುತ್ತಿತ್ತು. ಈಗ ತ್ವರಿತಗತಿಯಲ್ಲಿ ಪಾಸ್‌ಪೋರ್ಟ್ ಸಿಗುತ್ತದೆ. ಜನರ ಸಮಸ್ಯೆಗಳನ್ನು ಅರಿತು ಪರಿಹಾರ ಕಂಡು



ಹಿಡಿಯುವ ಪ್ರಧಾನಿ ಇರುವ ಕಾರಣ ಇದೆಲ್ಲ ಸಾಧ್ಯವಾಗಿದೆ. ಕೋವಿಡ್ ಸಂದರ್ಭದಲ್ಲಿ ಹೊರ ದೇಶಗಳಲ್ಲಿ ಸಂಕಷ್ಟದಲ್ಲಿ ಸಿಲುಕಿದ್ದ 70 ಲಕ್ಷ ಜನರನ್ನು ಕರೆತರಲಾಯಿತು. ಉಕ್ರೇನ್ ಯುದ್ಧದ ಸಂದರ್ಭದಲ್ಲಿ ಅಲ್ಲಿದ್ದ ಭಾರತೀಯ ವಿದ್ಯಾರ್ಥಿಗಳನ್ನು ಭಾರತಕ್ಕೆ ಕರೆ ತರುವುದರಲ್ಲೂ ಪ್ರಧಾನಿಯವರು ಕಳಕಳಿಯ ನೀತಿಯನ್ನು ಅಳವಡಿಸಿಕೊಂಡರು ಎಂದು ವಿವರಿಸಿದರು.

‘ನೇಪಾಳದಲ್ಲಿ ಭೂಕಂಪ, ಯೆಮನ್‌ನಲ್ಲಿ ಯುದ್ಧ, ಮೊಜಾಂಬಿಕ್‌ನಲ್ಲಿ ನೆರೆ ಸೇರಿದಂತೆ ಹತ್ತಾರು ಸಮಸ್ಯೆಗಳಿಗೆ ಸ್ಪಂದಿಸುವ ಗುಣ ನಮ್ಮ ಸರ್ಕಾರದ್ದಾಗಿತ್ತು, ಯೋಗವನ್ನು ವಿಶ್ವದಾದ್ಯಂತ ಪ್ರಸಾರ ಮಾಡುವಲ್ಲಿ ಮೋದಿಯವರ ಚಿಂತನೆ ಮಹತ್ವದ ಪಾತ್ರವಹಿಸಿದೆ. ಭಾರತದಿಂದ ವಿದೇಶಕ್ಕೆ ಪ್ರವಾಸ ಹೋಗುವ ಮತ್ತು ಹೊರ ದೇಶಗಳಿಂದ ಭಾರತಕ್ಕೆ ಬರಲು ಇದ್ದ ನೀತಿಯನ್ನು ಸರಳಗೊಳಿಸಿದ್ದರಿಂದ ಪ್ರವಾಸೋದ್ಯಮಕ್ಕೆ ಉತ್ತೇಜನ ಸಿಕ್ಕಿದೆ’ ಎಂದರು.

₹ 40 ಕೋಟಿ ವೆಚ್ಚದ ಕಾಮಗಾರಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಹೆಸರುಘಟ್ಟ ಮತ್ತು ದಾಸನಪುರ ಹೋಬಳಿಗಳ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ₹ 40 ಕೋಟಿ ವೆಚ್ಚದಲ್ಲಿ ಕೈಗೊಂಡಿರುವ ರಸ್ತೆ ಅಭಿವೃದ್ಧಿ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಎಸ್.ಆರ್.ವಿಶ್ವನಾಥ್ ಅವರು ಬ್ಯಾಲಕೆರೆ ಗ್ರಾಮದಲ್ಲಿ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ‘ಪ್ರಧಾನಮಂತ್ರಿಗಳ ಗ್ರಾಮ ಸಡಕ್ ಯೋಜನೆಯಡಿಯಲ್ಲಿ ಕ್ಷೇತ್ರದ ತರಬನಹಳ್ಳಿಯಿಂದ ಬ್ಯಾಲಕೆರೆ ಗಡಿಯವರೆಗೆ ಮತ್ತು ಚೊಕ್ಕನಹಳ್ಳಿಯಿಂದ ಬುಡಮನಹಳ್ಳಿಯವರೆಗೆ ₹2.90 ಕೋಟಿ ವೆಚ್ಚದಲ್ಲಿ ರಸ್ತೆ ಡಾಂಬರೀಕರಣ ಕಾಮಗಾರಿಗೆ ಚಾಲನೆ ನೀಡಲಾಗಿದೆ.

ದಾಸನಪುರ ಹೋಬಳಿಯಲ್ಲಿ ಬಿಡಿಎ ಅನುದಾನದಡಿಯಲ್ಲಿ ಸುಮಾರು ₹.37 ಕೋಟಿ ವೆಚ್ಚದಲ್ಲಿ 18 ಕಿ.ಮೀ ಉದ್ದದ ರಸ್ತೆ ಅಭಿವೃದ್ಧಿ ಮತ್ತು ಒಳಚರಂಡಿ ಕಾಮಗಾರಿ ಹಾಗೂ ಬಯಲುಕೊನೇನಹಳ್ಳಿಯಲ್ಲಿ ₹30 ಲಕ್ಷ ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ ಸೇರಿ ಒಟ್ಟು ₹40 ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಲಾಗಿದೆ ಎಂದು ತಿಳಿಸಿದರು.

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ದಿಬ್ಬೂರು ಜಯಣ್ಣ, ಕಸಘಟ್ಟಪುರ ಗ್ರಾಮ ಪಂಚಾಯಿತಿ ಅಧ್ಯಕ್ಷ ಬಾಲರಾಜ್, ಮಾಜಿ ಅಧ್ಯಕ್ಷೆ ಮಂಜುಳಾ ವೆಂಕಟೇಶ್, ಬಿಜೆಪಿ ಮುಖಂಡರಾದ ಎಸ್.ಎನ್. ರಾಜಣ್ಣ, ಎಚ್.ಬಿ.ಹನುಮಯ್ಯ, ಡಿ.ಜಿ. ಅಪ್ಪಯಣ್ಣ, ಸತೀಶ್ ಕಡತನಮಲೆ, ಮಂಜುನಾಥರೆಡ್ಡಿ, ಬಾಬು, ನಾಗದಾಸನಹಳ್ಳಿ ಮುನೇಗೌಡ ಮತ್ತಿತರರು ಉಪಸ್ಥಿತರಿದ್ದರು.



ಯಲಹಂಕ ಕ್ಷೇತ್ರದ ಹೆಸರಘಟ್ಟ ಮತ್ತು ದಾಸನಪುರ ಹೋಬಳಿಗಳ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ 40 ಕೋಟಿ ವೆಚ್ಚದಲ್ಲಿ ಕೈಗೊಂಡಿರುವ ರಸ್ತೆ ಅಭಿವೃದ್ಧಿ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಎಸ್.ಆರ್.ವಿಶ್ವನಾಥ್, ಬ್ಯಾಲಕೆರೆ ಗ್ರಾಮದಲ್ಲಿ ಚಾಲನೆ ನೀಡಿದರು. ಕಸಘಟ್ಟಪುರ ಗ್ರಾಮ ಪಂಚಾಯಿತಿ ಅಧ್ಯಕ್ಷ ಬಾಲರಾಜ್, ಮಾಜಿ ಅಧ್ಯಕ್ಷೆ ಮಂಜುಳಾ ವೆಂಕಟೇಶ್, ಬಿಜೆಪಿ ಮುಖಂಡರಾದ ಎಚ್.ಬಿ.ಹನುಮಯ್ಯ, ಸತೀಶ್ ಕಡತನಮಲೆ, ಬಾಬು, ನಾಗದಾಸನಹಳ್ಳಿ ಮುನೇಗೌಡ ಇತರರು ಇದ್ದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಸುಲಿಗೆಗೆ ಸಂಚು: ರೌಡಿ ಟಕ್ಲಾ ಬಂಧನ

ಬೆಂಗಳೂರು: ಸಾರ್ವಜನಿಕರನ್ನು ಅಡ್ಡಗಟ್ಟಿ ಸುಲಿಗೆ ಮಾಡಲು ಸಂಚು ರೂಪಿಸಿದ್ದ ಆರೋಪದಡಿ ರೌಡಿ ಪವನ್ ಅಲಿಯಾಸ್ ಟಕ್ಲಾ ಹಾಗೂ ಆತನ ಐವರು ಸಹಚರರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ಕುಮಾರಸ್ವಾಮಿ ಲೇಔಟ್ ಪೊಲೀಸ್ ಠಾಣೆ ವ್ಯಾಪ್ತಿಯ ಇಲಿಯಾಸ್ ನಗರದ ಪೈಪ್‌ಲೈನ್ ರಸ್ತೆಯಲ್ಲಿ ರೌಡಿ ಹಾಗೂ ಆತನ ಸಹಚರರು ಇರುವ ಮಾಹಿತಿ ಸಿಕ್ಕಿತ್ತು. ಅವರೆಲ್ಲರನ್ನೂ ಬಂಧಿಸಲಾಗಿದೆ. ಮಾರಕಾಸ್ತ್ರಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಸಿಸಿಬಿ ಪೊಲೀಸರು ಹೇಳಿದರು. ‘ರಸ್ತೆಯಲ್ಲಿ ನಡೆದುಕೊಂಡು ಹೋಗುವ ಸಾರ್ವಜನಿಕರನ್ನು ಅಡ್ಡಗಟ್ಟಿ, ಮಾರಕಾಸ್ತ್ರ ತೋರಿಸಿ ಸುಲಿಗೆ ಮಾಡುವುದು ಆರೋಪಿಗಳ ಉದ್ದೇಶವಾಗಿತ್ತು’ ಎಂದರು.

‘ಘಟನೋತ್ತರ ಅನುಮತಿ ನೀಡಲು ಇದೇನು ಕಾಮಗಾರಿಯೇ?’

ಸಚಿವ ನಾಗೇಶ್ ವಜಾಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರಿ ಆದೇಶವಿಲ್ಲದೆ ಕಿಡಿಗೇಡಿ ಟ್ರೋಲರ್ ಒಬ್ಬರಿಗೆ ಪಠ್ಯ-ಪುಸ್ತಕಗಳನ್ನು ಪರಿಷ್ಕರಿಸಲು ಅವಕಾಶ ನೀಡಿ, ಈಗ ಆ ವ್ಯಕ್ತಿ ಸೃಷ್ಟಿಸಿರುವ ಕೊಳಕುಗಳನ್ನೆಲ್ಲ ತಲೆಮೇಲೆ ಇಟ್ಟುಕೊಂಡು ಸಮರ್ಥಿಸುತ್ತಿರುವ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರನ್ನು ಸಂಪುಟದಿಂದ ವಜಾಗೊಳಿಸಬೇಕು’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

‘ಆದೇಶ ಇಲ್ಲದೇ ಪಠ್ಯ ಪರಿಷ್ಕರಣೆ’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯ ಶುಕ್ರವಾರದ ಸಂಚಿಕೆಯಲ್ಲಿ ಪ್ರಕಟವಾದ ವಿಶೇಷ ವರದಿ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ‘ಸಚಿವರನ್ನು ವಜಾಗೊಳಿಸುವುದರ ಜತೆಯಲ್ಲೇ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ ಅಧ್ಯಕ್ಷ ರೋಹಿತ್ ಚಕ್ರತೀರ್ಥ ಅವರನ್ನು ತಕ್ಷಣ ಬಂಧಿಸಬೇಕು’ ಎಂದು ಒತ್ತಾಯಿಸಿದ್ದಾರೆ.

‘ಇಂತಹ ಬೇಜವಾಬ್ದಾರಿ ಶಿಕ್ಷಣ ಸಚಿವರನ್ನು ಮುಖ್ಯಮಂತ್ರಿ ಇನ್ನೂ ಸಮರ್ಥಿಸಿಕೊಳ್ಳುವುದಾರೆ ಅವರೇ ಮೊದಲು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಪಠ್ಯಪುಸ್ತಕ ಪರಿಷ್ಕರಣೆಯಂತಹ ಜವಾಬ್ದಾರಿಯುತ ಕೆಲಸವನ್ನು ಸ್ವಭಾವತಃ ವಿಕೃತನಾದ ಒಬ್ಬ ಟ್ರೋಲರ್‌ಗೆ ಒಪ್ಪಿಸಿ, ಅವರು ಮಾಡಿದ ಅವಾಂತರಗಳಿಗೆ ಅವರೇ ಹೊಣೆ ಎಂದು ಅಧಿಕೃತ ಆದೇಶದಲ್ಲಿ ತಿಳಿಸಿ ಈಗ ಆತ ಮಾಡಿದ ರಾಡಿಗಳನ್ನೆಲ್ಲ ಸಮರ್ಥಿಸುತ್ತಿರುವ ಸರ್ಕಾರಕ್ಕೆ ಅಧಿಕಾರದಲ್ಲಿ ಮುಂದುವರಿಯುವ ಯಾವ ನೈತಿಕತೆ ಇದೆ’ ಎಂದು ಪ್ರಶ್ನಿಸಿದ್ದಾರೆ.

‘ಪಠ್ಯಪುಸ್ತಕ ಪರಿಷ್ಕರಣೆಗೆ ಅವಸರದಲ್ಲಿ ಮೌಖಿಕ ಸೂಚನೆ ನೀಡಿ ಘಟನೋತ್ತರ ಅನುಮತಿ ನೀಡಲು ಇದೇನು ಶೇಕಡ 40ರಷ್ಟು ಕಮಿಷನ್ ಬಾಚುವ ರಸ್ತೆ ಕಾಮಗಾರಿಯೆ? ಮೌಖಿಕ ಸೂಚನೆಯಲ್ಲಿ ಕೆಲಸಮಾಡಿಸಿ ಅಮಾಯಕ ಗುತ್ತಿಗೆದಾರನನ್ನು ಬಲಿ ಪಡೆದಿರುವ ಈ ಸರ್ಕಾರ ಈಗ ಎಳೆಯ ಮಕ್ಕಳ ಭವಿಷ್ಯವನ್ನೇ ಬಲಿಕೊಡಲು ಹೊರಟಿದೆ’ ಎಂದು ದೂರಿದ್ದಾರೆ.

‘ಪಠ್ಯಪುಸ್ತಕ ಮುದ್ರಣಕ್ಕೆ ಆಗಿರುವ ನಷ್ಟವನ್ನು ರೋಹಿತ್ ಚಕ್ರತೀರ್ಥ ಅವರಿಂದಲೇ ವಸೂಲಿ ಮಾಡಬೇಕು. ಬರಗೂರು ರಾಮಚಂದ್ರಪ್ಪ ಸಮಿತಿ ಶಿಫಾರಸಿನಂತೆ ರೂಪಿಸಲಾಗಿದ್ದ ಪಠ್ಯ-ಪುಸ್ತಕಗಳನ್ನೇ ಈ ಶೈಕ್ಷಣಿಕ ವರ್ಷಕ್ಕೆ ಮುಂದುವರಿಸಬೇಕು’ ಎಂದು ಆಗ್ರಹಿಸಿದ್ದಾರೆ.

‘ಇಷ್ಟೆಲ್ಲ ತಪರಾಕಿಗಳ ನಂತರವೂ ಮುಖ್ಯಮಂತ್ರಿಯವರು ಸಂಘ ಪರಿವಾರ ಒಡ್ಡಿರುವ ನೇಣಿಗೆ ಕೊರಳೊಡ್ಡುವು-ದಾದರೆ ನಮ್ಮದೇನೂ ಅಭ್ಯಂತರ ಇಲ್ಲ. ಪರಿಷ್ಕೃತ ಪಠ್ಯಪುಸ್ತಕಗಳ ವಿರುದ್ಧದ ಹೋರಾಟವನ್ನು ಕಾಂಗ್ರೆಸ್ ಕಾರ್ಯಕರ್ತರು ಜಿಲ್ಲೆ, ತಾಲ್ಲೂಕು, ಹೋಬಳಿ ಮಟ್ಟಕ್ಕೂ ಕೊಂಡೊಯ್ಯ-ಲಿದ್ದಾರೆ. ಆಗ ಮುಖ್ಯಮಂತ್ರಿಯವರ ತಲೆದಂಡ ಅವರ ಪಕ್ಷಕ್ಕೆ ಅನಿವಾರ್ಯ-ವಾಗಬಹುದು’ ಎಂದು ಹೇಳಿದ್ದಾರೆ.

18ರಂದು ಪ್ರತಿಭಟನೆಗೆ ನಿರ್ಧಾರ

ಬೆಂಗಳೂರು: ಪಠ್ಯಪುಸ್ತಕ ಮರುಪರಿಷ್ಕರಣೆ ಕೈಬಿಡಬೇಕು ಮತ್ತು ರೋಹಿತ್ ಚಕ್ರತೀರ್ಥ ವಿರುದ್ಧ ಕಾನೂನು ಕ್ರಮ-ಕೈಗೊಳ್ಳುವಂತೆ ಒತ್ತಾಯಿಸಿ ಇದೇ 18ರಂದು ನಗರದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲು ವಿವಿಧ ಸಂಘ–ಸಂಸ್ಥೆಗಳು ತೀರ್ಮಾನಿಸಿವೆ.

ರಾಜ್ಯ ಒಕ್ಕಲಿಗರ ಸಂಘ, ವಿಶ್ವಮಾನವ ಕ್ರಾಂತಿಕಾರಿ ಮಹಾಕವಿ ಕುವೆಂಪು ಹೋರಾಟ ಸಮಿತಿ, ದಲಿತ ಸಂಘರ್ಷ ಸಮಿತಿ, ಕನ್ನಡಪರ ಸಂಘಟನೆಗಳ ಮುಖಂಡರು ಮತ್ತು ಪದಾಧಿಕಾರಿಗಳನ್ನು ಒಳಗೊಂಡ ಸಂಚಾಲನಾ ಸಮಿತಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಅಂದು ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಲಾಗುವುದು. ನಂತರ ಸಮಾವೇಶ ನಡೆಯಲಿದ್ದು, ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರಕ್ಕೆ ಒತ್ತಾಯಿಸಿ ನಿರ್ಣಯ ಕೈಗೊಳ್ಳಲಾಗುವುದು. ಚಿಂತಕರು, ಹೋರಾಟಗಾರರು, ಶಿಕ್ಷಣ ತಜ್ಞರು, ಮಠಾಧೀಶರು ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಮುಖಂಡರು ತಿಳಿಸಿದರು. ನಾಡಗೀತೆ ಹಾಗೂ ಕುವೆಂಪು ಅವರ ಬಗ್ಗೆ ಅಗೌರವದಿಂದ ರೋಹಿತ್ ಚಕ್ರತೀರ್ಥ ಅವರು ಲಘುವಾಗಿ ಮಾತನಾಡಿರುವುದು ದುರದೃಷ್ಟಕರ. ಅಧ್ಯಯನ, ಸಂಸ್ಕೃತಿಯೇ ಇಲ್ಲದಂತಹ ವ್ಯಕ್ತಿಯೊಬ್ಬ-ರಿಗೆ ಸರ್ಕಾರ ಪಠ್ಯಪುಸ್ತಕ ರಚನಾ ಸಮಿತಿಯಲ್ಲಿ ಸ್ಥಾನ ನೀಡಿದ ಪರಿಣಾಮ ಇದಾಗಿದೆ ಎಂದು ಸಭೆಯಲ್ಲಿ ಹೋರಾಟಗಾರರು ಟೀಕಿಸಿದರು.

ಕುವೆಂಪು ಅವರು ತಮ್ಮ ವೈಚಾರಿಕ ಬರಹಗಳ ಮೂಲಕ ಅವರು ನಾಡಿನ ಸಾಕ್ಷಿ ಪ್ರಜ್ಞೆಯಾಗಿದ್ದಾರೆ. ಅಂತಹ ಮಹಾನ್ ವ್ಯಕ್ತಿಯನ್ನು ಲೇವಡಿ ಮಾಡುವುದು ವಕ್ರ ಮನಸ್ಸಿನ ವ್ಯಕ್ತಿಗಳಿಗೆ ಮಾತ್ರ ಸಾಧ್ಯ. ಸರ್ಕಾರ ಕೂಡಲೇ ರೋಹಿತ್ ಚಕ್ರತೀರ್ಥ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಉರಿಲಿಂಗಿ ಪೆದ್ದಿಮಠದ ಜ್ಞಾನಪ್ರಕಾಶ್ ಸ್ವಾಮೀಜಿ, ಡಾ. ಆಂಜಿನಪ್ಪ, ಹಿರಿಯ ವಕೀಲ ಸಿ.ಎಚ್. ಹನುಮಂತರಾಯ, ದಲಿತ ಸಂಘರ್ಷ ಸಮಿತಿ ಹೋರಾಟಗಾರರಾದ ಮಾವಳ್ಳಿ ಶಂಕರ್, ಬಿ.ಗೋಪಾಲ್ ಇದ್ದರು.

ಕವಿ ಚಂದ್ರಶೇಖರ ತಾಳ್ಯಗೆ ಅನಾಮಧೇಯ ಪತ್ರ

‘ದುರ್ಬುದ್ಧಿಯ ಸಾಹಿತಿಗಳು ನಾಶವಾಗಲಿ’

ಪ್ರಜಾವಾಣಿ ವಾರ್ತೆ

ಹೊಳಲ್ಕೆರೆ: ಕವಿ ಚಂದ್ರಶೇಖರ ತಾಳ್ಯ ಅವರ ನಿವಾಸಕ್ಕೆ ಗುರುವಾರ ಅನಾಮಧೇಯ ಪತ್ರವೊಂದು ಬಂದಿದ್ದು, ‘ನಿಮ್ಮಂತಹ ದುರ್ಬುದ್ಧಿ ಸಾಹಿತಿಗಳು ಅಳಿಯಲಿ, ನಶಿಸಿ ಹೋಗಲಿ’ ಎಂದು ಬರೆಯಲಾಗಿದೆ.

‘ನಮ್ಮ ಪಾಠಗಳನ್ನು ಪಠ್ಯದಿಂದ ವಾಪಸ್ ಪಡೆದಿದ್ದೇವೆ ಎಂದು ಹೇಳಿರುವ ಎಲ್ಲರಿಗೂ ಧನ್ಯವಾದಗಳು. ಇಷ್ಟು ದಿನ ಓದಿದ್ದ ನಿಮ್ಮ ಪಾಠಗಳು ಮರೆತು ಹೋಗಲಿ ಎಂದು ಸರಸ್ವತಿಯಲ್ಲಿ ಬೇಡಿಕೊ-ಳ್ಳುತ್ತೇವೆ. 61 ಜನ ನಕಲಿ ದೇಶದ್ರೋಹಿ ಸಾಹಿತಿಗಳೇ



ಚಂದ್ರಶೇಖರ ತಾಳ್ಯ

ನಿಮ್ಮ ಆಲೋಚನೆಗಳು ದೇಶವನ್ನು ಒಡೆಯುತ್ತವೆ ಎಂಬ ಒಕ್ಕಣಿಕೆ ಇರುವ ಪತ್ರ ಪಟ್ಟಣದ ಬಸವಾ ಲೇಔಟ್‌ನಲ್ಲಿರುವ ತಾಳ್ಯ ಅವರ ನಿವಾಸಕ್ಕೆ ಬಂದಿದೆ.

‘ನಿಮ್ಮಂಥ ಎಡಬಿಡಂಗಿ ಸಾಹಿತಿಗಳು ಸಮಾಜದಲ್ಲಿ ಕಂದಕ ಸೃಷ್ಟಿಸುತ್ತಿದ್ದೀರಿ. ನಮ್ಮ ಮಕ್ಕಳು ನಿಮ್ಮ ಗದ್ಯ, ಪದ್ಯ ಮರೆತು ದೇಶಭಕ್ತಿಯ ಪಾಠ ಕಲಿಯಲಿ. ಶ್ರೀಕೃಷ್ಣ, ಕುವೆಂಪು ಹೇಳಿದಂತೆ ‘ಸರ್ವೇ ಜನೋ ಸುಖಿನೋಭವಂತು’, ‘ಮನುಜಮತ ವಿಶ್ವಪಥ’ ಎಂಬುದನ್ನು ನಮ್ಮ ಮಕ್ಕಳು ತಿಳಿಯಲಿ. ನಿಮ್ಮಂಥ ದುರುಳರು ಅಳಿಯಲಿ’ ಎಂದು ಪತ್ರದಲ್ಲಿ ಬರೆಯಲಾಗಿದ್ದು, ಕೊನೆಯಲ್ಲಿ ‘ಸಹಿಷ್ಣು ಹಿಂದೂ’ ಎಂದು ಬರೆಯಲಾಗಿದೆ.

ತಾಳ್ಯ ಅವರು 6ನೇ ತರಗತಿಯ ಉರ್ದು ಮಾಧ್ಯಮದ ತೃತೀಯ ಭಾಷೆ ಕನ್ನಡ ಪಠ್ಯಪುಸ್ತಕದಲ್ಲಿದ್ದ ತಮ್ಮ ‘ಒಂದು ಜೋಗುಳದ ಪದ್ಯ’ ಪಠ್ಯವನ್ನು ವಾಪಸ್ ಪಡೆದಿರುವುದಾಗಿ ಹೇಳಿದ್ದರು. ‘ಪತ್ರ ನೋಡಿದರೆ ಚಿಕ್ಕಮಕ್ಕಳ ಬರವಣಿಗೆಯಂತೆ ಕಾಣುತ್ತದೆ. ಯಾರೋ ಹೇಳಿ ಮಕ್ಕಳ ಕೈಯಲ್ಲಿ ಪತ್ರ ಬರೆಸಿರಬಹುದು’ ಎಂದು ತಾಳ್ಯ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ನೀಟ್–ಪಿಜಿ: ವಿಶೇಷ ಕೌನ್ಸೆಲಿಂಗ್ ಕುರಿತ ಅರ್ಜಿ ವಜಾ



ನವದೆಹಲಿ: ‘ನೀಟ್ ಪಿಜಿ– 21’ರಲ್ಲಿ ಅರ್ಹತೆ ಪಡೆದವರಿಗಾಗಿ ನಡೆದ ಅಖಿಲ ಭಾರತ ಕೋಟಾದ ಕೌನ್ಸೆಲಿಂಗ್ ನಂತರವೂ ಉಳಿದಿರುವ 1,456 ಸೀಟುಗಳ ಭರ್ತಿಗೆ, ಇನ್ನೊಂದು ಸುತ್ತಿನ ವಿಶೇಷ ಕೌನ್ಸೆಲಿಂಗ್ ನಡೆಸುವಂತೆ ಕೋರಿ ಸಲ್ಲಿಕೆಯಾಗಿ-ರುವ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಜಾಗೊಳಿಸಿದೆ.

ವಿಶೇಷ ಕೌನ್ಸೆಲಿಂಗ್‌ಗೆ ಅವಕಾಶ ನೀಡದಿರುವ ಸರ್ಕಾರದ ಮತ್ತು ಎಂಸಿಸಿ (ವೈದ್ಯಕೀಯ ಕೌನ್ಸೆಲಿಂಗ್ ಸಮಿತಿ) ನಿರ್ಧಾರವು ಸಾರ್ವಜನಿಕ ಆರೋಗ್ಯ, ವೈದ್ಯಕೀಯ ಶಿಕ್ಷಣದ ಹಿತಾಸಕ್ತಿಯಿಂದ ಕೂಡಿದೆ ಎಂದು ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಅನಿರುದ್ಧ ಬೋಸ್ ಅವರ ರಜಾಕಾಲದ ಪೀಠ ಹೇಳಿದೆ.

‘ವೈದ್ಯಕೀಯ ಶಿಕ್ಷಣದ ಗುಣಮಟ್ಟದಲ್ಲಿ ಯಾವುದೇ ರಾಜಿ ಮಾಡಿಕೊಳ್ಳ-ಬಾರದು. ಹಾಗೆ ಮಾಡಿದರೆ ಸಾರ್ವಜನಿಕ ಆರೋಗ್ಯದ ಮೇಲೆ ಪರಿಣಾಮವಾ-ಗಲಿದೆ’ ಎಂದು ಕೋರ್ಟ್ ಹೇಳಿದೆ.

ಗುರುವಾರ ವಿಚಾರಣೆ ಪೂರ್ಣಗೊಳಿಸಿದ್ದ ಸುಪ್ರೀಂ ಕೋರ್ಟ್, ಆದೇಶವನ್ನು ಕಾಯ್ದಿರಿಸಿತ್ತು. ಕೇಂದ್ರದ ಪರ ವಾದ ಮಂಡಿಸಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಬಲ್ಬೀರ್ ಸಿಂಗ್ ಅವರು, ಈಗಾಗಲೇ ಫೆಬ್ರುವರಿಯಲ್ಲಿ ತರಗತಿಗಳು ಪ್ರಾರಂಭವಾಗಿವೆ. ಮತ್ತೊಂದು ಸುತ್ತಿನ ಕೌನ್ಸೆಲಿಂಗ್ ನಡೆಸಿದರೆ ನೀಟ್ 2022ರಲ್ಲಿ ಪ್ರವೇಶ ಪಡೆಯುವವರಿಗೆ ನಡೆಯುವ ಬೋಧನಾ ಚಟುವಟಿಕೆಗಳ ಮೇಲೆ ಪರಿಣಾಮ ಬೀರುತ್ತದೆ ಎಂದು ಹೇಳಿದ್ದರು.

ಸುಮಾರು ಒಂದು ವರ್ಷದ ಶೈಕ್ಷಣಿಕ ಅವಧಿಯ ಬಳಿಕ, ಎಂಟರಿಂದ ಒಂಬತ್ತು ಸುತ್ತಿನ ಕೌನ್ಸೆಲಿಂಗ್‌ನ ನಂತರ ಖಾಲಿ ಇರುವ (ಬಹುತೇಕ ಕ್ಲಿನಿಕಲ್ ಅಲ್ಲದ) ಸೀಟುಗಳ ಪ್ರವೇಶಕ್ಕಾಗಿ ವಿದ್ಯಾರ್ಥಿಗಳು ಮನವಿ ಮಾಡುವುದು ಸರಿಯಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಮಸೀದಿಯಲ್ಲಿ ಮೈಕ್ ಬಳಕೆ ವಿವರ ಕೇಳಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಸೀದಿಗಳಲ್ಲಿ ಶಾಶ್ವತ ಧ್ವನಿವರ್ಧಕ ಬಳಕೆಗೆ ಅನುಮತಿ ನೀಡಬಹುದೇ, ಒಂದು ವೇಳೆ ನೀಡ-ಬಹುದಾಗಿದ್ದರೆ ಯಾವ ಕಾನೂನಿನ ಅಡಿಯಲ್ಲಿ ಪರವಾನಗಿ ನೀಡಲಾಗುತ್ತಿದೆ, ಪರವಾನಗಿ ನೀಡುವ ಸಕ್ಷಮ ಪ್ರಾಧಿಕಾರ ಯಾವುದು, ಎಷ್ಟು ದಿನಗಳ ಮಟ್ಟಿಗೆ ಪರವಾನಗಿ ನೀಡಬಹುದಾಗಿದೆ ಎಂಬ ಬಗ್ಗೆ ಮಾಹಿತಿ ನೀಡಿ’ ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಸೂಚಿಸಿದೆ.

‘ನಗರದ ಕೆಲವು ಮಸೀದಿಗಳು ಬಳಸುತ್ತಿರುವ ಧ್ವನಿವರ್ಧಕಗಳಿಂದ ಶಬ್ದ ಮಾಲಿನ್ಯ ಉಂಟಾಗುತ್ತಿದೆ’ ಎಂದು ಆಕ್ಷೇಪಿಸಿ ಥಣಿಸಂದ್ರದ ಪಿ.ರಾಕೇಶ್ ಸೇರಿದಂತೆ 32 ಜನರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಶ್ರೀಧರ್ ಪ್ರಭು, ‘ಮಸೀದಿಗಳಲ್ಲಿ ಧ್ವನಿವರ್ಧಕಗಳನ್ನು ಬಳಸಲು ಪರವಾನಗಿ ನೀಡುತ್ತಿರುವ ಪೊಲೀಸರು, ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ಆದೇಶಗಳನ್ನು ಉಲ್ಲಂಘಿಸುತ್ತಿದ್ದಾರೆ. ಅಕ್ರಮವಾಗಿ ಧ್ವನಿವರ್ಧಕ ಬಳಕೆ ಮಾಡಿದರೂ ದಂಡ ವಿಧಿಸುತ್ತಿಲ್ಲ ಮತ್ತು ಅಂತಹ ಧ್ವನಿವರ್ಧಕಗಳನ್ನು ವಶಕ್ಕೆ ಪಡೆಯುತ್ತಿಲ್ಲ’ ಎಂದು ಆರೋಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಧ್ವನಿವರ್ಧಕ ಬಳಸಲು ಯಾರಿಗೆ ಅನುಮತಿ ನೀಡಬೇಕು ಅಥವಾ ನೀಡಬಾರದು ಎಂಬ ವಿಚಾರ ಸರ್ಕಾರಕ್ಕೆ ಬಿಟ್ಟದ್ದು. ಆದರೆ, ಅದು ಕಾನೂನಿನ ಪ್ರಕಾರ ಇರಬೇಕು. ಯಾವ ಕಾನೂನಿನ ಅಡಿಯಲ್ಲಿ ಮಸೀದಿಗಳ ಧ್ವನಿವರ್ಧಕ ಬಳಕೆಗೆ ಶಾಶ್ವತ ಪರವಾನಗಿ ನೀಡಬಹುದಾಗಿದೆ ಎಂಬ ವಿಚಾರ ಸದ್ಯ ನ್ಯಾಯಾಲಯದ ಮುಂದಿದೆ’ ಎಂದು ಸ್ಪಷ್ಟಪಡಿಸಿತು.

ಪ್ರತಿವಾದಿ ಮಸೀದಿಗಳ ಪರ ವಕಾಲತ್ತು ವಹಿಸಿದ್ದ ವಕೀಲರು, ‘ನಮ್ಮ ಕಕ್ಷಿದಾರರು ಧ್ವನಿವರ್ಧಕ ಬಳಸಲು ಅನುಮತಿ ಪಡೆದಿದ್ದಾರೆ. ವಕ್ಫ್ ಮಂಡಳಿಯೂ ಇದಕ್ಕೆ ಅನುಮತಿ ನೀಡಿದೆ’ ಎಂದು ನ್ಯಾಯಪೀಠಕ್ಕೆ ಅರುಹಿದರು.

ಅರ್ಜಿದಾರರ ವಾದಾಂಶಕ್ಕೆ ಉತ್ತರಿಸಲು ಕಾಲಾವಕಾಶ ನೀಡುವಂತೆ ಸರ್ಕಾರಿ ವಕೀಲರ ಕೋರಿಕೆ ಮಾನ್ಯ ಮಾಡಿದ ನ್ಯಾಯಪೀಠ, ವಿಚಾರಣೆಯನ್ನು ಇದೇ 20ಕ್ಕೆ ಮುಂದೂಡಿದೆ.

‘ಸಿದ್ದರಾಮಯ್ಯಗೆ ಆತ್ಮವೂ ಇಲ್ಲ, ಸಾಕ್ಷಿಯೂ ಇಲ್ಲ’

ಪ್ರಜಾವಾಣಿ ವಾರ್ತೆ

ಮಳವಳ್ಳಿ (ಮಂಡ್ಯ): ‘ಕಾಂಗ್ರೆಸ್ ಶಾಸಕರು ಪಕ್ಷ ನಿಷ್ಠೆಯಿಂದ ಮತ ಹಾಕಬೇಕು ಎನ್ನುವ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು, ಜೆಡಿಎಸ್ ಶಾಸಕರು ಆತ್ಮಸಾಕ್ಷಿಗೆ ಅನುಗುಣವಾಗಿ ಅಡ್ಡ ಮತದಾನ ಮಾಡಿ ಎನ್ನುವುದು ಯಾವ ನ್ಯಾಯ?’ ಎಂದು ವಿಧಾನಪರಿಷತ್ ಸದಸ್ಯ ಹಾಗೂ ಬಿಜೆಪಿ ಪರಿಶಿಷ್ಟ ಜಾತಿ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ ಕೇಳಿದರು.

ಇಲ್ಲಿ ಪತ್ರಕರ್ತರೊಂದಿಗೆ ಶುಕ್ರವಾರ ಮಾತನಾಡಿ, ‘ಜೆಡಿಎಸ್ ಶಾಸಕರು ಮಾತ್ರ ಅಡ್ಡ ಮತದಾನ ಮಾಡಿ ಕಾಂಗ್ರೆಸ್ ಅಭ್ಯರ್ಥಿ ಬೆಂಬಲಿಸಬೇಕು ಎನ್ನುವುದು ಆತ್ಮಸಾಕ್ಷಿಯಾ? ಅಡ್ಡ ಮತದಾನ ಮಾಡಿದವರನ್ನು ಸದಸ್ಯತ್ವದಿಂದಲೇ ತೆಗೆಸಿ ಪಕ್ಷದಿಂದ ಹೊರ ಹಾಕಿದ ಅವರಿಗೆ ನಾಚಿಕೆ ಆಗುವುದಿಲ್ಲವೇ? ಆತ್ಮಸಾಕ್ಷಿಯಿಂದ ಅಡ್ಡ ಮತದಾನ ಮಾಡಿ ಎನ್ನುವ ಅವರಿಗೆ ಆತ್ಮವೂ ಇಲ್ಲ; ಸಾಕ್ಷಿಯೂ ಇಲ್ಲ’ ಎಂದು ಟೀಕಿಸಿದರು.

ಕಾರ್ಮಿಕ ಸಚಿವ ಶಿವರಾಂ ಹೆಬ್ಬಾರ್ ರಾಜೀನಾಮೆಗೆ ಕೆಆರ್‌ಎಸ್ ಪಕ್ಷ ಆಗ್ರಹ

ಕಳಪೆ ಟೂಲ್‌ಕಿಟ್: ಅವ್ಯವಹಾರ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಕಾರ್ಮಿಕರಿಗೆ ಟೂಲ್‌ಕಿಟ್‌ಗಳನ್ನು (ಉಪಕರಣ) ವಿತರಿಸಿದ್ದು, ಇದರಲ್ಲಿ ₹50 ಕೋಟಿಯಷ್ಟು ಅವ್ಯವಹಾರ ನಡೆದಿದೆ’ ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ (ಕೆಆರ್‌ಎಸ್) ಆರೋಪಿಸಿದೆ.

‘ಗಾರೆ ಕೆಲಸದವರು, ಕಾರ್ಪೆಂಟರ್, ಪೇಂಟರ್‌ಗಳು, ಎಲೆಕ್ಟ್ರಿಷಿಯನ್, ಪ್ಲಂಬರ್ ಮತ್ತು ಕಬ್ಬಿಣ ಕಟ್ಟುವ ಕೆಲಸ ಮಾಡುವವರಿಗೆ ಅವರ ವೃತ್ತಿಗೆ ಅನುಸಾರವಾಗಿ ಆರು ರೀತಿಯ ಕಿಟ್‌ಗಳನ್ನು ಮಂಡಳಿ ವಿತರಣೆ ಮಾಡಿದೆ. ಇವೆಲ್ಲವೂ ಕಳಪೆ ಗುಣಮಟ್ಟದಿಂದ ಕೂಡಿವೆ’ ಎಂದು ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ದೀಪಕ್ ಮತ್ತು ಜಂಟಿ ಕಾರ್ಯದರ್ಶಿ ಕೆ.ಎಸ್.ಸೋಮಸುಂದರ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ದೂರಿದರು. ಪರಿಕರಗಳ ಕಿಟ್‌ಗಳನ್ನು ಮಾಧ್ಯಮಗಳ ಎದುರು ಪ್ರದರ್ಶನ ಮಾಡಿದರು.



ಟೂಲ್‌ಕಿಟ್‌ಗಳನ್ನು ಕೆಆರ್‌ಎಸ್ ಪಕ್ಷದ ಜಂಟಿ ಕಾರ್ಯದರ್ಶಿ ಕೆ.ಎಸ್. ಸೋಮಸುಂದರ್ ಮತ್ತು ಬೆಂಗಳೂರು ನಗರ ಘಟಕದ ಅಧ್ಯಕ್ಷ ಮಂಜುನಾಥ್ ಮಾಧ್ಯಮಗಳಿಗೆ ಪ್ರದರ್ಶಿಸಿದರು

‘2021ರ ಅಕ್ಟೋಬರ್ 18ರಂದು ಟೆಂಡರ್ ಪ್ರಕಟಣೆ ಹೊರಡಿಸಿ 6,038 ಪೇಂಟಿಂಗ್ ಕಿಟ್‌ಗಳಿಗೆ ತಲಾ ₹3,690ರಂತೆ ₹2.22 ಕೋಟಿ ಮೊತ್ತದಲ್ಲಿ ಖರೀದಿಗೆ ಆದೇಶಿಸಲಾಗಿದೆ. ಇವುಗಳನ್ನು ಮಾರುಕಟ್ಟೆಯಲ್ಲಿ ಖರೀದಿಸಿದರೆ ಒಂದು ಕಿಟ್‌ಗೆ ₹2,265 ಆಗಲಿದೆ. ಚೀನಾದಿಂದ ಬರುವ ಪರಿಕರಗಳಾದರೆ ₹1,500ರಿಂದ ₹1,800 ಮೊತ್ತಕ್ಕೇ ಸಿಗುತ್ತವೆ’ ಎಂದು ಅವರು ವಿವರಿಸಿದರು.

‘ಇದೇ ರೀತಿ ಬಾರ್ ಬೆಂಡಿಂಗ್ ಕಿಟ್‌ಗೆ ₹4,748, ಕಾರ್ಪೆಂಟರ್ ಕಿಟ್‌ಗೆ ₹5,694, ಪ್ಲಂಬರ್ ಕಿಟ್‌ಗೆ ₹6,100 ದರ ನೀಡಲಾಗಿದೆ. ಇವುಗಳು ತಯಾರಾದ ವಿಳಾಸವಾಗಲೀ, ಜಿಎಸ್‌ಟಿ ವಿವರವಾಗಲಿ ಇಲ್ಲ. ಐಎಸ್‌ಐ ಮುದ್ರೆಯೂ ಇಲ್ಲ’ ಎಂದು ಆರೋಪಿಸಿದರು.

‘ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಮಂಡ್ಯ, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ವಿತರಿಸಲಾದ ಎರಡು ಟೂಲ್‌ಕಿಟ್‌ಗಳ ದಾಖಲೆಗಳನ್ನು ನಾವು ಪಡೆದಿದ್ದೇವೆ. ಇವುಗಳ ಮೊತ್ತವೇ ₹8 ಕೋಟಿಯಿಂದ ₹10 ಕೋಟಿ ಇದೆ. ಇನ್ನುಳಿದ ಆರು ವಿಭಾಗಗಳಿಗೆ ಕಿಟ್ ವಿತರಿಸಲಾಗಿದ್ದು, ಒಟ್ಟಾರೆ ₹50 ಕೋಟಿಗೂ ಹೆಚ್ಚಿನ ವಹಿವಾಟು ನಡೆದಿದೆ’ ಎಂದರು.

‘ಈ ಬಗ್ಗೆ ಸಮಗ್ರ ತನಿಖೆಯಾಗಬೇಕು. ಅಕ್ರಮ, ಭ್ರಷ್ಟಾಚಾರ ನಡೆಯುತ್ತಿದ್ದರೂ ಗಮನ ಹರಿಸದ ಕಾರ್ಮಿಕ ಸಚಿವ ಶಿವರಾಂ ಹೆಬ್ಬಾರ್ ಅವರೂ ಹಗರಣದಲ್ಲಿ ಭಾಗಿಯಾಗಿರುವುದು ಸ್ಪಷ್ಟವಾಗಿದೆ. ಅವರನ್ನು ತಕ್ಷಣವೇ ಸಚಿವ ಸ್ಥಾನದಿಂದ ವಜಾ ಮಾಡಬೇಕು’ ಎಂದು ಆಗ್ರಹಿಸಿದರು.

ಪಾರದರ್ಶಕವಾಗಿಯೇ ಖರೀದಿ: ಹೆಬ್ಬಾರ್

‘ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ (ಕೆಟಿಪಿಪಿ) ಅಡಿಯಲ್ಲಿ ಟೆಂಡರ್ ನಡೆಸಿಯೇ ಖರೀದಿ ಪ್ರಕ್ರಿಯೆಗಳು ನಡೆದಿರುತ್ತವೆ. ತಾಂತ್ರಿಕ ಸಮಿತಿಯೂ ಪರಿಶೀಲಿಸಿರುತ್ತದೆ. ಕೆಆರ್‌ಎಸ್ ಪಕ್ಷದ ಆರೋಪದ ಬಗ್ಗೆ ಮಾಹಿತಿ ಪಡೆದು ಬಳಿಕ ಮಾತನಾಡುತ್ತೇನೆ’ ಎಂದು ಶಿವರಾಂ ಹೆಬ್ಬಾರ್ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.


ಜಿಲ್ಲಾಡಳಿತಗಳಿಗೆ ನಿರ್ದೇಶನ: ಆರೋಗ್ಯ ಇಲಾಖೆ ಸುತ್ತೋಲೆ

ರಾಜ್ಯದಲ್ಲಿ ಮಾಸ್ಕ್ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್-19 ಪ್ರಕರಣಗಳು ಹೆಚ್ಚುತ್ತಿರುವುದರಿಂದ ಸಾರ್ವಜನಿಕ ಪ್ರದೇಶದಲ್ಲಿ ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಲು ಮಾರ್ಷಲ್‌ಗಳು ಅಥವಾ ಪೊಲೀಸ್ ಸಿಬ್ಬಂದಿ ನೆರವು ಪಡೆಯುವಂತೆ ಜಿಲ್ಲಾಡಳಿತಗಳಿಗೆ ಸೂಚಿಸಿ ಆರೋಗ್ಯ ಇಲಾಖೆ ಶುಕ್ರವಾರ ಸುತ್ತೋಲೆ ಹೊರಡಿಸಿದೆ.



ಶಾಪಿಂಗ್ ಮಾಲ್‌ಗಳು, ರೆಸ್ಟೋರೆಂಟ್‌ಗಳು, ಪಬ್‌ಗಳು, ಹೋಟೆಲ್‌ಗಳು, ಶೈಕ್ಷಣಿಕ ಸಂಸ್ಥೆಗಳು, ಹಾಸ್ಟೆಲ್‌ಗಳು, ಕಚೇರಿಗಳು, ಕಾರ್ಖಾನೆ ಇತ್ಯಾದಿ ಪ್ರದೇಶಗಳಲ್ಲಿ ಸಿಬ್ಬಂದಿ ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಬೇಕು. ಮಾಸ್ಕ್ ಧರಿಸಿದ್ದರೆ ಮಾತ್ರವೇ ಪ್ರವೇಶ ಕಲ್ಪಿಸುವುದು ಆಯಾ ಸಂಸ್ಥೆಯ ಮಾಲೀಕರು, ಆಡಳಿತ ಮಂಡಳಿಗಳ ಜವಾಬ್ದಾರಿಯಾಗಿದೆ ಎಂದು ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್ ನಿರ್ದೇಶನ ನೀಡಿದ್ದಾರೆ.

ಸ್ವಂತ ವಾಹನಗಳು ಹಾಗೂ ಸಾರ್ವಜನಿಕ ಸಾರಿಗೆ ವಾಹನಗಳಲ್ಲಿ (ಬಸ್ ಹಾಗೂ ರೈಲು) ಪ್ರಯಾಣಿಸುವ ಸಂದರ್ಭದಲ್ಲಿ ನಾಗರಿಕರು ಮಾಸ್ಕ್ ಧರಿಸುವುದು ಕಡ್ಡಾಯವಾಗಿದೆ ಎಂದು ಸೂಚಿಸಿದ್ದಾರೆ.

ವಿಷಮ ಶೀತ ಜ್ವರ (ಐಎಲ್‌ಐ) ಮತ್ತು ತೀವ್ರ ಉಸಿರಾಟದ ತೊಂದರೆ (ಎಸ್‌ಎಆರ್‌ಐ) ಲಕ್ಷಣಗಳನ್ನು ಹೊಂದಿದವರು ಹಾಗೂ ಇತರ ಆರೋಗ್ಯ ಸಮಸ್ಯೆಗಳಿರುವವರು ಆದ್ಯತೆಯೇ ಮೇರೆಗೆ ಪರೀಕ್ಷೆಗೆ ಒಳಪಡಿಸಬೇಕು ಹಾಗೂ ಫಲಿತಾಂಶ ಲಭ್ಯವಾಗುವವರೆಗೆ ಮನೆಯಲ್ಲಿ ಪ್ರತ್ಯೇಕವಾಗಿರಬೇಕು. ಮುಂಜಾಗ್ರತಾ ಕ್ರಮವಾಗಿ ಎಲ್ಲ ಅರ್ಹರು ಕೋವಿಡ್ 19 ಲಸಿಕೆ ಪಡೆಯಬೇಕು ಎಂದು ಸಲಹೆ ನೀಡಿದ್ದಾರೆ.

ಜೂನ್ 6ರಂದು ಕೋವಿಡ್–19 ತಾಂತ್ರಿಕ ಸಲಹಾ ಸಮಿತಿಯ ಸಭೆಯಲ್ಲಿ ಕೈಗೊಂಡ ನಿರ್ಧಾರ ಹಾಗೂ ಕೇಂದ್ರ ಸರ್ಕಾರದ ಆರೋಗ್ಯ ಇಲಾಖೆಯ ಜಂಟಿ ಕಾರ್ಯದರ್ಶಿ ಜೂನ್ 9ರಂದು ಬರೆದಿರುವ ಪತ್ರದ ಅನ್ವಯ ಆರೋಗ್ಯ ಇಲಾಖೆ ಈ ಕ್ರಮಕ್ಕೈಗೊಂಡಿದೆ.

ಕೋವಿಡ್: 7,584 ಹೊಸ ಪ್ರಕರಣ ದೃಢ

ನವದೆಹಲಿ: ದೇಶದಾದ್ಯಂತ ಕೋವಿಡ್–19 ಪ್ರಕರಣಗಳ ಸಂಖ್ಯೆಯಲ್ಲಿ ಶುಕ್ರವಾರವೂ ಹೆಚ್ಚಳ ಕಂಡುಬಂದಿದೆ. ಶುಕ್ರವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡ 24 ಗಂಟೆ ಅವಧಿಯಲ್ಲಿ 7,584 ಪ್ರಕರಣಗಳು ದೃಢಪಟ್ಟಿದ್ದು, 24 ಮಂದಿ ಸೋಂಕಿತರು ಮೃತಪಟ್ಟಿದ್ದಾರೆ. ಸಕ್ರಿಯ ಪ್ರಕರಣಗಳು 36,267ಕ್ಕೆ ಏರಿಕೆಯಾಗಿವೆ.

ಇದರೊಂದಿಗೆ, ದೇಶದಲ್ಲಿ ಈವರೆಗೆ 4,32,05,106 ಮಂದಿ ಸೋಂಕಿತರಾಗಿದ್ದು, 5,24,747 ಮಂದಿ ಮೃತಪಟ್ಟಿದ್ದಾರೆ.

ಕಳೆದ ಕೆಲವು ದಿನಗಳಿಂದ ದೇಶದಲ್ಲಿ ಕೋವಿಡ್ ದೃಢ ಪ್ರಮಾಣ ಹೆಚ್ಚಾಗಿದ್ದು, ಗುರುವಾರವೂ ಹೊಸದಾಗಿ 7,240 ಪ್ರಕರಣಗಳು ದೃಢಪಟ್ಟಿದ್ದವು. ಗುರುವಾರ ದೃಢಪಟ್ಟ ಪ್ರಕರಣಗಳ ಪೈಕಿ ಶೇ 81ರಷ್ಟು ಮಹಾರಾಷ್ಟ್ರ, ಕೇರಳ, ದೆಹಲಿ ಮತ್ತು ಕರ್ನಾಟಕದಲ್ಲಿ ವರದಿಯಾಗಿದ್ದವು.

ಮಹಾರಾಷ್ಟ್ರದಲ್ಲಿ ಗುರುವಾರ 2,813 ಪ್ರಕರಣಗಳು ವರದಿಯಾಗಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 11,571ಕ್ಕೆ ಏರಿಕೆಯಾಗಿತ್ತು. ಮುಂಬೈ ನಗರವೊಂದರಲ್ಲೇ 1,702 ಜನರಿಗೆ ಸೋಂಕು ದೃಢಪಟ್ಟಿತ್ತು. ಕರ್ನಾಟಕದಲ್ಲಿಯೂ ಗುರುವಾರ 471 ಕೋವಿಡ್ ಪ್ರಕರಣಗಳು ದೃಢಪಟ್ಟಿದ್ದು, ಬೆಂಗಳೂರು ನಗರವೊಂದರಲ್ಲೇ 458 ಪ್ರಕರಣಗಳು ವರದಿಯಾಗಿದ್ದವು.

ಮುಂಬೈನಲ್ಲಿ 1,956 ಕೋವಿಡ್ ಪ್ರಕರಣ ದಾಖಲು

ಮುಂಬೈ (ಪಿಟಿಐ): ಜನವರಿ 23ರಿಂದ ಕೋವಿಡ್ 19 ಪ್ರಕರಣಗಳು ದಿನೇ ದಿನೇ ಏರಿಕೆಯಾಗುತ್ತಿದ್ದು, ಶುಕ್ರವಾರ ಒಂದೇ ದಿನ ಮುಂಬೈನಲ್ಲಿ 1,956 ಸೋಂಕಿತ ಪ್ರಕರಣಗಳು ದೃಢಪಟ್ಟಿವೆ. ಸೋಂಕು ದೃಢ ಪ್ರಮಾಣವೂ ಶೇ 12.7ಕ್ಕೆ ತಲುಪಿದೆ. ಯಾವುದೇ ಸಾವಿನ ಪ್ರಕರಣ ದಾಖಲಾಗಿಲ್ಲ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಗುರುವಾರ 1,702 ಹೊಸ ಪ್ರಕರಣಗಳು ವರದಿಯಾಗಿದ್ದವು. ಮುಂಬೈನಲ್ಲಿ ಒಟ್ಟು ಪ್ರಕರಣಗಳ ಸಂಖ್ಯೆ 10,77,199ಕ್ಕೆ ಏರಿದೆ.

ಕೋವಿಡ್ ಪರೀಕ್ಷೆ ಕಡ್ಡಾಯ ನಿಯಮ ಕೈಬಿಟ್ಟ ಅಮೆರಿಕ

ವಾಷಿಂಗ್ಟನ್ (ಎಎಫ್‌ಪಿ): ದೇಶಕ್ಕೆ ಬರುವ ಅಂತರರಾಷ್ಟ್ರೀಯ ಪ್ರಯಾಣಿಕರು ಕೋವಿಡ್ –19 ಪರೀಕ್ಷೆಗೆ ಕಡ್ಡಾಯವಾಗಿ ಒಳಪಟ್ಟಿರಬೇಕು ಎಂಬ ನಿರ್ಬಂಧವನ್ನು ಅಮೆರಿಕ ಕೈಬಿಟ್ಟಿದೆ.

ಕೋವಿಡ್ ಸಂಬಂಧಿತ ನಿರ್ಬಂಧಗಳನ್ನು ಹಂತ ಹಂತವಾಗಿ ಸಡಿಲಗೊಳಿಸುವ ನಿಟ್ಟಿನಲ್ಲಿ ಇದು ಮಹತ್ವದ ಹೆಜ್ಜೆ ಎಂದು ಬಣ್ಣಿಸಲಾಗಿದೆ. ಶ್ವೇತಭವನದ ಸಹಾಯಕ ಪತ್ರಿಕಾ ಕಾರ್ಯದರ್ಶಿ ಕೆವಿನ್ ಮುನೋಜ್ ಈ ಕುರಿತು ಟ್ವೀಟ್ ಮಾಡಿದ್ದಾರೆ.

ಪ್ರಯಾಣ ಸಂಬಂಧಿತ ಉದ್ಯಮದ ಬಲವಾದ ಲಾಬಿಯ ಪರಿಣಾಮ ಈ ವಾರಾಂತ್ಯದಲ್ಲಿ ಕೋವಿಡ್ ಕಡ್ಡಾಯ ಪರೀಕ್ಷೆ ನಿರ್ಬಂಧ ರದ್ದಾಗಲಿದೆ ಎಂದು ಮಾಧ್ಯಮಗಳು ಈ ಬೆಳವಣಿಗೆಯನ್ನು ವ್ಯಾಖ್ಯಾನಿಸಿವೆ.



ಶ್ರೀಮಹಾಬಲೇಶ್ವರಸ್ವಾಮಿ ಮತ್ತು ಶ್ರೀ ಲಕ್ಷ್ಮಿ ನಾರಾಯಣಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರದ ಶಂಕುಸ್ಥಾಪನೆಯನ್ನು ಸಚಿವ ಬೈರತಿ ಬಸವರಾಜ ಭೂಮಿಪೂಜೆಯ ಮೂಲಕ ನೆರವೇರಿಸಿದರು. ಪಾಲಿಕೆ ಮಾಜಿ ಸದಸ್ಯ ಅಂತೋಣಿಸ್ವಾಮಿ, ಮುಖಂಡರಾದ ವೇಣುಗೋಪಾಲ, ಬಿಟಿಎಸ್ ಪ್ರಕಾಶ್, ಕೆ.ಪಿ. ಕೃಷ್ಣ, ಶಿವಪ್ಪ, ರವಿಕುಮಾರ್ ಇದ್ದರು.

₹ 20 ಕೋಟಿ ವೆಚ್ಚದಲ್ಲಿ ಭವ್ಯವಾದ ದೇವಾಲಯ ನಿರ್ಮಾಣ: ಬೈರತಿ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಇತಿಹಾಸ ಪ್ರಸಿದ್ಧ ಕೆ.ಆರ್.ಪುರದ ವೆಂಗಯ್ಯನಕೆರೆ ಬಳಿ ನೆಲೆಸಿರುವ ಶ್ರೀ ಮಹಾಬಲೇಶ್ವರಸ್ವಾಮಿ ಮತ್ತು ಶ್ರೀ ಲಕ್ಷ್ಮಿನಾರಾಯಣಸ್ವಾಮಿ ದೇವಸ್ಥಾನ ಜೀರ್ಣೋದ್ಧಾರಕ್ಕೆ ನಗರಾಭಿವೃದ್ಧಿ ಸಚಿವ ಸಚಿವ ಬೈರತಿ ಬಸವರಾಜ ಭೂಮಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಸಚಿವ ಬೈರತಿ ಬಸವರಾಜ, ‘₹20 ಕೋಟಿ ವೆಚ್ಚದಲ್ಲಿ ಭವ್ಯವಾದ ದೇವಾಲಯ ನಿರ್ಮಾಣ ಮಾಡಲಾಗುವುದು. ಕ್ಷೇತ್ರದಲ್ಲಿರುವ ಇತಿಹಾಸ ಪ್ರಸಿದ್ಧ ದೇವಾಲಯಗಳಲ್ಲಿ ಈ ದೇವಾಲಯವು ವಿಶೇಷವಾಗಿದ್ದು, ದೇವಾಲಯದ ಅಭಿವೃದ್ಧಿಗೆ ದಾನಿಗಳು ಸಹಕಾರ ನೀಡಬೇಕು’ ಎಂದು ಹೇಳಿದರು.

ದೇವಸ್ಥಾನದ ಸಮಿತಿ ಅಧ್ಯಕ್ಷ ಶ್ರೀನಿವಾಸರಾಜು ಮಾತನಾಡಿದರು. ಈ ಸಂದರ್ಭದಲ್ಲಿ ಮಾಜಿ ಪಾಲಿಕೆ ಸದಸ್ಯ ಅಂತೋಣಿಸ್ವಾಮಿ, ಮುಖಂಡರಾದ ವೇಣುಗೋಪಾಲ, ಬಿಟಿಎಸ್ ಪ್ರಕಾಶ್, ಕೆ.ಪಿ.ಕೃಷ್ಣ, ಶಿವಪ್ಪ, ರವಿಕುಮಾರ್ ಇದ್ದರು.

ಬೇಡಿಕೆ ಮಂಡಿಸಿದ ಸರ್ಕಾರಿ ನಿವೃತ್ತ ನೌಕರರ ಸಂಘ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೃತ್ತ ನೌಕರರು ಹಾಗೂ ಕುಟುಂಬ ಪಿಂಚಣಿದಾರರಿಗೆ ಜ್ಯೋತಿ ಸಂಜೀವಿನಿ ಯೋಜನೆಯಡಿ ಸೌಲಭ್ಯ, ಬಸ್ ಪ್ರಯಾಣದಲ್ಲಿ ರಿಯಾಯಿತಿ ನೀಡುವುದು ಸೇರಿದಂತೆ ವಿವಿಧ ಸೌಲಭ್ಯಗಳನ್ನು ಕಲ್ಪಿಸಬೇಕು ಎಂದು ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘವು ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಎಲ್.ಭೈರಪ್ಪ, ನಿವೃತ್ತ ನೌಕರರು ಅನೇಕ ಆರೋಗ್ಯ ಸಮಸ್ಯೆಗಳಿಂದ ಜೀವನ ಸಾಗಿಸುತ್ತಿದ್ದು, ಸರ್ಕಾರ ನೀಡುತ್ತಿರುವ ಪಿಂಚಣಿ ಸೌಲಭ್ಯವು ಕುಟುಂಬಗಳ ಪೋಷಣೆಗೂ ಸಾಲದೆ ಮತ್ತು ಆರೋಗ್ಯವನ್ನು ಕಾಪಾಡಿಕೊಳ್ಳಲು ಆಗುತ್ತಿಲ್ಲ. ಹೀಗಾಗಿ, ನಿವೃತ್ತ ನೌಕರರಿಗೆ ಜ್ಯೋತಿ ಸಂಜೀವಿನಿ ಅಥವಾ ಆಯುಷ್ಮಾನ್ ಭಾರತ ಆರೋಗ್ಯ ಯೋಜನೆಯಡಿ ನಗದು ರಹಿತ ಆರೋಗ್ಯ ಸೇವೆ ನೀಡಬೇಕು ಎಂದು ಆಗ್ರಹಿಸಿದರು.

ಅಕ್ಕಪಕ್ಕದ ರಾಜ್ಯಗಳಲ್ಲಿ 70ರಿಂದ 80 ವರ್ಷ ವಯೋಮಿತಿ ಮೀರಿದವರಿಗೆ ಮೂಲ ಪಿಂಚಣಿಯಲ್ಲಿ ಅನುಕ್ರಮವಾಗಿ ಶೇ 10 ರಿಂದ ಶೇ 15 ರಷ್ಟು ಹೆಚ್ಚುವರಿ ಪಿಂಚಣಿ ನೀಡಬೇಕು. ವೇತನ ಮತ್ತು ಪಿಂಚಣಿ ಪರಿಷ್ಕರಣೆಗೆ ಕೂಡಲೇ 7 ನೇ ವೇತನ ಆಯೋಗವನ್ನು ರಚನೆ ಮಾಡಬೇಕು. ಕೆಎಸ್‌ಆರ್‌ಟಿಸಿ ಹಾಗೂ ನಗರ ಸಾರಿಗೆ ಬಸ್‌ಗಳಲ್ಲಿನ ಪ್ರಯಾಣ ದರದಲ್ಲಿ ಕ್ರಮವಾಗಿ ಶೇ 25 ರಿಂದ ಶೇ 50 ರಷ್ಟು ರಿಯಾಯಿತಿ ನೀಡಬೇಕು. ಮೃತಪಟ್ಟರೆ ಪಕ್ಕದ ರಾಜ್ಯಗಳಲ್ಲಿರುವಂತೆ ಶವ ಸಂಸ್ಕಾರಕ್ಕೆ ₹10,000 ಕೊಡಿಸುವ ವ್ಯವಸ್ಥೆ ಮಾಡಬೇಕು. ನಿವೃತ್ತ ನೌಕರರ ಸಂಘಗಳಿಗೆ ಸರ್ಕಾರದಿಂದ ರಿಯಾಯಿತಿ ದರದಲ್ಲಿ ನಿವೇಶನ ಮಂಜೂರಾತಿಗೆ ಕ್ರಮವಹಿಸಬೇಕು ಹಾಗೂ ನಿವೃತ್ತ ನೌಕರರಿಗೆ ಆದಾಯ ತೆರಿಗೆಯಿಂದ ರಿಯಾಯಿತಿ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕು ಎಂದು ಎಲ್.ಭೈರಪ್ಪ ಅವರು ಒತ್ತಾಯಿಸಿದರು.

ರಾಜ್ಯ ಸರ್ಕಾರಿ ನಿವೃತ್ತಿ ನೌಕರರ ಸಂಘವು 65 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಸುವರ್ಣ ಮಹೋತ್ಸವ ಕಾರ್ಯಕ್ರಮವನ್ನು ಜುಲೈ8 ರಂದು ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. 80 ವರ್ಷಕ್ಕೂ ಮೇಲ್ಪಟ್ಟ ಸರ್ಕಾರಿ ನಿವೃತ್ತ ನೌಕರರನ್ನು ಸನ್ಮಾನಿಸಲಾಗುವುದು ಎಂದು ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಗೌರವಾಧ್ಯಕ್ಷ ಎಂ.ವಿ ರಾಜಶೇಖರಯ್ಯ, ಪ್ರಧಾನ ಕಾರ್ಯದರ್ಶಿ ರಂಗೇಗೌಡ, ಖಜಾಂಚಿ ಎಸ್.ಎಂ ಆನಂದಪ್ಪ ಅವರು ಉಪಸ್ಥಿತರಿದ್ದರು.

ಆಡಿಯೊ ವೈರಲ್: ದೂರು ದಾಖಲು

ಮಂಡ್ಯ: ‘ವಿಧಾನ ಪರಿಷತ್ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಅವರ ವಿರುದ್ಧ ಕಿಡಿಗೇಡಿಗಳು ಸುಳ್ಳು ಆಡಿಯೊ ಹರಿಬಿಟ್ಟು ಅವಹೇಳನ ಮಾಡಲು ಯತ್ನಿಸಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳಲು ಒತ್ತಾಯಿಸಿ ಎಸ್ಪಿಗೆ ದೂರು ನೀಡಲಾಗಿದೆ’ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸಿ.ಡಿ. ಗಂಗಾಧರ್ ತಿಳಿಸಿದರು.

‘ಭಾರತೀ ಕಾಲೇಜಿನಲ್ಲಿ ಮಧು ಅವರು ಸರಿಯಾಗಿ ಸಂಬಳ ನೀಡುವುದಿಲ್ಲ. ಸಿಬ್ಬಂದಿಗೆ ಕಿರುಕುಳ ನೀಡುತ್ತಾರೆ. ಬಡವರನ್ನು ಕೆಟ್ಟದಾಗಿ ನಡೆಸಿಕೊಳ್ಳುತ್ತಾರೆ ಎಂದೆಲ್ಲಾ ಆರೋಪಿಸಿ ಮಹಿಳೆಯೊಬ್ಬರು ಆರೋಪಿಸಿರುವುದು ಸುಳ್ಳು. ಇದನ್ನು ಯಾರೂ ನಂಬಲ್ಲ. ಅಭ್ಯರ್ಥಿಯ ರಾಜಕೀಯ ಏಳಿಗೆ ಸಹಿಸದ ಕಿಡಿಗೇಡಿಗಳು ಸುಳ್ಳು ಆಡಿಯೊ ರೆಕಾರ್ಡಿಂಗ್ ಮಾಡಿಸಿದ್ದಾರೆ’ ಎಂದು ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.



ಪ್ರಶಸ್ತಿ ಪ್ರದಾನ

ಕನ್ನಡ ಸಂಘರ್ಷ ಸಮಿತಿ ಶುಕ್ರವಾರ ಯೋಜಿಸಿದ್ದ ಡಾ.ಅನುಪಮಾ ನಿರಂಜನ ಮತ್ತು ಡಾ.ಕೋ.ವೆಂ. ರಾಮಕೃಷ್ಣೇಗೌಡ ಅವರ ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ಶ್ರೀ ಕುವರ ಯಲ್ಲಪ್ಪ ಅವರಿಗೆ ಡಾ.ಕೋ.ವೆಂ. ರಾ.ಕನ್ನಡ ಪರಿಚಾರಕ ಪ್ರಶಸ್ತಿ ಹಾಗೂ ಪ್ರೊ.ಎಲ್.ಗಿರಿಜಾರಾಜ್ ಅವರಿಗೆ ಡಾ.ಅನುಪಮಾ ನಿರಂಜನ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕಾರ್ಯಕ್ರಮದಲ್ಲಿ ಎಂ.ಪ್ರಕಾಶಮೂರ್ತಿ, ಎ.ಎಸ್. ನಾಗರಾಜಸ್ವಾಮಿ, ಕಾ.ವೆಂ. ಶ್ರೀನಿವಾಸಮೂರ್ತಿ, ಎಲ್.ನರಸಿಂಹಯ್ಯ , ಗುಡ್ಡದಹಳ್ಳಿ ಕೃಷ್ಣಪ್ಪ, ರಾಮಣ್ಣ ಎಚ್ ಕೋಡಿಹೊಸಹಳ್ಳಿ, ಪಿ.ಜಿ. ಆರ್. ಸಿಂಧ್ಯ, ಡಾ.ವರದಾ ಶ್ರೀನಿವಾಸ , ಇಂದಿರಾ ಶರಣ್ ಜಮ್ಮಲದಿನ್ನಿ, ಶಾಂತಲಾ ಸುರೇಶ್ ಇದ್ದರು.

ನಗರದಲ್ಲಿ ಇಂದು

ಡಾ. ಸಿದ್ಧಲಿಂಗಯ್ಯ ಅವರ ಪ್ರಥಮ ವರ್ಷದ ಸ್ಮರಣಾ ಕಾರ್ಯಕ್ರಮ, ಪುಸ್ತಕಗಳ ಬಿಡುಗಡೆ: ಉದ್ಘಾಟನೆ: ಸಚಿವ ವಿ.ಸೋಮಣ್ಣ, ಅಧ್ಯಕ್ಷತೆ: ಸಚಿವ ಮುನಿರತ್ನ, ಪುಸ್ತಕ ಬಿಡುಗಡೆ: ಶೂದ್ರ ಶ್ರೀನಿವಾಸ್, ಪ್ರಾಸ್ತಾವಿಕ ನುಡಿ: ಮಾನಸಾ ಸಿದ್ಧಲಿಂಗಯ್ಯ, ಆಯೋಜನೆ: ಡಾ.ಸಿದ್ಧಲಿಂಗಯ್ಯ ಸ್ಮಾರಕ ಪ್ರತಿಷ್ಠಾನ, ಸ್ಥಳ: ಕಲಾಗ್ರಾಮ ಸಭಾಂಗಣ, ಮಲ್ಲತ್ತಹಳ್ಳಿ ಬೆಳಿಗ್ಗೆ 9



ಸಿದ್ಧಲಿಂಗಯ್ಯ

ಗೆಜ್ಜೆನಾದ ಗ್ರಂಥ ಬಿಡುಗಡೆ ಕಾರ್ಯಕ್ರಮ: ಪುಸ್ತಕ ಬಿಡುಗಡೆ: ಎಸ್.ಟಿ.ಸೋಮಶೇಖರ್, ಮಹೇಶ್ ಜೋಶಿ, ಅತಿಥಿಗಳು: ಎಂ.ಪ್ರಕಾಶಮೂರ್ತಿ, ಬಿ.ಆರ್.ಹಿರೇಮಠ, ಎ.ವಿ. ಸೂರ್ಯನಾರಾಯಣಸ್ವಾಮಿ, ಎಚ್.ಎಸ್.ಗೋವಿಂದೇಗೌಡ, ಅಧ್ಯಕ್ಷತೆ: ಎಚ್.ಎಸ್.ಸುಧೀಂದ್ರಕುಮಾರ್, ಆಯೋಜನೆ: ಯಶವಂತಪುರ ವಿಧಾನಸಭಾ ಕ್ಷೇತ್ರ ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಶೇಷಾದ್ರಿಪುರ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್ ಸಭಾಂಗಣ, ಬೆಳಿಗ್ಗೆ 11.30

ಸದಾಶಿವ ವೃತ್ತಿಪರ ಶಿಕ್ಷಣ ತರಬೇತಿ ಕೇಂದ್ರ ಮತ್ತು ರಾಜ್ ಪ್ರಶಾಂತ್ ನಿವಾಸ್ ಉದ್ಘಾಟನಾ ಕಾರ್ಯಕ್ರಮ: ಉದ್ಘಾಟನೆ: ಕೇಂದ್ರ ಸಚಿವ ಎ.ನಾರಾಯಣಸ್ವಾಮಿ, ಅಧ್ಯಕ್ಷತೆ: ಎಸ್.ಟಿ.ಸೋಮಶೇಖರ್, ಅತಿಥಿ: ಮಾಲತಿ ಕೆ.ಹೊಳ್ಳ, ಸ್ಥಳ: ಕೃಷ್ಣ ಚೈತನ್ಯ ವಿಕಲಚೇತನರ ವಸತಿಯುಕ್ತ ವಿಶೇಷ ಶಿಕ್ಷಣ ಶಾಲೆ, ಹಳೇಬೈರೋನಹಳ್ಳಿ, ಕೆಂಗೇರಿ, ಬೆಳಿಗ್ಗೆ 10.30

‘ಹಳ್ಳಿಕಾರ್ ಕಲಿಗಳು’ ನಾಟಕ ಪ್ರದರ್ಶನ ಮತ್ತು ವಿಶ್ವನಾಥ್ ವಜ್ರಮುನಿ ಹುಟ್ಟುಹಬ್ಬ: ಆಯೋಜನೆ: ರಂಗಶ್ರೀ ಕಲಾಸಂಸ್ಥೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 6

ರಾಷ್ಟ್ರತಪಸ್ವಿ ಶ್ರೀಗುರೂಜಿ ಪುಸ್ತಕ ಲೋಕಾರ್ಪಣೆ: ಪುಸ್ತಕ ಬಿಡುಗಡೆ: ಇಮ್ಮಡಿ ಸಿದ್ಧರಾಮೇಶ್ವರಸ್ವಾಮೀಜಿ, ಅತಿಥಿಗಳು: ವಿಶ್ವೇಶ್ವರ ಭಟ್, ಸು.ರಾಮಣ್ಣ, ಚಂದ್ರಶೇಖರ ಭಂಡಾರಿ, ಆಯೋಜನೆ: ರಾಷ್ಟ್ರೋತ್ಥಾನ ಸಾಹಿತ್ಯ, ಸ್ಥಳ: ಯುವಪಥ, ನಂ.4, 31ನೇ ಅಡ್ಡರಸ್ತೆ, 11ನೇ ಮುಖ್ಯರಸ್ತೆ, ಜಯನಗರ 4ನೇ ಬ್ಲಾಕ್, ಸಂಜೆ 6

ಕರ್ನಾಟಕ ಕಲಾ ಸಂಭ್ರಮ –2020: ಆಯೋಜನೆ: ಶ್ರೀಗಂಧ ಸೌರಭ, ಸ್ಥಳ: ನಯನ ಸಭಾಂಗಣ, ಬೆಳಿಗ್ಗೆ 9

ಬಿಜಿಎಸ್ ಬ್ಲೂಮ್‌ಫೀಲ್ಡ್ ಹೈ ಕಟ್ಟಡ ಉದ್ಘಾಟನೆ ಕಾರ್ಯಕ್ರಮ: ಉದ್ಘಾಟನೆ: ಸಿದ್ದರಾಮಯ್ಯ, ಅಧ್ಯಕ್ಷತೆ: ರವಿ ಸುಬ್ರಹ್ಮಣ್ಯ, ಅತಿಥಿಗಳು: ದಿನೇಶ್ ಗುಂಡೂರಾವ್, ಕೃಷ್ಣ ಬೈರೇಗೌಡ, ಅಜಯ್ ಸಿಂಗ್, ಸ್ಥಳ: ಬಿಜಿಎಸ್ ಬ್ಲೂಮ್‌ಫೀಲ್ಡ್ ಹೈ ಆವರಣ, ಬಸವನಗುಡಿ, ಬೆಳಿಗ್ಗೆ 9.30



ಮೋಟಮ್ಮ

ಕಾಂಗ್ರೆಸ್ ನಾಯಕಿ ಮೋಟಮ್ಮ ಅವರ ಆತ್ಮಕಥನ ‘ಬಿದಿರು ನೀನ್ಯಾರಿಗಲ್ಲದವಳು’ ಕೃತಿ ಬಿಡುಗಡೆ ಕಾರ್ಯಕ್ರಮ ರವೀಂದ್ರ ಕಲಾಕ್ಷೇತ್ರದಲ್ಲಿ ಶನಿವಾರ ಬೆಳಿಗ್ಗೆ 10ಕ್ಕೆ ನಡೆಯಲಿದೆ.

ವಿಕಾಸ ಪ್ರಕಾಶನ ಮತ್ತು ಅಖಿಲ ಕರ್ನಾಟಕ ಮೋಟಮ್ಮ ಅಭಿಮಾನಿಗಳ ಸಂಘ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಬಿಜೆಪಿ ಮುಖಂಡ ಎಸ್.ಎಂ.ಕೃಷ್ಣ ಅವರು ಕೃತಿ ಬಿಡುಗಡೆ ಮಾಡುವರು. ನಿವೃತ್ತ ಪ್ರಾಧ್ಯಾಪಕ ಪ್ರೊ.ಹಿ.ಶಿ. ರಾಮಚಂದ್ರೇಗೌಡ ಪ್ರಸ್ತಾವಿಕವಾಗಿ ಮಾತನಾಡುವರು. ಪತ್ರಕರ್ತ ದಿನೇಶ್ ಅಮಿನ್ ಮಟ್ಟು ಅವರು ಕೃತಿ ಪರಿಚಯ ಮಾಡುವರು. ಡಾ.ಜಿ. ಪರಮೇಶ್ವರ್ ಅಧ್ಯಕ್ಷತೆ ವಹಿಸುವರು.

ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಸಾಹಿತಿ ಕಮಲಾ ಹಂಪನಾ ಹಾಗೂ ಇತರರು ಪಾಲ್ಗೊಳ್ಳುವರು.

21 ಕೆರೆಗಳಷ್ಟೇ ಒತ್ತುವರಿ ಮುಕ್ತ!

210 ಕೆರೆಗಳಲ್ಲಿ 19 ಕೆರೆಗಳೇ ಮಾಯ: ಒತ್ತುವರಿ ತೆರವಿಗೆ ಕ್ರಮ – ಬಿಬಿಎಂಪಿ ಆಯುಕ್ತ ಹೇಳಿಕೆ

ಪ್ರಜಾವಾಣಿ ವಾರ್ತೆ


ರಾಮ್‌ಪ್ರಸಾದ್ ಮನೋಹರ್

ಬೆಂಗಳೂರು: 'ನಗರದಲ್ಲಿನ 210 ಕೆರೆಗಳಲ್ಲಿ 19 ಕೆರೆಗಳ ಅಸ್ತಿತ್ವವೇ ಇಲ್ಲ, 21 ಕೆರೆಗಳಷ್ಟೇ ಒತ್ತುವರಿಯಿಂದ ಮುಕ್ತವಾಗಿವೆ. ಉಳಿದಿರುವ ಕೆರೆಗಳ ಸಂರಕ್ಷಣೆಗೆ ಕ್ರಮ ಕೈಗೊಳ್ಳಲಾಗುತ್ತಿದೆ' ಎಂದು ಬಿಬಿಎಂಪಿ ವಿಶೇಷ ಆಯುಕ್ತ(ಕೆರೆ) ಡಾ.ವಿ. ರಾಮ್‌ಪ್ರಸಾದ್ ಮನೋಹರ್ ಅವರು ತಿಳಿಸಿದರು.

'19 ಕೆರೆಗಳು ಇಲ್ಲವಾಗಿರುವುದು ಇತ್ತೀಚಿನ ದಿನಗಳಲ್ಲಿ ಅಲ್ಲ. ಕಾಲಾಂತರದಲ್ಲಿ ಅವು ಇಲ್ಲವಾಗಿವೆ. 6 ಕೆರೆಗಳ ಜಾಗದಲ್ಲಿ ಬಡವರ ಗುಡಿಸಿಲು ನಿರ್ಮಾಣವಾಗಿ ಕೊಳಚೆ ಪ್ರದೇಶವಾಗಿ ಮಾರ್ಪಟ್ಟಿವೆ. ಒತ್ತುವರಿಯಾಗಿರುವ ಕೆರೆಗಳ ಪೈಕಿ 21 ಕೆರೆಗಳಲ್ಲಿ ಸರ್ಕಾರಿ ಶಾಲೆ ಮತ್ತು ಇತರೆ ಕಟ್ಟಡಗಳೂ ನಿರ್ಮಾಣವಾಗಿವೆ' ಎಂದು ಅವರು ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

'ಜೀವಂತ ಇರುವ ಕೆರೆಗಳಲ್ಲಿನ ಒತ್ತುವರಿ ತೆರವುಗೊಳಿಸಿ ಸಂರಕ್ಷಣೆ ಮಾಡವುದು ಮತ್ತು ಅಭಿವೃದ್ಧಿ ಪಡಿಸುವ ಕೆಲಸವನ್ನು ಹಂತ–ಹಂತವಾಗಿ ಕೈಗೆತ್ತಿಕೊಳ್ಳಲಾಗುತ್ತಿದೆ. ಸುತ್ತಲೂ ಬೇಲಿ ನಿರ್ಮಿಸಿ ಕೆರೆಗಳನ್ನು ಸಂರಕ್ಷಣೆ ಮಾಡಲು ಪಾಲಿಕೆ ಬಜೆಟ್‌ನಲ್ಲಿ ₹1 ಕೋಟಿ ಅನುದಾನ ನಿಗದಿಯಾಗಿದೆ. ಅದರ ಹೊರತಾಗಿಯೂ ಬೇಡಿಕೆಗೆ ಅನುಸಾರವಾಗಿ ಅನುದಾನ ದೊರೆಯುತ್ತಿದೆ' ಎಂದು ಹೇಳಿದರು.

'ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ 39 ಕೆರೆಗಳ ಅಭಿವೃದ್ಧಿಗೆ ₹85 ಕೋಟಿ ಮೊತ್ತದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಈ ತಿಂಗಳ ಅಂತ್ಯದೊಳಗೆ 7 ಕೆರೆಗಳ ಅಭಿವೃದ್ಧಿ ಕಾಮಗಾರಿ ಪೂರ್ಣಗೊಳ್ಳಲಿದೆ. 17 ಕೆರೆಗಳ ಅಭಿವೃದ್ಧಿ ಮುಂದಿನ ಡಿಸೆಂಬರ್‌ನಲ್ಲಿ ಮುಕ್ತಾಯವಾಗಲಿದೆ. ಇದಲ್ಲದೇ 67 ಕೆರೆಗಳ ಅಭಿವೃದ್ಧಿಗೆ ₹200 ಕೋಟಿ ಅನುದಾನ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿದೆ' ಅವರು ಎಂದರು.

'ಬಿಬಿಎಂಪಿ ಶಾಲೆಗಳ ಮೂಲಸೌಕರ್ಯ ಹೆಚ್ಚಳ'

ಬಿಬಿಎಂಪಿ ಶಾಲೆಗಳ ಮೂಲ ಸೌಕರ್ಯ ಹೆಚ್ಚಳಕ್ಕೆ ₹35 ಕೋಟಿ ಅನುದಾನ ದೊರೆತಿದೆ ಎಂದು ರಾಮ್‌ಪ್ರಸಾದ್ ಮನೋಹರ್ ತಿಳಿಸಿದರು.

'ಮಳೆ ನೀರು ನುಗ್ಗುವ ಸ್ಥಿತಿಯಲ್ಲೂ ಕೆಲವು ಶಾಲೆಗಳಿದ್ದು, ಸರಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಬಿಬಿಎಂಪಿ ಶಾಲೆಗಳ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ದೊರೆಯಬೇಕಿದ್ದು, ಶಿಕ್ಷಕರ ಕೌಶಲ ಹೆಚ್ಚಿಸಲು ತರಬೇತಿ ಕಾರ್ಯಕ್ರಮ ಆಯೋಜಿಸಲು ಸೂಚಿಸಿದ್ದೇನೆ' ಎಂದರು.

'ಬಿಸಿಯೂಟವನ್ನು ಇಸ್ಕಾನ್ ಸಂಸ್ಥೆ ಮೂಲಕ ಪಡೆಯುತ್ತಿದ್ದು, ಪ್ರಾಥಮಿಕ ಶಾಲೆ ಮಕ್ಕಳಿಗೆ ತಲಾ ₹10 ಮತ್ತು ಪಿ.ಯು ಕಾಲೇಜಿನ ವಿದ್ಯಾರ್ಥಿಗಳಿಗೆ ತಲಾ ₹20 ದರದಲ್ಲಿ ಊಟವನ್ನು ಇಸ್ಕಾನ್ ಪೂರೈಸುತ್ತಿತ್ತು. ಬೆಲೆ ಏರಿಕೆ ಕಾರಣದಿಂದ ಹೆಚ್ಚಿಸಬೇಕು ಎಂಬ ಬೇಡಿಕೆ ಇತ್ತು. ಅದನ್ನು ಕ್ರಮವಾಗಿ ₹12 ಮತ್ತು ₹23ಕ್ಕೆ ಹೆಚ್ಚಿಸಲಾಗಿದೆ ಎಂದು ಅವರು ವಿವರಿಸಿದರು.

ಈದ್ಗಾ ಮೈದಾನ: ದಾಖಲೆ ಪರಿಶೀಲನೆ

'ಚಾಮರಾಜಪೇಟೆ ಈದ್ಗಾ ಮೈದಾನವು ಬಿಬಿಎಂಪಿ ಆಸ್ತಿ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತಿದ್ದು, ಕೂಲಂಕಷವಾಗಿ ದಾಖಲೆ ಪರಿಶೀಲಿಸಲಾಗುತ್ತಿದೆ' ಎಂದು ರಾಮ್‌ಪ್ರಸಾದ್ ಮನೋಹರ್ ತಿಳಿಸಿದರು.

'ಆಟದ ಮೈದಾನದಲ್ಲಿ ಬೇರೆ ಕಾರ್ಯಕ್ರಮಗಳನ್ನು ನಡೆಸಲು ಕೋರಿರುವ ಅನುಮತಿ ಬಗ್ಗೆ ಪಶ್ಚಿಮ ವಲಯ ಆಯುಕ್ತರು ಒಂದೆರಡು ದಿನಗಳಲ್ಲಿ ನಿರ್ಧಾರ ಕೈಗೊಳ್ಳಲಿದ್ದಾರೆ' ಎಂದರು.

ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 6,215 ಆಸ್ತಿ ಇವೆ. ಇದರಲ್ಲಿ 324 ಆಸ್ತಿಗಳನ್ನು ಗುತ್ತಿಗೆಗೆ ನೀಡಿದ್ದು, ಅವುಗಳಲ್ಲಿ 163 ಗುತ್ತಿಗೆಗಳ ಅವಧಿ ಪೂರ್ಣಗೊಂಡಿದೆ. ಸ್ವಾಧೀನಕ್ಕೆ ಪಡೆಯುವ ಮತ್ತು ಗುತ್ತಿಗೆ ನವೀಕರಿಸುವ ಪ್ರಸ್ತಾವನೆಗಳು ಸರ್ಕಾರದ ಮುಂದಿವೆ ಎಂದು ಹೇಳಿದರು.

ಉದ್ಯಾನಗಳ ಬಳಿ ಮಾಹಿತಿ ಫಲಕ

'ಉದ್ಯಾನಗಳನ್ನು ನಿರ್ವಹಣೆ ಮಾಡುವವರ ಹೆಸರು, ದೂರವಾಣಿ ಮತ್ತು ಭಾವಚಿತ್ರಗಳ ಸಹಿತ ಫಲಕಗಳನ್ನು ಎಲ್ಲಾ ಉದ್ಯಾನಗಳ ಬಳಿ ಅಳವಡಿಸಲಾಗುವುದು' ಎಂದು ರಾಮ್‌ಪ್ರಸಾದ್ ಮನೋಹರ್ ಹೇಳಿದರು.

'ನಗರದಲ್ಲಿ 1,118 ಉದ್ಯಾನಗಳಿವೆ. ಅವುಗಳ ನಿರ್ವಹಣೆಗೆ ಪಾಲಿಕೆ ಬಜೆಟ್‌ನಲ್ಲಿ ₹85 ಕೋಟಿ ನಿಗದಿ ಮಾಡಲಾಗಿದೆ. ಯಾರು ನಿರ್ವಹಣೆ ಮಾಡುತ್ತಿದ್ದಾರೆ ಎಂಬುದರ ಬಗ್ಗೆ ಒಂದು ವಾರದಲ್ಲಿ ಎಲ್ಲಾ ಉದ್ಯಾನಗಳ ಬಳಿಯೂ ಮಾಹಿತಿ ಫಲಕ ಇರಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದ್ದೇನೆ. ಇನ್ನೂ 230 ಉದ್ಯಾನಗಳ ಅಭಿವೃದ್ಧಿ ಆಗಬೇಕಿದ್ದು, ಈ ಸಂಬಂಧ ಕ್ರಿಯಾಯೋಜನೆ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಲಾಗಿದೆ' ಎಂದು ತಿಳಿಸಿದರು.

ಹೈಕೋರ್ಟ್ ಅಭಿಪ್ರಾಯ

ನಿವೃತ್ತಿ ವಯಸ್ಸು 65 ಸರ್ಕಾರಕ್ಕೆ ಹೊರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು 65ಕ್ಕೆ ನಿಗದಿಪಡಿಸುವುದರಿಂದ ಖಜಾನೆ ಹಾಗೂ ಇತರ ರಿಗೆ ಉದ್ಯೋಗಾವಕಾಶಗಳ ಮೇಲೆ ನೇರ ಪರಿಣಾಮ ಉಂಟಾಗುತ್ತದೆ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

'ನನ್ನ ಸೇವೆಯನ್ನು 62 ವರ್ಷಗಳ ಬದಲಿಗೆ 65 ವರ್ಷದವರೆಗೆ ಮುಂದುವರಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ಕೃಷಿ ಕಾಲೇಜಿನ ಮಾಜಿ ಡೀನ್ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಮತ್ತು ನ್ಯಾಯಮೂರ್ತಿ ಪಿ. ಕೃಷ್ಣ ಭಟ್ ಅವರಿದ್ದ ವಿಭಾಗೀಯ ನ್ಯಾಯಪೀಠ ತಿರಸ್ಕರಿಸಿದೆ.

'ಹಳೆಯ ರಕ್ತವನ್ನು ಉಳಿಸಿಕೊಳ್ಳುವುದು ಅಥವಾ ತಾಜಾ ರಕ್ತವನ್ನು ತುಂಬುವುದು ರಾಜ್ಯ ಸರ್ಕಾರ ಅಥವಾ ವಿಶ್ವವಿದ್ಯಾನಿಲಯಗಳ ಬುದ್ಧಿವಂತಿಕೆಗೆ ಬಿಟ್ಟದ್ದು. ವಿವಿಧ ವಿಶ್ವವಿದ್ಯಾಲಯಗಳು ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಸಾವಿರಾರು ಉದ್ಯೋಗಿಗಳು ಇದ್ದಾರೆ. ಅರ್ಜಿದಾರರ ಈಗಿನ ಪ್ರಾರ್ಥನೆಯನ್ನು ಮನ್ನಿಸಿದ್ದೇ ಆದರೆ, ಈ ಎಲ್ಲಾ ಉದ್ಯೋಗಿಗಳೂ ಮೂರು ವರ್ಷಗಳ ಹೆಚ್ಚುವರಿ ಅವಧಿಗೆ ಮುಂದುವರಿಯುತ್ತಾರೆ. ಆಗ ಹೊಸ ನೇಮಕಾತಿಗಳಿಗೆ ಖಾಲಿ ಹುದ್ದೆಗಳೇ ಉಳಿಯುವುದಿಲ್ಲ' ಎಂದು ನ್ಯಾಯಪೀಠ ತಿಳಿಸಿದೆ.

'ಪ್ರಾಧ್ಯಾಪಕರು, ಶಿಕ್ಷಕರಂತಹ ಸಾರ್ವಜನಿಕ ಸೇವಕರು ಯಾವ ವಯಸ್ಸಿನಲ್ಲಿ ನಿವೃತ್ತರಾಗಬೇಕು ಎಂಬುದು ಸಂಪೂರ್ಣವಾಗಿ ರಾಜ್ಯ ಸರ್ಕಾರದ ಅಧಿಕಾರ ವ್ಯಾಪ್ತಿಗೆ ಒಳಪಟ್ಟ ವಿಚಾರ. ಒಬ್ಬ ನೌಕರನ ಸಂಬಳದ ವೆಚ್ಚವನ್ನು ಸರ್ಕಾರವೇ ಭರಿಸುತ್ತದೆ. ಹೀಗಾಗಿ, ಹಣಕಾಸು ಮತ್ತು ಇತರ ಅಂಶಗಳ ಮುಖೇನ ನಿರ್ಧಾರ ತೆಗೆದುಕೊಳ್ಳುವ ವಿಷಯ ಗಳಲ್ಲಿ ನ್ಯಾಯಾಲಯಗಳು ಸುಲಭವಾಗಿ ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ' ಎಂದು ನ್ಯಾಯಪೀಠ ವಿವರಿಸಿದೆ.

ಮನವಿ ಏನಿತ್ತು?: ಹನುಮನಮಟ್ಟಿಯ ಕೃಷಿ ವಿಜ್ಞಾನ ಕಾಲೇಜಿನ ಮಾಜಿ ಡೀನ್ ಡಾ. ಚಿದಾನಂದ್ ಪಿ ಮನ್ಸೂರ್ ಅವರು, ನಿವೃತ್ತಿಯ ವಯಸ್ಸನ್ನು 62 ವರ್ಷ ಎಂದು ಸೂಚಿಸುವ ವಿವಿ ಕಾಯ್ದೆ–1964ರ ಕಲಂ 30(8) ಅನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಅಂತೆಯೇ, ಯುಜಿಸಿ ನಿಯಮಾವಳಿ ಅನುಸಾರ 65 ವರ್ಷ ವಯಸ್ಸಿನವರೆಗೆ ಸೇವೆಯಲ್ಲಿ ಮುಂದುವರಿಯಲು ನಿರ್ದೇಶಿಸಬೇಕು ಎಂದು ಕೋರಿದ್ದರು.

ರಾಜ್ಯಸಭೆ ಗೆಲುವು: ಬೊಮ್ಮಾಯಿಗೆ ಮೋದಿ ಶ್ಲಾಘನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯಸಭೆ ಚುನಾವಣೆಯಲ್ಲಿ ಕರ್ನಾಟಕದಿಂದ ಬಿಜೆಪಿಯ ಮೂವರು ಅಭ್ಯರ್ಥಿಗಳನ್ನು ಗೆಲ್ಲಿಸಲು ತಂತ್ರಗಾರಿಕೆ ಹೆಣೆದು ಯಶಸ್ವಿಯಾಗಿರುವುದಕ್ಕೆ ಅಭಿನಂದನೆಗಳು' ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಶುಕ್ರವಾರ ಶ್ಲಾಘಿಸಿದ್ದಾರೆ.

ಚುನಾವಣೆ ಫಲಿತಾಂಶ ಪ್ರಕಟವಾದ ಬಳಿಕ, ಬೊಮ್ಮಾಯಿ ಅವರಿಗೆ ದೂರವಾಣಿ ಕರೆ ಮಾಡಿದ ಪ್ರಧಾನಿ ಮೋದಿ ಅವರು, 'ಕ್ಲಿಷ್ಟಕರ ಸನ್ನಿವೇಶದಲ್ಲೂ ಮೂವರು ಅಭ್ಯರ್ಥಿಗಳನ್ನು ಗೆಲ್ಲಿಸುವಲ್ಲಿ ಯಶಸ್ವಿ ಆಗಿರುವುದಕ್ಕೆ ಹರ್ಷ ವ್ಯಕ್ತಪಡಿಸಿದರು' ಎಂದು ಮುಖ್ಯಮಂತ್ರಿ ಸಚಿವಾಲಯದ ಮೂಲಗಳು ತಿಳಿಸಿವೆ.

'ಕರ್ನಾಟಕದಿಂದ ಮೂವರನ್ನು ರಾಜ್ಯಸಭೆಗೆ ಕಳುಹಿಸುವಲ್ಲಿ ತಾವುಪಟ್ಟ ಪ್ರಯತ್ನ ಅಮೂಲ್ಯವಾದುದು. ಇನ್ನಷ್ಟು ಅತ್ಯುತ್ತಮವಾಗಿ ಕೆಲಸ ಮಾಡುವಂತೆ ತಿಳಿಸಿದ್ದಾರೆ' ಎಂದೂ ಮೂಲಗಳು ಹೇಳಿವೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರೂ ಬೊಮ್ಮಾಯಿ ಅವರಿಗೆ ಕರೆ ಮಾಡಿ ಶ್ಲಾಘಿಸಿದ್ದಾರೆ.

'ಅಲ್ಪ ಮತಗಳ ಕೊರತೆ ಇದ್ದರೂ ತಾಂತ್ರಿಕವಾಗಿ ಮೂವರು ಬಿಜೆಪಿ ಅಭ್ಯರ್ಥಿಗಳು ಗೆಲ್ಲುವಂತೆ ಕಾರ್ಯತಂತ್ರ ರೂಪಿಸಿರುವುದು ಅಭಿನಂದನಾರ್ಹ. ರಾಜ್ಯಸಭೆಯಲ್ಲಿ ಬಿಜೆಪಿ ಸಂಖ್ಯೆ ಹೆಚ್ಚಳಕ್ಕೆ ಕರ್ನಾಟಕ ನೀಡಿದ ಕೊಡುಗೆಯಾಗಿದೆ. ಎಲ್ಲರಿಗೂ ಧನ್ಯವಾದ' ಎಂದು ಅಮಿತ್ ಶಾ ಅವರು ಹೇಳಿದ್ದಾರೆ.

ಪೊಲೀಸ್ ನಾಯಿಮರಿ ಇನ್ನು 'ಚಾರ್ಲಿ'

ಪ್ರಜಾವಾಣಿ ವಾರ್ತೆ

ಮಂಗಳೂರು: ಕಿರಣ್ ರಾಜ್ ನಿರ್ದೇಶನದ, ರಕ್ಷಿತ್ ಶೆಟ್ಟಿ ಅಭಿನಯದ '777 ಚಾರ್ಲಿ' ಸಿನಿಮಾದಲ್ಲಿ ಮನುಷ್ಯ ಹಾಗೂ ನಾಯಿಯ ನಡುವಿನ ಒಡನಾಟದಿಂದ ಪ್ರಭಾವಿತರಾದ ನಗರದ ಪೊಲೀಸರು ಶ್ವಾನ ದಳದ ಹೊಸ ಸದಸ್ಯನಾಗಿರುವ ಲ್ಯಾಬ್ರಡಾರ್ ತಳಿಯ ನಾಯಿಮರಿಗೆ 'ಚಾರ್ಲಿ' ಎಂದು ಶುಕ್ರವಾರ ನಾಮಕರಣ ಮಾಡಿದರು.

ಮೂರು ತಿಂಗಳ ಲ್ಯಾಬ್ರಡಾರ್ ರಿಟ್ರೀವರ್ ನಾಯಿ ಮರಿ ಇತ್ತೀಚೆಗಷ್ಟೇ ಪೊಲೀಸ್ ಶ್ವಾನದಳಕ್ಕೆ ಸೇರ್ಪಡೆಯಾಗಿದೆ. ಬಂಟ್ವಾಳದ ಮಾಲೀಕರೊಬ್ಬರಿಂದ ಈ ನಾಯಿಮರಿಯನ್ನು ಶ್ವಾನ ಪಡೆಗಾಗಿ ಖರೀದಿಸಲಾಗಿತ್ತು. ನಗರ ಪೊಲೀಸ್ ಕಮಿಷನರ್ ಅವರ ಕಚೇರಿ ಬಳಿ ನಾಯಿಗೆ ನಾಮಕರಣ ಮಾಡಲು ಪುಟ್ಟ ಸಮಾರಂಭ ಏರ್ಪಡಿಸಲಾಗಿತ್ತು.


ಮಂಗಳೂರಿನಲ್ಲಿ ಶ್ವಾನ ದಳದ ಹೊಸ ಸದಸ್ಯನಿಗೆ ಚಾರ್ಲಿ ಎಂದು ನಾಮಕರಣ ಮಾಡಲಾಯಿತು. ಡಿಸಿಪಿ ಚೆನ್ನವೀರಪ್ಪ ಹಡಪದ, ಎಸಿಪಿ ಮುರುಗಪ್ಪ ಉಪಾಸೆ ಹಾಗೂ ಸಿಬ್ಬಂದಿ ಇದ್ದಾರೆ —ಪ್ರಜಾವಾಣಿ ಚಿತ್ರ

ಶ್ವಾನದಳದ ನಾಲ್ವರು ಸಿಬ್ಬಂದಿ '777 ಚಾರ್ಲಿ' ಸಿನಿಮಾದ ಪ್ರೀಮಿಯರ್ ಶೋವನ್ನು ಗುರುವಾರ ವೀಕ್ಷಿಸಿದ್ದರು.

ನಗರ ಪೊಲೀಸ್ ಕಮಿಷನರ್ ಶಶಿಕುಮಾರ್, '777 ಚಾರ್ಲಿ' ಪ್ರೀಮಿಯರ್ ಶೋ ವೀಕ್ಷಿಸಿದ ಶ್ವಾನದಳದ ಸಿಬ್ಬಂದಿ ನಮ್ಮಲ್ಲಿರುವ ನಾಯಿ ಮರಿಗೂ ಚಾರ್ಲಿ ಎಂದು ಹೆಸರಿಡೋಣ ಎಂಬ ಪ್ರಸ್ತಾವ ಮುಂದಿಟ್ಟರು. ನಾನು ಅದಕ್ಕೆ ಒಪ್ಪಿಗೆ ಸೂಚಿಸಿದೆ' ಎಂದರು.

ಚಾರ್ಲಿಗೂ ಬೆಂಗಳೂರಿನ ನಗರ ಸಶಸ್ತ್ರ ಮೀಸಲು ಪಡೆಯ (ದಕ್ಷಿಣ) ತರಬೇತುದಾರ ರಿಂದ 6 ತಿಂಗಳ ಕಾಲ ತರಬೇತಿ ನೀಡಲಾಗುತ್ತದೆ ಎಂದರು.

ಸುಧಾ ಮಯೂರ ಓದಿರಿ

ಚಿತ್ರಾವಳಿ


ಚಿತ್ರಕಲಾವಿದ ಚಂದ್ರನಾಥ್ ಆಚಾರ್ಯ ರಚಿಸಿದ ಚಿತ್ರಕಲಾ ಪ್ರದರ್ಶನ ಉದ್ಘಾಟನೆ ಸಮಾರಂಭವನ್ನು ಬಸವನಗುಡಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ಶುಕ್ರವಾರ ಆಯೋಜಿಸಲಾಗಿತ್ತು. ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್, ಕಲಾವಿದರಾದ ವಾಸುದೇವ್, ಸಾಹಿತಿ ಅ.ರಾ.ಮಿತ್ರ, ಶತವಧಾನಿ ಡಾ.ಗಣೇಶ್ ಉದ್ಘಾಟನೆ ನೆರವೇರಿಸಿ, ವರ್ಣಚಿತ್ರಗಳನ್ನು ವೀಕ್ಷಿಸಿದರು. ವರ್ಲ್ಡ್ ಕಲ್ಚರ್ ಗ್ಯಾಲರಿಯಲ್ಲಿ 'ಮಹಾಕಾವ್ಯಯಾನ' ಚಿತ್ರಕಲಾ ಪ್ರದರ್ಶನ ಜೂನ್ 10ರಿಂದ 16ರ ವರೆಗೆ ನಡೆಯಲಿದೆ.


ಜಯನಗರದ ಭೈರಸಂದ್ರ ವಾರ್ಡ್‌ನಲ್ಲಿ ಆರ್ಥಿಕವಾಗಿ ಹಿಂದುಳಿದ 1000 ಮಕ್ಕಳಿಗೆ ಉಚಿತ ನೋಟ್ ಬುಕ್ ಮತ್ತು ಸ್ಕೂಲ್ ಬ್ಯಾಗ್‌ಗಳನ್ನು ಬಾಂಧವ ಸಂಸ್ಥೆಯ ಅಧ್ಯಕ್ಷ ಎನ್‌.ನಾಗರಾಜು ವಿತರಿಸಿದರು.



'ಅಮೃತಹಳ್ಳಿ ಮತ್ತು ಹೆಣ್ಣೂರು ಪೊಲೀಸ್ ಠಾಣೆಗಳ ಪೊಲೀಸ್ ಅಧಿಕಾರಿಗಳು ಸಿವಿಲ್ ವ್ಯಾಜ್ಯಗಳನ್ನು ತೀರ್ಮಾನಿಸುವ ಚಾಳಿಗೆ ಬಿದ್ದಿದ್ದು ತಾವೇ ಹೈಕೋರ್ಟ್, ಸುಪ್ರೀಂ ಕೋರ್ಟ್ ಎಂಬಂತೆ ದುರ್ವರ್ತನೆ ತೋರುತ್ತಿರುವುದು ಖಂಡನೀಯ ಮತ್ತು ಪೊಲೀಸರ ಈ ಕಾನೂನುಬಾಹಿರ' ಎಂದು ಆರೋಪಿಸಿರುವ ಬೆಂಗಳೂರು ವಕೀಲರ ಸಂಘವು, ಪೊಲೀಸರ ದುರ್ವರ್ತನೆಗೆ ಯಾವ ರೀತಿಯಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಚರ್ಚಿಸಲು ಶುಕ್ರವಾರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ಪ್ರಧಾನ ಕಾರ್ಯದರ್ಶಿ ಟಿ.ಜಿ.ರವಿ ಮತ್ತು ಖಜಾಂಚಿ ಎಂ.ಟಿ.ಹರೀಶ್ ನೇತೃತ್ವದಲ್ಲಿ ಸಿಟಿ ಸಿವಿಲ್ ಕೋರ್ಟ್‌ನ ವಕೀಲರ ಭವನದ ಮುಂಭಾಗ ಸಮಾಲೋಚನೆ ನಡೆಸಿತು. ನಂತರ ವಕೀಲರು ಸಾಂಕೇತಿಕ ಪ್ರತಿಭಟನೆ ನಡೆಸಿದರು. —ಪ್ರಜಾವಾಣಿ ಚಿತ್ರ

ಸಂಕ್ಷಿಪ್ತ ಸುದ್ದಿ

ಸರ್ಕಾರಿ ಐಟಿಐ ಕಾಲೇಜಿಗೆ ಪ್ರವೇಶಾತಿ

ಬೆಂಗಳೂರು: ನಗರದ ಹೊಸೂರು ರಸ್ತೆಯ ಡೇರಿ ವೃತ್ತದಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ 2022–23ನೇ ಸಾಲಿನ ವಿವಿಧ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಜೂನ್ 13ರವರೆಗೆ ಅವಕಾಶ ಕಲ್ಪಿಸಲಾಗಿದೆ.

ಆರು ಅಲ್ಪಾವಧಿ ಮತ್ತು 21 ದೀರ್ಘಾವಧಿ ಸೇರಿ ಒಟ್ಟು 27 ಕೋರ್ಸ್‌ಗಳಿಗೆ 952 ಸೀಟಗಳು ಲಭ್ಯ. ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಅಂಕಪಟ್ಟಿ, ಶಾಲಾ ವರ್ಗಾವಣೆ ಪ್ರಮಾಣಪತ್ರ, ಗ್ರಾಮೀಣ ವ್ಯಾಸಂಗ ದೃಢೀಕರಣ ಪತ್ರ ಸೇರಿದಂತೆ ವಿವಿಧ ದಾಖಲೆಗಳ ಮೂಲ ಪ್ರತಿ ಮತ್ತು ಝೆರಾಕ್ಸ್ ಪ್ರತಿಗಳನ್ನು ಸಿದ್ಧಪಡಿಸಿಕೊಂಡು ಬರಬೇಕು ಎಂದು ಸೂಚಿಸಲಾಗಿದೆ.

ಮಾಹಿತಿಗೆ: 080 – 26562307, ಕೌಶಲ್ಯ ಸಹಾಯವಾಣಿ: 155267

ಪ್ರತಿಭಟನೆ

ರಾಜರಾಜೇಶ್ವರಿ ನಗರ: ರೈತನಿಗೆ ಸೇರಬೇಕಾದ ಸಬ್ಸಿಡಿ ಹಣದಲ್ಲಿಯೂ ಕಮಿಷನ್ ದಂಧೆಯಲ್ಲಿ ತೊಡಗಿರುವ ಸಚಿವ ಮುನಿರತ್ನ ಅವರನ್ನು ವಜಾ ಮಾಡುವಂತೆ ಒತ್ತಾಯಿಸಿ ಕಾಂಗ್ರೆಸ್ ಕಾರ್ಯಕರ್ತರು, ವಿವಿಧ ಸಂಘಟನೆಗಳ ಮುಖಂಡರು ಪ್ರತಿಭಟನೆ ನಡೆಸಿದರು.

ರಾಜರಾಜೇಶ್ವರಿ ನಗರ ಬಿಬಿಎಂಪಿ ಜಂಟಿ ಆಯುಕ್ತರ ಕಚೇರಿಯ ಮುಂಭಾಗದಲ್ಲಿ ಪ್ರತಿಭಟನೆ ನಡೆಯಿತು. ಅಕ್ರಮ, ಅನ್ಯಾಯ, ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತುವವರ ಮೇಲೆ ಸುಳ್ಳು ದೂರು ದಾಖಲು ಮಾಡಿಸಿ, ಕೊಲೆ ಬೆದರಿಕೆ ಒಡ್ಡುವ ಸಚಿವ ಮುನಿರತ್ನ ಅವರನ್ನು ಸಚಿವ ಸಂಪುಟದಿಂದ ಕಿತ್ತು ಹಾಕುವಂತೆ ಆಗ್ರಹಿಸಿ ಪ್ರತಿಭಟಿಸಿದರು.

ಕಾಂಗ್ರೆಸ್ ನಾಯಕಿ ಎಚ್.ಕುಸುಮಾ ಮಾತನಾಡಿದರು. ಬೆಂಗಳೂರು ಉತ್ತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಂ.ರಾಜ್ ಕುಮಾರ್, ಕೆಪಿಸಿಸಿ ಕಾರ್ಮಿಕ ವಿಭಾಗದ ಶ್ರೀಕಾಂತ್, ರಾಜರಾಜೇಶ್ವರಿ ನಗರಸಭೆ ಮಾಜಿ ಅಧ್ಯಕ್ಷ ಹನುಮಂತರಾಯಪ್ಪ, ಕೆಪಿಸಿಸಿ ಸದಸ್ಯ ಬೆಟ್ಟಸ್ವಾಮಿಗೌಡ ಮೊದಲಾದವರು ಹಾಜರಿದ್ದರು.

ಗುಂಪು ಘರ್ಷಣೆ

ಮಂಗಳೂರು: ಮಂಗಳೂರು ವಿಶ್ವವಿದ್ಯಾಲಯ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಎರಡು ಗುಂಪುಗಳ ನಡುವೆ ಶುಕ್ರವಾರ ಘರ್ಷಣೆ ನಡೆದಿದೆ.

'ಕಾಲೇಜಿನಲ್ಲಿ ತರಗತಿಯೊಂದರಲ್ಲಿ ಇತ್ತೀಚೆಗೆ ಸಾವರ್ಕರ್ ಭಾವಚಿತ್ರ ಅಳವಡಿಸಿದ್ದ ಬಗ್ಗೆ ಪ್ರಾಂಶುಪಾಲರಿಗೆ ದೂರು ನೀಡಿದ್ದನ್ನು ಪ್ರಶ್ನಿಸಿ ನಮ್ಮ ಮೇಲೆ ಎಬಿವಿಪಿಯವರು ಹಲ್ಲೆ ನಡೆಸಿದ್ದಾರೆ' ಎಂದು ಆರೋಪಿಸಿ ಕಾಲೇಜಿನ ವಿದ್ಯಾರ್ಥಿಗಳಾದ ಮಹಮ್ಮದ್ ಮರ್ಜೂಕ್, ಮಹಮ್ಮದ್ ಇರ್ಫಾಜ್, ಅಬೂಬಕ್ಕರ್ ಸಿದ್ಧಿಕ್ ದೂರು ನೀಡಿದ್ದು ಪಾಂಡೇಶ್ವರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇದಕ್ಕೆ ಪ್ರತಿಯಾಗಿ ಪ್ರಜನ್ ಶೆಟ್ಟಿ ಹಾಗೂ ಸ್ವಸ್ತಿಕ್ ಎಂಬ ವಿದ್ಯಾರ್ಥಿಗಳು ಸಹ ದೂರು ನೀಡಿದ್ದಾರೆ.

ಔರಾದಕರ ಕೆಎಟಿಗೆ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿಯ (ಕೆಎಟಿ) ಆಡಳಿತಾತ್ಮಕ ಸದಸ್ಯರನ್ನಾಗಿ ನಿವೃತ್ತ ಐಪಿಎಸ್ ಅಧಿಕಾರಿ ರಾಘವೇಂದ್ರ ಔರಾದಕರ ಅವರನ್ನು ನೇಮಕ ಮಾಡಿ ಕೇಂದ್ರ ಸರ್ಕಾರ ಆದೇಶಿಸಿದೆ.

ಕೇಂದ್ರ ಸರ್ಕಾರ ಶುಕ್ರವಾರ ಈ ಕುರಿತ ಆದೇಶ ಹೊರಡಿಸಿದ್ದು, ಔರಾದಕರ ಅವರಿಗೆ 67 ವರ್ಷ ತುಂಬುವವರೆಗೆ ಅಧಿಕಾರದಲ್ಲಿ ಇರುತ್ತಾರೆ ಅಥವಾ ಈ ನೇಮಕಾತಿ ನಾಲ್ಕು ವರ್ಷಗಳ ಅವಧಿಯವರೆಗೆ ಇರುತ್ತದೆ.

6 ಮಂದಿಗೆ ಬಡ್ತಿ

ಬೆಂಗಳೂರು: ಪ್ರಾಂಶುಪಾಲ ವೃಂದದ ಅಧಿಕಾರಿಗಳಿಗೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ವೃಂದಕ್ಕೆ ಮುಂಬಡ್ತಿ ನೀಡಿ ಶಿಕ್ಷಣ ಇಲಾಖೆಯು ಶುಕ್ರವಾರ ಆದೇಶಿಸಿದೆ.

ವಿ.ಎಂ.ಪುಷ್ಪಾ, ಚಂದ್ರಕಾಂತ ಎಂ. ಶಹಾಬಾದಕರ್, ಎಂ.ಮರಿಸ್ವಾಮಿ, ಎಚ್.ಸುಗೇಂದ್ರ, ಪಿ.ಕೃಷ್ಣ ಅವರಿಗೆ ಬಡ್ತಿ ನೀಡಲಾಗಿದೆ.

13ಕ್ಕೆ ಸಿ.ಎಂ.ಪೂಣಚ್ಚ ಪ್ರಮಾಣ ವಚನ

ಬೆಂಗಳೂರು: ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಯಾಗಿ ನೇಮಕಗೊಂಡಿರುವ ವಕೀಲ ಸಿ.ಎಂ. ಪೂಣಚ್ಚ ಸೋಮವಾರ (ಜೂ.13) ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಹೈಕೋರ್ಟ್‌ನ ಕೋರ್ಟ್ ಹಾಲ್ ಒಂದರಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ, ಪೂಣಚ್ಚ ಅವರಿಗೆ ಪ್ರಮಾಣವಚನ ಬೋಧಿಸುವರು. ನಂತರ ಕರ್ನಾಟಕ ರಾಜ್ಯ ವಕೀಲರ ಪರಿಷತ್ ನೂತನ ನ್ಯಾಯಮೂರ್ತಿಗಳಿಗೆ ಸಾಂಪ್ರದಾಯಿಕ ಸ್ವಾಗತ ನೀಡಲಿದೆ.

ನಿಧನ ವಾರ್ತೆ

ಸಾಹಿತಿ ಕೆ.ಬಿ. ಮಲ್ಲೇಶಯ್ಯ

ಬೆಂಗಳೂರು: ಸಾಹಿತಿ ಕೆ.ಬಿ. ಮಲ್ಲೇಶಯ್ಯ (63) ಬುಧವಾರ ಹೃದಯಾಘಾತದಿಂದ ನಿಧನರಾದರು.



ವಚನಯಾನ, ನವ ನಾಗರಿಕ ನಾಡುಗಳಲ್ಲಿ ನಾವು, ಪ್ರೌಢ ಪ್ರತಾಪಿ ಮೊದಲಾದ ವೈಚಾರಿಕ ಚಿಂತನೆ, ಪ್ರವಾಸ ಕಥನ, ನಾಟಕಗಳೂ ಸೇರಿ ಹಲವು ಕೃತಿಗಳನ್ನು ಅವರು ಬರೆದಿದ್ದರು.

ಮೃತರ ಇಚ್ಛೆಯಂತೆ ಅವರ ದೇಹವನ್ನು ಆಸ್ಪತ್ರೆಗೆ ದಾನ ಮಾಡಲಾಯಿತು. ಮೃತರಿಗೆ ಪತ್ನಿ ಹಾಗೂ ಪುತ್ರ ಇದ್ದಾರೆ.

ಮೈಸೂರು ರಸ್ತೆ ಬಿಎಚ್‌ಇಎಲ್ ಕಾರ್ಖಾನೆಯಲ್ಲಿ ಅವರು ದೀರ್ಘಾವಧಿ ಕೆಲಸ ಮಾಡಿದ್ದರು. ಬಿಎಚ್‌ಇಎಲ್ ಬಸವ ಸಮಿತಿಯ ಪದಾಧಿಕಾರಿಯೂ ಆಗಿದ್ದರು. ವಚನ ಚಳವಳಿಯ ಕುರಿತಾಗಿ ಮೌಲಿಕ ಉಪನ್ಯಾಸಗಳು ಮತ್ತು ಲೇಖನಗಳಿಂದ ಅವರು ಜನಪ್ರಿಯರಾಗಿದ್ದರು.

ರಾಜ್ಯ ಹಿಂದುಳಿದ ವರ್ಗಗಳ ವಕೀಲರ ಸಂಘದ ಉದ್ಘಾಟನೆಯಲ್ಲಿ ಸಿದ್ದರಾಮಯ್ಯ

‘ಮೀಸಲಾತಿ ಪರ ಮತ್ತೆ ಆಂದೋಲನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಷ್ಟ್ರದಲ್ಲಿ ಮೀಸಲಾತಿ ಪರ ಮತ್ತೊಂದು ಆಂದೋಲನ ನಡೆಯಬೇಕಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ನಗರದಲ್ಲಿ ಶುಕ್ರವಾರ ರಾಜ್ಯ ಹಿಂದುಳಿದ ವರ್ಗಗಳ ವಕೀಲರ ಸಂಘವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಮೀಸಲಾತಿಯನ್ನೇ ತೆಗೆಯುವ ಪ್ರಯತ್ನಗಳು ಸದ್ದಿಲ್ಲದೆ ನಡೆಯುತ್ತಿವೆ. ಸರ್ಕಾರಿ ನೌಕರಿಗಳು ಕಡಿತಗೊಳ್ಳುತ್ತಿವೆ. ಖಾಸಗೀಕರಣ ಹೆಚ್ಚುತ್ತಿದೆ. ಸಾಮಾಜಿಕ ನ್ಯಾಯ ಕಲ್ಪಿಸಬೇಕಾದ ಕೇಂದ್ರ ಸರ್ಕಾರವು ತಾರತಮ್ಯ ಧೋರಣೆ ಮಾಡುತ್ತಿದೆ’ ಎಂದು ಆಪಾದಿಸಿದರು.

‘ಸಂವಿಧಾನಕ್ಕೆ ತಿದ್ದುಪಡಿ ತಂದ ಮೋದಿ ಸರ್ಕಾರವು ಆರ್ಥಿಕವಾಗಿ ಹಿಂದುಳಿದ ಮೇಲ್ಜಾತಿಯವರಿಗೆ ಶೇ 10ರಷ್ಟು ಮೀಸಲಾತಿ ಕಲ್ಪಿಸಿದೆ. ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ ನೀಡಬೇಕು ಎಂಬುದು ಸಂವಿಧಾನದಲ್ಲಿ ಎಲ್ಲಿದೆ? ಸಾಮಾಜಿಕವಾಗಿ ಹಿಂದುಳಿದ ತಳ ಸಮುದಾಯಕ್ಕೆ ಮೀಸಲಾತಿ ಕಲ್ಪಿಸಬೇಕೆಂಬುದು ಸಂವಿಧಾನದ ಆಶಯ’ ಎಂದು ಪ್ರತಿಪಾದಿಸಿದರು.

‘ಸಂವಿಧಾನವನ್ನೇ ಬದಲಾಯಿಸಲು ಅಧಿಕಾರಕ್ಕೆ ಬಂದಿದ್ದೇವೆ ಎಂದು ಕರೆ ಕೊಟ್ಟರೂ ಹೇಳಿಕೆಯ ವಿರುದ್ಧ ಗಟ್ಟಿಧ್ವನಿ ಮೊಳಗಲಿಲ್ಲ. ಸ್ಥಳೀಯ ಸಂಸ್ಥೆಗಳಲ್ಲಿ ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನಕ್ಕೆ ಮೀಸಲಾತಿ ಕಲ್ಪಿಸಿದ್ದು ನಾವು. ಆದರೆ, ಅದನ್ನೇ ತೆಗೆಯಲಾಗಿದೆ. ಎಚ್.ಕಾಂತರಾಜ್ ಅಧ್ಯಕ್ಷತೆಯಲ್ಲಿ ಹಿಂದುಳಿದ ವರ್ಗಗಳ ಸ್ಥಿತಿಗತಿಯ ಅಧ್ಯಯನ ನಡೆಸಲಾಗಿತ್ತು. ಅದೇ ವರದಿ ಸ್ವೀಕರಿಸಿ ಸುಪ್ರೀಂ ಕೋರ್ಟ್‌ಗೆ ಸಲ್ಲಿಸುವಂತೆ ಸರ್ಕಾರಕ್ಕೆ ಹೇಳಿದರೆ ರಾಜ್ಯ ಸರ್ಕಾರವು ಪ್ರತ್ಯೇಕ ಸಮಿತಿ ರಚಿಸಿದೆ. ಬಿಜೆಪಿಯವರು ಮೀಸಲಾತಿ ವಿರೋಧಿ ಧೋರಣೆ ಅನುಸರಿಸುತ್ತಿದ್ದಾರೆ’ ಎಂದು ಆಪಾದಿಸಿದರು.

‘ಸ್ವಾತಂತ್ರ್ಯ ಬಂದು 75 ವರ್ಷವಾದರೂ ಬಡವರಿಗೆ ಹಕ್ಕುಗಳು ಸಿಕ್ಕಿಲ್ಲ. ಜಾತಿ ವ್ಯವಸ್ಥೆಯಿರುವ ತನಕ ಮೀಸಲಾತಿ ಅಗತ್ಯ. ಅಂಬೇಡ್ಕರ್ ಸಹ ಇದನ್ನೇ ಪ್ರತಿಪಾದಿಸಿದ್ದರು’ ಎಂದು ಹೇಳಿದರು.

ವಕೀಲರ ಸಂಘದ ಅಧ್ಯಕ್ಷ ಸುರೇಶ್ ಎಂ. ಲಾತೂರು ಮಾತನಾಡಿ, ‘ಜಾತಿ ವ್ಯವಸ್ಥೆಯಿಂದ ಹಿಂದುಳಿದ ವರ್ಗವು ತುಳಿತಕ್ಕೆ ಒಳಗಾಗಿದೆ. ಹಿಂದುಳಿದ ವರ್ಗಕ್ಕೆ ರಾಜಕೀಯ ಹಾಗೂ ಶೈಕ್ಷಣಿಕ ಮೀಸಲಾತಿ ಇನ್ನೂ ಸಿಕ್ಕಿಲ್ಲ. ಕೇಂದ್ರ ರಾಜ್ಯ ಸರ್ಕಾರಗಳು ಸಂವಿಧಾನ ಉದ್ದೇಶಗಳನ್ನು ಅನುಷ್ಠಾನಕ್ಕೆ ತರುತ್ತಿಲ್ಲ. ವಿ.ಪಿ.ಸಿಂಗ್ ಅವಧಿಯಲ್ಲಿ ಶೇ 27ರಷ್ಟು ಮೀಸಲಾತಿ ಸಿಕ್ಕರೂ ಅನುಷ್ಠಾನವು ಸಮರ್ಪಕವಾಗಿ ನಡೆಯುತ್ತಿಲ್ಲ. ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಯಲ್ಲೂ ಅನ್ಯಾಯವಾಗಿದೆ’ ಎಂದು ಹೇಳಿದರು.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಬೆಳ್ಳಪ್ಪ, ‘ಜೀವನದಲ್ಲಿ ಬದಲಾವಣೆ ಪ್ರಮುಖಘಟ್ಟ. ಆದರೆ, ಬದಲಾವಣೆಗೆ ಮನಸ್ಸು ಒಪ್ಪಿಕೊಳ್ಳುತ್ತಿಲ್ಲ. ಅಂಬೇಡ್ಕರ್ ಬದಲಾವಣೆಗೆ ದಾರಿ ತೋರಿದರೂ, ನಾವು ಮುನ್ನಡೆಯುತ್ತಿಲ್ಲ. ಶಿಕ್ಷಣದಿಂದ ದೂರವುಳಿದರೆ ಜೀವನದಿಂದಲೇ ವಂಚನೆಗೆ ಒಳಗಾದಂತೆ’ ಎಂದು ಹೇಳಿದರು.

ರಾಜ್ಯ ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಎಚ್. ಕಾಂತರಾಜ್, ‘ಹಿಂದುಳಿದ ವರ್ಗಕ್ಕೆ ಶೇ 27ರಷ್ಟು ಮೀಸಲಾಯಿದ್ದರೂ ಅನುಷ್ಠಾನದಲ್ಲಿ ಸಮಸ್ಯೆಯಾಗಿದೆ. ಒಳವರ್ಗೀಕರಣ ಆಗಬೇಕು. ಹಿಂದುಳಿದ ವರ್ಗಗಳ ನಾಯಕರಿಗೆ ಅಧಿಕಾರ ಸಿಕ್ಕರೆ ಮಾತ್ರ ರಾಜಕೀಯ, ಶಿಕ್ಷಣ ಕ್ಷೇತ್ರದಲ್ಲಿ ಮುಂದುವರಿಯಲು ಸಾಧ್ಯ’ ಎಂದು ಎಚ್ಚರಿಸಿದರು.

ಹಿರಿಯೂರು ಕ್ಷೇತ್ರದ ಶಾಸಕಿ ಪೂರ್ಣಿಮಾ ಶ್ರೀನಿವಾಸ್, ಪಿ.ಆರ್. ರಮೇಶ್, ಮಾಜಿ ಶಾಸಕ ಎಂ.ಡಿ. ಲಕ್ಷ್ಮೀನಾರಾಯಣ, ವೇಣುಗೋಪಾಲ್, ಸ್ವಕುಳಸಾಲಿ ಸಂಘದ ಗೌರವಾಧ್ಯಕ್ಷ ಎಸ್.ಶ್ರೀನಿವಾಸ್ ಮೂರ್ತಿ, ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ ಅಧ್ಯಕ್ಷ ರಾಮಚಂದ್ರಪ್ಪ, ಧಾರವಾಡ ಕರ್ನಾಟಕದ ವಿಶ್ವವಿದ್ಯಾಲಯ ಉಪನ್ಯಾಸಕ ಡಾ.ಎಸ್.ಕೆ.ಮೇಲ್ಕರ್ ಹಾಜರಿದ್ದರು.



ನಗರದಲ್ಲಿ ಶುಕ್ರವಾರ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ವಕೀಲರ ಸಂಘವನ್ನು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಉದ್ಘಾಟಿಸಿದರು. ರಾಜ್ಯ ಹಿಂದುಳಿದ ವರ್ಗಗಳ ವಕೀಲರ ಸಂಘದ ಅಧ್ಯಕ್ಷ ಸುರೇಶ ಎಂ. ಲಾತೂರ, ವಿಧಾನ ಪರಿಷತ್ ಮಾಜಿ ಸದಸ್ಯ ವೇಣುಗೋಪಾಲ್, ಎಚ್‌.ಬಿಳ್ಳಪ್ಪ, ಎಚ್‌.ಕಾಂತರಾಜ್, ಎಂ.ಡಿ.ಲಕ್ಷ್ಮಿನಾರಾಯಣ ಇದ್ದರು. — ಪ್ರಜಾವಾಣಿ ಚಿತ್ರ

> ಸಂವಿಧಾನದ ಧ್ಯೇಯೋದ್ದೇಶಗಳನ್ನು ವಿರೋಧಿಸುವವರಿಂದ ಬದಲಾವಣೆ ನಿರೀಕ್ಷಿಸಲು ಸಾಧ್ಯವಿಲ್ಲ
> **ಸಿದ್ದರಾಮಯ್ಯ**, ವಿಧಾನಸಭೆ ವಿರೋಧ ಪಕ್ಷದ ನಾಯಕ



ಸಮಾರಂಭವನ್ನು ಮನಶ್ಶಾಸ್ತ್ರಜ್ಞ ಪ್ರೊ. ಅನಿಲ್ ಕುಮಾರ್ ಜೋಶಿ ಉದ್ಘಾಟಿಸಿದರು.

ಪ್ರಥಮ ಪಿಯು ತರಗತಿಗಳ ಉದ್ಘಾಟನೆ, ಕಾರ್ಯಾಗಾರ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ಕಾಲೇಜು ವಿದ್ಯಾರ್ಥಿಗಳು ಮನಸ್ಸು ಚಂಚಲ ಮಾಡಿಕೊಳ್ಳದೆ ಶ್ರದ್ಧಾಭಕ್ತಿಯಿಂದ ಅಂದಿನ ಪಾಠವನ್ನು ಅಂದೇ ಓದಿ ಅರ್ಥೈಸಿಕೊಳ್ಳಬೇಕು' ಎಂದು ಮನಶಾಸ್ತ್ರಜ್ಞ ಪ್ರೊ.ಅನಿಲ್ ಕುಮಾರ್ ಜೋಶಿ ತಿಳಿಸಿದರು.

ಹಾವನೂರು ಬಡಾವಣೆಯ ಅಸೆಂಟ್ ಪಿಯು ಕಾಲೇಜಿನಲ್ಲಿ ಆಯೋಜಿಸಿದ್ದ ಪ್ರಥಮ ಪಿಯುಸಿ ತರಗತಿಗಳ ಉದ್ಘಾಟನೆ ಮತ್ತು ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

‘ಜಾತ್ಯತೀತ ಮನೋಭಾವವನ್ನು ಬೆಳೆಸಿಕೊಂಡು ರಾಷ್ಟ್ರಕ್ಕೆ ನಿಮ್ಮ ಕೊಡುಗೆ ಅಪಾರವಾಗಿರಲಿ. ಅಬ್ದುಲ್ ಕಲಾಂ ಮತ್ತು ನೇತಾಜಿ ಅವರಂತಹ ವ್ಯಕ್ತಿತ್ವವುಳ್ಳಂತಹ ವಿದ್ಯಾರ್ಥಿಗಳು ಈ ಕಾಲೇಜಿನಿಂದ ಹೊರ ಹೊಮ್ಮಲಿ' ಎಂದು ಶುಭ ಹಾರೈಸಿದರು.

ಪ್ರಾಂಶುಪಾಲ ಬಿ.ಎಂ.ವೆಂಕಟೇಶ್ ಮಾತನಾಡಿ, ಕಾಲೇಜು ರೂಪುರೇಷೆಗಳ ಬಗ್ಗೆ ಹಾಗೂ ಕಾಲೇಜಿನಲ್ಲಿ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳ ಕುರಿತು ವಿದ್ಯಾರ್ಥಿಗಳಿಗೆ ಮತ್ತು ಪೋಷಕರಿಗೆ ಸಮಗ್ರ ಮಾಹಿತಿಯನ್ನು ನೀಡಿದರು.

ವಿದ್ಯಾಸಿರಿ ಟ್ರಸ್ಟ್‌ನ ನಿರ್ವಹಣ ವ್ಯವಸ್ಥಾಪಕಿ ಶ್ವೇತಾ ವೆಂಕಟೇಶ್ ಉಪಸ್ಥಿತರಿದ್ದರು.

ಜೈಲಿಗಟ್ಟುವ ಎಚ್ಚರಿಕೆ: ಬೇಷರತ್ ಕ್ಷಮೆ

ಕೆಜಿಎಫ್ ತಹಶೀಲ್ದಾರ್ ಸುಜಾತಾಗೆ ಹೈಕೋರ್ಟ್ ತರಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋರ್ಟ್ ಆದೇಶಗಳ ಬಗ್ಗೆ ಅಧಿಕಾರಿಗಳಲ್ಲಿ ಇಷ್ಟೊಂದು ಅಸಡ್ಡೆ ಇರುವುದನ್ನು ನಾನು ಕರ್ನಾಟಕದಲ್ಲೇ ನೋಡಿದ್ದು’ ಎಂದು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ಕಿಡಿ ಕಾರಿದ್ದಾರೆ.

ಹೈಕೋರ್ಟ್ ತಡೆ ಆದೇಶ ಇದ್ದರೂ ಕಂದಾಯ ದಾಖಲೆಗಳಲ್ಲಿ ಜಮೀನು ಖರೀದಿದಾರರ ಹೆಸರು ಬದಲಿಸಿದ ಆರೋಪಕ್ಕೆ ಸಂಬಂಧಿಸಿದಂತೆ ನ್ಯಾಯಾಂಗ ನಿಂದನೆ ಮೊಕದ್ದಮೆ ಎದುರಿಸುತ್ತಿರುವ ಕೆಜಿಎಫ್ ತಹಶೀಲ್ದಾರ್ ವಿರುದ್ಧದ ಅರ್ಜಿಯನ್ನು ಶುಕ್ರವಾರ ವಿಚಾರಣೆ ನಡೆಸಿದ ಅವರು, ‘ನ್ಯಾಯಾಲಯದ ಘನತೆಯ ಬಗ್ಗೆ ಅಧಿಕಾರಿಗಳಲ್ಲಿ ಕಿಂಚಿತ್ತೂ ಪರಿಜ್ಞಾನ ಇಲ್ಲವಾಗಿದೆ’ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

‘ಹೈಕೋರ್ಟ್ ಘನತೆ ಎಂದರೆ ಏನು, ಅದರ ಆದೇಶ ಹೇಗಿರುತ್ತದೆ, ಅದರ ಪರಮಾಧಿಕಾರವೇನು, ಅಧಿಕಾರಿಗಳ ಕರ್ತವ್ಯ ಮತ್ತು ನ್ಯಾಯಾಂಗ ನಿಂದನೆ ಅಂದರೇನು ಎನ್ನುವುದನ್ನು ತಿಳಿಸಬೇಕಾದರೆ, ಆದೇಶಗಳನ್ನು ಹಗುರವಾಗಿ ಕಾಣುತ್ತಿರುವ ಅಧಿಕಾರಿಗಳನ್ನು ಜೈಲಿಗೆ ಕಳಿಸಿಯೇ ಜ್ಞಾನೋದಯ ಮಾಡಿಸಬೇಕಾಗುತ್ತದೆ’ ಎಂದು ತರಾಟೆಗೆ ತೆಗೆದುಕೊಂಡರು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು ತಹಶೀಲ್ದಾರ್ ಕ್ರಮವನ್ನು ಸಮರ್ಥಿಸಿಕೊಳ್ಳಲು ಮುಂದಾದರು. ಇದರಿಂದ ವ್ಯಗ್ರಗೊಂಡ ಮುಖ್ಯ ನ್ಯಾಯಮೂರ್ತಿಗಳು, ‘ಹೈಕೋರ್ಟ್ ತಡೆ ಆದೇಶ ಇದ್ದರೂ ತಹಶೀಲ್ದಾರ್ ಕಂದಾಯ ದಾಖಲೆಗಳನ್ನು ತಿದ್ದಿದ್ದು ಹೇಗೆ’ ಎಂದು ಖಾರವಾಗಿ ಪ್ರಶ್ನಿಸಿ ವಾಗ್ದಾಳಿ ನಡೆಸಿದರು.

ಇದೇ ವೇಳೆ ಸರ್ಕಾರದ ಪರ ವಕೀಲರು, ‘ಕಂದಾಯ ದಾಖಲೆಗಳಲ್ಲಿ ಆಗಿರುವ ತಪ್ಪನ್ನು 24 ಗಂಟೆಗಳಲ್ಲಿ ಸರಿಪಡಿಸಲಾಗುವುದು. ಇದೊಂದು ಬಾರಿ ಕೊನೆಯ ಅವಕಾಶ ನೀಡಿ’ ಎಂದು ಮನವಿ ಮಾಡಿದರು. ಅಂತೆಯೇ ಖುದ್ದು ಹಾಜರಿದ್ದ ಕೆಜಿಎಫ್ ತಹಶೀಲ್ದಾರ್ ಸುಜಾತಾ ರಾಮ್ ನ್ಯಾಯಪೀಠಕ್ಕೆ ಬೇಷರ್ ಕ್ಷಮೆ ಯಾಚಿಸಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ‘ಇದು ಕೊನೆಯ ಅವಕಾಶ. ಸೋಮವಾರ (ಜೂ.13) ಪುನಃ ಅರ್ಜಿ ವಿಚಾರಣೆ ನಡೆಸಲಾಗುವುದು. ಆವತ್ತು ತಹಶೀಲ್ದಾರ್ ಖುದ್ದು ಹಾಜರಿರಬೇಕು. ತಹಶೀಲ್ದಾರ್ ಕೈಗೊಂಡ ಕ್ರಮ ಕೋರ್ಟ್‌ಗೆ ಸಮಾಧಾನ ತರದೇ ಹೋದಲ್ಲಿ ಅವರ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕ್ರಿಯೆ ಆರಂಭಿಸಲಾಗುವುದು’ ಎಂದು ವಿಚಾರಣೆ ಮುಂದೂಡಿತು.

ನಾಳೆಯಿಂದ ಅಖಿಲ ಭಾರತೀಯ ಹಿಂದೂ ರಾಷ್ಟ್ರ ಅಧಿವೇಶನ

ಬೆಂಗಳೂರು: ‘ಹಿಂದೂ ಜನಜಾಗೃತಿ ಸಮಿತಿ ವತಿಯಿಂದ ಗೋವಾ ರಾಜ್ಯದ ಪೊಂಡಾ ನಗರದ ರಾಮನಾಥ ದೇವಸ್ಥಾನದಲ್ಲಿ ಜೂ.12ರಿಂದ 18ರವರೆಗೆ 10ನೇ ಅಖಿಲ ಭಾರತೀಯ ಹಿಂದೂ ರಾಷ್ಟ್ರ ಅಧಿವೇಶನವನ್ನು ಆಯೋಜಿಸಲಾಗಿದೆ’ ಎಂದು ಹಿಂದೂ ಜನಜಾಗೃತಿ ಸಮಿತಿ ತಿಳಿಸಿದೆ.

‘ಈ ಅಧಿವೇಶನದಲ್ಲಿ ಹಿಂದೂ ರಾಷ್ಟ್ರದ ಕಾರ್ಯಪದ್ಧತಿ, ಹಿಂದೂ ರಾಷ್ಟ್ರದಲ್ಲಿ ಆದರ್ಶ ರಾಜ್ಯದ ವ್ಯವಹಾರ ಹೇಗಿರಬೇಕು? ಎಂಬುದರ ಕುರಿತು ಮೂರು ದಿನಗಳ ಹಿಂದೂ ರಾಷ್ಟ್ರ ಸಂಸತ್ತು ನಡೆಯಲಿದೆ. ಹಿಂದೂ ರಾಷ್ಟ್ರ ಸ್ಥಾಪನೆಗಾಗಿ ಸಂಸದೀಯ ಮತ್ತು ಸಾಂವಿಧಾನಿಕ ಮಾರ್ಗ, ದೇವಸ್ಥಾನಗಳ ಸುವ್ಯವಸ್ಥಾಪನೆ ಮತ್ತು ಹಿಂದೂ ಶೈಕ್ಷಣಿಕ ಧೋರಣೆಗಳನ್ನು ಹೇಗೆ ಅವಲಂಬಿಸಬೇಕು ಎಂಬ ಚರ್ಚೆಗಳು ನಡೆಯಲಿವೆ’ ಎಂದು ಸುದ್ದಿಗೋಷ್ಠಿಯಲ್ಲಿ ಹಿಂದೂ ಜನಜಾಗೃತಿ ಸಮಿತಿಯ ರಾಜ್ಯ ವಕ್ತಾರ ಮೋಹನ ಗೌಡ ತಿಳಿಸಿದರು.

‘ಎರಡು ವರ್ಷಗಳ ಕಾಲ ಕೋವಿಡ್‌ನಿಂದಾಗಿ ಅಧಿವೇಶನವನ್ನು ಆನ್‌ಲೈನ್ ಮೂಲಕ ನಡೆಸಲಾಯಿತು. ಆದರೆ ಈ ವರ್ಷ ಅಧಿವೇಶನ ನಡೆಯುತ್ತಿದ್ದು, ಅಮೆರಿಕ, ಇಂಗ್ಲೆಂಡ್, ಹಾಂಗ್‌ಕಾಂಗ್, ಸಿಂಗಾಪುರ, ಫಿಜಿ ಮತ್ತು ನೇಪಾಳ ದೇಶಗಳ ಸಹಿತ ದೇಶದ 26 ರಾಜ್ಯಗಳ 350 ಕ್ಕೂ ಹೆಚ್ಚು ಹಿಂದೂ ಸಂಘಟನೆಗಳ 1,000 ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆಯಿದೆ’ ಎಂದು ತಿಳಿಸಿದರು.

ಸುದ್ದಿ 2 ನಿಮಿಷ

ಬುದ್ಧ ಐಎಎಸ್‌ನಿಂದ ಉಚಿತ ತರಬೇತಿಗೆ ಚಾಲನೆ

ಬೆಂಗಳೂರು: ಬುದ್ಧ ಐಎಎಸ್ ಸಂಸ್ಥೆಯು ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್‌ಸಿ) ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ಬಯಸುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತ ಸಮುದಾಯಗಳ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿರುವ ಉಚಿತ ತರಬೇತಿಗೆ ಚಾಲನೆ ದೊರಕಿದೆ.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ತಮ್ಮ ಅಧಿಕೃತ ನಿವಾಸದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ತರಬೇತಿಗೆ ಚಾಲನೆ ನೀಡಿದರು. ಬುದ್ಧ ಐಎಎಸ್‌ನ ಮುಖ್ಯಸ್ಥ ರಘು, ಸಂಯೋಜಕರಾದ ಚಿ. ಬಾಲು, ಕೋಟಿಗಾನಹಳ್ಳಿ ರಾಮಯ್ಯ, ಚಿದಾನಂದ, ಕೆಎಎಸ್ ಅಧಿಕಾರಿ ಅರ್ಜುನ್ ಒಡೆಯರ್, ಮುರಳಿ ಮೋಹನ್ ಕಾಟಿ ಇದ್ದರು.

ಬುದ್ಧ ಐಎಎಸ್ ಸಂಸ್ಥೆಯು ಈ ಯೋಜನೆಯಡಿ 3,000 ಅಭ್ಯರ್ಥಿಗಳಿಗೆ ಉಚಿತ ತರಬೇತಿ ನೀಡಲಿದೆ. 1,000 ಗಂಟೆಗಳ ತರಗತಿ, ಮಾದರಿ ಪರೀಕ್ಷೆ ಕೂಡ ನಡೆಸಲಿದೆ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 7676211367/ 9739109401 ಸಂಪರ್ಕಿಸಬಹುದು ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಪ್ರೊ. ಸಿಂಥಿಯಾ ಪ್ರಭಾರ ಕುಲಪತಿ



ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಪ್ರಭಾರ ಕುಲಪತಿಯನ್ನಾಗಿ ಪ್ರೊ.ಸಿಂಥಿಯಾ ಮೆನಜಸ್ ಅವರನ್ನು ರಾಜ್ಯಪಾಲರು ನೇಮಿಸಿದ್ದಾರೆ.

ಈ ಬಗ್ಗೆ ರಾಜ್ಯಪಾಲರ ಕಚೇರಿಯಿಂದ ಅಧಿಸೂಚನೆ ಹೊರಡಿಸಿದ್ದು, ಶುಕ್ರವಾರವೇ ಪ್ರೊ. ಸಿಂಥಿಯಾ ಮೆನಜಸ್ ಅವರು ಅಧಿಕಾರ ಸ್ವೀಕರಿಸಿದರು.

ಹಾಲಿ ಕುಲಪತಿ ಡಾ.ಕೆ.ಆರ್. ವೇಣುಗೋಪಾಲ್ ಅವರು ಜೂನ್ 12ರಂದು ನಿವೃತ್ತಿಯಾಗಲಿದ್ದಾರೆ. ಆದರೆ, ಜೂನ್ 11 ಮತ್ತು 12ರಂದು ರಜೆ ಇರುವುದರಿಂದ ಶುಕ್ರವಾರ ಮಧ್ಯಾಹ್ನದಿಂದಲೇ ಡಾ. ಸಿಂಥಿಯಾ ಅವರು ಪ್ರಭಾರ ಕುಲಪತಿಯಾಗಿ ಅಧಿಕಾರ ವಹಿಸಿಕೊಳ್ಳುವಂತೆ ಅಧಿಸೂಚನೆಯಲ್ಲಿ ಉಲ್ಲೇಖಿಸಲಾಗಿತ್ತು. ಪ್ರೊ. ಸಿಂಥಿಯಾ ಅವರು ಬೆಂಗಳೂರು ವಿಶ್ವವಿದ್ಯಾಲಯದ ವಾಣಿಜ್ಯ ಮತ್ತು ನಿರ್ವಹಣೆ ಅಧ್ಯಯನ ವಿಭಾಗದ ಡೀನ್‌ರಾಗಿದ್ದಾರೆ.

‘ನಾದೋಪಾಸನ’ ಸಂಗೀತ ಸಂಜೆ ಇಂದು

ಪ್ರಜಾವಾಣಿ ವಾರ್ತೆ



ಉದಯಶಂಕರ್

ಬೆಂಗಳೂರು: ಸರ್ಕಾರದ ವಿವಿಧ ಇಲಾಖೆಗಳಲ್ಲಿ ಎಂಜಿನಿಯರ್‌ಗಳಾಗಿ ಕೆಲಸ ಮಾಡಿದವರು ಸೇರಿ ರಚಿಸಿಕೊಂಡಿರುವ ‘ನಾದೋಪಾಸನ’ ಸಂಸ್ಥೆ ಆಶ್ರಮವಾಸಿಗಳ ಸಹಾಯಾರ್ಥವಾಗಿ ‘ಒಳಿತು ಮಾಡು ಮನುಜ’ ಆಶಯದಡಿ ಶನಿವಾರ (ಜೂ. 11) ಸಂಜೆ ಸುಮಧುರ ಸಂಗೀತ ಸಂಜೆ ಏರ್ಪಡಿಸಿದೆ.

‘ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ ಸಂಜೆ 5ರಿಂದ 9ರವರೆಗೆ ಕಾರ್ಯಕ್ರಮ ನಡೆಯಲಿದೆ. ಮುಖ್ಯ ಅತಿಥಿಗಳಾಗಿ ಚಿತ್ರ ನಟ ವಿಜಯ ರಾಘವೇಂದ್ರ ಹಾಗೂ ಸಂಗೀತ ನಿರ್ದೇಶಕ ವಿ. ಮನೋಹರ್ ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮದಿಂದ ಸಂಗ್ರಹವಾಗುವ ಮೊತ್ತವನ್ನು ಅಂಧರು, ಅನಾಥರು, ಅಂಗವಿಕಲರು ಹಾಗೂ ವೃದ್ಧರಿಗಾಗಿ ನಡೆಸುವ ಆಶ್ರಮಗಳಿಗೆ ನೀಡುತ್ತೇವೆ’ ಎಂದು ಸಂಸ್ಥೆಯ ಅಧ್ಯಕ್ಷ ನಿವೃತ್ತ ಮುಖ್ಯ ಎಂಜಿನಿಯರ್ ಡಿ. ಉದಯಶಂಕರ್ ತಿಳಿಸಿದ್ದಾರೆ.

8 ವರ್ಷದ ಹಿಂದೆ ಆರಂಭವಾದ ಈ ಸಂಸ್ಥೆಯಲ್ಲಿ ಇರುವ ಬಹುತೇಕರು ಎಂಜಿನಿಯರ್‌ಗಳು. ಸಂಗೀತ ಸಂಜೆಯಲ್ಲಿ ಹಾಡುವವರು ಕೂಡ ಇವರೇ. ಕಾರ್ಯಕ್ರಮದಲ್ಲಿ ವಿವಿಧ ಆಶ್ರಮಗಳಲ್ಲಿರುವ ವೃದ್ಧರು, ಅಂಗವಿಕಲರು, ಅಂಧರು ಭಾಗವಹಿಸಿ ತಮ್ಮ ಪ್ರತಿಭೆ ಪ್ರದರ್ಶಿಸಲಿದ್ದಾರೆ ಎಂದು ಅವರು ಹೇಳಿದ್ದಾರೆ.

ಮದುವೆಗೆ ನಿರಾಕರಿಸಿದ್ದಕ್ಕಾಗಿ ಸಹೋದ್ಯೋಗಿಯಿಂದ ಕೃತ್ಯ

3 ಮಕ್ಕಳ ತಾಯಿ ಮೇಲೆ ಆ್ಯಸಿಡ್ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತಿಗೆ ವಿಚ್ಛೇದನ ನೀಡಿ ಮೂವರು ಮಕ್ಕಳ ಜೊತೆ ವಾಸವಿದ್ದ 34 ವರ್ಷದ ಮಹಿಳೆ ಮೇಲೆ ಆ್ಯಸಿಡ್ ಎರಚಲಾಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ಅಹ್ಮದ್ (33) ಎಂಬುವವರನ್ನು ಕುಮಾರಸ್ವಾಮಿ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಗೋರಿಪಾಳ್ಯ ನಿವಾಸಿಯಾದ ಮಹಿಳೆ, ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಅವರ ಸಹೋದ್ಯೋಗಿಯಾದ ಆರೋಪಿ ಅಹ್ಮದ್, ತನ್ನ ಜೊತೆ ಎರಡನೇ ಮದುವೆಯಾಗುವಂತೆ ಪೀಡಿಸುತ್ತಿದ್ದ. ಮದುವೆಗೆ ಒಪ್ಪದಿದ್ದರಿಂದ ಮಹಿಳೆ ಮೇಲೆ ಆ್ಯಸಿಡ್ ಎರಚಿದ್ದಾನೆ’ ಎಂದು ದಕ್ಷಿಣ ವಿಭಾಗದ ಡಿಸಿಪಿ ಹರೀಶ್ ಪಾಂಡೆ ಹೇಳಿದರು.

‘ಶೌಚಾಲಯ ಸ್ವಚ್ಛಗೊಳಿಸುವ ಆ್ಯಸಿಡ್ ಮಿಶ್ರಿತ ದ್ರಾವಣದಿಂದ ದಾಳಿ ನಡೆದಿದೆ. ಮಹಿಳೆಯ ಬಲಗಣ್ಣಿಗೆ ಗಾಯವಾಗಿದ್ದು, ಅವರನ್ನು ಸಂಜಯಗಾಂಧಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಪ್ರಾಣಕ್ಕೆ ಅಪಾಯವಿಲ್ಲವೆಂದು ವೈದ್ಯರು ಹೇಳಿದ್ದಾರೆ’ ಎಂದು ತಿಳಿಸಿದರು.


ಅಹ್ಮದ್

ಸಲುಗೆ ಬೆಳೆಸಿ ಮದುವೆ ಪ್ರಸ್ತಾಪ: ‘ಪತಿಯಿಂದ ದೂರವಾಗಿದ್ದ ಮಹಿಳೆ ಜೀವನ ನಿರ್ವಹಣೆಗಾಗಿ ಅಗರಬತ್ತಿ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಅದೇ ಕಾರ್ಖಾನೆಯಲ್ಲೇ ಅವರಿಗೆ ಆರೋಪಿ ಅಹ್ಮದ್ ಪರಿಚಯವಾಗಿತ್ತು. ಸ್ನೇಹ ಏರ್ಪಟ್ಟು ಸಲುಗೆಯೂ ಬೆಳೆದಿತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ತನ್ನನ್ನು ಮದುವೆಯಾಗುವಂತೆ ಆರೋಪಿ ಪೀಡಿಸಲಾರಂಭಿಸಿದ್ದ. ಅದನ್ನು ನಿರಾಕರಿಸಿದ್ದ ಮಹಿಳೆ, ‘ನಮ್ಮ ಮನೆಯಲ್ಲಿ ಹಿರಿಯರು ಒಪ್ಪುವುದಿಲ್ಲ. ಮದುವೆ ಅಸಾಧ್ಯ’ ಎಂದಿದ್ದರು. ಅಷ್ಟಕ್ಕೆ ಸಿಟ್ಟಾದ ಆರೋಪಿ, ಹಲವು ಬಾರಿ ಜಗಳ ಮಾಡಿದ್ದ. ಶುಕ್ರವಾರ ಬೆಳಿಗ್ಗೆ 9.45ರ ಸುಮಾರಿಗೆ ಜೆ.ಪಿ. ನಗರ ಮೆಟ್ರೊ ನಿಲ್ದಾಣ ಬಳಿಯಿಂದ ಕೆಲಸಕ್ಕೆ ಹೊರಟಿದ್ದ ಮಹಿಳೆಯನ್ನು ತಡೆದಿದ್ದ ಆರೋಪಿ, ಮಾತನಾಡಬೇಕೆಂದು ಹೇಳಿ ಪಕ್ಕದ ರಸ್ತೆಗೆ ಕರೆದೊಯ್ದಿದ್ದ. ಅಲ್ಲಿಯೇ ಅವರ ಮುಖಕ್ಕೆ ದ್ರಾವಣ ಎರಚಿ ಪರಾರಿಯಾಗಿದ್ದ. ಉರಿ ತಾಳಲಾರದೇ ಮಹಿಳೆ ಕಿರುಚಾಡಲಾರಂಭಿಸಿದ್ದರು. ಸ್ಥಳೀಯರೇ ಅವರನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ದಿದ್ದರು’ ಎಂದೂ ಮೂಲಗಳು ತಿಳಿಸಿವೆ.

‘ಆ್ಯಸಿಡ್ ಎರಚಲು ಆರೋಪಿ ಮೊದಲೇ ಸಂಚು ರೂಪಿಸಿದ್ದ. ಶೌಚಾಲಯ ಸ್ವಚ್ಛಗೊಳಿಸಲು ಬೇಕೆಂದು ಹೇಳಿ ಅಂಗಡಿಯೊಂದರಲ್ಲಿ ಆ್ಯಸಿಡ್ ಮಿಶ್ರಿತ ದ್ರಾವಣ ಖರೀದಿಸಿಟ್ಟುಕೊಂಡಿದ್ದ’ ಎಂದೂ ಮೂಲಗಳು ಹೇಳಿವೆ.

ಮೂರನೇ ಆ್ಯಸಿಡ್ ದಾಳಿ

ಎರಡು ತಿಂಗಳ ಅವಧಿಯಲ್ಲಿ ನಗರದಲ್ಲಿ ನಡೆದ ಮೂರನೇ ಆ್ಯಸಿಡ್ ದಾಳಿ ಪ್ರಕರಣ ಇದಾಗಿದೆ.

ಮದುವೆಯಾಗಲು ನಿರಾಕರಿಸಿದರೆಂಬ ಕಾರಣಕ್ಕೆ 24 ವರ್ಷದ ಯುವತಿ ಮೇಲೆ ಆರೋಪಿ ನಾಗೇಶ್ ಬಾಬು ಆ್ಯಸಿಡ್ ಎರಚಿದ್ದ. ಆತನನ್ನು ಕಾಮಾಕ್ಷಿಪಾಳ್ಯ ಪೊಲೀಸರು ಬಂಧಿಸಿದ್ದರು.

ಹಲಸೂರು ಗೇಟ್ ಠಾಣೆ ವ್ಯಾಪ್ತಿಯ ಅಕ್ಕಸಾಲಿಗರ ಮಳಿಗೆಯಲ್ಲಿ ಕೆಲಸ ಮಾಡುತ್ತಿದ್ದ ಮಂಟೂ ಸಂತ್ರಾ (32) ಅವರ ಮೇಲೆ ಸ್ನೇಹಿತನೇ ಆದ ಆರೋಪಿ ಜನತಾ ಅಡಕ್ ಆ್ಯಸಿಡ್ ದಾಳಿ ಮಾಡಿದ್ದ. ಇದೀಗ 34 ವರ್ಷದ ಮಹಿಳೆ ಮೇಲೂ ದಾಳಿ ನಡೆದಿದೆ.

‘ಎರಡು ಮದುವೆಯಾಗಿದ್ದ ಆರೋಪಿ’

‘ಆಸ್ಪತ್ರೆಯಿಂದ ಮಾಹಿತಿ ಬರುತ್ತಿದ್ದಂತೆ ಸ್ಥಳಕ್ಕೆ ಹೋದ ಪೊಲೀಸರು, ಪ್ರಾಥಮಿಕ ಮಾಹಿತಿ ಸಂಗ್ರಹಿಸಿದ್ದರು. ಕೆಲವೇ ಗಂಟೆಗಳಲ್ಲಿ ಆರೋಪಿ ಅಹ್ಮದ್‌ನನ್ನು ಬಂಧಿಸಿದರು’ ಎಂದು ಪೊಲೀಸ್ ಅಧಿಕಾರಿ ಹೇಳಿದರು.

‘ಗೋರಿಪಾಳ್ಯ ನಿವಾಸಿಯಾದ ಆರೋಪಿ ಅಹ್ಮದ್‌ಗೆ ಈಗಾಗಲೇ ಎರಡು ಮದುವೆಯಾಗಿದ್ದು, ಮಕ್ಕಳೂ ಇದ್ದಾರೆ. ಮೂರನೇ ಮದುವೆಯಾಗಲೆಂದು ಆರೋಪಿ, ಮಹಿಳೆಯನ್ನು ಒತ್ತಾಯಿಸುತ್ತಿದ್ದ. ಆತನ ಹಿನ್ನೆಲೆ ತಿಳಿದಿದ್ದ ಮಹಿಳೆ, ಮದುವೆಗೆ ಒಪ್ಪಿರಲಿಲ್ಲ’ ಎಂದೂ ತಿಳಿಸಿದರು.

ನ್ಯಾಯಾಂಗ ಬಂಧನಕ್ಕೆ ಕುಶಾಲ್

ಪಿಎಸ್ಐ ಅಕ್ರಮ: ಹಲಸೂರು ಠಾಣೆಯಲ್ಲಿ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್ಐ ನೇಮಕಾತಿ ಅಕ್ರಮ ಪ್ರಕರಣದ ವಿಚಾರಣೆಗಾಗಿ ವಶಕ್ಕೆ ಪಡೆಯಲಾಗಿದ್ದ ಅಭ್ಯರ್ಥಿ ಕುಶಾಲ್‌ಕುಮಾರ್ ಜೆ. ಅವರನ್ನು ಅಕ್ರಮ ಎಸಗಿದ್ದ ಆರೋಪದಡಿ ಬಂಧಿಸಲಾಗಿದ್ದು, ಸದ್ಯ ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ.

ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಜುಟ್ಟನಹಳ್ಳಿ ಗ್ರಾಮದ ಕುಶಾಲ್‌ಕುಮಾರ್ 545 ಪಿಎಸ್ಐ ಹುದ್ದೆಗಳ ನೇಮಕಾತಿಯ ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ರಾಜ್ಯಕ್ಕೆ ಮೊದಲ ರ‍್ಯಾಂಕ್ ಪಡೆದಿದ್ದರು. ಒಎಂಆರ್ ಅಸಲಿ ಪ್ರತಿ ಹಾಗೂ ಕಾರ್ಬನ್ ಪ್ರತಿಯಲ್ಲಿ ಸಾಕಷ್ಟು ವ್ಯತ್ಯಾಸ ಕಂಡುಬಂದಿದ್ದರಿಂದ ಅವರು ಸಹ ಅಕ್ರಮ ಎಸಗಿರುವುದು ಸಿಐಡಿ ತನಿಖೆಯಿಂದ ಗೊತ್ತಾಗಿದೆ.


‘ಕೇಂಬ್ರಿಡ್ಜ್ ರಸ್ತೆಯಲ್ಲಿರುವ ಸೇಂಟ್ ಆ್ಯನ್ಸ್ ಗರ್ಲ್ಸ್ ಪಿಯು ಕಾಲೇಜಿನ ಕೇಂದ್ರದಲ್ಲಿ ಕುಶಾಲ್ ಪರೀಕ್ಷೆ ಬರೆದಿದ್ದ. ಕೆಲ ಪ್ರಶ್ನೆಗಳಿಗೆ ಮಾತ್ರ ಉತ್ತರಿಸಿದ್ದ ಈತ, ಬಹುತೇಕ ಪ್ರಶ್ನೆಗಳಿಗೆ ಉತ್ತರ ಬರೆಯದೇ ಒಎಂಆರ್ ಪ್ರತಿ ಖಾಲಿ ಬಿಟ್ಟಿದ್ದ. ಅದೇ ಒಎಂಆರ್ ಪ್ರತಿಯನ್ನು ಪೊಲೀಸ್ ನೇಮಕಾತಿ ವಿಭಾಗದ ಸಿಬ್ಬಂದಿ ತಿದ್ದುಪಡಿ ಮಾಡಿದ್ದರೆಂಬುದು ಗೊತ್ತಾಗಿದೆ’ ಎಂದು ಸಿಐಡಿ ಮೂಲಗಳು ಹೇಳಿವೆ.

‘172 ಅಭ್ಯರ್ಥಿಗಳ ಒಎಂಆರ್ ಅಸಲು ಪ್ರತಿ ಹಾಗೂ ಕಾರ್ಬನ್ ಪ್ರತಿಯನ್ನು ಪರೀಕ್ಷೆಗೆಂದು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಕುಶಾಲ್ ಒಎಂಆರ್ ಪ್ರತಿ ಬಗ್ಗೆ ವರದಿ ಬಂದಿದ್ದು, ಅಕ್ರಮ ಎಸಗಿರುವುದು ಮೇಲ್ನೋಟಕ್ಕೆ ಖಾತ್ರಿಯಾಗಿದೆ. ಹೀಗಾಗಿ, ಆತನ ವಿರುದ್ಧ ಹಲಸೂರು ಠಾಣೆಯಲ್ಲಿ ಪ್ರತ್ಯೇಕ ಎಫ್‌ಐಆರ್ ದಾಖಲಿಸಲಾಗಿದೆ’ ಎಂದೂ ತಿಳಿಸಿವೆ.

‘ಕುಶಾಲ್‌ನನ್ನು ಹಲಸೂರು ಪೊಲೀಸರು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಪ್ರಕರಣವು ಸಿಐಡಿ ವರ್ಗವಾಗಲಿದ್ದು, ಆ ನಂತರ ಬಾಡಿ ವಾರಂಟ್ ಮೂಲಕ ಕುಶಾಲ್‌ನನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗುವುದು’ ಎಂದೂ ಹೇಳಿವೆ.

ಪ್ರಕರಣ ಕೈಬಿಡಲು ಕೋರ್ಟ್ ನಕಾರ

ಕೊಚ್ಚಿ: ಆನೆದಂತಗಳನ್ನು ಅಕ್ರಮವಾಗಿ ಹೊಂದಿದ್ದ ಆರೋಪದಲ್ಲಿ ಮಲಯಾಳ ಚಿತ್ರರಂಗದ ಖ್ಯಾತ ನಟ ಮೋಹನ್ ಲಾಲ್ ಅವರ ವಿರುದ್ಧದ ಪ್ರಕರಣವನ್ನು ಕೈಬಿಡುವಂತೆ ಕೇರಳ ಸರ್ಕಾರ ಕೋರಿದ್ದ ಮನವಿಯನ್ನು ಇಲ್ಲಿನ ವಿಚಾರಣಾ ನ್ಯಾಯಾಲಯವು ತಿರಸ್ಕರಿಸಿದೆ.


ಮೋಹನ್ ಲಾಲ್

‘ಸದ್ಯಕ್ಕೆ ಅರ್ಜಿಯನ್ನು ಹಿಂಪಡೆಯಲು ನ್ಯಾಯಾಲಯವು ಸಮ್ಮತಿಸುವುದಿಲ್ಲ’ ಎಂದು ಕೋರ್ಟ್ ತಿಳಿಸಿದೆ. 2012ರ ಜೂನ್‌ನಲ್ಲಿ ಆದಾಯ ತೆರಿಗೆ ಅಧಿಕಾರಿಗಳು ಲಾಲ್ ಮನೆ ಮೇಲೆ ದಾಳಿ ನಡೆಸಿ ನಾಲ್ಕು ಆನೆ ದಂತಗಳನ್ನು ವಶಪಡಿಸಿಕೊಂಡು, ನಟನ ವಿರುದ್ಧ ಪ್ರಕರಣ ದಾಖಲಿಸಿದ್ದರು.


ಉಚಿತ ಆರೋಗ್ಯ ಶಿಬಿರವನ್ನು ಶಾಂತಕೃಷ್ಣಮೂರ್ತಿ ಫೌಂಡೇಷನ್ ಅಧ್ಯಕ್ಷೆ ಶಾಂತಕೃಷ್ಣಮೂರ್ತಿ ಉದ್ಘಾಟಿಸಿದರು. ಮುಖಂಡ ಕಲ್ಕೆರೆ ಕೃಷ್ಣಮೂರ್ತಿ ಇದ್ದರು

‘ಬಡವರಿಗೆ ನೆರವಾಗುವ ದೃಷ್ಟಿಯಿಂದ ಸಮಾಜ ಸೇವೆ ಆಯ್ಕೆ’

ಕೆ.ಆರ್.ಪುರ: ‘ಬಡವರಿಗೆ ನೆರವಾಗುವ ದೃಷ್ಟಿಯಿಂದ ಹಲವಾರು ಪರೋಪಕಾರಿ ಕೆಲಸಗಳನ್ನು ಮಾಡುತ್ತಾ ಬರುತ್ತಿದ್ದೇನೆ’ ಎಂದು ಶಾಂತಕೃಷ್ಣಮೂರ್ತಿ ಫೌಂಡೇಷನ್ ಅಧ್ಯಕ್ಷೆ ಶಾಂತಕೃಷ್ಣಮೂರ್ತಿ ಹೇಳಿದರು.

ಕೆ.ಆರ್.ಪುರ ಸಮೀಪದ ಎನ್‌ಆರ್‌ಐ ಬಡಾವಣೆಯಲ್ಲಿ ತಮ್ಮ ಹುಟ್ಟುಹಬ್ಬದ ಅಂಗವಾಗಿ ಕಿದ್ವಾಯಿ ಸಂಸ್ಥೆ, ಬಿ ಕ್ಲಿಪ್, ಸಪ್ತಗಿರಿ ಆಸ್ಪತ್ರೆ ಹಾಗೂ ಅಶ್ವಿನಿ ನೇತ್ರಾಲಯ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ಶಿಬಿರ ಕಾರ್ಯಕ್ರಮ ಉದ್ಘಾಟಿಸಿ, ‘ಸಮಾಜ ಸೇವೆಯಲ್ಲಿ ತೊಡಗಬೇಕೆನ್ನುವ ಉತ್ಕಟ ಬಯಕೆಯೊಂದಿಗೆ ರಾಮಮೂರ್ತಿನಗರ ವಾರ್ಡಿನಲ್ಲಿ ಕಳೆದ ಹಲವು ವರ್ಷಗಳಿಂದ ಆರೋಗ್ಯ ಶಿಬಿರ, ಪರಿಸರ ಜಾಗೃತಿ, ಉಚಿತ ಕುಡಿಯುವ ನೀರು ಸರಬರಾಜು, ರೈತ ಮೇಳ, ಉದ್ಯೋಗ ಮೇಳ, ಮಹಿಳಾ ಸಹಕಾರಿ ಬ್ಯಾಂಕ್, ಕನ್ನಡ ಜಾಗೃತಿಯಂತಹ ಮಹತ್ವದ ಕಾರ್ಯಗಳನ್ನು ಮಾಡುತ್ತಾ ಬರಲಾಗಿದೆ ಎಂದರು.

ಮುಖಂಡ ಕಲ್ಕೆರೆ ಕೃಷ್ಣಮೂರ್ತಿ, ‘ಶಾಂತಕೃಷ್ಣಮೂರ್ತಿ ಫೌಂಡೇಷನ್ ವತಿಯಿಂದ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ಶಿಬಿರದಲ್ಲಿ ಎರಡು ಸಾವಿರಕ್ಕೂ ಹೆಚ್ಚು ಜನರು ಪಾಲ್ಗೊಂಡು ತಪಾಸಣೆಗೆ ಒಳಪಟ್ಟಿದ್ದಾರೆ. ಕ್ಯಾನ್ಸರ್ ಪರೀಕ್ಷೆ, ಹೃದಯ ರೋಗ, ಥೈರಾಯ್ಡ್, ಕಣ್ಣಿನ ತಪಾಸಣೆ, ಚರ್ಮ ರೋಗ, ಮೂತ್ರಪಿಂಡ ಸಮಸ್ಯೆಗಳ ಬಗ್ಗೆ ತಪಾಸಣೆ ನಡೆಸಲಾಗಿದೆ’ ಎಂದು ಹೇಳಿದರು.

ಚಾಕುವಿನಿಂದ ಇರಿದು ಕೊಲೆ: ಸ್ನೇಹಿತನ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಮಡಿವಾಳ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಪ್ರದೀಪ್ (32) ಎಂಬುವರ ಕೊಲೆ ಪ್ರಕರಣ ಸಂಬಂಧ ಸ್ನೇಹಿತ ರಕ್ಷಿತ್ ಗೌಡ (26) ಅವರನ್ನು ಪೊಲೀಸರು ಬಂಧಿಸಿದ್ದಾರೆ.

‘ಬಿಟಿಎಂ ಬಡಾವಣೆಯ 1ನೇ ಹಂತದ ನಿವಾಸಿ ಪ್ರದೀಪ್ ಅವರನ್ನು ಮೇ 28ರಂದು ಕೊಲೆ ಮಾಡಲಾಗಿತ್ತು. ಮೃತದೇಹ ಕೊಳೆತ ಸ್ಥಿತಿಯಲ್ಲಿ ಜೂನ್ 2ರಂದು ಪತ್ತೆಯಾಗಿತ್ತು. ಕೊಲೆ ಮಾಡಿ ಪರಾರಿಯಾಗಿದ್ದ ರಕ್ಷಿತ್‌ನನ್ನು ಇತ್ತೀಚೆಗೆ ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ಏಕಾಂತದ ವೇಳೆ ಜಗಳ: ‘ಮಹಿಳೆಯರ ವೇಷಭೂಷಣ ಧರಿಸುತ್ತಿದ್ದ ಪ್ರದೀಪ್ ಸಲಿಂಗಕಾಮಿ ಎಂಬುದು ತನಿಖೆಯಿಂದ ಗೊತ್ತಾಗಿದೆ. ಜೀವನ ನಿರ್ವಹಣೆಗಾಗಿ ಅಂಗಡಿಯೊಂದರಲ್ಲಿ ಅವರು ಕೆಲಸ ಮಾಡುತ್ತಿದ್ದರು. ಕೆಲ ತಿಂಗಳ ಹಿಂದೆಯಷ್ಟೇ ಆಟೊ ಚಾಲಕನಾಗಿದ್ದ ಮೂಡಲಪಾಳ್ಯದ ರಕ್ಷಿತ್ ಗೌಡ ಪರಿಚಯವಾಗಿತ್ತು. ನಂತರ ಸಲುಗೆ ಏರ್ಪಟ್ಟಿತ್ತು. ಇಬ್ಬರ ನಡುವೆ ದೈಹಿಕ ಸಂಬಂಧವೂ ಇತ್ತು’ ಎಂದು ಪೊಲೀಸರು ತಿಳಿಸಿದರು.

‘ರಕ್ಷಿತ್ ಗೌಡನನ್ನು ಮೂರು ಸಲ ಮನೆಗೆ ಕರೆಸಿಕೊಂಡಿದ್ದ ಪ್ರದೀಪ್, ಆತನ ಜೊತೆ ಖಾಸಗಿ ಕ್ಷಣಗಳನ್ನು ಕಳೆದಿದ್ದರು. ಮೇ 28ರಂದು ಸಹ ರಕ್ಷಿತ್ ಅವರ ಮನೆಗೆ ಬಂದಿದ್ದ. ಏಕಾಂತದಲ್ಲಿದ್ದ ಇಬ್ಬರ ನಡುವೆ ಜಗಳ ಶುರುವಾಗಿತ್ತು. ಅದೇ ವೇಳೆಯೇ ಪ್ರದೀಪ್ಚಾಕುವಿನಿಂದ ರಕ್ಷಿತ್ ಅವರಿಗೆ ಇರಿಯಲು ಮುಂದಾಗಿದ್ದರು. ಪ್ರತಿರೋಧ ವೊಡ್ಡಿದ್ದ ರಕ್ಷಿತ್, ಅದೇ ಚಾಕು ಕಸಿದುಕೊಂಡು ಪ್ರದೀಪ್ ಅವರಿಗೆ ಚುಚ್ಚಿದ್ದ. ತೀವ್ರರಕ್ತಸ್ರಾವದಿಂದಾಗಿ ಪ್ರದೀಪ್ ಸ್ಥಳದಲ್ಲೇ ಮೃತಪಟ್ಟಿದ್ದರು’ ಎಂದೂ ಪೊಲೀಸರು ಮಾಹಿತಿ ನೀಡಿದರು.

ಬೀಗ ಹಾಕಿಕೊಂಡು ಆರೋಪಿ ಪರಾರಿ: ‘ಪ್ರದೀಪ್ ಮೃತದೇಹವನ್ನು ಮನೆಯಲ್ಲೇ ಇರಿಸಿದ್ದ ಆರೋಪಿ ಬೀಗ ಹಾಕಿಕೊಂಡು ಪರಾರಿಯಾಗಿದ್ದ. ಜೂನ್ 2ರಂದು ಮನೆಯಿಂದ ದುರ್ನಾತ ಬರುತ್ತಿತ್ತು. ಸ್ಥಳೀಯರು ನೀಡಿದ್ದ ಮಾಹಿತಿ ಆಧರಿಸಿ ಮನೆಯ ಬೀಗ ಮುರಿದಾಗ, ಕೊಳೆತ ಸ್ಥಿತಿಯಲ್ಲಿ ಮೃತದೇಹ ಕಂಡಿತ್ತು’ ಎಂದೂ ತಿಳಿಸಿದರು.

ಹೆರಿಗೆ ಖರ್ಚಿಗೆ ಹಣ ಹೊಂದಿಸಲು ಅಪಹರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹನ್ನೊಂದು ವರ್ಷದ ಬಾಲಕನನ್ನು ಅಪಹರಿಸಿ ₹50 ಲಕ್ಷಕ್ಕೆ ಬೇಡಿಕೆ ಇರಿಸಿದ್ದ ಪ್ರಕರಣದಲ್ಲಿ ಮತ್ತಿಬ್ಬರು ಮಹಿಳೆಯರನ್ನು ಹೆಣ್ಣೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಬಿಹಾರದ ಮಂಗೀತಾ ಹಾಗೂ ದುರ್ಗಾ ಬಂಧಿತರು. ಮನೆ ಕೆಲಸ ಮಾಡುತ್ತಿದ್ದ ಇವರಿಬ್ಬರು ಜಿಗಣಿಯಲ್ಲಿದ್ದ ಗೌರವ್ ಸಿಂಗ್ ಸೇರಿ, ಬಿಎಂಟಿಸಿ ಬಸ್ ಚಾಲಕ ಸುಭಾಷ್ ಅವರ ಮಗ ದಮದೀಪ್‌ನನ್ನು ಜೂನ್ 8ರಂದು ಅಪಹರಣ ಮಾಡಿದ್ದರು’ ಎಂದು ಪೂರ್ವ ವಿಭಾಗದ ಡಿಸಿಪಿ ಭೀಮಾಶಂಕರ್ ಗುಳೇದ್ ಅವರು ಹೇಳಿದರು.

‘ಸುಭಾಷ್ ನೀಡಿದ್ದ ದೂರು ಆಧರಿಸಿ ತನಿಖೆ ಕೈಗೊಂಡು, ಜಿಗಣಿ ಫಾರ್ಮ್‌ಹೌಸ್‌ನಲ್ಲಿ ಅಕ್ರಮ ಬಂಧನದಲ್ಲಿರಿಸಿದ್ದ ಬಾಲಕನನ್ನು ರಕ್ಷಣೆ ಮಾಡಲಾಯಿತು. ಅದೇ ಸ್ಥಳದಲ್ಲೇ ಆರೋಪಿ ಗೌರವ್ ಸಿಂಗ್‌ನನ್ನು ಕೂಡ ಬಂಧಿಸಲಾಗಿತ್ತು. ಕೃತ್ಯದಲ್ಲಿ ಭಾಗಿಯಾಗಿದ್ದ ಮತ್ತಿಬ್ಬರು ಮಹಿಳೆಯರನ್ನು ಇದೀಗ ಸೆರೆ ಹಿಡಿಯಲಾಗಿದೆ’ ಎಂದೂ ಪೊಲೀಸರು ತಿಳಿಸಿದರು.

ಗರ್ಭಿಣಿ ಆಗಿರುವ ಆರೋಪಿ: ‘ಬಂಧಿತ ಆರೋಪಿ ಮಂಗೀತಾ ಗರ್ಭಿಣಿ. ಬಾಲಕನ ಮನೆಯ ಪಕ್ಕದ ಮನೆಯಲ್ಲಿ ಈಕೆ ಕೆಲಸ ಮಾಡುತ್ತಿದ್ದಳು. ಬಾಲಕನ ತಾಯಿಯನ್ನು ಪರಿಚಯ ಮಾಡಿಕೊಂಡು, ಮೊಬೈಲ್ ಸಂಖ್ಯೆ ಪಡೆದಿದ್ದಳು’ ಎಂದು ಗುಳೇದ್ ಹೇಳಿದರು.

‘ದುಡಿದ ಹಣ ಯಾವುದಕ್ಕೂ ಸಾಲುತ್ತಿರಲಿಲ್ಲ. ತನ್ನ ಹೆರಿಗೆ ಹಾಗೂ ಬಾಣಂತನಕ್ಕಾಗಿ ಹಣ ಹೊಂದಿಸಲೆಂದು ಮಂಗೀತಾ ಈ ಅಪಹರಣದ ಸಂಚು ರೂಪಿಸಿದ್ದಳು. ಬಾಲಕನನ್ನು ಕರೆದೊಯ್ದು ಸುರಕ್ಷಿತವಾಗಿ ಇರಿಸಿದರೆ ₹10 ಲಕ್ಷ ನೀಡುವುದಾಗಿ ಮಂಗೀತಾ ದುರ್ಗಾಳಿಗೆ ಹೇಳಿದ್ದಳು. ಜೂನ್ 8ರಂದು ಈಜುಕೊಳದ ನೆಪದಲ್ಲಿ ದುರ್ಗಾ ಜೊತೆಯಲ್ಲಿ ಬಾಲಕನನ್ನು ಕಳುಹಿಸಿಕೊಟ್ಟಿದ್ದಳು’ ಎಂದೂ ತಿಳಿಸಿದರು.

ಡ್ರಗ್ಸ್ ಮಾರಾಟ: ಇಬ್ಬರ ಬಂಧನ

ಬೆಂಗಳೂರು: ಡ್ರಗ್ಸ್ ಮಾರಾಟದ ವಿರುದ್ಧ ಪ್ರತ್ಯೇಕ ಕಾರ್ಯಾಚರಣೆ ನಡೆಸಿರುವ ಯಲಹಂಕ ಹಾಗೂ ಸಿಸಿಬಿ ಪೊಲೀಸರು, ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.


ಆರೋಪಿಯಿಂದ ಜಪ್ತಿ ಮಾಡಲಾದ ಎಂಡಿಎಂಎ ಡ್ರಗ್ಸ್

‘ಯಲಹಂಕ ಠಾಣೆ ವ್ಯಾಪ್ತಿಯಲ್ಲಿ ಡ್ರಗ್ಸ್ ಮಾರುತ್ತಿದ್ದ ಆರೋಪದಡಿ ಆಫ್ರಿಕಾ ಪ್ರಜೆ ಜಾನ್ ಅಬ್ರಾಹಂ ಎಂಬಾತನನ್ನು ಬಂಧಿಸಲಾಗಿದೆ. ಈತನಿಂದ 1 ಕೆ.ಜಿ 455 ಗ್ರಾಂ ಎಂಡಿಎಂಎ, 6 ಕೆ.ಜಿ 530 ಗ್ರಾಂ ಗಾಂಜಾ, 7 ಮೊಬೈಲ್, ದ್ವಿಚಕ್ರ ವಾಹನ ಹಾಗೂ ₹ 28,000 ನಗದು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

‘ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲ ಖಾಸಗಿ ಕಂಪನಿ ಉದ್ಯೋಗಿಗಳಿಗೆ ಬಂಧಿತ ಜಾನ್ ಡ್ರಗ್ಸ್ ಮಾರುತ್ತಿದ್ದ. ಈತನ ಜೊತೆ ಡ್ರಗ್ಸ್ ಮಾರಾಟದಲ್ಲಿ ತೊಡಗಿದ್ದ ಮತ್ತಿಬ್ಬರು ತಲೆಮರೆಸಿಕೊಂಡಿದ್ದಾರೆ’ ಎಂದೂ ಹೇಳಿದರು.

₹ 3 ಲಕ್ಷ ಮೌಲ್ಯದ ಡ್ರಗ್ಸ್: ರಾಮಮೂರ್ತಿನಗರ ಠಾಣೆ ವ್ಯಾಪ್ತಿಯಲ್ಲಿ ಡ್ರಗ್ಸ್ ಮಾರುತ್ತಿದ್ದ ಆರೋಪದಡಿ ಚೂಟು ಎಂಬಾತನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಆತನಿಂದ ₹ 3 ಲಕ್ಷ ಮೌಲ್ಯದ 5 ಕೆ.ಜಿ 30 ಗ್ರಾಂ ಗಾಂಜಾ ಹಾಗೂ ಮೊಬೈಲ್ ಜಪ್ತಿ ಮಾಡಿದ್ದಾರೆ.

‘ಹೊಸಕೋಟೆಯಲ್ಲಿ ಸುತ್ತಾಡುತ್ತಿದ್ದ ಆರೋಪಿ, ಪರಿಚಯಸ್ಥರಿಗೆ ಗಾಂಜಾ ಮಾರುತ್ತಿದ್ದ. 10 ಗ್ರಾಂ ಗಾಂಜಾಕ್ಕೆ ₹300ರಿಂದ ₹500 ನಿಗದಿಪಡಿಸಿದ್ದ. ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲ ಖಾಸಗಿ ಕಂಪನಿಗಳ ಉದ್ಯೋಗಿಗಳು ಕಾಯಂ ಗ್ರಾಹಕರಾಗಿದ್ದರು’ ಎಂದು ಸಿಸಿಬಿ ಪೊಲೀಸರು ಹೇಳಿದರು.

ದ್ವಿಚಕ್ರ ವಾಹನ ಕಳ್ಳತನ: ಬಂಧನ

ಬೆಂಗಳೂರು: ಸಾರ್ವಜನಿಕ ಸ್ಥಳ ಹಾಗೂ ಮನೆ ಮುಂದೆ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನ ಕಳ್ಳತನ ಪ್ರಕರಣದಲ್ಲಿ ಇಬ್ಬರು ಬಾಲಕರನ್ನು ಮಾಗಡಿ ರಸ್ತೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಮಾಗಡಿ ರಸ್ತೆ ಠಾಣೆ ವ್ಯಾಪ್ತಿಯ ಮನೆ ಮುಂದೆ ನಿಲ್ಲಿಸಿದ್ದ ದ್ವಿಚಕ್ರ ವಾಹನ ಕಳ್ಳತನ ಆಗಿತ್ತು. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಾಗ ಬಾಲಕರೇ ಕೃತ್ಯ ಎಸಗಿರುವುದು ಗೊತ್ತಾಯಿತು. ಅವರನ್ನು ವಶಕ್ಕೆ ಪಡೆದು ಬಾಲ ನ್ಯಾಯಾಲಯದಲ್ಲಿ ಹಾಜರು ಪಡಿಸಲಾಯಿತು’ ಎಂದು ಪೊಲೀಸರು ಹೇಳಿದರು.

‘ಕದ್ದ ದ್ವಿಚಕ್ರ ವಾಹನಗಳನ್ನು ವ್ಹೀಲಿ ಹಾಗೂ ಜಾಲಿರೈಡ್‌ಗಾಗಿ ಬಳಸುತ್ತಿದ್ದರು. ನಂತರ ಬೇರೆಯವರಿಗೆ ಮಾರಾಟ ಮಾಡುತ್ತಿದ್ದರು. ಇವರಿಂದ ₹5 ಲಕ್ಷ ಮೌಲ್ಯದ 8 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ. ಸಿಟಿ ಮಾರ್ಕೆಟ್, ವಿಜಯನಗರ, ಅಶೋಕನಗರ, ಚನ್ನಮ್ಮನಕೆರೆ ಅಚ್ಚುಕಟ್ಟು ಹಾಗೂ ಇತರೆ ಠಾಣೆ ವ್ಯಾಪ್ತಿಯಲ್ಲೂ ಬಾಲಕರು ಕೃತ್ಯ ಎಸಗಿದ್ದಾರೆ’ ಎಂದರು.

‘ಸಿಧು ಮೂಸೆವಾಲಾ ಹತ್ಯೆಯ ಸಂಚು ತಿಳಿದಿದ್ದ ಕಾಂಬ್ಳೆ’

ಪುಣೆ (ಪುಣೆ): ‘ಪ್ರಕರಣವೊಂದರಲ್ಲಿ ಬಂಧಿತನಾಗಿದ್ದ ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್‌ನ ಸದಸ್ಯ ಮಹಾಕಾಲ್ ಅಲಿಯಾಸ್ ಸಿದ್ದೇಶ್ ಕಾಂಬ್ಳೆಗೆ ಪಂಜಾಬಿ ಗಾಯಕ ಸಿಧು ಮೂಸೆವಾಲಾ ಅವರನ್ನು ಹತ್ಯೆ ಮಾಡುವ ವಿಷಯ ಮುಂಚೆಯೇ ತಿಳಿದಿತ್ತು’ ಎಂದು ತನಿಖಾಧಿಕಾರಿಗಳು ಶುಕ್ರವಾರ ಹೇಳಿದ್ದಾರೆ.

‘ಮೂಸೆವಾಲಾ ಹತ್ಯೆಯ ಒಂದು ವಾರಕ್ಕೂ ಮುನ್ನವೇ ಗ್ಯಾಂಗ್‌ಸ್ಟರ್ ವಿಕ್ರಮ್ ಬ್ರಾರ್ ಜತೆಗೆ ಸಿದ್ಧೇಶ್ ಸಂಪರ್ಕದಲ್ಲಿದ್ದ. ಬ್ರಾರ್ ಕೂಡಾ ಬಿಷ್ಣೋಯ್ ಗ್ಯಾಂಗ್‌ನ ಸದಸ್ಯ’ ಎಂದು ಮಹಾರಾಷ್ಟ್ರದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕನ್ನಮಂಗಲ: ಕೇಂದ್ರದ ತಂಡ ಭೇಟಿ

ಕೆ.ಆರ್.ಪುರ: ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಜಲಮೂಲಗಳನ್ನು ರಕ್ಷಿಸುವ ಉದ್ದೇಶದಿಂದ ಕೇಂದ್ರ ಸರ್ಕಾರದ ಉನ್ನತಾಧಿಕಾರಿಗಳ ತಂಡವು ಬೆಂಗಳೂರು ಪೂರ್ವ ತಾಲ್ಲೂಕಿನ ಕನ್ನಮಂಗಲ ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ, ಪರಿಶೀಲಿಸಿತು.

ಕೇಂದ್ರದ ಹಣಕಾಸು ಇಲಾಖೆಯ ಉಪ ಕಾರ್ಯದರ್ಶಿ ಸುರ್ಜೀತ್ ಕಾರ್ತಿಕೇಯನ್ ಹಾಗೂ ವೈಜ್ಞಾನಿಕ ಸಲಹೆಗಾರ ನಿಶ್ಚಯ್ ಮಲ್ಹೋತ್ರ ತಂಡದಲ್ಲಿದ್ದರು. ಇಒ ಮಂಜುನಾಥ್, ಗ್ರಾ. ಪಂ. ಅಧ್ಯಕ್ಷೆ ಚೈತ್ರಾ, ಯೋಗಾನಂದ, ರೋಹಿತ್ ಹಾಜರಿದ್ದರು.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

ಸಂಚಾರ ವಾಣಿಜ್ಯ ಶಾಖೆ, ಕೇಂದ್ರ ಕಛೇರಿ, 2ನೇ ಮಹಡಿ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು-27.

ಸಂಖ್ಯೆ:ಬೆಂಮಸಾಸಂ/ಕೇಕ/ಸಂ/ವಾ/932/2022-23 ದಿನಾಂಕ:10.06.2022

ಟೆಂಡರ್ ಪ್ರಕಟಣೆ ಸಂಖ್ಯೆ-06/2022-23 (ಇ-ಪ್ರೊಕ್ಯರ್‌ಮೆಂಟ್ ಮೂಲಕ)

ಬೆಂಮಸಾಸಂಸ್ಥೆಯ ವಿವಿಧ ಘಟಕ/ಕಾರ್ಯಾಗಾರಗಳಲ್ಲಿನ ಕಾರ್ಮಿಕರ ಕ್ಯಾಂಟೀನ್‌ನನ್ನು 02 (ಎರಡು) ವರ್ಷಗಳ ಅವಧಿಗೆ ಪರವಾನಗಿ ಶುಲ್ಕ ರಹಿತ ಆಧಾರದ ಮೇಲೆ ಪರವಾನಗಿ ನೀಡಲು ಆಸಕ್ತ ವ್ಯಕ್ತಿಗಳಿಂದ ಇ-ಸಂಗ್ರಹಣಾ ವೇದಿಕೆ ಮುಖಾಂತರ ಬಿಡ್‌ಗಳನ್ನು ಆಹ್ವಾನಿಸಿದೆ. ಭದ್ರತಾ ಠೇವಣಿ ಮೊತ್ತ **ರೂ.50,000/-**ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಪಾವತಿಸಬೇಕಾಗಿರುತ್ತದೆ. ಜೊತೆಗೆ ಆಯ್ಕೆಯಾದ ಬಿಡ್‌ದಾರರು ವಿದ್ಯುತ್ ಶುಲ್ಕವನ್ನು ಪಾವತಿಸಬೇಕಾಗಿರುತ್ತದೆ.

ಬಿಡ್ ಸಲ್ಲಿಸುವ ಕೊನೆಯ ದಿನಾಂಕ: **30.06.2022, 12:00** ಗಂಟೆಯವರೆಗೆ.

ಆರ್ಥಿಕ ಬಿಡ್ ತೆರೆಯುವ ದಿನಾಂಕ: **02.07.2022, 12:30** ಗಂಟೆಗೆ.

ಹೆಚ್ಚಿನ ಮಾಹಿತಿಗಾಗಿ **www.eproc.karnataka.gov.in** ಗೆ ಲಾಗಾನ್ ಆಗಿ ಅಥವಾ ಇ-ಸಂಗ್ರಹಣಾ ಕೋಶ ದೂರವಾಣಿ ಸಂಖ್ಯೆ: 080-23010900; 23010901; 22371090; 22340060; 22340948 ಅಥವಾ 7760991026 & 7760991222. ಇ-ಮೇಲ್: **ctmc@mybmtc.com** ಗೆ ಸಂಪರ್ಕಿಸಬಹುದು.

ಸಹಿ/- ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ), (ಟೆಂಡರ್ ಕರೆಯುವ ಪ್ರಾಧಿಕಾರಿ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರು-6 ರವರ ಕಛೇರಿ, ಕೆರೆಗಳು ವಿಭಾಗ, ಕೊಠಡಿ ಸಂಖ್ಯೆ 308, 3ನೇ ಮಹಡಿ, ಆನೆಕ್ಸ್-3 ಕಟ್ಟಡ, ಎನ್. ಆರ್. ಚೌಕ, ಬೆಂಗಳೂರು-560 002.

ಸಂ: ಕಾಪಾಅ-6/ಕೆರೆಗಳು//ಟೆಂಡ್-03/2022-23 ದಿನಾಂಕ: 10.06.2022

ಟೆಂಡರ್‌ಗಾಗಿ ಆಹ್ವಾನ(ಐಎಫ್‌ಟಿ)

(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು-6(ಕೆರೆಗಳು), ಬಿಬಿಎಂಪಿ, ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
1	ರಾಚೇನಹಳ್ಳಿ ಕೆರೆಯ ಜೌಗು ಭೂಮಿ, ಒಳಹರಿವು ಮತ್ತು ಬಾಕಿ ಉಳಿದ ಅಭಿವೃದ್ಧಿ ಕಾಮಗಾರಿಗಳಿಗೆ ಯೋಜನಾ ವ್ಯವಸ್ಥಾಪನ ಸಲಹಾ ಸೇವೆಗಳನ್ನು ಒದಗಿಸುವುದು.	266.00	12,000/-
2	ಅಮೃತಹಳ್ಳಿ ಕೆರೆಯ ಪುನರುಜ್ಜೀವನ ಮತ್ತು ಅಭಿವೃದ್ಧಿ ಕಾಮಗಾರಿಗಳಿಗೆ ಯೋಜನಾ ವ್ಯವಸ್ಥಾಪನ ಸಲಹಾ ಸೇವೆಗಳನ್ನು ಒದಗಿಸುವುದು.	400.00	18,000/-

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು GoK ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ನಿಂದ 13.06.2022ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : **27.06.2022ರ ಸಂಜೆ 4.00 ಗಂಟೆಯವರೆಗೆ** 3) ಬಿಡ್‌ಗಳನ್ನು ತೆರೆಯುವ ದಿನಾಂಕ : **28.06.2022ರ ಸಂಜೆ 4.30 ಗಂಟೆಗೆ.** ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯಲ್ಲಿ ಕಛೇರಿಯ ಸಮಯದಲ್ಲಿ ಹಾಗೂ ವೆಬ್‌ಸೈಟ್: **https://eproc.karnataka.gov.in** ನಲ್ಲಿ ಲಾಗಿನ್ ಮಾಡಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು-6 (ಕೆರೆಗಳು).

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆರೋಗ್ಯಾಧಿಕಾರಿ (ಪಶ್ಚಿಮ) ರವರ ಕಚೇರಿ, ಭಾಷ್ಯಂ ಪಾರ್ಕ್, ಶೇಷಾದ್ರಿಪುರಂ, ಬೆಂಗಳೂರು.

ಸಂಖ್ಯೆ: ಆ.ಅ(ಪ)ಪಿಆರ್/209/2022-23 ದಿನಾಂಕ: 10.06.2022

ಟೆಂಡರ್ ರದ್ದುಪಡಿಸಿರುವ ಬಗ್ಗೆ

ಪಶ್ಚಿಮ ವಲಯ ವ್ಯಾಪ್ತಿಯಲ್ಲಿ ಸೊಳ್ಳೆ ನಿಯಂತ್ರಣ ಕಾರ್ಯಗಳಿಗೆ ಸಂಬಂಧಿಸಿದಂತೆ ಇ-ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರ್ ಆಹ್ವಾನಿಸಿರುವುದನ್ನು ರದ್ದುಗೊಳಿಸುವ ಬಗ್ಗೆ.

ಉಲ್ಲೇಖ:- 1) ವ.ಆ(ಪ)/ಪಿಆರ್/102/2022-23 ದಿನಾಂಕ: 27.05.2022

2) ಮು.ಆ.ಅ(ಸಾ.ಆ)/ಪಿಆರ್/62/2022-23 ದಿನಾಂಕ: 09.06.2022

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಪಶ್ಚಿಮ ವಲಯ ವ್ಯಾಪ್ತಿಯಲ್ಲಿ ಸೊಳ್ಳೆ ನಿಯಂತ್ರಣ ಕಾರ್ಯವನ್ನು ನಿರ್ವಹಿಸಲು ಮೇಲ್ಕಂಡ ಉಲ್ಲೇಖ (1)ರಂತೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು ದಿನಾಂಕ: 28.05.2022ರಂದು ಪ್ರಮುಖ ದಿನ ಪತ್ರಿಕೆಗಳಲ್ಲಿ (ಇಂಡಿಯನ್ ಎಕ್ಸ್‌ಪ್ರೆಸ್ ಮತ್ತು ಪ್ರಜಾವಾಣಿ)ಯಲ್ಲಿ ಪ್ರಕಟಿಸಲಾಗಿರುತ್ತದೆ. ಮುಂದುವರೆದಂತೆ ತಾಂತ್ರಿಕ ಕಾರಣಾಂತರಗಳಿಂದಾಗಿ ಸದರಿ ಟೆಂಡರನ್ನು ರದ್ದುಪಡಿಸಲಾಗಿದೆ.

ಸಹಿ/- ಆರೋಗ್ಯಾಧಿಕಾರಿ (ಪಶ್ಚಿಮ)

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ರಾಷ್ಟ್ರೀಯ ಆರೋಗ್ಯ ಅಭಿಯಾನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಸಂಘ,

ಕೆ.ಎನ್.ಟಿ.ಬಿ. ಸ್ಯಾನಿಟೋರಿಯಂ ಆಸ್ಪತ್ರೆ ಆವರಣ, ಬಂಗಾರಪೇಟೆ ರಸ್ತೆ, ಕೋಲಾರ-563102

ಸಂಖ್ಯೆ:ಎನ್.ಹೆಚ್.ಎಂ/ಡಿಹೆಚ್‌ಎಸ್/ಕೋ/ಹೊ.ವಾ/01/2022-23

ದಿನಾಂಕ: 13.10.2022

E-PROCUREMENT RE-TENDER NOTIFICATION

ಕೋಲಾರ ಜಿಲ್ಲೆಯಲ್ಲಿ 2022-23ನೇ ಸಾಲಿಗೆ ಎನ್.ಹೆಚ್.ಎಂ ಯೋಜನೆಯಡಿಯಲ್ಲಿ ಬಾಲಾ ಸ್ವಾಸ್ಥ್ಯ ಕಾರ್ಯಕ್ರಮದಡಿಯಲ್ಲಿ ಪ್ರತಿ ತಾಲ್ಲೂಕಿಗೆ 2ರಂತೆ ಒಂದು ಡಿಪಿಎಂಯು ಘಟಕ, ಜಿಲ್ಲಾ ಗುಣಮಟ್ಟ ಖಾತ್ರಿ ಘಟಕ, ಜಿಲ್ಲಾ ಮಾನಸಿಕ ಕಾರ್ಯಕ್ರಮ, ಜಿಲ್ಲಾ ಎನ್‌ಟಿಸಿಪಿ ಕಾರ್ಯಕ್ರಮ ಹಾಗೂ ರಾಷ್ಟ್ರೀಯ ಕ್ಷಯ ರೋಗ ನಿರ್ಮೂಲನಾ ಕಾರ್ಯಕ್ರಮದಡಿಯಲ್ಲಿ ಜಿಲ್ಲೆಯಾದ್ಯಂತ ಕಾರ್ಯಕ್ರಮದ ಮೇಲ್ವಿಚಾರಣೆ ಔಷಧಿಗಳ ಸರಬರಾಜುಗಾಗಿ ಹೊರಗುತ್ತಿಗೆ ಆಧಾರದ ಮೇಲೆ ಚಾಲಕ ಸಹಿತ 15 ವಾಹನಗಳನ್ನು (ಇಂಡಿಕಾ/ಸ್ವಿಫ್ಟ್/ಸ್ವಿಫ್ಟ್ ಡಿಸೈರ್ ಹಾಗೂ ಮೇಲ್ದರ್ಜೆಯ ವಾಹನಗಳು) ಬಾಡಿಗೆ ಆಧಾರದ ಮೇಲೆ ಒದಗಿಸಲು ಅರ್ಹರಾದ ಗುತ್ತಿಗೆದಾರರಿಂದ ಸೇವೆ ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣಗಳಲ್ಲಿ ಪಾರದರ್ಶಕ ಅಧಿನಿಯಮ (KTPP) 1999 ನಿಯಮಗಳು 2000 ರ ಪ್ರಕಾರ E-Procurement ಮೂಲಕ ಅಲ್ಪಾವಧಿ ಮರು ಟೆಂಡರ್ ಪಡೆಯುವ ಬಗ್ಗೆ. **(website:www.eproc.karnataka.gov.in)** (1) ಟೆಂಡರ್‌ದಾರರು E-Portal ಮೂಲಕ ಟೆಂಡರ್ ಸಲ್ಲಿಸುವುದು. ಈ ಬಗ್ಗೆ ಟೆಂಡರ್‌ದಾರರಿಗೆ ನಿಗದಿಪಡಿಸಿರುವ ಅರ್ಹತೆ ಮತ್ತು ಅನುಭವಗಳು ಇರತಕ್ಕದ್ದು. (2) ಟೆಂಡರ್ ದಸ್ತಾವೇಜುಗಳನ್ನು **ದಿನಾಂಕ: 10.06.2022 ರಿಂದ ದಿನಾಂಕ: 18.06.2022ರ ಸಂಜೆ 5.00 ಗಂಟೆಯೊಳಗೆ** ಡೌನ್‌ಲೋಡ್ ಮಾಡಿ ಆನ್‌ಲೈನ್ ಮುಖಾಂತರ ಸಲ್ಲಿಸುವುದು. (3) ಟೆಂಡರ್ ಅರ್ಜಿ ಶುಲ್ಕ ಮತ್ತು ಇ.ಎಂ.ಡಿ. ಮೊತ್ತವನ್ನು ತಪ್ಪದೇ E-Portal ನ ಮುಖಾಂತರ ಸಲ್ಲಿಸತಕ್ಕದ್ದು. (4) ಟೆಂಡರ್ ಡಾಕ್ಯೂಮೆಂಟ್ E-Portal ಮುಖಾಂತರ ಅಪ್‌ಲೋಡ್ ಮಾಡಲು ಕೊನೆಯ **ದಿ:18.06.2022ರ ಸಂಜೆ 5.00 ಗಂಟೆ.** (5) ಹೆಚ್ಚಿನ ವಿವರಗಳು ಟೆಂಡರ್ ದಸ್ತಾವೇಜುಗಳಲ್ಲಿ ಲಭ್ಯವಿದ್ದು, **www.eproc.karnataka.gov.in** ವೆಬ್‌ಸೈಟ್‌ನಲ್ಲಿ ಪಡೆದು ಪರಿಶೀಲಿಸುವುದು ಹಾಗೂ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರ್‌ಸಿಹೆಚ್ ಅಧಿಕಾರಿಗಳು, ಜಿಲ್ಲಾ ಆ.ಕು.ಕ ಅಧಿಕಾರಿಗಳ ಕಛೇರಿ, ಕೋಲಾರ ಜಿಲ್ಲೆ ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಕೋಲಾರ ಜಿಲ್ಲೆ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ139/ಎಂ.ಸಿ.ಎ/2021-22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ. (ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ)

ದೂ ಫ್ಯಾಕ್ಸ್: 08156-277005

ಇ-ಮೇಲ್: pdchikkaballapur@gmail.com

ಸಂ: ಜಿನಕೋ/ತಾಶಾ/ಸಿಆರ್/22/2022-23 ದಿನಾಂಕ: 09.06.2022

ಟೆಂಡರ್ ಅಧಿಸೂಚನೆ

ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ಪುರಸಭೆಯ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ)4 ಯೋಜನೆಯಡಿ ಈ ಕೆಳಕಂಡ ಕಾಮಗಾರಿಗಾಗಿ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ ಜಿಲ್ಲೆ ಇವರಿಂದ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. **ಕಾಮಗಾರಿಗಳ ವಿವರ:** ಬಾಗೇಪಲ್ಲಿ ಪುರಸಭೆಯ ವ್ಯಾಪ್ತಿಯಲ್ಲಿ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ)-4 ಯೋಜನೆಯಡಿ ರಸ್ತೆ ಮತ್ತು ಚರಂಡಿಗಳ ಅಭಿವೃದ್ಧಿ, ಕುಡಿಯುವ ನೀರು ಪೈಪ್‌ಲೈನ್ ಅಳವಡಿಸುವುದು, ಬೋರ್‌ವೆಲ್ ಕೊರೆಯುವುದು ಮತ್ತು ಆರ್.ಓ.ಪ್ಲಾಂಟ್ ನಿರ್ಮಾಣ ಕಾಮಗಾರಿ. **(DMA/2022-23/OW/WORK_INDENT132576).** ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ): **ರೂ. 373.46.** ಇಎಂಡಿ ಮೊತ್ತ (ರೂ.ಲಕ್ಷಗಳಲ್ಲಿ): **ರೂ. 5.61** ಗುತ್ತಿಗೆ ಅವಧಿ: **09 ತಿಂಗಳು.** ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸುವುದು. ಗುತ್ತಿಗೆದಾರರು ಟೆಂಡರ್ ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೇದಿಕೆ **www.eproc.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಂಡು ವಿದ್ಯುನ್ಮಾನ ಮೂಲಕವೇ **www.eproc.karnataka.gov.in** ನಲ್ಲಿ ಸಲ್ಲಿಸುವುದು. ಟೆಂಡರ್ ಸಂಸ್ಕರಣಾ ಶುಲ್ಕವನ್ನು ಆನ್‌ಲೈನ್ ಮೂಲಕವೇ ಪಾವತಿಸತಕ್ಕದ್ದು. (1) ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭಿಕ ದಿನಾಂಕ: **10.06.2022.** (2) ಪೂರ್ವಭಾವಿ ಸಭೆ **(PRE-BID MEETING): 20.06.2022ರ ಪೂರ್ವಾಹ್ನ 11.00 ಗಂಟೆಗೆ ಜಿಲ್ಲಾ ನಗರಾಭಿವೃದ್ಧಿ ಕೋಶ ಕಛೇರಿ.** (3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **11.07.2022ರ ಸಂಜೆ 5.30 ಗಂಟೆಗೆ.** (4) ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **13.07.2022ರ ಪೂರ್ವಾಹ್ನ 11.00 ಗಂಟೆಗೆ.** (5) ಟೆಂಡರ್‌ಗಳ ಆರ್ಥಿಕ ಬಿಡ್ ತೆರೆಯುವ ದಿನಾಂಕ: **20.07.2022ರ ಬೆಳಿಗ್ಗೆ 11.00 ಗಂಟೆಗೆ** ಅಥವಾ ಮುಂದೆ ಸೂಚಿಸಿದ ದಿನದಂದು. ಟೆಂಡರ್ ಷರತ್ತುಗಳು ಮತ್ತು ಹೆಚ್ಚಿನ ಮಾಹಿತಿಗಳನ್ನು ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶದ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು, ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/- ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ

ವಾಸಾಸಂಇ/ ಚಿಕ್ಕಬಳ್ಳಾಪುರ/ ಆರ್.ಓ.ಸಂಖ್ಯೆ 122 ಎಂ.ಸಿ.ಎ/ 2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.


ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ., 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560055

ಬಹಿರಂಗ ಹರಾಜು ಇಸಿಹಾರ್

ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ,

ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿ.441) ಹಾಗೂ ವಸೂಲಾಧಿಕಾರಿಗಳು ಕ.ರಾ.ಸ.ಪ.ಬ್ಯಾಂಕುಗಳ ಮಹಾಮಂಡಳ ನಿ., ನಂ-32, ಕೆ.ಹೆಚ್. ರಸ್ತೆ, ಬೆಂಗಳೂರು - 560027. ಇವರ ಹುಕ್ಕುಂ ಈ ಕೆಳಗೆ ನಮೂದಿಸಿರುವ ಸಿ.ಇ.ಪಿ **ಸಂಖ್ಯೆಗಳಂತೆ** ಅಧಿಕಾರ ಹೊಂದಿರುವ ಮಾರಾಟಾಧಿಕಾರಿಯಾದ ನಾನು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಸೂಚಿಸಿರುವ ಸುಸ್ತಿದಾರರು **ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ.,** 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-55 ಇವರಲ್ಲಿ ತಮ್ಮ ಸ್ಥಿರಾಸ್ತಿಯ ಮೇಲೆ ಸಾಲ ಪಡೆದು ಸುಸ್ತಿದಾರರಾಗಿ ಸಾಲದ ಬಾಬ್ತು ಡಿಕ್ರಿಯಾಗಿ ಬ್ಯಾಂಕಿಗೆ ಆಧಾರ ಮಾಡಿದ ಈ ಕೆಳಗೆ ನಮೂದಿಸಿರುವ ಸ್ವತ್ತುಗಳನ್ನು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 38 ರನ್ವಯ ಬಹಿರಂಗ ಹರಾಜು ಮಾಡಲಾಗುವುದು. ಸಾರ್ವಜನಿಕರು ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಈ ಸ್ವತ್ತುಗಳನ್ನು ಹರಾಜಿನಲ್ಲಿ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳನ್ನು ಪ್ರಧಾನ ವ್ಯವಸ್ಥಾಪಕರು, **ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ., ನಂ.156, 2ನೇ ಅಂತಸ್ತು, 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು - 55** ಇವರಲ್ಲಿ ಪಡೆಯಬಹುದು. ದೂರವಾಣಿ ಸಂಖ್ಯೆ: **23442648, 23449450, ಮೊಬೈಲ್ 9900856389.**

ಸುಸ್ತಿದಾರರ ಹೆಸರು	ಸಿ.ಇ.ಪಿ. ಸಂಖ್ಯೆ	ಹರಾಜು ಮಾಡುವ ಆಸ್ತಿಗಳ ವಿವರ	ಹರಾಜು ನಡೆಯಲಿರುವ ಸ್ಥಳ, ದಿನಾಂಕ ಸಮಯ ಮತ್ತು ವಸೂಲಾಗಬೇಕಾಗಿರುವ ಮೊತ್ತ
ಶ್ರೀ. ವೆಂಕಟೇಶ್ವರ ನಾಯ್ಡು. ಜಿ 	ಎ.ಆರ್.ಇ/ಯು.ಬಿ.ಎಫ್/ 52/2021-22	ಹಳೆ ನಂ.31, ಹಳೆ ಖಾತಾ ನಂ.781 ಸರ್ವೆ ನಂ.55/1, ಹೊಸ ಬಿ.ಬಿ.ಎಮ್.ಪಿ ಖಾತಾ ನಂ.1022/781/31, ಉತ್ತರಹಳ್ಳಿ ವಿಲೇಜ್, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ಬಿ.ಬಿ.ಎಮ್.ಪಿ ವಾರ್ಡ್ ನಂ.184(ಉತ್ತರಹಳ್ಳಿ) ಪಿ.ಐ.ಡಿ.ನಂ.184-W0645-3. ಇಲ್ಲಿರುವ ಪೂರ್ವ ಪಶ್ಚಿಮ: 40 ಅಡಿಗಳು ಮತ್ತು ಉತ್ತರ ದಕ್ಷಿಣ : 30 ಅಡಿಗಳು ಈ ಸ್ವತ್ತಿಗೆ ಚೆಕ್ಕುಬಂದಿ ಪೂರ್ವಕ್ಕೆ : 30ಅಡಿ ಮುಖ್ಯರಸ್ತೆ. ಪಶ್ಚಿಮಕ್ಕೆ : ಸೈಟ್ ನಂ.46 ಉತ್ತರಕ್ಕೆ : ಸೈಟ್ ನಂ.30; ದಕ್ಷಿಣಕ್ಕೆ : ಸೈಟ್ ನಂ.32	ಹಳೆ ನಂ.31, ಹಳೆ ಖಾತಾ ನಂ.781 ಸರ್ವೆ ನಂ.55/1, ನ್ಯೂ ಬಿ.ಬಿ.ಎಮ್.ಪಿ ಖಾತಾ ನಂ.1022/781/31, ಉತ್ತರಹಳ್ಳಿ ವಿಲೇಜ್, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು. **ದಿನಾಂಕ: 15.06.2022.ರ ಬುಧವಾರ ಬೆಳಿಗ್ಗೆ 11-30 ಘಂಟೆ ರೂ.46,00,000/-** (ದಿನಾಂಕ. 31.03.2022 ವರೆಗೆ ಮಾತ್ರ ಲೆಕ್ಕಾಚಾರ ಮಾಡಲಾಗಿದೆ)

ಹರಾಜಿನ ಷರತ್ತುಗಳು ಮತ್ತು ನಿಯಮಗಳು

1. ಹರಾಜಿನ ಮುನ್ನ ಸಾಲ ಮರುಪಾವತಿಯಾದಲ್ಲಿ ಸದರೀಯವರ ಸ್ವತ್ತನ್ನು ಹರಾಜು ಮಾಡಲಾಗುವುದಿಲ್ಲ.
2. ಕಟ್ಟಡ ಯಾವರೀತಿಯಲ್ಲಿದೆಯೋ ಅದೇರೀತಿಯಲ್ಲಿ ಹರಾಜು ಮಾಡಲಾಗುವುದು.
3. **ಹರಾಜಿನಲ್ಲಿ ಭಾಗವಹಿಸುವವರು ಹರಾಜಿಗೆ ಮುಂಚೆ ರೂ.1,00,000/- ಗಳನ್ನು ಠೇವಣಿಯಾಗಿ ಪಾವತಿಸಿ ರಸೀತಿಯನ್ನು ಪಡೆಯತಕ್ಕದ್ದು.**
4. **ಹರಾಜಿನಲ್ಲಿ ಬಿಡ್ ನಿಂತ ತಕ್ಷಣವೇ ಹರಾಜು ಮೊಬಲಗಿನ ಶೇ.15 ರಷ್ಟು ಹಣವನ್ನು ಸ್ಥಳದಲ್ಲಿಯೇ ಪಾವತಿಸಿ ರಸೀತಿಯನ್ನು ಪಡೆಯುವುದು. ಉಳಿದ ಹಣವನ್ನು ನೋಂದಣಿ ವೆಚ್ಚ ಸಹಿತ 45 ದಿನಗೊಳಗಾಗಿ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಬಿಡ್‌ದಾರರು ಪಾವತಿ ಮಾಡಿರುವ ಹಣವನ್ನು ಕಾನೂನು ರೀತ್ಯ ಮುಟ್ಟುಗೋಲು ಹಾಕಿಕೊಂಡು ಬದಲಿ ಹರಾಜು ಮಾಡಲಾಗುವುದು.**
5. ಬಿಡ್ ಮೊಬಲಗು ಆಸ್ತಿಯ ಬೆಲೆಗಿಂತ ಕಡಿಮೆಯಾದಲ್ಲಿ ಆಸ್ತಿಯನ್ನು ಅಂತಹ ಬಿಡ್‌ದಾರರಿಗೆ ಬಿಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆ.ಸಿ.ಎಸ್.ನಿಯಮಗಳ ಪ್ರಕಾರ ಮಾರಾಟಾಧಿಕಾರಿಯವರು ಹೊಂದಿರುತ್ತಾರೆ.
6. ಹರಾಜಿನಲ್ಲಿಯೋಗ್ಯ ಬೆಲೆ ಬಾರದಿದ್ದಲ್ಲಿ ಹರಾಜಿಗಿಟ್ಟಿರುವ ಸ್ಥಿರಾಸ್ತಿಯನ್ನು ಖರೀದಿಸುವ ಮತ್ತು ಆಸ್ತಿ ವರ್ಗಾವಣೆ ಮಾಡಿಕೊಳ್ಳುವ ಹಕ್ಕನ್ನು ಬ್ಯಾಂಕು ಹೊಂದಿರುತ್ತದೆ.
7. ಹರಾಜಿಗಿಟ್ಟಿರುವ ಸ್ಥಿರಾಸ್ತಿಯ ವಿವರಣೆ ಮತ್ತುಅಂದಾಜು ವಿಸ್ತೀರ್ಣದ ವಿಷಯದಲ್ಲಿಯಾವುದಾದರೂ ತಪ್ಪುಗಳಿದ್ದರೆ ಸರ್ಕಾರದವರುಜವಾಬ್ದಾರರಾಗುವುದಿಲ್ಲ.
8. ಸ್ಥಿರಾಸ್ತಿ ಹರಾಜಿನ ಮಾರಾಟ ಸ್ಥಿರೀಕರಣವು ಹರಾಜಿನ ಷರತ್ತಿಗಳಿಗೊಳಪಟ್ಟಿರುತ್ತದೆ. ಬಿಡ್‌ದಾರರು ಷರತ್ತುಗಳನ್ನು ಪಾಲಿಸದಿದ್ದಲ್ಲಿ ಮಾರಾಟ ಸ್ಥಿರೀಕರಣಕ್ಕೆ ಸರ್ಕಾರದವರುಜವಾಬ್ದಾರರಾಗುವುದಿಲ್ಲ.
9. ಮೂಲ ಸಾಲಗಾರರಾಗಲೀ, ಜಾಮೀನುದಾರರಾಗಲೀ ಅಥವಾ ಅವರ ಹಿತೈಷಿಗಳಾಗಲೀ ಬಹಿರಂಗ ಹರಾಜಿನಲ್ಲಿ ಆಸ್ತಿ ಮಾರಾಟ ಮಾಡಿದ 30 ದಿನಗೊಳಗಾಗಿ ಸಾಲದ ಪೂರ್ಣ ಬಾಕಿ ಮತ್ತು ಹರಾಜಿನಲ್ಲಿ ಆಸ್ತಿ ಖರೀದಿಸಿದ ಬಿಡ್‌ದಾರರು ಬ್ಯಾಂಕಿಗೆ ಠೇವಣಿ ಮಾಡಿದ ಹಣದ ಮೇಲೆ ಶೇ 5 ರಷ್ಟು ಹಣವನ್ನು ಬ್ಯಾಂಕಿಗೆ ಪಾವತಿ ಮಾಡಿದಲ್ಲಿ ಹರಾಜಿನಲ್ಲಿ ಆಸ್ತಿ ಖರೀದಿಸಿದವರು ಅವರು ಪಾವತಿಸಿದ ಮೊತ್ತ ಮತ್ತು ಅದರಮೇಲೆ ಶೇ 5 ರಷ್ಟು ಹಣ ಪಡೆಯಲು ಮಾತ್ರ ಹಕ್ಕುಳ್ಳವಾಗಿರುತ್ತಾರೆ ಹಾಗೂ ಹರಾಜಿನಲ್ಲಿಕೂಗಿದ ಆಸ್ತಿಗೆ ಹಕ್ಕು ಇರುವುದಿಲ್ಲ.

ದಿನಾಂಕ: 06.05.2022
ಬೆಂಗಳೂರು.

ಮಾರಾಟಾಧಿಕಾರಿ
ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ.,
ಮಲ್ಲೇಶ್ವರಂ, ಬೆಂಗಳೂರು - 55.

ವಿಧಾನ ಪರಿಷತ್ ವಾಯವ್ಯ ಪದವೀಧರ ಕ್ಷೇತ್ರ

‘ಪದವಿ’ಗೆ ನಿರಾಣಿ, ಸಂಕ ಪೈಪೋಟಿ

• ಬಸವರಾಜ್ ಸಂಪಳ್ಳಿ


ಹನುಮಂತ ನಿರಾಣಿ (ಬಿಜೆಪಿ)


ಸುನೀಲ ಸಂಕ (ಕಾಂಗ್ರೆಸ್)



ವಿಜಯಪುರ: ವಿಧಾನ ಪರಿಷತ್ ವಾಯವ್ಯ ಪದವೀಧರ ಕ್ಷೇತ್ರಕ್ಕೆ ನಡೆಯುತ್ತಿರುವ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಹನುಮಂತ ನಿರಾಣಿ ಮತ್ತು ಕಾಂಗ್ರೆಸ್ ಅಭ್ಯರ್ಥಿ ಸುನೀಲ ಸಂಕ ನಡುವೆ ನೇರ ಪೈಪೋಟಿ ಏರ್ಪಟ್ಟಿದೆ.

ಬೆಳಗಾವಿ, ವಿಜಯಪುರ ಮತ್ತು ಬಾಗಲಕೋಟೆ ಒಳಗೊಂಡಿರುವ ಪದವೀಧರ ಮತಕ್ಷೇತ್ರಕ್ಕೆ ಇದೇ 13ರಂದು ನಡೆಯುವ ಚುನಾವಣಾ ಕಣದಲ್ಲಿ ಒಟ್ಟು 11 ಅಭ್ಯರ್ಥಿಗಳು ಇದ್ದಾರೆ. ಜೆಡಿಎಸ್ ಸ್ಪರ್ಧೆಯಿಂದ ದೂರ ಸರಿದಿದೆ.

ಹನುಮಂತ ನಿರಾಣಿ ಅವರು ಎರಡನೇ ಬಾರಿಗೆ ಪರಿಷತ್ ಪ್ರವೇಶಿಸಲು ತಂತ್ರಗಾರಿಕೆ ಮಾಡಿದ್ದಾರೆ. ಸುನೀಲ ಸಂಕ ಅವರು ಕೂಡ ನಿರಾಣಿಗೆ ತಡೆ ಒಡ್ಡಲು ಪ್ರತಿತಂತ್ರ ಹೆಣೆದಿದ್ದಾರೆ. ಇಬ್ಬರ ನಡುವಿನ ನೇರ ಹಣಾಹಣಿ ತೀವ್ರ ಕುತೂಹಲ ಕೆರಳಿಸಿದೆ.

ಬೃಹತ್ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಅವರ ಪ್ರಭಾವ, ಹೆಚ್ಚಿನ ಸಂಖ್ಯೆಯಲ್ಲಿರುವ ಪಂಚಮಸಾಲಿ ಸಮಾಜದ ಮತದಾರರು, ಆರ್ಥಿಕ ಸಂಪನ್ಮೂಲ ಹಾಗೂ ಕ್ಷೇತ್ರದಲ್ಲಿ ಪ್ರಬಲ ಬಿಜೆಪಿ ಕಾರ್ಯಪಡೆ ಮತ್ತು ಆಡಳಿತ ಪಕ್ಷದ ಪ್ರಭಾವ ಹನುಮಂತ ನಿರಾಣಿ ಬೆಂಬಲಕ್ಕೆ ನಿಂತಿದೆ. ಕಳೆದ ಅವಧಿಯಲ್ಲಿ ನಿರಾಣಿಯವರು ಕ್ಷೇತ್ರದಾದ್ಯಂತ ಅಡ್ಡಾಡಿ, ವಿಧಾನ ಪರಿಷತ್‌ನಲ್ಲೂ ಪದವೀಧರರ ಧ್ವನಿಯಾಗಿ ಸ್ಪಂದಿಸಿದ್ದಾರೆ. ನಿರಾಣಿ ಸಮೂಹ ಸಂಸ್ಥೆಯೊಂದರಲ್ಲೇ ಸುಮಾರು 50 ಸಾವಿರ ಜನರಿಗೆ ಪ್ರತ್ಯಕ್ಷ, ಪರೋಕ್ಷವಾಗಿ ಉದ್ಯೋಗ ಕಲ್ಪಿಸಿದ್ದು, ಚುನಾವಣೆಯಲ್ಲಿ ನೆರವಿಗೆ ಬರಲಿದೆ ಎಂಬುದು ಲೆಕ್ಕಾಚಾರ. ಈ ಹಿನ್ನೆಲೆಯಲ್ಲೇ ನಿರಾಣಿ ಅವರು ಎರಡನೇ ಬಾರಿಗೆ ಮೇಲ್ಮನೆ ಪ್ರವೇಶಿಸುವುದು ಖಚಿತ ಎಂಬ ದೃಢ ವಿಶ್ವಾಸದಲ್ಲಿ ಇದ್ದಾರೆ.

ಕಾಂಗ್ರೆಸ್ ಅಭ್ಯರ್ಥಿ ಸುನೀಲ ಸಂಕ ಅವರಿಗೆ ಸ್ವಂತ ಜಿಲ್ಲೆಯಲ್ಲಿ ಇರುವ ಅಧಿಕ ಪದವೀಧರ ಮತದಾರರು ಕೈ ಹಿಡಿಯುತ್ತಾರೆ ಎಂಬ ನಂಬಿಕೆ. ಜೊತೆಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಮತ್ತು ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ ಅವರು ಬೆನ್ನಿಗಿರುವುದು ಚುನಾವಣೆಯಲ್ಲಿ ಗೆಲುವಿನ ದಡ ಸೇರಲು ಅನುಕೂಲವಾಗಲಿದೆ ಎಂಬುದು ಲೆಕ್ಕಾಚಾರ. ಆದರೆ, ಸಂಕ ಅವರು ಕ್ಷೇತ್ರಕ್ಕೆ ಹೊಸಬರು, ಅಲ್ಲದೇ, ಮತದಾರರನ್ನು ತಲುಪುವಲ್ಲೂ ಹಿಂದೆ ಬಿದ್ದಿರುವುದು ಅವರಿಗೆ ಮೈನಸ್ ಆಗಲಿದೆ ಎಂಬ ರಾಜಕೀಯ ವಿಶ್ಲೇಷಣೆಯೂ ನಡೆದಿದೆ. ಇವರಲ್ಲದೇ ಇನ್ನೂ ಒಂಬತ್ತು ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ಪದವೀಧರ ಕ್ಷೇತ್ರದ ಹಿನ್ನೆಲೆ: 1956ರಿಂದ ಇಲ್ಲಿವರೆಗೆ ನಡೆದಿರುವ ಚುನಾವಣೆಯಲ್ಲಿ ನಾಲ್ಕು ಜನ ಮಾತ್ರ ಈ ಕ್ಷೇತ್ರವನ್ನು ಪ್ರತಿನಿಧಿಸಿರುವುದು ವಿಶೇಷ. ಆರಂಭದಲ್ಲಿ ಕಾಂಗ್ರೆಸ್‌ನಿಂದ ಶಂಕರರಾವ್ ಏಡಕೆ ಮೂರು ಬಾರಿ (1956, 1962,1968) ಬಿ.ಕೆ. ಗುಡದಿನ್ನಿ ಸಂಸ್ಥಾ ಕಾಂಗ್ರೆಸ್‌ನಿಂದ ಎರಡು ಬಾರಿ ಈ ಕ್ಷೇತ್ರವನ್ನು ಪ್ರತಿನಿಧಿಸಿದ್ದರು (1974,1980). ಜನತಾದಳದಿಂದ ಡಾ.ಎಂ.ಪಿ.ನಾಡಗೌಡ ನಾಲ್ಕು ಬಾರಿ (1986, 1992, 1998, 2004) ಹಾಗೂ ಕಾಂಗ್ರೆಸ್‌ನಿಂದ ಮಹಾಂತೇಶ ಕೌಜಲಗಿ (2010) ಮತ್ತು ಬಿಜೆಪಿಯಿಂದ ಹನುಮಂತ ನಿರಾಣಿ ಅವರು (2016) ಈ ಕ್ಷೇತ್ರವನ್ನು ಪ್ರತಿನಿಧಿಸಿದ್ದಾರೆ.

ಬಿ.ಕೆ.ಗುಡದಿನ್ನಿ, ಡಾ.ಎಂ.ಪಿ.ನಾಡಗೌಡ, ಹನುಮಂತ ನಿರಾಣಿ ಅವರು ಬಾಗಲಕೋಟೆ ಜಿಲ್ಲೆಯವರು ಎಂಬುದು ಮತ್ತೊಂದು ವಿಶೇಷ. ಈ ಕ್ಷೇತ್ರವನ್ನು ಇದುವರೆಗೆ ಪ್ರತಿನಿಧಿಸಿರುವವರಲ್ಲಿ ಬೆಳಗಾವಿಯ ಶಂಕರರಾವ್ ಏಡಕೆ (ಸ್ವಕುಳ ಸಾಳಿ ಸಮಾಜ) ಅವರನ್ನು ಹೊರತು ಪಡಿಸಿ ಉಳಿದ ಮೂವರೂ ಪಂಚಮಸಾಲಿ ಸಮಾಜದವರು. ಒಟ್ಟಾರೆ ಕ್ಷೇತ್ರದಲ್ಲಿ ಪಂಚಮಸಾಲಿ ಮತದಾರರ ಹಿಡಿತ ಹೆಚ್ಚಿದೆ.

ಮತದಾರರ ಸಂಖ್ಯೆ ಇಳಿಕೆ: ವಾಯವ್ಯ ಪದವೀಧರ ಕ್ಷೇತ್ರಕ್ಕೆ 2016ರಲ್ಲಿ ನಡೆದ ಚುನಾವಣೆಯಲ್ಲಿ ಹನುಮಂತ ನಿರಾಣಿ 43,605 ಮತಗಳನ್ನು ಪಡೆದು ಜಯ ಸಾಧಿಸಿದ್ದರು. ಕಾಂಗ್ರೆಸ್‌ನ ಮಹಾಂತೇಶ ಕೌಜಲಗಿ 23,518, ಜೆಡಿಯುನ ಡಾ.ಎಂ.ಪಿ.ನಾಡಗೌಡ 3,536 ಮತಗಳನ್ನು ಗಳಿಸಿದ್ದರು.

2016ರಲ್ಲಿ ಒಟ್ಟು 1,79,110 ಮತದಾರರು ಹೆಸರು ನೋಂದಾಯಿಸಿಕೊಂಡಿದ್ದರು. ಆದರೆ, ಸದ್ಯ ನಡೆಯುತ್ತಿರುವ ಚುನಾವಣೆಯಲ್ಲಿ 99,597 ಮಾತ್ರ ಹೆಸರು ನೋಂದಾಯಿಸಿಕೊಂಡಿದ್ದಾರೆ. ಮತದಾರರ ಸಂಖ್ಯೆ ಗಣನೀಯ (79,513) ಇಳಿಕೆಯು ಫಲಿತಾಂಶದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ.

ಕಣದಲ್ಲಿರುವ ಅಭ್ಯರ್ಥಿಗಳು

ಅಭ್ಯರ್ಥಿಗಳು	ಪಕ್ಷ
ಹನುಮಂತ ನಿರಾಣಿ	ಬಿಜೆಪಿ
ಸುನೀಲ ಸಂಕ	ಕಾಂಗ್ರೆಸ್
ಜೆ.ಸಿ.ಪಾಟೀಲ	ಸರ್ವಜನತಾ ಪಾರ್ಟಿ
ಯಲ್ಲಪ್ಪ ಕಲಕುತ್ರಿ	ಕರ್ನಾಟಕ ರಾಷ್ಟ್ರ ಸಮಿತಿ
ಆದರ್ಶಕುಮಾರ ಪೂಜಾರಿ	ಪಕ್ಷೇತರ
ಛಟಗೆಪ್ಪ ಮಗದುಮ್	ಪಕ್ಷೇತರ
ದೀಪಿಕಾ ಎಸ್	ಪಕ್ಷೇತರ
ನಿಂಗಪ್ಪ ಭಜಂತ್ರಿ	ಪಕ್ಷೇತರ
ಭೀಮಸೇನ ಬಾಗಿ	ಪಕ್ಷೇತರ
ರಾಜನಗೌಡ ಪಾಟೀಲ	ಪಕ್ಷೇತರ
ಸುಭಾಶ ಕೋಟೆಕಲ್	ಪಕ್ಷೇತರ

ಮತದಾರರ ಸಂಖ್ಯೆ

ಪುರುಷ	71,040
ಮಹಿಳೆ	28,553
ಇತರೆ	04
ಒಟ್ಟು	99,597
ವಿಜಯಪುರ ಜಿಲ್ಲೆ	
ಪುರುಷರು	15,222
ಮಹಿಳೆಯರು	5100
ಇತರೆ	01
ಒಟ್ಟು	20,323
ಬಾಗಲಕೋಟೆ ಜಿಲ್ಲೆ	
ಪುರುಷರು	24,327
ಮಹಿಳೆಯರು	9,322
ಇತರೆ	02
ಒಟ್ಟು	33,651
ಬೆಳಗಾವಿ ಜಿಲ್ಲೆ	
ಪುರುಷರು	33,991
ಮಹಿಳೆಯರು	14,132
ಇತರೆ	01
ಒಟ್ಟು	48,124

ಚಿತ್ರಣ ಬದಲಿಸಿದ ‘ಹೊರಟ್ಟಿ ಸಮೀಕರಣ’

ವಿಧಾನ ಪರಿಷತ್ ಪಶ್ಚಿಮ ಶಿಕ್ಷಕರ ಕ್ಷೇತ್ರ; ಬಿಜೆಪಿ – ಕಾಂಗ್ರೆಸ್ ನೇರ ಪೈಪೋಟಿ

• ಶ್ರೀಕಾಂತ ಕಲ್ಲಮ್ಮನವರ


ಬಸವರಾಜ ಹೊರಟ್ಟಿ (ಬಿಜೆಪಿ)


ಬಸವರಾಜ ಗುರಿಕಾರ (ಕಾಂಗ್ರೆಸ್)


ಶ್ರೀಶೈಲ ಗಡದಿನ್ನಿ (ಜೆಡಿಎಸ್)



ಹುಬ್ಬಳ್ಳಿ: ‘ಶತ್ರುವಿನ ಶತ್ರು ಮಿತ್ರ’ ಎನ್ನುವುದು ನಾಣ್ಣುಡಿ. ಶತ್ರುವೇ ನೇರವಾಗಿ ಮಿತ್ರನಾದರೆ? ಇಂತಹದೊಂದು ಸಮೀಕರಣವನ್ನು ವಿಧಾನ ಪರಿಷತ್ ಪಶ್ಚಿಮ ಶಿಕ್ಷಕರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಸವರಾಜ ಹೊರಟ್ಟಿ ರೂಪಿಸಿದ್ದಾರೆ. ಕಳೆದ ಸಲ ಚುನಾವಣೆಯಲ್ಲಿ ತೀವ್ರ ಸ್ಪರ್ಧೆಯೊಡ್ಡಿದ್ದ ಬಿಜೆಪಿಯ ಕೈ ಹಿಡಿದು ವೈರಿಯನ್ನೇ ಗೆಳೆಯನನ್ನಾಗಿಸಿಕೊಂಡು ಅಖಾಡಾಕ್ಕೆ ಇಳಿದಿದ್ದಾರೆ.

ಈ ಸೂತ್ರದಿಂದ ಕಳೆದ ಚುನಾವಣೆಗಳಲ್ಲಿದ್ದ ಹೊರಟ್ಟಿ ವಿರುದ್ಧ ಬಿಜೆಪಿ ಇದ್ದದ್ದು ಈಗ, ಹೊರಟ್ಟಿ ಪ್ಲಸ್ ಬಿಜೆಪಿಯಾಗಿದೆ. ಹೊರಟ್ಟಿ ಪ್ಲಸ್ ಜೆಡಿಎಸ್ ಈಗ, ಹೊರಟ್ಟಿ ವಿರುದ್ಧ ಜೆಡಿಎಸ್ ಆಗಿದೆ. ಹೇಗಾದರೂ ಸರಿ, ಹೊರಟ್ಟಿ ನಾಗಾಲೋಟಕ್ಕೆ ಕಡಿವಾಣ ಹಾಕಲೇಬೇಕೆಂದು ಆರು ತಿಂಗಳ ಹಿಂದೆಯೇ ಕಾಂಗ್ರೆಸ್ ಅಭ್ಯರ್ಥಿಯನ್ನು ಘೋಷಿಸಿದ್ದು, ಬಸವರಾಜ ಗುರಿಕಾರ ತೀವ್ರ ಸ್ಪರ್ಧೆಯೊಡ್ಡಿದ್ದಾರೆ.

ಆಗಷ್ಟೇ 7ನೇ ಬಾರಿಗೆ ವಿಧಾನ ಪರಿಷತ್ ಚುನಾವಣೆಯಲ್ಲಿ ಆಯ್ಕೆಯಾಗಿದ್ದ ಹೊರಟ್ಟಿ ಅವರು, ಬಿಜೆಪಿಯಿಂದ ಎದುರಿಸಿದ್ದ ತೀವ್ರ ಪೈಪೋಟಿಯನ್ನು ಸುದ್ದಿಗಾರರ ಜೊತೆ ಹಂಚಿಕೊಂಡಿದ್ದರು. ಬಿಜೆಪಿ ಸಂಘಟನೆ ಹಾಗೂ ಯುವ ಮತದಾರರ ಬಗೆಗಿನ ತಮ್ಮ ಅಳಕು ಹೊರಹಾಕಿದ್ದರು. ಅಂದಿನ ಅಳಕಿಗೆ ಈಗ ಹೊರಟ್ಟಿ ಉತ್ತರ ಕಂಡುಕೊಂಡಿದ್ದಾರೆ.

ಹೊರಟ್ಟಿಯವರು ಕಾಲಿಗೆ ಚಕ್ರ ಕಟ್ಟಿಕೊಂಡಂತೆ ಪ್ರಚಾರ ಮಾಡುತ್ತಿದ್ದಾರೆ. ಅಲ್ಪಸಂಖ್ಯಾತ ಸಮುದಾಯಗಳ, ಕ್ರೈಸ್ತರ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡಿ ಬೆಂಬಲ ಕೋರುತ್ತಿದ್ದಾರೆ. ಶಿಕ್ಷಕರ ಹಿತರಕ್ಷಣೆಗಾಗಿ ಯಾವ ತ್ಯಾಗಕ್ಕೂ ಸಿದ್ಧ, ಪಕ್ಷ ಮೀರಿ ಹೋರಾಟಕ್ಕೂ ಸಿದ್ಧ ಎಂದು ಮನವರಿಕೆ ಮಾಡಿಕೊಡಲು ಯತ್ನಿಸುತ್ತಿದ್ದಾರೆ.

ಬಣಜಿಗ ಲಿಂಗಾಯತ ಸಮುದಾಯದ ಬಸವರಾಜ ಹೊರಟ್ಟಿ ಅವರು ಪಕ್ಷೇತರರಾಗಿ, ಜನತಾ ಪಕ್ಷ, ಲೋಕಶಕ್ತಿ ಹಾಗೂ ಜನತಾ ದಳದಿಂದ ತಲಾ ಒಂದು ಬಾರಿ ಹಾಗೂ ಜೆಡಿಎಸ್‌ನಿಂದ ಮೂರು ಸಲ ಗೆದ್ದು ಬಂದಿದ್ದಾರೆ. 1980ರಿಂದ ಸತತ ಏಳು ಬಾರಿ ಜಯಗಳಿಸಿದ್ದಾರೆ. ಎಂಟನೇ ಬಾರಿ ಗೆದ್ದು ದಾಖಲೆ ಬರೆಯುವ ಹುಮಸ್ಸಿನಲ್ಲಿದೆ. ವೈಯಕ್ತಿಕ ವರ್ಚಸ್ಸು ಹಾಗೂ ಶಿಕ್ಷಕರ ಸಂಘಟನೆಗಳನ್ನು ನೆಚ್ಚಿಕೊಂಡಿದ್ದಾರೆ. ಈ ಸಲ ಬಿಜೆಪಿಯ ಸಂಘಟನಾ ಶಕ್ತಿಯು ಜೊತೆಗಿರುವುದು ಅವರಿಗೆ ಪ್ಲಸ್ ಪಾಯಿಂಟ್. ಆಡಳಿತ ಪಕ್ಷದ ಅಭ್ಯರ್ಥಿಯಾಗಿರುವುದು ಇನ್ನೊಂದಿಷ್ಟು ಬಲತಂದಿದೆ.

ಕೊನೆಯ ಕ್ಷಣದಲ್ಲಿ ಪಕ್ಷ ಬದಲಾಯಿಸಿರುವುದು, ತಮ್ಮೊಂದಿಗೆ ಹಲವು ಚುನಾವಣೆಯಲ್ಲಿ ಓಡಾಡಿದ್ದ ಶಿಷ್ಯ ಶ್ರೀಶೈಲ ಗಡದಿನ್ನಿ ಜೆಡಿಎಸ್ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವುದು, ಪಠ್ಯಪುಸ್ತಕ ವಿವಾದ, ಪಕ್ಷದ ಪ್ರಮುಖ ನಾಯಕರು ಪ್ರಚಾರದಿಂದ ದೂರ ಉಳಿದಿರುವುದು ಒಳಹೊಡೆತ ಕೊಡುವ ಸಾಧ್ಯತೆ ಇದೆ.

ಕಾಂಗ್ರೆಸ್ ತೀವ್ರ ಪೈಪೋಟಿ: 2020ರಲ್ಲಿ ನಡೆದ ಪಶ್ಚಿಮ ಪದವೀಧರ ಚುನಾವಣೆಯಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿದ್ದ ಕುರುಬ ಸಮಾಜದ ಬಸವರಾಜ ಗುರಿಕಾರ, ಈಗ ಕಾಂಗ್ರೆಸ್ ಅಭ್ಯರ್ಥಿ.

ಗುರಿಕಾರ ಅವರು ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದವರು. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಟನೆಯಲ್ಲಿ ಸಕ್ರಿಯರಾಗಿದ್ದವರು. ಈ ಶಿಕ್ಷಕರಿಗೆ ಪ್ರಸಕ್ತ ಚುನಾವಣೆಯಲ್ಲಿ ಮತದಾನದ ಹಕ್ಕು ಇಲ್ಲದಿರುವುದು ಇವರಿಗೆ ಹಿನ್ನಡೆಯಾಗುವ ಸಾಧ್ಯತೆ ಇದೆ. ಕಾಂಗ್ರೆಸ್‌ನ ಸಾಂಪ್ರದಾಯಿಕ ಮತಗಳು, ಹಿಂದುಳಿದ ವರ್ಗ, ಅಲ್ಪಸಂಖ್ಯಾತ ಹಾಗೂ ಆಡಳಿತ ವಿರೋಧಿ ಅಲೆಯ ಮತಗಳ ಮೇಲೆ ಕಣ್ಣಿಟ್ಟಿದ್ದಾರೆ.

ಹೊರಟ್ಟಿ ಅವರು ಕೇವಲ ದಾಖಲೆಗಾಗಿ ಸ್ಪರ್ಧಿಸುತ್ತಿದ್ದಾರೆ. ಅವರಿಂದ ಶಿಕ್ಷಕರಿಗೆ ಹಾಗೂ ಶಿಕ್ಷಣ ಕ್ಷೇತ್ರಕ್ಕೆ ಯಾವುದೇ ಪ್ರಯೋಜನವಾಗಿಲ್ಲವೆಂದು ಮತದಾರರನ್ನು ಸೆಳೆಯಲು ಪ್ರಯತ್ನಿಸುತ್ತಿದ್ದಾರೆ.

ಗುರುವಿಗೆ ಸವಾಲು: ಹೊರಟ್ಟಿ ಅವರು ಪಕ್ಷ ತೊರೆದ ನಂತರ ಎಚ್.ಡಿ. ಕುಮಾರಸ್ವಾಮಿ ಅವರು ಹೊರಟ್ಟಿ ಅವರ ಶಿಷ್ಯ ಶ್ರೀಶೈಲ ಅವರಿಗೆ ಟಿಕೆಟ್ ನೀಡಿ, ಗುರುವಿನ ವಿರುದ್ಧ ಕಣಕ್ಕಿಳಿಸಿದ್ದಾರೆ. ಲಿಂಗಾಯತ ಗಾಣಿಗ ಸಮುದಾಯದ ಶ್ರೀಶೈಲ ಅವರು ಹಲವು ಸಂಘಟನೆಗಳಲ್ಲಿ ತೊಡಗಿಕೊಂಡಿದ್ದಾರೆ.

ಹಲವಾರು ವರ್ಷಗಳಿಂದ ಹೊರಟ್ಟಿಯವರ ಜೊತೆಗೂಡಿ ಓಡಾಡಿದ ಅನುಭವ ಇರುವ ಶ್ರೀಶೈಲ ಅವರು ಹೊರಟ್ಟಿಯವರ ಮತ ಬ್ಯಾಂಕ್ ಮೇಲೆ ಕಣ್ಣುಹಾಕಿದ್ದು, ತಿರುಗೇಟು ನೀಡಲು ಯತ್ನಿಸುತ್ತಿದ್ದಾರೆ. ಕುಮಾರಸ್ವಾಮಿ ಅವರ ಸಾಧನೆಗಳನ್ನೇ ನೆಚ್ಚಿಕೊಂಡು ಮತಯಾಚಿಸುತ್ತಿದ್ದಾರೆ. ಕೊನೆಯ ಹಂತದಲ್ಲಿ ಕಣಕ್ಕಿಳಿದಿರುವುದರಿಂದ ಎಲ್ಲ ಮತದಾರರನ್ನು ತಲುಪಲು ಸಾಧ್ಯವಾಗಿಲ್ಲ.

ಪಕ್ಷೇತರರಾಗಿ ಕರಬಸಪ್ಪ ಮಧ್ಯಾನ್ನದ, ಕೃಷ್ಣವಾಣಿ ಶ್ರೀನಿವಾಸ ಗೌಡ, ಫಕೀರಗೌಡ ಕಲ್ಲನಗೌಡರ, ವೆಂಕನಗೌಡ ಗೋವಿಂದಗೌಡರ (ಎಎಪಿ ಬೆಂಬಲ) ಕಣದಲ್ಲಿದ್ದಾರೆ.

ಜಿಲ್ಲೆ	ಮತದಾರರ ಸಂಖ್ಯೆ	ಪುರುಷರು	ಮಹಿಳೆಯರು
ಧಾರವಾಡ	6,445	3,450	2,995
ಹಾವೇರಿ	4,623	3,249	1,374
ಗದಗ	3,300	2,262	1,038
ಉತ್ತರ ಕನ್ನಡ	3,605	2,022	1,583
ಒಟ್ಟು	17,973	10,983	6,990

ಸ್ವಾಮೀಜಿ ನೇಮಕ: ಸ್ಥಳೀಯರಿಂದ ಮುರುಘಾ ಶರಣರಿಗೆ ಅಡ್ಡಿ

ಕೊರಟಗೆರೆ (ತುಮಕೂರು ಜಿಲ್ಲೆ): ಗ್ರಾಮಸ್ಥರ ವಿರೋಧದ ನಡುವೆಯೇ ತಾಲ್ಲೂಕಿನ ಹೊಳವನಹಳ್ಳಿ ಸಮೀಪದ ಪುಟ್ಟೇಶ್ವರಸ್ವಾಮಿ ಗದ್ದುಗೆ ದೊಡ್ಡ ಮಠಕ್ಕೆ ಶುಕ್ರವಾರ ನೂತನ ಸ್ವಾಮೀಜಿಯನ್ನು ನೇಮಿಸಲಾಯಿತು.

ಸ್ವಾಮೀಜಿಯನ್ನು ನೇಮಿಸಲು ಬಂದಿದ್ದ ಚಿತ್ರದುರ್ಗ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರಿಗೆ ಸ್ಥಳೀಯರು ಅಡ್ಡಿಪಡಿಸಿದರು. ಈ ವಿರೋಧದ ನಡುವೆಯೇ ಬಸವಕಿರಣ ಸ್ವಾಮೀಜಿಯನ್ನು ಪೀಠಾಧ್ಯಕ್ಷರನ್ನಾಗಿ ಮುರುಘಾ ಶರಣರು ಘೋಷಿಸಿದರು.

ಮಠದಲ್ಲಿ ಈ ಹಿಂದೆ ಇದ್ದ ಸೋಮೇಶ್ವರ ಸ್ವಾಮೀಜಿಯ ಪಟ್ಟಾಧಿಕಾರ ನಡೆದಿರಲಿಲ್ಲ. ಸ್ವಯಂ ನಿವೃತ್ತಿ ಘೋಷಿಸಿ ಮಠದ ಆಸ್ತಿಯನ್ನು ಸ್ಥಳೀಯರ ಗಮನಕ್ಕೆ ತರದೇ ಗೋಪ್ಯವಾಗಿ ಮುರುಘಾ ಮಠಕ್ಕೆ ಬರೆದುಕೊಟ್ಟಿದ್ದಾರೆ. ಅವರಿಗೆ ಆಸ್ತಿ ಬರೆದುಕೊಡಲು ಹಕ್ಕಿಲ್ಲ ಎಂದು ಸ್ಥಳೀಯರು ಆಕ್ಷೇಪಿಸಿದರು.

‘ಮಠದ ವಿಚಾರವಾಗಿ ಎಲ್ಲಾ ದಾಖಲೆಗಳಿವೆ. ಏನೇ ವಿವಾದ ಇದ್ದರೂ ಮಾತುಕತೆಗೆ ಸಿದ್ಧ. ಜಗಳವಾಡಲು ಬಂದರೆ ಸಮಸ್ಯೆ ಬಗೆಹರಿಯುವುದಿಲ್ಲ’ ಎಂದು ಮುರುಘಾ ಮಠದ ಶಿವಮೂರ್ತಿ ಶರಣರು ತಿಳಿಸಿದರು.

ಸಾಹಿತಿ ಬಿ.ಎಲ್. ವೇಣುಗೆ ಅನಾಮಧೇಯ ಪತ್ರ

ಪ್ರಜಾವಾಣಿ ವಾರ್ತೆ


ಬಿ.ಎಲ್. ವೇಣು


ಚಿತ್ರದುರ್ಗ: ಪಠ್ಯಪುಸ್ತಕ ಪರಿಷ್ಕರಣೆ ಹಾಗೂ ಸಾವರ್ಕರ್ ಅವರ ಕುರಿತು ಅಭಿಪ್ರಾಯ ವ್ಯಕ್ತಪಡಿಸಿದ್ದ ಕಾದಂಬರಿಕಾರ ಬಿ.ಎಲ್. ವೇಣು ಅವರನ್ನು ಬೆದರಿಸುವ ಮಾದರಿಯಲ್ಲಿ ಅನಾಮಧೇಯ ಪತ್ರವೊಂದು ಬಂದಿದೆ.

ಸಾವರ್ಕರ್ ಬಗ್ಗೆ ನೀಡಿದ ಹೇಳಿಕೆಗೆ ಕ್ಷಮೆ ಕೇಳುವಂತೆ ಪತ್ರದಲ್ಲಿ ತಾಕೀತು ಮಾಡಲಾಗಿದೆ. ಎರಡು ಪುಟಗಳ, ಕೈಬರಹದ ಈ ಪತ್ರದಲ್ಲಿ ವಿಳಾಸವಿಲ್ಲ. ವೇಣು ಅವರ ಕಾದಂಬರಿ ಹಾಗೂ ಅವರ ಮೇಲಿನ ಗೌರವದ ಕುರಿತು ಕೆಲ ಉಲ್ಲೇಖಗಳಿವೆ. ‘61 ಜನ ಸಾಹಿತಿಗಳಿಗೆ ತಿಳಿ ಹೇಳಿ’ ಎಂಬ ಸಲಹೆಯನ್ನೂ ನೀಡಲಾಗಿದೆ.

‘ಎಳೆ ಮಕ್ಕಳ ಮನಸಿನಲ್ಲಿ ವಿಷಬೀಜ ಬಿತ್ತಬೇಡಿ ಎಂಬ ಹೇಳಿಕೆ ನೀಡಿದ್ದೀರಿ. ಪಾಳೆಗಾರರ ಇತಿಹಾಸಕ್ಕೆ ಸಂಬಂಧಿಸಿದಂತೆ ಕಾದಂಬರಿ ರಚಿಸಿದ ನಿಮ್ಮ ಬಗ್ಗೆ ಅಪಾರ ಗೌರವವಿದೆ. ಆದರೆ, ನೀವು 61 ಜನ ಸಾಹಿತಿಗಳ ದುಷ್ಟಕೂಟ ಸೇರಿಕೊಂಡಿದ್ದೀರಿ. ಎಡಪಂಥೀಯರು, ನಕ್ಸಲ್‌ವಾದಿಗಳು, ಭಯೋತ್ಪಾದಕರ ಜೊತೆ ಸೇರಿ ಎಸ್‌ಡಿಪಿಐನಂತಹ ದೇಶದ್ರೋಹಿ ಗುಂಪನ್ನು ಬೆಂಬಲಿಸುತ್ತಿದ್ದೀರಿ ರಾಜಕೀಯ ನಾಯಕರಾದ ಸಿದ್ದರಾಮಯ್ಯ ಹಾಗೂ ಎಚ್.ಡಿ. ಕುಮಾರಸ್ವಾಮಿ ಅವರಿಗೆ ನೆರವಾಗುತ್ತಿದ್ದೀರಿ’ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ವಸಂತಕುಮಾರ್ ಹೇಳಿಕೆಗೆ ಚಂದ್ರಶೇಖರ್ ಆಕ್ಷೇಪ

ಪ್ರಜಾವಾಣಿ ವಾರ್ತೆ


ಟಿ.ಆರ್. ಚಂದ್ರಶೇಖರ್

ಬೆಂಗಳೂರು: ‘6ನೇ ತರಗತಿಯ ಸಮಾಜ ವಿಜ್ಞಾನ ಭಾಗ-2ರಲ್ಲಿನ ಬಸವಣ್ಣನವರ ವಿಷಯಕ್ಕೆ ಸಂಬಂಧಿಸಿ ಬರಗೂರು ರಾಮಚಂದ್ರಪ್ಪ ಅವರುಮೂಲಗಳನ್ನು ಪರಿಶೀಲಿಸದೇ ಹೇಳಿಕೆ ನೀಡಿದ್ದಾರೆ’ ಎಂಬ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಬಿ.ವಿ.ವಸಂತಕುಮಾರ್ ಹೇಳಿಕೆಗೆ ಸಮಾಜ ವಿಜ್ಞಾನ ಪರಿಷ್ಕರಣ ಸಮಿತಿಯ ಈ ಹಿಂದಿನ ಅಧ್ಯಕ್ಷ ಡಾ. ಟಿ.ಆರ್. ಚಂದ್ರಶೇಖರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

‘ಮೂಲ ಪರಿಷ್ಕರಣೆಯ ಪಠ್ಯದಲ್ಲಿ ಅಲ್ಪಸ್ವಲ್ಪ ಬದಲಾವಣೆ ಮಾಡಿ ಮರು ಪರಿಷ್ಕರಣೆಯಲ್ಲಿ ಅಳವಡಿಸಿದ್ದಾರೆ ಎಂಬ ಬರಗೂರರ ಮಾತೇ ಸತ್ಯ. ಮರು ಪರಿಷ್ಕರಣೆಯಲ್ಲಿ ‘ಕಾಯಕವೇ ಕೈಲಾಸ - ಇದು ಅವರ ಮುಖ್ಯ ಬೋಧನೆಗಳಲ್ಲಿ ಒಂದಾಗಿದೆ’ ಎಂದು ಸೇರಿಸಿದ್ದಾರೆ. ‘ಕಾಯಕವೇ ಕೈಲಾಸ’ ಎಂದು ಹೇಳಿದವರು ಆಯ್ದಕ್ಕಿ ಮಾರಯ್ಯನವರು. ಮೂಲಪರಿಷ್ಕರಣೆಯಲ್ಲಿ ಈ ಮಾತು ಇರಲಿಲ್ಲ. ಮರುಪರಿಷ್ಕರಣೆಯಲ್ಲಿ ಈ ಮಾತು ಸೇರಿಸಿದ್ದಲ್ಲದೆ, ಬರಗೂರು ಸಮಿತಿ ಪರಿಷ್ಕರಣೆ ಪಠ್ಯದಲ್ಲಿ ಇಲ್ಲದಿದ್ದ ‘ಚಟುವಟಿಕೆ’ಯ ಸೂಚನೆಗಳನ್ನು ಕೊಟ್ಟಿದ್ದಾರೆ. ಇದಿಷ್ಟು ಪ್ರೊ. ಬರಗೂರು ಹೇಳಿದಂತೆ ‘ಅಲ್ಪಸ್ವಲ್ಪ’ ಬದಲಾವಣೆಯಲ್ಲದೆ ಮತ್ತೇನು’ ಎಂದೂ ಪ್ರಶ್ನಿಸಿದ್ದಾರೆ.

‘ಪಠ್ಯಪುಸ್ತಕವನ್ನು ಬರಗೂರು ಅವರು ಓದಿಲ್ಲವೋ ಅಥವಾ ವಸಂತಕುಮಾರ್ ಓದಿಲ್ಲವೋ ಎಂಬ ಸತ್ಯ ಇದರಿಂದ ತಿಳಿದು ಬರುತ್ತದೆ. ಆದ್ದರಿಂದ, ಸಲ್ಲದ ಆಕ್ಷೇಪ ಸರಿಯಲ್ಲ ಎಂದು ಅವರು ಹೇಳಿದ್ದಾರೆ.

ಪಠ್ಯ ವಾಪಸ್‌ಗೆ ಎಐಡಿಎಸ್‌ಒ ಒತ್ತಾಯ

ಬೆಂಗಳೂರು: ‘ಅಕ್ರಮವಾಗಿ ನೇಮಕಗೊಂಡ ಮತ್ತು ನ್ಯಾಯಸಮ್ಮತವಲ್ಲದ ಸಮಿತಿಯು ಮರುಪರಿಷ್ಕರಿಸಿದ ಪಠ್ಯಪುಸ್ತಕಗಳನ್ನು ವಾಪಸ್ ಪಡೆಯಬೇಕು’ ಎಂದು ಎಐಡಿಎಸ್‌ಒ ಒತ್ತಾಯಿಸಿದೆ.

‘ರಾಜ್ಯ ಸರ್ಕಾರವು ಪಠ್ಯಪುಸ್ತಕಗಳನ್ನು ಮರುಪರಿಷ್ಕರಿಸಲು ನಿಯೋಜಿಸಿದ್ದ ಸಮಿತಿಯೇ ಕಾನೂನುಬಾಹಿರವಾಗಿದೆ. ಸರ್ಕಾರಿ ಆದೇಶವಿಲ್ಲದೆಯೇ, ಕೇವಲ ಶಿಕ್ಷಣ ಸಚಿವರ ಮಾತಿನ ಮೇಲೆ ರಚಿಸಲಾಗಿದೆ. ಈ ಸಮಿತಿಯು ಮರುಪರಿಷ್ಕರಿಸಿರುವ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ವಿತರಿಸುತ್ತಿರುವ ಕ್ರಮ ಖಂಡನೀಯ’ ಎಂದು ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಪ್ರಜಾತಾಂತ್ರಿಕ ಪ್ರಕ್ರಿಯೆ ಹಾಗೂ ಕನಿಷ್ಠ ಸರ್ಕಾರಿ ನಿಯಮಗಳಿಗೆ ಒಳಪಡದ ಸಮಿತಿಯ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ನೀಡುವ ಯಾವ ನೈತಿಕತೆಯನ್ನೂ ರಾಜ್ಯ ಸರ್ಕಾರವು ಹೊಂದಿಲ್ಲ. ಹಳೆಯ ಸಮಿತಿ ಪ್ರಕಟಿಸಿದ ಪುಸ್ತಕಗಳನ್ನೇ ಈ ವರ್ಷವೂ ಮುಂದುವರಿಸಬೇಕು’ ಎಂದು ಆಗ್ರಹಿಸಿದ್ದಾರೆ.

ಪರಿಷ್ಕೃತ ಪಠ್ಯ: ವಾಪಸ್‌ಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಕೊಪ್ಪಳ: ‘ಸರ್ಕಾರದ ಆದೇಶವಿಲ್ಲದೆ ಕಾನೂನು ಬಾಹಿರವಾಗಿ ರಚಿಸಿದ ಮರುಪರಿಷ್ಕೃತ ಪಠ್ಯಗಳನ್ನು ಹಿಂಪಡೆಯಬೇಕು’ ಎಂದು ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ ರಾಜ್ಯ ಘಟಕದ ಅಧ್ಯಕ್ಷ ಅಲ್ಲಮಪ್ರಭು ಬೆಟ್ಟದೂರು ಆಗ್ರಹಿಸಿದ್ದಾರೆ.

‘ರೋಹಿತ್ ಚಕ್ರತೀರ್ಥ ನೇತೃತ್ವದ ಪಠ್ಯ ಪರಿಷ್ಕರಣಾ ಸಮಿತಿಯು ಸರ್ಕಾರದ ಆದೇಶವಿಲ್ಲದೆ ಕಾರ್ಯನಿರ್ವಹಿಸಿರುವುದು ಅನೈತಿಕ ಮತ್ತು ಅನ್ಯಾಯದ ಕ್ರಮ. ಪ್ರಜಾತಂತ್ರದ ನೀತಿ, ನಿಯಮಗಳನ್ನು ಗಾಳಿಗೆ ತೂರಿ ಕೆಲಸ ಮಾಡಿದೆ. ಆದ್ದರಿಂದ ಈ ಕೂಡಲೇ ಈ ಮರು ಪರಿಷ್ಕೃತ ಪಠ್ಯಗಳನ್ನು ಹಿಂಪಡೆಯಬೇಕು’ ಎಂದು ಅಲ್ಲಮಪ್ರಭು ಒತ್ತಾಯಿಸಿದ್ದಾರೆ.

‘ಬೆಂಗಳೂರಿನಲ್ಲಿ ನಡೆದ ಶಿಕ್ಷಣ ಉಳಿಸಿ ಸಮಿತಿಯ ರಾಜ್ಯಮಟ್ಟದ ಪಠ್ಯಪುಸ್ತಕ ತಿರುಚುವಿಕೆ ವಿರುದ್ಧದ ಸಭೆಯಲ್ಲಿ ನಾಡಿನ ಕವಿಗಳು, ಲೇಖಕರು, ಚಿಂತಕರು ಮತ್ತು ಶಿಕ್ಷಣ ತಜ್ಞರು ಈ ವಿಷಯವನ್ನು ದಾಖಲೆಗಳ ಸಮೇತ ಪ್ರಸ್ತಾಪಿಸಿದ್ದರು. ಐತಿಹಾಸಿಕ ಸತ್ಯಗಳನ್ನು ತಿರುಚಿರುವ ಸಮಿತಿಯ ಪರಿಷ್ಕರಣೆಯನ್ನು ಒಕ್ಕೊರಲಿನಿಂದ ವಿರೋಧಿಸಿದ್ದರು’ ಎಂದು ಬೆಟ್ಟದೂರು ಮಾಹಿತಿ ನೀಡಿದರು.

ರಾಜ್ಯಸಭೆ ಚುನಾವಣೆ: ಬಲ ಪ್ರದರ್ಶನಕ್ಕೆ ಮೂರೂ ರಾಜಕೀಯ ಪಕ್ಷಗಳ ತೀವ್ರ ಕಸರತ್ತು

ತಂತ್ರಗಾರಿಕೆಯಲ್ಲೇ ದಿನವಿಡೀ ಕಳೆದ ನಾಯಕರು

ಪ್ರಜಾವಾಣಿ ವಾರ್ತೆ



ರಾಜ್ಯಸಭೆ ಚುನಾವಣೆಯಲ್ಲಿ ಜಯಗಳಿಸಿದ ಬಿಜೆಪಿ ಅಭ್ಯರ್ಥಿ ನಿರ್ಮಲಾ ಸೀತಾರಾಮನ್ ಅವರಿಗೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಸಿಹಿ ತಿನ್ನಿಸಿ ಅಭಿನಂದಿಸಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವ ಮುನಿರತ್ನ, ಬಿಜೆಪಿ ಶಾಸಕ ಬಿ.ಎಸ್. ಯಡಿಯೂರಪ್ಪ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ವಿಧಾನಸೌಧದ ಮೊಗಸಾಲೆಗಳು ಶುಕ್ರವಾರ ರಾಜ್ಯಸಭೆ ಚುನಾವಣೆಯ ಜಿದ್ದಾಜಿದ್ದಿಯ ಕಣವಾಗಿ ಮಾರ್ಪಟ್ಟಿದ್ದವು. ಹೇಗಾದರೂ ಗುರಿ ಸಾಧಿಸಲೇಬೇಕು ಎಂಬ ಹಟಕ್ಕೆ ಬಿದ್ದಿದ್ದ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಮೂರೂ ಪಕ್ಷಗಳ ನಾಯಕರು ದಿನವಿಡೀ ತಂತ್ರಗಾರಿಕೆಯಲ್ಲೇ ಕಳೆದರು.

ಮೊದಲ ಇಬ್ಬರು ಅಭ್ಯರ್ಥಿಗಳಿಗೆ ತಲಾ 46 ಪ್ರಥಮ ಪ್ರಾಶಸ್ತ್ಯದ ಮತಗಳನ್ನು ಹಂಚಿಕೆ ಮಾಡಿ, ಉಳಿದ ಮತಗಳನ್ನು ಲಹರ್ ಸಿಂಗ್ ಸಿರೋಯ ಅವರಿಗೆ ನೀಡಲು ಬಿಜೆಪಿ ನಾಯಕರು ಮೊದಲು ತೀರ್ಮಾನಿಸಿದ್ದರು. ಆದರೆ, ಶುಕ್ರವಾರ ಬೆಳಿಗ್ಗೆ ತಂತ್ರಗಾರಿಕೆ ಬದಲಿಸಿದರು. ನಿರ್ಮಲಾ ಸೀತಾರಾಮನ್ ಅವರಿಗೆ 46, ಜಗ್ಗೇಶ್ ಅವರಿಗೆ 44 ಮತಗಳನ್ನು ನೀಡಿ, ಉಳಿದ ಮತಗಳನ್ನು ಲಹರ್ ಸಿಂಗ್‌ಗೆ ಹಂಚಿಕೆ ಮಾಡಿದರು.

ಪ್ರಥಮ ಪ್ರಾಶಸ್ತ್ಯದ ಮತಗಳಿಂದ ನಿರ್ಮಲಾ ಗೆಲುವು ಖಾತರಿಪಡಿಸಿಕೊಂಡು, ಉಳಿದ ಇಬ್ಬರನ್ನೂ ದ್ವಿತೀಯ ಪ್ರಾಶಸ್ತ್ಯದ ಮತಗಳಿಂದ ಗೆಲ್ಲಿಸಿಕೊಳ್ಳುವುದು ಬಿಜೆಪಿಯ ಲೆಕ್ಕಾಚಾರವಾಗಿತ್ತು. ಸಚಿವರಾದ ಆರ್.ಅಶೋಕ, ವಿ.ಸುನಿಲ್ ಕುಮಾರ್ ಮತ್ತು ಬಿ.ಸಿ.ನಾಗೇಶ್ ಅವರಿಗೆ ಅಭ್ಯರ್ಥಿಗೆ ಹಂಚಿಕೆಯಾದ ಶಾಸಕರ ಮತಗಳು ಕೈತಪ್ಪದಂತೆ ಎಚ್ಚರಿಕೆ ವಹಿಸುವ ಜವಾಬ್ದಾರಿ ನೀಡಲಾಗಿತ್ತು. ಈ ತಂತ್ರಗಾರಿಕೆ ಫಲ ನೀಡಿತು.

ಸೋಲಿನಲ್ಲೂ ಜಿದ್ದಾಜಿದ್ದಿ: ಕಾಂಗ್ರೆಸ್ ಮತ್ತು ಜೆಡಿಎಸ್ ನಡುವೆ ಇಡೀ ದಿನ ಜಿದ್ದಾಜಿದ್ದಿಯ ರಾಜಕಾರಣ ನಡೆಯಿತು. ಪಕ್ಷದ ಶಾಸಕರ ಮತಗಳು ಕೈ ಜಾರದಂತೆ ತಡೆಯುವುದಕ್ಕೇ ಆದ್ಯತೆ ನೀಡಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಂತ್ರಗಾರಿಕೆ ನಡೆಸಿದರು. ಶಿವಕುಮಾರ್ ಸ್ವತಃ ಮತಗಟ್ಟೆ ಏಜೆಂಟರಾಗಿ ಕಾರ್ಯನಿರ್ವಹಿಸಿದರು. ಆಗಾಗ ಬಂದು ಸಿದ್ದರಾಮಯ್ಯ ಜತೆ ಚರ್ಚಿಸುತ್ತಿದ್ದರು.

ಮತದಾನ ನಡೆಯುವಾಗ ಸಿದ್ದರಾಮಯ್ಯ ಹತ್ತಕ್ಕೂ ಹೆಚ್ಚು ಶಾಸಕರ ಜತೆ ವಿಧಾನಸೌಧದ ತಮ್ಮ ಕಚೇರಿಯಲ್ಲಿ ಕುಳಿತಿದ್ದರು. ಬಿಜೆಪಿ ಮತ್ತು ಜೆಡಿಎಸ್‌ನ ಎಲ್ಲ ಶಾಸಕರು ಮತ ಚಲಾಯಿಸಿರುವುದು ಖಾತರಿಯಾದ ಬಳಿಕ ಪಕ್ಷದ ಶಾಸಕರ ಜತೆ ಹೋಗಿ ಮತ ಚಲಾಯಿಸಿದರು. ಜೆಡಿಎಸ್ ಗೆಲುವು ಸಾಧಿಸದಂತೆ ಖಚಿತಪಡಿಸಿಕೊಳ್ಳುವುದೇ ಈ ತಂತ್ರಗಾರಿಕೆಯ ಉದ್ದೇಶ ಎಂದು ಗೊತ್ತಾಗಿದೆ.

ಫಲಿಸದ ಒಗ್ಗಟ್ಟಿನ ತಂತ್ರ: ಪಕ್ಷದ ಎಲ್ಲ ಶಾಸಕರನ್ನೂ ಹಿಡಿದಿಟ್ಟುಕೊಂಡು ಒಗ್ಗಟ್ಟು ಪ್ರದರ್ಶಿಸಲು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ತಂತ್ರ ರೂಪಿಸಿದ್ದರು. ಅದರಂತೆಯೇ 26 ಶಾಸಕರೊಂದಿಗೆ ಗುರುವಾರದಿಂದ ಗೊರಗುಂಟೆಪಾಳ್ಯದ ಹೋಟೆಲ್ ಒಂದರಲ್ಲಿ ತಂಗಿದ್ದರು. ಅವರೆಲ್ಲರ ಜತೆ ಬಸ್‌ನಲ್ಲಿ ಶುಕ್ರವಾರ ಬೆಳಿಗ್ಗೆ ವಿಧಾನಸೌಧಕ್ಕೆ ಬಂದು ಮತ ಚಲಾಯಿಸಿದರು.

ಜೆಡಿಎಸ್‌ನ ಎ.ಟಿ. ರಾಮಸ್ವಾಮಿ, ಕೆ.ಎಂ. ಶಿವಲಿಂಗೇಗೌಡ, ಕೆ. ಶ್ರೀನಿವಾಸ ಗೌಡ, ಎಸ್.ಆರ್. ಶ್ರೀನಿವಾಸ್ (ಗುಬ್ಬಿ) ಮತ್ತು ಜಿ.ಟಿ. ದೇವೇಗೌಡ ಪ್ರತ್ಯೇಕವಾಗಿ ಬಂದು ಮತ ಚಲಾಯಿಸಿದರು. ಶ್ರೀನಿವಾಸಗೌಡ ಮತ್ತು ಗುಬ್ಬಿ ಶ್ರೀನಿವಾಸ್ ಅಡ್ಡ ಮತ ಚಲಾಯಿಸಿದರೆ, ಉಳಿದ ಮೂವರೂ 'ಪಕ್ಷನಿಷ್ಠೆ' ಪ್ರದರ್ಶಿಸಿದರು.

'ಯಾರನ್ನೂ ಹೈಜಾಕ್ ಮಾಡಿಲ್ಲ'

'ಕಾಂಗ್ರೆಸ್ ಪಕ್ಷ ಇತರ ಪಕ್ಷಗಳ ಶಾಸಕರನ್ನು ಹೈಜಾಕ್ ಮಾಡಿಲ್ಲ. ನಮ್ಮ ಶಾಸಕರ ಮತಗಳು ಕೈತಪ್ಪಿಲ್ಲ. ನಮಗೆ ಅಷ್ಟು ಸಾಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಮತದಾನ ಅಂತ್ಯಗೊಂಡ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕಾಂಗ್ರೆಸ್ ಶಾಸಕರು ವಿಪ್ ಪಾಲಿಸಿದ್ದಾರೆ. ನಮ್ಮ ಪಕ್ಷದ ಎಲ್ಲ 69 ಶಾಸಕರು ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮತ ನೀಡಿದ್ದಾರೆ. ಅದನ್ನು ಕಣ್ಣಾರೆ ನೋಡಿದ್ದೇನೆ. ಅದು ನನಗೆ ಸಾಕು' ಎಂದರು.

'ಕಾಂಗ್ರೆಸ್ ಇತರ ಪಕ್ಷಗಳ ಶಾಸಕರನ್ನು ಹೈಜಾಕ್ ಮಾಡಲು ಯತ್ನಿಸಿಲ್ಲ. ಅಂತಹ ಅಗತ್ಯವೂ ಇಲ್ಲ. ಇತರ ಪಕ್ಷದವರನ್ನು ಮುಜುಗರಕ್ಕೆ ಸಿಲುಕಿಸುವುದು ನಮಗೆ ಇಷ್ಟವಿಲ್ಲ. ಆರೋಪ ಮಾಡುವವರಿಗೆ ನಾವು ಏನು ಸಲಹೆ ನೀಡಿದ್ದೆವು ಎಂಬುದನ್ನು ಅವರ ಬಳಿಯೇ ಕೇಳಿನೋಡಿ' ಎಂದು ಹೇಳಿದರು.

'ಬಿ ಟೀಂ ಯಾರೆಂಬುದು ಬಯಲಾಗಿದೆ'

ಬೆಂಗಳೂರು: 'ಬಿಜೆಪಿಯ ಬಿ ಟೀಂ ಯಾರು ಎಂಬುದು ರಾಜ್ಯಸಭೆ ಚುನಾವಣೆ ಫಲಿತಾಂಶದಲ್ಲಿನ ಬಹಿರಂಗವಾಗಿದೆ. ಸಿದ್ದರಾಮಯ್ಯ ಬಿಜೆಪಿಯ ಬಾಲಂಗೋಚಿ ಎಂಬುದೂ ಬಯಲಾಗಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

ಫಲಿತಾಂಶದ ಬಳಿಕ ಪತ್ರಿಕಾ ಹೇಳಿಕೆ ನೀಡಿರುವ ಅವರು, 'ಸಿದ್ದರಾಮಯ್ಯ ಅವರು ಬಿಜೆಪಿ ಜತೆ ಒಳ ಒಪ್ಪಂದ ಮಾಡಿಕೊಂಡು ತಮ್ಮದೇ ಪಕ್ಷದ ಅಲ್ಪ ಸಂಖ್ಯಾತ ಅಭ್ಯರ್ಥಿ ಮನ್ಸೂರ್ ಅಲಿ ಖಾನ್ ಅವರನ್ನು ಸೋಲಿಸಿದ್ದಾರೆ. ಜೆಡಿಎಸ್ ಬಗ್ಗೆ ಮನಸ್ಸಿನಲ್ಲಿ ನಂಜು ತುಂಬಿಕೊಂಡು ನಮ್ಮ ಅಭ್ಯರ್ಥಿಯನ್ನೂ ಸೋಲಿಸಿದ್ದಾರೆ' ಎಂದಿದ್ದಾರೆ.

'ಸಿದ್ದರಾಮಯ್ಯ ಅವರ ಡೋಂಗಿ ಜಾತ್ಯತೀತ ಮುಖವಾಡ ಈಗ ಕಳಚಿಬಿದ್ದಿದೆ. ನಮ್ಮ ಪಕ್ಷದ ಶಾಸಕರನ್ನು ಹೈಜಾಕ್ ಮಾಡುವ ಅವರ ಪ್ರಯತ್ನ ವಿಫಲವಾಗಿದೆ. ಅಲ್ಪಸಂಖ್ಯಾತ ಅಭ್ಯರ್ಥಿಯ ಹೆಸರಿನಲ್ಲಿ ಅನುಕಂಪ ಗಿಟ್ಟಿಸಲು ಹೋಗಿ ಖೆಡ್ಡಾಕ್ಕೆ ಬಿದ್ದಿದ್ದಾರೆ' ಎಂದು ಕುಮಾರಸ್ವಾಮಿ ವಾಗ್ದಾಳಿ ನಡೆಸಿದ್ದಾರೆ.

ಪೇಚಿಗೆ ಸಿಲುಕಿದ ಎಚ್.ಡಿ. ರೇವಣ್ಣ

ಜೆಡಿಎಸ್ ಶಾಸಕ ಎಚ್.ಡಿ. ರೇವಣ್ಣ ಅವರು ತಮ್ಮ ಪಕ್ಷದ ಅಭ್ಯರ್ಥಿಗೇ ಮತ ಚಲಾಯಿಸಿರುವುದಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರಿಗೆ ಮತಪತ್ರ ತೋರಿಸಿದ್ದು ರಾಜ್ಯಸಭೆ ಚುನಾವಣೆಯಲ್ಲಿ ನಾಟಕೀಯ ಬೆಳವಣಿಗೆಗಳಿಗೆ ಕಾರಣವಾಯಿತು.

ರೇವಣ್ಣ ಜೆಡಿಎಸ್‌ನ ಮತಗಟ್ಟೆ ಏಜೆಂಟರಾಗಿದ್ದರು. ಕಾಂಗ್ರೆಸ್‌ನಿಂದ ಶಿವಕುಮಾರ್ ಮತ್ತು ಬಿಜೆಪಿಯಿಂದ ಸಿ.ಟಿ. ರವಿ ಮತಗಟ್ಟೆ ಏಜೆಂಟರು.

ರೇವಣ್ಣ ಅವರು ಅನ್ಯ ಪಕ್ಷದ ಶಿವಕುಮಾರ್ ಅವರಿಗೆ ಮತಪತ್ರ ತೋರಿಸಿರುವುದರಿಂದ ಅವರ ಮತವನ್ನು ಅಸಿಂಧುಗೊಳಿಸಬೇಕು ಎಂದು ಒತ್ತಾಯಿಸಿ ಬಿಜೆಪಿ ಶಾಸಕ ಎಂ. ಸತೀಶ್ ರೆಡ್ಡಿ ಚುನಾವಣಾಧಿಕಾರಿ ಎಂ.ಕೆ. ವಿಶಾಲಾಕ್ಷಿ ಅವರಿಗೆ ದೂರು ಸಲ್ಲಿಸಿದರು.

ಕಾಂಗ್ರೆಸ್‌ನ ಪ್ರಕಾಶ್ ರಾಥೋಡ್ ಕೂಡ ಮತ್ತೊಂದು ದೂರು ಸಲ್ಲಿಸಿದರು.

ದೂರು ಸ್ವೀಕರಿಸಿದ ಚುನಾವಣಾಧಿಕಾರಿ, ಕೇಂದ್ರ ಚುನಾವಣಾ ಆಯೋಗದ ಅಭಿಪ್ರಾಯ ಕೋರಿದರು. ಇದರಿಂದ ಪೇಚಿಗೆ ಸಿಲುಕಿದ ರೇವಣ್ಣ, 'ನಮ್ಮ ಪಕ್ಷದಲ್ಲಿ ನಾನೇ ಮತಗಟ್ಟೆ ಏಜೆಂಟ್.

ಹೀಗಾಗಿ ಶಿವಕುಮಾರ್ ಅವರಿಗೆ ಮತಪತ್ರ ತೋರಿಸಿದೆ. ಇದರಲ್ಲಿ ತಪ್ಪೇನೂ ಇಲ್ಲ' ಎಂಬ ವಾದ ಮಂಡಿಸಿದರು.

ಕೇಂದ್ರ ಚುನಾವಣಾ ಆಯೋಗದ ಅಭಿಪ್ರಾಯ ಆಧರಿಸಿ ರೇವಣ್ಣ ಅವರ ಮತವನ್ನು ಸಿಂಧು ಎಂಬುದಾಗಿ ಘೋಷಿಸಲಾಯಿತು.

'ಕೈ' ಹಿಡಿದ ಶ್ರೀನಿವಾಸ ಗೌಡ

ಕೋಲಾರ ಶಾಸಕ ಕೆ.ಶ್ರೀನಿವಾಸ ಗೌಡ ಕಾಂಗ್ರೆಸ್ ಅಭ್ಯರ್ಥಿಗೆ ಮತ ಚಲಾಯಿಸಿದರು. ಬಳಿಕ ಮಾಧ್ಯಮಗಳ ಎದುರು ಬಹಿರಂಗವಾಗಿಯೇ ಘೋಷಿಸಿದರು.

'ನಾನು ಕಾಂಗ್ರೆಸ್ ಪಕ್ಷವನ್ನು ಪ್ರೀತಿಸುತ್ತೇನೆ. ಹೀಗಾಗಿ ಕಾಂಗ್ರೆಸ್ ಅಭ್ಯರ್ಥಿಗೆ ಮತ ಚಲಾಯಿಸಿದ್ದೇನೆ. ಹಿಂದೆ ಕಾಂಗ್ರೆಸ್ ಪಕ್ಷದಲ್ಲಿದೆ. ಮುಂದೆಯೂ ಕಾಂಗ್ರೆಸ್ ಸೇರುತ್ತೇನೆ' ಎಂದರು. ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರ ಬಗ್ಗೆ ತಮಗೆ ಬೇಸರವಿದೆ. ರಾಜ್ಯಸಭೆ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗೆ ಮತ ನೀಡುವಂತೆ ಜೆಡಿಎಸ್‌ನ ಯಾರೊಬ್ಬರೂ ತಮ್ಮನ್ನು ಸಂಪರ್ಕಿಸಿರಲಿಲ್ಲ ಎಂದು ಹೇಳಿದರು.

ಶ್ರೀನಿವಾಸ ಗೌಡ ಅವರು ವಿಧಾನಸೌಧಕ್ಕೆ ಬಂದು, ಮತ ಚಲಾಯಿಸಿ, ವಾಪಸಾಗುವವರೆಗೂ ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯ ನಜೀರ್ ಅಹಮ್ಮದ್ ಜತೆಗಿದ್ದರು.

ಶ್ರೀನಿವಾಸ ಗೌಡ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಎಚ್.ಡಿ. ಕುಮಾರಸ್ವಾಮಿ, 'ನನ್ನ ಅನುಮಾನದಂತೆಯೇ ಅವರು ಪಕ್ಷಕ್ಕೆ ದ್ರೋಹ ಬಗೆದಿದ್ದಾರೆ. ಆ ಮನುಷ್ಯನಿಗೆ ಮಾನ, ಮರ್ಯಾದೆ ಇದ್ದರೆ ಪಕ್ಷಕ್ಕೆ ರಾಜೀನಾಮೆ ಕೊಟ್ಟು ಹೊರಹೋಗಿ ರಾಜಕಾರಣ ಮಾಡಲಿ' ಎಂದರು.

ಬಿಜೆಪಿಗೆ ಎಸ್.ಆರ್. ಶ್ರೀನಿವಾಸ್ ಮತ?

ಜೆಡಿಎಸ್‌ನಿಂದ ದೂರ ಸರಿದಿರುವ ಆ ಪಕ್ಷದ ಶಾಸಕ ಎಸ್.ಆರ್. ಶ್ರೀನಿವಾಸ್ ಬಿಜೆಪಿ ಅಭ್ಯರ್ಥಿ ಲಹರ್ ಸಿಂಗ್ ಸಿರೋಯ ಅವರಿಗೆ ಮತ ಚಲಾಯಿಸಿರುವ ಅನುಮಾನ ವ್ಯಕ್ತವಾಗಿದೆ.

ಮತ ಚಲಾಯಿಸುವಾಗ ಪಕ್ಷದ ಮತಗಟ್ಟೆ ಏಜೆಂಟ್ ಎಚ್.ಡಿ. ರೇವಣ್ಣ ಅವರಿಗೆ ಶ್ರೀನಿವಾಸ್ ಖಾಲಿ ಮತಪತ್ರ ತೋರಿಸಿದ್ದರು. ಹೀಗಾಗಿ ಅವರು ಯಾರಿಗೂ ಮತ ಚಲಾಯಿಸಿಲ್ಲ ಎಂದು ಪಕ್ಷದ ನಾಯಕರು ನಂಬಿದ್ದರು. ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಕೂಡ ಹಾಗೆಯೇ ಹೇಳಿಕೆ ನೀಡಿದ್ದರು.

ಆದರೆ, ಬಿಜೆಪಿ ಅಭ್ಯರ್ಥಿಗಳಿಗೆ ಒಟ್ಟು 123 ಮತ ದೊರಕಿವೆ. ಬಿಜೆಪಿಯ 120, ಪಕ್ಷೇತರ ಶಾಸಕ ಎಚ್.ವಿ. ನಾಗೇಶ್ ಮತ್ತು ಬಿಎಸ್‌ಪಿ ಶಾಸಕ ಎನ್. ಮಹೇಶ್ ಸೇರಿ 122 ಮತಗಳು ಮಾತ್ರ ಆಡಳಿತ ಪಕ್ಷದ ಬಳಿ ಇದ್ದವು. ಈಗ ಒಂದು ಹೆಚ್ಚುವರಿ ಮತ ದೊರಕಿದೆ. ಅಲ್ಲದೇ ಖಾಲಿ ಮತಪತ್ರ ಎಣಿಕೆ ವೇಳೆ ಪತ್ತೆಯಾಗಿಲ್ಲ.

ಖಾಲಿ ಮತಪತ್ರ ಹಾಕಿದಂತೆ ಮತ ಚಲಾಯಿಸಿದ್ದ ಗುರುತಿಗೆ ಹೆಬ್ಬೆರಳು ಅಡ್ಡ ಹಿಡಿದು ರೇವಣ್ಣ ಅವರಿಗೆ ತೋರಿಸಿದ್ದ ಶ್ರೀನಿವಾಸ್, ಬಿಜೆಪಿ ಅಭ್ಯರ್ಥಿಗೆ ಮತ ಚಲಾಯಿಸಿದ್ದರು ಎಂದು ಪಕ್ಷದ ನಾಯಕರು ಆರೋಪಿಸಿದ್ದಾರೆ.

ಎರಡೂ ಪಕ್ಷದಲ್ಲಿ ಹಿತೈಷಿಗಳು: ಸಿ.ಟಿ.ರವಿ

ಬೆಂಗಳೂರು: 'ನಮ್ಮ ಹಿತೈಷಿಗಳು ಜೆಡಿಎಸ್ ಮತ್ತು ಕಾಂಗ್ರೆಸ್‌ನಲ್ಲಿದ್ದಾರೆ. ದೊಡ್ಡ ದೊಡ್ಡವರೇ ನಮ್ಮ ಬೆಂಬಲಕ್ಕಿದ್ದಾರೆ. ರಾಜಕೀಯಕ್ಕಾಗಿ ಬಿ ಟೀಂ ಎನ್ನುತ್ತಾರೆ. ಆದರೆ ಅವರ್‍ಯಾರೂ ಪಾಕಿಸ್ತಾನದವರಲ್ಲ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದ್ದಾರೆ.

ಒಂದೊಂದು ಗೆಲುವು ಮುಂದಿನ ಚುನಾವಣೆ ಮೇಲೆ ಭಾಗಶಃ ಪರಿಣಾಮ ಬೀರುತ್ತದೆ. ಇದೇ ದಿಕ್ಸೂಚಿ ಅಲ್ಲ. ಆತ್ಮವಿಶ್ವಾಸ ಹೆಚ್ಚಿಸುತ್ತದೆ ಎಂದಿದ್ದಾರೆ. ಲಹರ್ ಸಿಂಗ್ ಅವರಿಗೆ ಎರಡನೇ ಪ್ರಾಶಸ್ತ್ಯದ ಮತದಲ್ಲಿ ಎರಡು ಹೆಚ್ಚುವರಿ ಬಂದಿದೆ. ಅದು ಕಾಂಗ್ರೆಸ್ ಕಡೆಯಿಂದ ಬಂದಿದೆ. ನಮ್ಮ ಅಭ್ಯರ್ಥಿ ಚುನಾವಣೆಯಲ್ಲಿ ಗೆದ್ದಿದ್ದಾರೆ. ಎರಡು ಮತದ ಮನೋವಿಶ್ಲೇಷಣೆ ಮಾಡುವುದಿಲ್ಲ. ಮತ ಹಾಕಿದವರಿಗೆ ಧನ್ಯವಾದ ಎಂದು ರವಿ ತಿಳಿಸಿದರು.

ಡಾ.ಹಂಪ ನಾಗರಾಜಯ್ಯ ಅವರ ಇಂಗ್ಲಿಷ್ ಕೃತಿ ಬಿಡುಗಡೆ

'ಕರ್ನಾಟಕ ಅಭಿಜಾತ ಸಾಹಿತ್ಯದ ಇಂದ್ರಚಾಪ'

ಪ್ರಜಾವಾಣಿ ವಾರ್ತೆ



ಲಂಡನ್ ವಿಶ್ವವಿದ್ಯಾಲಯದಲ್ಲಿ ಶುಕ್ರವಾರ, ಸಾಹಿತಿ ಡಾ.ಹಂಪನಾ ಅವರು ರಚಿಸಿದ 'ದಿ ಸ್ಪೆಕ್ಟ್ರಮ್ ಆಫ್ ಕ್ಲಾಸಿಕಲ್ ಲಿಟರೇಚರ್ ಇನ್ ಕರ್ನಾಟಕ' (ಕರ್ನಾಟಕದ ಅಭಿಜಾತ ಸಾಹಿತ್ಯದ ಇಂದ್ರಚಾಪ) ಎಂಬ ಗ್ರಂಥದ ಲೋಕಾರ್ಪಣೆ ಮಾಡಲಾಯಿತು

ಬೆಂಗಳೂರು: ಸಾಹಿತಿ ಡಾ.ಹಂಪ ನಾಗರಾಜಯ್ಯ ಅವರು ಇಂಗ್ಲಿಷ್‌ನಲ್ಲಿ ರಚಿಸಿದ 'ದಿ ಸ್ಪೆಕ್ಟ್ರಮ್ ಆಫ್ ಕ್ಲಾಸಿಕಲ್ ಲಿಟರೇಚರ್ ಇನ್ ಕರ್ನಾಟಕ' (ಕರ್ನಾಟಕದ ಅಭಿಜಾತ ಸಾಹಿತ್ಯದ ಇಂದ್ರಚಾಪ) ಎಂಬ ಗ್ರಂಥದ ಲೋಕಾರ್ಪಣೆ ಕಾರ್ಯಕ್ರಮ ಲಂಡನ್ ವಿಶ್ವವಿದ್ಯಾಲಯದಲ್ಲಿ ಶುಕ್ರವಾರ ನಡೆಯಿತು.

'ಆದಿಕವಿ ಪಂಪಪೂರ್ವ ಯುಗದ ಸಾಹಿತ್ಯ' ಸಂಪುಟವನ್ನು ಪ್ಯಾರಿಸ್ ವಿಶ್ವವಿದ್ಯಾಲಯದ ಪ್ರೊ. ನಳಿನಿ ಬಲ್ಬೆ ಹಾಗೂ 'ಪಂಪೋತ್ತರ ಸಾಹಿತ್ಯದ ಒಂದನೆಯ ಭಾಗ' ಸಂಪುಟವನ್ನು ಅಮೆರಿಕದ ಡೆನಿಸನ್ ವಿಶ್ವವಿದ್ಯಾಲಯದ ಪ್ರೊ. ಜಾನ್ ಕಾರ್ಟ್, ಎರಡನೇ ಭಾಗದ ಸಂಪುಟವನ್ನು ಬೆಲ್ಜಿಯಂ ದೇಶದ ಗೆಂಟ್ ವಿಶ್ವವಿದ್ಯಾಲಯದ ಪ್ರೊ.ಟಿಲ್ಲೊ ಗೆಟಿಗ್ ಅವರು ಬಿಡುಗಡೆ ಮಾಡಿದರು. ಸಂಸ್ಕೃತ, ಪ್ರಾಕೃತ, ಮತ್ತು ಅಪಭ್ರಂಶ ಭಾಷೆಯ ಸಾಹಿತ್ಯ ಕುರಿತ 4ನೇ ಸಂಪುಟವನ್ನು ಡಾ. ನಿಕ್ ಬರ್ನಾರ್ಡ್ ಮತ್ತು ಶಾಸನಗಳನ್ನು ಕುರಿತ ಐದನೇ ಸಂಪುಟವನ್ನು ಪ್ರೊ. ಪೀಟರ್ ಫ್ಲೂಗೆಲರೂ ಅವರು ಬಿಡುಗಡೆ ಮಾಡಿದರು.

1,400 ಪುಟಗಳ ಈ ಗ್ರಂಥ ಕರ್ನಾಟಕದ ಅಭಿಜಾತ ಸಾಹಿತ್ಯದ ಸ್ವರೂಪ ಹಾಗೂ ಮಹತ್ವವನ್ನು ಪರಿಚಯಿಸುತ್ತಿದೆ. ಇದೇ ಸಂದರ್ಭದಲ್ಲಿ ಹಂಪನಾ ಅವರನ್ನು ಗೌರವಿಸಲಾಯಿತು. ಹಂಪನಾ ಅವರು ಕನ್ನಡ, ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ರಚಿಸಿರುವ ಬೃಹತ್ ಸಂಪುಟವನ್ನು ಸಪ್ನಾ ಬುಕ್ ಹೌಸ್ ಪ್ರಕಟಿಸಿದೆ. 5 ಸಂಪುಟಗಳ ಈ ಪುಸ್ತಕದಲ್ಲಿ ಕನ್ನಡ ಸಾಹಿತ್ಯದ ಆರಂಭದಿಂದ ಹದಿಮೂರನೇ ಶತಮಾನದ ವರೆಗಿನ ಪ್ರಮುಖ ಕವಿ-ಕಾವ್ಯ ಪರಿಚಯ ವಿಮರ್ಶೆ ಇದೆ ಎಂದು ಹೇಳಿಕೆ ತಿಳಿಸಿದೆ.

ಕೋವಿಡ್ ಏರಿಕೆ

ಬೆಂಗಳೂರು: ರಾಜ್ಯದಲ್ಲಿ ಕಳೆದ 10 ದಿನಗಳಿಂದ ಕೋವಿಡ್–19 ಪ್ರಕರಣಗಳ ಸಂಖ್ಯೆಯಲ್ಲಿ ನಿಧಾನಗತಿಯಲ್ಲಿ ಹೆಚ್ಚುತ್ತಿದ್ದು, ಶುಕ್ರವಾರ 525 ಪ್ರಕರಣಗಳು ವರದಿಯಾಗಿವೆ.

ಸೋಂಕು ದೃಢ ಪ್ರಮಾಣ ಶೇ 2.31ರಷ್ಟು ವರದಿಯಾಗಿವೆ. ಗುರುವಾರ 471 ಪ್ರಕರಣಗಳು ದೃಢಪಟ್ಟಿದ್ದವು ಮತ್ತು ಸೋಂಕು ದೃಢ ಪ್ರಮಾಣ ಶೇ 2.14ರಷ್ಟು ವರದಿಯಾಗಿತ್ತು. ಬೆಂಗಳೂರು ನಗರದಲ್ಲೇ ಅತಿ ಹೆಚ್ಚಿನ 494 ಪ್ರಕರಣಗಳು ವರದಿಯಾಗಿವೆ. ಮೈಸೂರಿನಲ್ಲಿ ಎಂಟು, ದಕ್ಷಿಣ ಕನ್ನಡದಲ್ಲಿ ಏಳು, ಉಡುಪಿಯಲ್ಲಿ ಮೂರು, ಬಳ್ಳಾರಿಯಲ್ಲಿ ನಾಲ್ಕು ಮತ್ತು ಬೆಳಗಾವಿ, ಚಿತ್ರದುರ್ಗ, ಹಾಸನದಲ್ಲಿ ತಲಾ ಎರಡು ಪ್ರಕರಣ ದೃಢಪಟ್ಟಿವೆ ಎಂದು ಆರೋಗ್ಯ ಇಲಾಖೆ ಹೇಳಿದೆ.

ಕೈ–ದಳ ಜಿದ್ದು: ಲಹರ್‌ಗೆ ಲಾಟರಿ

ಒಂದನೇ ಪುಟದಿಂದ

ಮಧ್ಯಾಹ್ನದ ವೇಳೆಗೇ ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರಿಗೆ ಫಲಿತಾಂಶ ಏನಾಗಬಹುದು ಎಂಬ ಸುಳಿವು ಸಿಕ್ಕಿತ್ತು. ಹೀಗಾಗಿ ಬಿಜೆಪಿ ಅಭ್ಯರ್ಥಿ ಗೆದ್ದರೆ ಅವರೇ ಹೊಣೆ ಎಂದು ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರು ಪರಸ್ಪರ ಬೊಟ್ಟು ಮಾಡಿ ಆರೋಪ ಮಾಡುವುದಕ್ಕಷ್ಟೇ ಸೀಮಿತವಾದರು. ಕುಪೇಂದ್ರ ರೆಡ್ಡಿ ಮಾತ್ರ ಹೆಚ್ಚು ಆತಂಕಭರಿತರಾಗಿ ಮತಗಟ್ಟೆಯಾಗಿದ್ದ ವಿಧಾನಸೌಧದ ಕೊಠಡಿ ಸಂಖ್ಯೆ 106 ಬಳಿ ಓಡಾಡುತ್ತಿದ್ದರು.

ಒಟ್ಟಾಗಿ ಬಂದ ಜೆಡಿಎಸ್ ಶಾಸಕರು: ಅಡ್ಡ ಮತದಾನದ ಭೀತಿಗೆ ಒಳಗಾಗಿದ್ದ ಜೆಡಿಎಸ್ ಪಕ್ಷ ತನ್ನ ಶಾಸಕರನ್ನು ನಗರದ ಹೋಟೇಲ್‌ವೊಂದರಲ್ಲಿ ಗುರುವಾರ ರಾತ್ರಿಯೇ ಹಿಡಿದಿಟ್ಟಿತ್ತು. ಬೆಳಿಗ್ಗೆ ಎಲ್ಲರೂ ಒಟ್ಟಾಗಿ ಬಸ್‌ನಲ್ಲಿ ಮತದಾನಕ್ಕೆ ಬಂದರು. ಆದರೆ, ಕೆ.ಶ್ರೀನಿವಾಸಗೌಡ, ಎಸ್.ಆರ್.ಶ್ರೀನಿವಾಸ್, ಜಿ.ಟಿ.ದೇವೇಗೌಡ ಮತ್ತು ಕೆ.ಎಂ.ಶಿವಲಿಂಗೇಗೌಡ ಈ ತಂಡದಲ್ಲಿ ಇರಲಿಲ್ಲ. ಜಿ.ಟಿ ಮತ್ತು ಶಿವಲಿಂಗೇಗೌಡ ಪಕ್ಷದ ವರಿಷ್ಠರ ಬಗ್ಗೆ ಮುನಿಸಿಕೊಂಡಿದ್ದರೂ ಪಕ್ಷದ ಅಭ್ಯರ್ಥಿಗೇ ಮತ ಚಲಾಯಿಸಿ 'ಪಕ್ಷ ನಿಷ್ಠೆ' ಪ್ರದರ್ಶಿಸಿದರು.

ಮತ್ತೊಂದೆಡೆ ಕಾಂಗ್ರೆಸ್ ಕೂಡ ಅಡ್ಡ ಮತದಾನ ಆಗಬಾರದು ಎಂಬ ಕಾರಣಕ್ಕೆ ಬೆಳಿಗ್ಗೆ ಶಾಸಕರ ಸಭೆ ನಡೆಸಿ ಯಾವ ರೀತಿ ಮತ ಚಲಾಯಿಸಬೇಕು ಎಂಬ ಪ್ರಾತ್ಯಕ್ಷಿಕೆಯ ವ್ಯವಸ್ಥೆಯನ್ನೂ ಮಾಡಿತ್ತು.

ಒಂದು ವೇಳೆ ಯಾರಾದರೂ ಅಡ್ಡ ಮತದಾನ ಮಾಡಿದರೆ ಮುಂದೆ ಚುನಾವಣೆಯಲ್ಲಿ ಟಿಕೆಟ್ ನೀಡುವುದಿಲ್ಲ ಎಂಬುದಾಗಿ ಡಿ.ಕೆ.ಶಿವಕುಮಾರ್ ಎಚ್ಚರಿಕೆ ನೀಡಿದ್ದರು.



ಮುಂಗಾರಿನ ಬದುಕು

ಮುಂಗಾರು ಆರಂಭವಾದ ಹಿನ್ನೆಲೆಯಲ್ಲಿ ಹುಬ್ಬಳ್ಳಿ ತಾಲ್ಲೂಕಿನ ಮಂಟೂರು ಗ್ರಾಮದಲ್ಲಿ ರೈತರಾದ ಗುರುಸಿದ್ದಪ್ಪ ಕೂಡ್ಲಿಗಿ ಮತ್ತು ಮಹಾದೇವಪ್ಪ ನಾಯ್ಕರ ಅವರು ಭೂಮಿ ಉಳುಮೆ ಮಾಡಿದರು -ಪ್ರಜಾವಾಣಿ ಚಿತ್ರ/ ಗೋವಿಂದರಾಜ ಜವಳಿ

ಕರಾವಳಿಯಲ್ಲಿ ಮುಂಗಾರು ಚುರುಕು

ಮಂಗಳೂರು: ಕರಾವಳಿ ಜಿಲ್ಲೆಗಳಲ್ಲಿ ಮುಂಗಾರು ಚುರುಕುಗೊಂಡಿದೆ. ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಕೆಲವೆಡೆ ಶುಕ್ರವಾರ ಮಳೆ ಸುರಿಯಿತು.

ಮಂಗಳೂರಿನಲ್ಲಿ ಶುಕ್ರವಾರ ಮಧ್ಯಾಹ್ನದವರೆಗೂ ಬಿಸಿಲಿನ ವಾತಾವರಣವಿತ್ತು. 3 ಗಂಟೆಯ ನಂತರ ಮಳೆ ಆರಂಭವಾಗಿದೆ. ರಾತ್ರಿ ಮಂಗಳೂರು ನಗರ, ಪುತ್ತೂರು ಬಂಟ್ವಾಳ ಸುಳ್ಯ ಮುಂತಾದ ಕಡೆಗಳಲ್ಲಿ ಸಾಧಾರಣ ಮಳೆಯಾಗಿದೆ. ಉಡುಪಿ ಜಿಲ್ಲೆಯ ಹಲವೆಡೆ ಮುಂಜಾನೆಯಿಂದಲೇ ಬಿಟ್ಟು ಬಿಟ್ಟು ಮಳೆಯಾಗುತ್ತಿತ್ತು. ರಾತ್ರಿ ವೇಳೆಗೆ ಮಳೆ ಚುರುಕಾಗಿತ್ತು. ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ, ಎನ್.ಆರ್.ಪುರ, ಬಾಳೆಹೊನ್ನೂರು, ಶೃಂಗೇರಿ ಭಾಗದಲ್ಲಿ ತುಂತುರು ಮಳೆಯಾಗಿದೆ.

ಸರ್ಕಾರದ ಮೇಲೆ ಒತ್ತಡ ಹೇರಲು ನಾಳೆ ಬಸವಕಲ್ಯಾಣದಲ್ಲಿ ಕಾರ್ಯಕ್ರಮ

'ಮಠಾಧೀಶರ ನಡೆ ಮೂಲ ಅನುಭವ ಮಂಟಪ ಕಡೆ'

• ರಾಹುಲ ಬೆಳಗಲಿ



ರಾಜೇಶ್ವರ ಶಿವಾಚಾರ್ಯರು

ಕಲಬುರಗಿ: ಬೀದರ್ ಜಿಲ್ಲೆಯ ಬಸವಕಲ್ಯಾಣದ ತ್ರಿಪುರಾಂತ ಕೆರೆ ದಡದಲ್ಲಿ ನೂತನ ಅನುಭವ ಮಂಟಪದ ನಿರ್ಮಾಣ ಕಾಮಗಾರಿ ಆರಂಭಗೊಂಡ ಬೆನ್ನಲ್ಲೇ, ಮೂಲ ಅನುಭವ ಮಂಟಪದ ವಿಷಯ ಮುನ್ನೆಲೆಗೆ ಬಂದಿದೆ.

'ಬಸವಕಲ್ಯಾಣದ ಪೀರಪಾಷಾ ಬಂಗ್ಲಾದಲ್ಲಿ (ದರ್ಗಾ) ಮೂಲ ಅನುಭವ ಮಂಟಪವಿದೆ. ಅದನ್ನು ವಶಪಡಿಸಿಕೊಳ್ಳಬೇಕು' ಎಂದು ಈಗಾಗಲೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿಯಾಗಿ ಒತ್ತಾಯಿಸಿರುವ ಮಠಾಧೀಶರ ನಿಯೋಗವು ಈಗ ವಿವಿಧ ಹಂತದ ಹೋರಾಟಕ್ಕೆ ಸಿದ್ಧತೆ ನಡೆಸಿದೆ.

ಬಸವಕಲ್ಯಾಣದಲ್ಲಿ ಭಾನುವಾರ (ಜೂನ್ 12) 'ಮಠಾಧೀಶರ ನಡೆ ಮೂಲ ಅನುಭವ ಮಂಟಪದ ಕಡೆ' ಕಾರ್ಯಕ್ರಮ ಹಮ್ಮಿಕೊಂಡಿರುವ ಮಠಾಧೀಶರು, ಸರ್ಕಾರದ ಮೇಲೆ ಒತ್ತಡ ಹೇರಲು ಪ್ರಯತ್ನ ನಡೆಸಿದ್ದಾರೆ.

'ಕಾರ್ಯಕ್ರಮದಲ್ಲಿ ರಾಜ್ಯದ ವಿವಿಧೆಡೆಯಿಂದ ಭಾಗವಹಿಸುವ 400ಕ್ಕೂ ಹೆಚ್ಚು ಮಠಾಧೀಶರು ಮೂಲ ಅನುಭವ ಮಂಟಪದ ರಕ್ಷಣೆಗೆ ಒತ್ತಾಯಿಸುವರು. ಪೀರಪಾಷಾ ಬಂಗ್ಲಾದಲ್ಲಿ ಅನುಭವ ಮಂಟಪದ ಕುರುಹುಗಳು ಪತ್ತೆಯಾಗಿದ್ದು, ಈ ನಿಟ್ಟಿನಲ್ಲಿ ಸರ್ಕಾರವು ಸಂಶೋಧನೆ ನಡೆಸಲು ಕೋರಲಾಗುವುದು' ಎಂದು ತಡೋಳಾ ರಾಜೇಶ್ವರ ಶಿವಾಚಾರ್ಯರು 'ಪ್ರಜಾವಾಣಿ'ಗೆ ತಿಳಿಸಿದರು.



ಬಸವಕಲ್ಯಾಣದ ಪೀರಪಾಷಾ ಬಂಗ್ಲಾ

'ಪೀರಪಾಷಾ ಬಂಗ್ಲಾದ ಇತಿಹಾಸ 1650 ರಿಂದ 1730ರವರೆಗೆ ಇದೆ. ಅದಕ್ಕೂ ಮುನ್ನ ಅಲ್ಲಿ ಕಟ್ಟಡವಿತ್ತು ಎಂದು ಇತಿಹಾಸ ಹೇಳುತ್ತದೆ. ಶಾಸ್ತ್ರೀಯವಾಗಿ ಅದು ಬಸವಣ್ಣನವರ ಭವನ. ಅದರ ಪ್ರಸ್ತಾಪ ಶಿವಪುರಾಣ, ಪ್ರಭುಲಿಂಗ ಲೀಲೆ, ಶರಣರ ಕಾಲಜ್ಞಾನದಲ್ಲಿ ಬರುತ್ತದೆ. ಸದ್ಯಕ್ಕೆ ಅದು ವೈಯಕ್ತಿಕ ಆಸ್ತಿಯಾಗಿದೆ. ಅದನ್ನು ಕಾನೂನಾತ್ಮಕವಾಗಿ ಸರ್ಕಾರದ ವಶಕ್ಕೆ ತೆಗೆದುಕೊಳ್ಳುವುದು ಅಥವಾ ಬಿಡುವುದು ಸರ್ಕಾರಕ್ಕೆ ಬಿಟ್ಟದ್ದು. ಈ ಸ್ಥಳವು ಮೂಲ ಅನುಭವ ಮಂಟಪ ಎಂಬುದನ್ನು ನಾವು ಸರ್ಕಾರಕ್ಕೆ ಮನಗಾಣಿಸುತ್ತಿದ್ದೇವೆ. ಜನರ ಬೇಡಿಕೆಯಂತೆ ಸತ್ಯಾನ್ವೇಷಣೆಗೆ ಆಗ್ರಹಿಸುತ್ತಿದ್ದೇವೆ' ಎಂದರು.

'ನೂತನವಾಗಿ ನಿರ್ಮಿಸಲಾಗುತ್ತಿರುವ ಅನುಭವ ಮಂಟಪಕ್ಕೆ ಹಿನ್ನಡೆ ಆಗಬಹುದು ಎಂಬ ಕಾರಣ ಕ್ಕೆ ಬಸವಲಿಂಗ ಪಟ್ಟದ್ದೇವರು ಪೀರಪಾಷಾದಲ್ಲಿ ಮಂಟಪದ ಸಾಕ್ಷ್ಯ ಇಲ್ಲ ಎಂದು ಹೇಳುತ್ತಿರಬಹುದು. ಆದರೆ, ಅವರೂ ಸಂಶೋಧನೆಗೆ ಒತ್ತು ನೀಡಿದ್ದಾರೆ. ಹಿರಿಯರಾದ ಅವರನ್ನು ಈ ವಿವಾದಕ್ಕೆ ಎಳೆದು ತರುವುದು ಬೇಡ' ಎಂದರು.

'ಅನುಭವ ಮಂಟಪದ ಸಾಕ್ಷ್ಯಗಳಿಲ್ಲ'



'ಪೀರ ಪಾಷಾ ದರ್ಗಾದಲ್ಲಿ ಅನುಭವ ಮಂಟಪವಿದ್ದ ಬಗ್ಗೆ ಸಾಕ್ಷ್ಯಗಳಿಲ್ಲ. ಬಸವಣ್ಣನವರ ಬಗ್ಗೆ ಇರುವ ಹತ್ತಾರು ಗ್ರಂಥಗಳಲ್ಲೂ ಇದರ ಉಲ್ಲೇಖವಿಲ್ಲ. ಆದರೆ, ಇತಿಹಾಸಕಾರರು ಸೂಕ್ತ ಸಂಶೋಧನೆ ಮಾಡಿದಲ್ಲಿ ಸತ್ಯಾಂಶ ಬೆಳಕಿಗೆ ಬರಬಹುದು' ಎಂದು ಅನುಭವ ಮಂಟ ಪದ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರು ತಿಳಿಸಿದ್ದಾರೆ 'ಬಸವಣ್ಣನವರು ಸ್ಥಾವರಕ್ಕೆ ಮಹತ್ವ ಕೊಟ್ಟಿರಲಿಲ್ಲ. ಅವರ ಅನುಭವ ಮಂಟಪ ಬಹುತೇಕ ಹೆಂಚಿನ ಮನೆ ಇದ್ದಿರಬಹುದು. ನಂತರ ಅದು ನಶಿಸಿರಲೂಬಹುದು' ಎಂದು ತಿಳಿಸಿದ್ದಾರೆ.


'ದೇಗುಲದ ಕುರುಹು ಅನುಭವ ಮಂಟಪ ಅಲ್ಲ'



'ಪೀರಪಾಷಾ ಬಂಗ್ಲಾ ಹಿಂದೆ ಹಿಂದೂ ದೇವಾಲಯದ ಸಂಕೀರ್ಣವಾಗಿತ್ತು. ಈಗಲೂ ಅಲ್ಲಲ್ಲಿ ದೇವಾಲಯದ ಭಾಗಗಳನ್ನು ಕಾಣಬಹುದು. ಆದರೆ, ಇದನ್ನೇ ಆಧಾರವಾಗಿ ಇಟ್ಟುಕೊಂಡು ಇಲ್ಲಿ ಅನುಭವ ಮಂಟಪ ಇತ್ತು ಎಂಬು ದನ್ನು ಹೇಳಲಾಗದು' ಎಂದು ಬಸವಕಲ್ಯಾಣ ಅಭಿವೃದ್ಧಿ ಮಂಡಳಿಯ ವಿಶೇಷ ಅಧಿಕಾರಿಯಾಗಿದ್ದ ಎಸ್.ಎಂ.ಜಾಮದಾರ 'ಪ್ರಜಾವಾಣಿ'ಗೆ ತಿಳಿಸಿದರು.

'ಬಂಗ್ಲಾ ಸ್ಥಳವನ್ನು ಖಬರಸ್ತಾನ್ ಮಾಡಿದವರು ನವಾಬ್ ಮನೆತನದವರು. ಅಲ್ಲಿ ಅವರ ಕುಟುಂಬಸ್ಥರ 100 ಸಮಾಧಿಗಳಿವೆ. ಎಂಟು ವರ್ಷ ವಿಶೇಷ ಅಧಿಕಾರಿಯಾಗಿ ಅಲ್ಲಿ ಸಾಕಷ್ಟು ಅಧ್ಯಯನ ಮಾಡಿದ್ದೇನೆ' ಎಂದರು. 'ಅನುಭವ ಮಂಟಪದ ವಿಷಯವನ್ನೇ ಪ್ರಧಾನವಾಗಿ ಇಟ್ಟುಕೊಂಡು ಅನಗತ್ಯ ವಿವಾದ ಮಾಡುವುದು ಸರಿಯಲ್ಲ. ಒಟ್ಟಾರೆ ಅವರ ಉದ್ದೇಶವೇನು ಎಂಬುದು ಸ್ಪಷ್ಟವಾಗಿ ಅರ್ಥವಾಗುತ್ತಿಲ್ಲ. ಎಲ್ಲರ ಹಿತದೃಷ್ಟಿಯಿಂದ ಇದು ಒಳ್ಳೆಯದಲ್ಲ' ಎಂದು ಹೇಳಿದರು.

ಷೇರುಪೇಟೆ ವಹಿವಾಟು 1017



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,478
ಇಂದಿನ ಅಂತ್ಯ	16,202
▼	276
ದಿನದ ಕನಿಷ್ಠ	16,172

ವಿನಿಮಯ ದರ

$ ಡಾಲರ್	77.93
£ ಪೌಂಡ್	96.48
€ ಯುರೊ	82.48
¥ ಯೆನ್ (100ಕ್ಕೆ)	58

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹510
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹512

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1615 (1615)
ಸೋಯಾ (ರಿಫೈನ್ಡ್)	₹1515 (1530)
ಸೂರ್ಯಕಾಂತಿ (ರಿಫೈನ್ಡ್)	₹1775 (1780)
ಪಾಮೋಲಿನ್	₹1470 (1475)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹370-628
ದ್ವಿತಳಿ (ಬಿ.ವಿ)	₹341-813

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹175
ಆರ್‌ಎಸ್‌ಎಸ್-5	₹167
ಗುಡ್ ಲಾಟ್	₹159

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1000-1400
ಮಧ್ಯಮ	₹800-1000
ಸಣ್ಣ	₹400-800

ಸಂಕ್ಷಿಪ್ತ ಸುದ್ದಿ

ಬಡ್ಡಿ ದರ ಹೆಚ್ಚಿಸಿದ ಬ್ಯಾಂಕ್‌ಗಳು

ನವದೆಹಲಿ (ಪಿಟಿಐ): ರೆಪೊ ದರವನ್ನು ಆರ್‌ಬಿಐ ಹೆಚ್ಚಿಸಿದ ನಂತರದಲ್ಲಿ, ಬ್ಯಾಂಕ್‌ಗಳು ಮತ್ತು ಬ್ಯಾಂಕೇತರ ಹಣಕಾಸು ಸಂಸ್ಥೆಗಳು ಸಾಲದ ಮೇಲಿನ ಬಡ್ಡಿ ದರ ಜಾಸ್ತಿ ಮಾಡಿವೆ.

ಐಸಿಐಸಿಐ ಬ್ಯಾಂಕ್ ರೆಪೊ ಆಧಾರಿತ ಇಬಿಎಲ್‌ಆರ್ ದರವನ್ನು ಜೂನ್ 8ರಿಂದ ಅನ್ವಯವಾಗುವಂತೆ ಶೇ 8.60ಕ್ಕೆ ಹೆಚ್ಚಿಸಿದೆ. ಇದು ಶೇ 8.10ರಷ್ಟು ಇತ್ತು.

ಪಂಜಾಬ್ ನ್ಯಾಷನಲ್ ಬ್ಯಾಂಕ್ ರೆಪೊ ಆಧಾರಿತ ಸಾಲದ ಬಡ್ಡಿ ದರವನ್ನು (ಆರ್‌ಎಲ್‌ಎಲ್‌ಆರ್) ಶೇ 7.40ಕ್ಕೆ ಜಾಸ್ತಿ ಮಾಡಿದೆ. ಇದು ಶೇ 6.90ರಷ್ಟು ಇತ್ತು. ಬ್ಯಾಂಕ್ ಆಫ್ ಬರೋಡ ಆರ್‌ಎಲ್‌ಎಲ್‌ಆರ್ ದರವನ್ನು ಶೇ 7.40ಕ್ಕೆ ಜಾಸ್ತಿ ಮಾಡಿದೆ.

ಇಂಡಿಯನ್ ಬ್ಯಾಂಕ್ ಆರ್‌ಎಲ್‌ಎಲ್‌ಆರ್ ದರವನ್ನು ಶೇ 7.70ಕ್ಕೆ, ಬ್ಯಾಂಕ್ ಆಫ್ ಇಂಡಿಯಾ ಶೇ 7.75ಕ್ಕೆ ಹೆಚ್ಚಿಸಿವೆ. ಬ್ಯಾಂಕ್ ಆಫ್ ಮಹಾರಾಷ್ಟ್ರ ಆರ್‌ಎಲ್‌ಎಲ್‌ಆರ್ ದರವನ್ನು ಶೇ 7.70ಕ್ಕೆ ಹೆಚ್ಚಿಸಿದೆ. ಇದು ಶೇ 7.20ರಷ್ಟು ಇತ್ತು.

ತೆಂಗಿನ ಕಾಯಿ ಬೆಲೆ ಇಳಿಕೆ

ತುಮಕೂರು: ಕೊಬ್ಬರಿ ಬೆಲೆ ಇಳಿಕೆಯತ್ತ ಮುಖ ಮಾಡಿದಂತೆ, ತೆಂಗಿನ ಕಾಯಿ ಧಾರಣೆಯೂ ತೀವ್ರವಾಗಿ ಕುಸಿತ ಕಂಡಿದೆ.

ಒಂದು ಸಾವಿರ ತೆಂಗಿನ ಕಾಯಿ ಬೆಲೆ ₹15 ಸಾವಿರದಿಂದ ₹18 ಸಾವಿರ ಇತ್ತು. ಪ್ರಸ್ತುತ ಒಂದು ಸಾವಿರ ಕಾಯಿ ಬೆಲೆ ₹8 ಸಾವಿರದಿಂದ ₹10 ಸಾವಿರಕ್ಕೆ ಇಳಿಕೆಯಾಗಿದೆ. ಕೊಬ್ಬರಿ ಬೆಲೆ ಕ್ವಿಂಟಲ್‌ಗೆ ₹13 ಸಾವಿರದಿಂದ ₹14 ಸಾವಿರಕ್ಕೆ ಕುಸಿದಿದೆ. ಒಂದು ತಿಂಗಳ ಹಿಂದೆ ಕೊಬ್ಬರಿ ಬೆಲೆ ಕ್ವಿಂಟಲ್‌ಗೆ ₹18 ಸಾವಿರದ ವರೆಗೂ ಏರಿಕೆಯಾಗಿತ್ತು.

ಬೆಂಗಳೂರು ಮಾರುಕಟ್ಟೆಗೆ ತಮಿಳುನಾಡಿನಿಂದ ತೆಂಗಿನ ಕಾಯಿ ಬರುತ್ತಿದ್ದು, ರಾಜ್ಯದ ಕಾಯಿಗೆ ಬೇಡಿಕೆ ಕಡಿಮೆಯಾಗಿದೆ.

'ಕಳೆದ ಎರಡು ವಾರಗಳಿಂದ ಬೆಲೆ ತೀವ್ರವಾಗಿ ಕುಸಿತ ಕಂಡಿದೆ. ಮುಂದಿನ ಕೆಲ ದಿನಗಳ ಕಾಲ ಇದೇ ಪರಿಸ್ಥಿತಿ ಇರಲಿದೆ' ಎಂದು ವರ್ತಕ ಕೆಸ್ತೂರು ವೀರಣ್ಣ ಹೇಳುತ್ತಾರೆ.

ಭಾರತದ ಮುನ್ನೋಟ ಪರಿಷ್ಕರಿಸಿದ ಫಿಚ್

ನವದೆಹಲಿ (ಪಿಟಿಐ): ಫಿಚ್ ರೇಟಿಂಗ್ಸ್ ಸಂಸ್ಥೆಯು ಭಾರತದ ಸಾಲ ಪಡೆಯುವ ಸಾಮರ್ಥ್ಯದ ಮುನ್ನೋಟವನ್ನು 'ಸ್ಥಿರ' ಎಂದು ಮೇಲ್ದರ್ಜೆಗೆ ಏರಿಸಿದೆ. ಇದು ಎರಡು ವರ್ಷಗಳಿಂದ 'ನಕಾರಾತ್ಮಕ' ಆಗಿತ್ತು.

ಅರ್ಥ ವ್ಯವಸ್ಥೆಯು ವೇಗವಾಗಿ ಪುನಶ್ಚೇತನ ಕಂಡಿರುವ ಕಾರಣ, ಮಧ್ಯಮ ಅವಧಿಯಲ್ಲಿ ಬೆಳವಣಿಗೆಗೆ ಅಪಾಯಗಳು ಕಡಿಮೆಯಾಗಿವೆ ಎಂದು ಸಂಸ್ಥೆ ಹೇಳಿದೆ. ಒಟ್ಟಾರೆ ರೇಟಿಂಗ್ ಅನ್ನು ಸಂಸ್ಥೆಯು 'ಬಿಬಿಬಿ–'ನಲ್ಲಿಯೇ ಇರಿಸಿದೆ.

ಪ್ರಸಕ್ತ ಹಣಕಾಸು ವರ್ಷಕ್ಕೆ ದೇಶದ ಆರ್ಥಿಕ ಬೆಳವಣಿಗೆಯ ಅಂದಾಜನ್ನು ಸಂಸ್ಥೆಯು ಶೇ 7.8ಕ್ಕೆ ತಗ್ಗಿಸಿದೆ. ಈ ಮೊದಲು ಇದು ಶೇ 8.5ರಷ್ಟು ಆಗಿತ್ತು.

4.60 ಲಕ್ಷ ಟನ್ ತಾಳೆ ಎಣ್ಣೆ ರಫ್ತಿಗೆ ಅನುಮತಿ

ಜಕಾರ್ತ (ರಾಯಿಟರ್ಸ್): ಇಂಡೊನೇಷ್ಯಾ ಸರ್ಕಾರವು ಜೂನ್ 9ರವರೆಗೆ 4.60 ಲಕ್ಷ ಟನ್ ತಾಳೆ ಎಣ್ಣೆ ರಫ್ತು ಮಾಡಲು ಅನುಮತಿ ನೀಡಿದೆ ಎಂದು ಸರ್ಕಾರದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಭಾನುವಾರದ (ಜೂನ್ 5) ವೇಳೆಗೆ ರಫ್ತಿಗೆ ಅನುಮತಿ ನೀಡಿದ್ದ ತಾಳೆ ಎಣ್ಣೆ ಪ್ರಮಾಣವು 3.02 ಲಕ್ಷ ಟನ್ ಆಗಿತ್ತು.


ಆರ್‌ಬಿಐನಿಂದ ರೆಪೊ ದರ ಹೆಚ್ಚಳ, ವಿದೇಶಿ ಬಂಡವಾಳ ಹೊರಹರಿವಿನ ಪರಿಣಾಮ

ಹಣದುಬ್ಬರ ಭೀತಿ, ಕುಸಿದ ಷೇರುಪೇಟೆ

ಮುಂಬೈ (ಪಿಟಿಐ): ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಹೆಚ್ಚಳವಾದ ಪರಿಣಾಮವಾಗಿ, ಹಣದುಬ್ಬರ ಇನ್ನಷ್ಟು ಜಾಸ್ತಿ ಆಗುವ ಭೀತಿ ಎದುರಾಗಿದೆ. ಇದರಿಂದಾಗಿ ಹೂಡಿಕೆದಾರರು ಸುರಕ್ಷಿತ ಹೂಡಿಕೆ ಆಯ್ಕೆಗಳತ್ತ ಮುಖ ಮಾಡಿದರು. ಇದು ದೇಶದ ಷೇರುಪೇಟೆಗಳು ಶುಕ್ರವಾರ ಕುಸಿಯಲು ಕಾರಣವಾಯಿತು.

ಅಲ್ಲದೆ, ವಿದೇಶಿ ಬಂಡವಾಳ ಹೂಡಿಕೆದಾರರು ಬಂಡವಾಳ ಹಿಂತೆಗೆತ ಮುಂದುವರಿಸಿರುವುದು ಹಾಗೂ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಇನ್ನಷ್ಟು ಕುಸಿದಿರುವುದು ಕೂಡ ಸೂಚ್ಯಂಕಗಳ ಇಳಿಕೆಗೆ ಕಾರಣವಾದವು ಎಂದು ವರ್ತಕರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 1,016 ಅಂಶ ಕುಸಿಯಿತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 276 ಅಂಶ ಇಳಿಕೆ ಕಂಡಿತು. ಶುಕ್ರವಾರದ ವಹಿವಾಟಿನಲ್ಲಿ ಹೂಡಿಕೆದಾರರು ಒಟ್ಟು ₹ 3.11 ಲಕ್ಷ ಕೋಟಿ ಕಳೆದುಕೊಂಡರು. ಬಿಎಸ್‌ಇಯಲ್ಲಿ ನೋಂದಾಯಿತ ಆಗಿರುವ ಕಂಪನಿಗಳ ಬಂಡವಾಳ



ಮೌಲ್ಯವು ₹ 2.51 ಲಕ್ಷಕ್ಕೆ ಇಳಿದಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 0.45ರಷ್ಟು ಜಾಸ್ತಿಯಾಗಿ ಪ್ರತಿ ಬ್ಯಾರೆಲ್‌ಗೆ 123.62 ಡಾಲರ್‌ಗೆ ತಲುಪಿದೆ.

ಇಡೀ ವಾರದ ಅವಧಿಯಲ್ಲಿ ಸೆನ್ಸೆಕ್ಸ್ 1,465 ಅಂಶ, ನಿಫ್ಟಿ 382 ಅಂಶ ಇಳಿಕೆ ದಾಖಲಿಸಿವೆ. 'ಹೂಡಿಕೆದಾರರು ಅಮೆರಿಕದ ಫೆಡರಲ್ ರಿಸರ್ವ್ ಕೈಗೊಳ್ಳುವ ತೀರ್ಮಾನದ ಕಡೆ ಗಮನ ಇರಿಸಿದ್ದಾರೆ. ಅದು ಬಡ್ಡಿ ದರವನ್ನು ಶೇ 0.50ರಷ್ಟು ಜಾಸ್ತಿ ಮಾಡುವ ನಿರೀಕ್ಷೆ ಇದೆ' ಎಂದು ಎಮ್‌ಕೆ ವೆಲ್ತ್ ಮ್ಯಾನೇಜ್‌ಮೆಂಟ್ ಕಂಪನಿಯ ಸಂಶೋಧನಾ ಮುಖ್ಯಸ್ಥ ಜೋಸೆಫ್ ಥಾಮಸ್ ಹೇಳಿದ್ದಾರೆ.

ಆರ್‌ಬಿಐ ರೆಪೊ ದರ ಜಾಸ್ತಿ ಮಾಡಿರುವುದು ಹಾಗೂ ವಿದೇಶಿ ಹೂಡಿಕೆದಾರರು ಹಣ ಹಿಂದಕ್ಕೆ ಪಡೆಯುತ್ತಿರುವುದು ಮುಂದಿನ ವಾರಗಳಲ್ಲಿ ಷೇರು ಮಾರುಕಟ್ಟೆಗಳ ಮೇಲೆ ನಕಾರಾತ್ಮಕ ಪರಿಣಾಮ ಉಂಟುಮಾಡುವ ಸಾಧ್ಯತೆ ಇದೆ ಎಂದು ಅವರು ಹೇಳಿದ್ದಾರೆ.

ಮತ್ತಷ್ಟು ಕುಸಿದ ರೂಪಾಯಿ ಮೌಲ್ಯ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಶುಕ್ರವಾರ 19 ಪೈಸೆ ಕುಸಿದಿದೆ. ರೂಪಾಯಿ ಮೌಲ್ಯವು ಸಾರ್ವಕಾಲಿಕ ಕನಿಷ್ಠ ಮಟ್ಟವಾದ 77.93ಕ್ಕೆ ತಲುಪಿದೆ.

ಕಚ್ಚಾ ತೈಲದ ಬೆಲೆ ಏರಿಕೆ, ವಿದೇಶಿ ಬಂಡವಾಳದ ನಿರಂತರ ಹೊರಹರಿವು ಮೌಲ್ಯ ಕುಸಿತಕ್ಕೆ ಪ್ರಮುಖ ಕಾರಣಗಳು. 'ರೂಪಾಯಿ ಮೌಲ್ಯವು 78.50ರ ಮಟ್ಟ ತಲುಪುವ ಸಾಧ್ಯತೆ ಇದೆ' ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್‌ನ ವಿಶ್ಲೇಷಕ ಗೌರಂಗ್ ಸೋಮಯ್ಯ ಹೇಳಿದ್ದಾರೆ.

ದಶಕದ ಗರಿಷ್ಠ ಮಟ್ಟಕ್ಕೆ ಕಚ್ಚಾ ತೈಲ ಬೆಲೆ



ನವದೆಹಲಿ: ಭಾರತಕ್ಕೆ ಪೂರೈಕೆ ಆಗುವ ಕಚ್ಚಾ ತೈಲದ ಬೆಲೆಯು ಒಂದು ದಶಕದ ಗರಿಷ್ಠ ಮಟ್ಟ ತಲುಪಿದೆ. ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 121 ಅಮೆರಿಕನ್ ಡಾಲರ್ ಆಗಿದೆ. ಆದರೆ, ದೇಶಿ ಮಾರುಕಟ್ಟೆಯಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಕೆ ಆಗಿಲ್ಲ.

ಕಚ್ಚಾ ತೈಲದ ಬೆಲೆಯು ಗುರುವಾರ ಬ್ಯಾರೆಲ್‌ಗೆ 121.28 ಡಾಲರ್ ಆಗಿದ್ದು, 2012ರ ಫೆಬ್ರುವರಿ, ಮಾರ್ಚ್ ತಿಂಗಳಿನಲ್ಲಿಯೂ ಕಚ್ಚಾ ತೈಲದ ಬೆಲೆಯು ಇದೇ ಮಟ್ಟದಲ್ಲಿ ಇತ್ತು ಎಂದು ಕೇಂದ್ರ ಸರ್ಕಾರದ ಪೆಟ್ರೋಲಿಯಂ ಯೋಜನೆ ಮತ್ತು ವಿಶ್ಲೇಷಣೆ ಘಟಕದ (ಪಿಪಿಎಸಿ) ಅಂಕಿ–ಅಂಶಗಳು ಹೇಳಿವೆ.

ರಷ್ಯಾ ದೇಶವು ಉಕ್ರೇನ್ ಮೇಲೆ ಆಕ್ರಮಣ ನಡೆಸಿದ ನಂತರದಲ್ಲಿ, ಫೆಬ್ರುವರಿ 25ರಿಂದ ಮಾರ್ಚ್ 29ರವರೆಗಿನ ಅವಧಿಯಲ್ಲಿ ಭಾರತಕ್ಕೆ ಪೂರೈಕೆಯಾಗುವ ಕಚ್ಚಾ ತೈಲದ ಬೆಲೆಯು ಬ್ಯಾರೆಲ್‌ಗೆ ಸರಾಸರಿ 111.86 ಡಾಲರ್ ಆಗಿತ್ತು ಎಂದು ಪಿಪಿಎಸಿ ಹೇಳಿದೆ. ಮಾರ್ಚ್ 30ರಿಂದ ಏಪ್ರಿಲ್ 27ರವರೆಗೆ ಅದರ ಸರಾಸರಿ ಬೆಲೆಯು 103.44 ಡಾಲರ್ ಆಗಿತ್ತು.

ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳಾದ ಐಒಸಿ, ಬಿಪಿಸಿಎಲ್ ಮತ್ತು ಎಚ್‌ಪಿಸಿಎಲ್ ನಿಯಮದ ಅನ್ವಯ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯನ್ನು ಪ್ರತಿದಿನವೂ ಪರಿಷ್ಕರಿಸಬೇಕು. ಆದರೆ, ಕಳೆದ ವರ್ಷದ ನವೆಂಬರ್‌ನಿಂದ ಈ ಕಂಪನಿಗಳು ಬೆಲೆಯ ಮೇಲೆ ನಿಯಂತ್ರಣ ಹೇರಿವೆ.

ಸುದ್ದಿ 2 ನಿಮಿಷ

ಎಲ್‌ಐಸಿ ಷೇರು ಮೌಲ್ಯ ಇಳಿಕೆ: ಕೇಂದ್ರ ಸರ್ಕಾರದ ಕಳವಳ

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಷೇರು ಮೌಲ್ಯದಲ್ಲಿ ಆಗಿರುವ 'ತಾತ್ಕಾಲಿಕ' ಇಳಿಕೆ ಬಗ್ಗೆ ಕೇಂದ್ರ ಸರ್ಕಾರದ ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆಯು ಕಳವಳ ವ್ಯಕ್ತಪಡಿಸಿದೆ.

ಎಲ್‌ಐಸಿಯು ಈ ಬಗ್ಗೆ ಗಮನ ಹರಿಸಲಿದೆ, ತನ್ನ ಷೇರುದಾರರ ಹೂಡಿಕೆಯ ಮೌಲ್ಯ ಹೆಚ್ಚಿಸಲಿದೆ ಎಂದು ಇಲಾಖೆಯ ಕಾರ್ಯದರ್ಶಿ ತುಹಿನ್ ಕಾಂತ ಪಾಂಡೆ ಹೇಳಿದ್ದಾರೆ.

ಎಲ್‌ಐಸಿ ಷೇರುಗಳು ಮೇ 17ರಿಂದ ಷೇರುಪೇಟೆಯಲ್ಲಿ ವಹಿವಾಟು ನಡೆಸುತ್ತಿವೆ. ಷೇರುಪೇಟೆಯಲ್ಲಿ ವಹಿವಾಟು ಆರಂಭಿಸಿದಾಗ ಪ್ರತಿ ಷೇರಿಗೆ ಬೆಲೆ ₹ 872 ಆಗಿತ್ತು. ಕೇಂದ್ರ ಸರ್ಕಾರವು ಪ್ರತಿ ಷೇರನ್ನು ₹ 949ರಂತೆ ಮಾರಾಟ ಮಾಡಿದೆ. ಪೇಟೆಯಲ್ಲಿ ನೋಂದಾಯಿತ ಆದ ನಂತರದಲ್ಲಿ ಎಲ್‌ಐಸಿ ಷೇರು ಮೌಲ್ಯವು ₹ 708.70ರವರೆಗೂ ಕುಸಿದಿದೆ.

'ಎಲ್‌ಐಸಿಯನ್ನು ಅರ್ಥ ಮಾಡಿಕೊಳ್ಳಲು ಜನರಿಗೆ ಸಮಯ ಬೇಕು' ಎಂದೂ ಪಾಂಡೆ ಹೇಳಿದ್ದಾರೆ. ಶುಕ್ರವಾರದ ಅಂತ್ಯಕ್ಕೆ ಎಲ್‌ಐಸಿ ಷೇರುಮೌಲ್ಯ ಮುಂಬೈ ಷೇರುಪೇಟೆಯಲ್ಲಿ ₹ 709.70 ಆಗಿತ್ತು.

8 ತಿಂಗಳ ಗರಿಷ್ಠ ಮಟ್ಟಕ್ಕೆ ಕೈಗಾರಿಕಾ ಉತ್ಪಾದನೆ

ನವದೆಹಲಿ (ಪಿಟಿಐ): ದೇಶದ ಕೈಗಾರಿಕಾ ಉತ್ಪಾದನೆಯು (ಐಐಪಿ) ಏಪ್ರಿಲ್‌ನಲ್ಲಿ ಎಂಟು ತಿಂಗಳ ಗರಿಷ್ಠ ಮಟ್ಟವಾದ ಶೇಕಡ 7.1ಕ್ಕೆ ಏರಿಕೆ ಆಗಿದೆ.

ವಿದ್ಯುತ್ ಮತ್ತು ಗಣಿ ವಲಯಗಳ ಉತ್ತಮ ಬೆಳವಣಿಗೆಯಿಂದ ಈ ಪ್ರಮಾಣದ ಪ್ರಗತಿ ಸಾಧ್ಯವಾಗಿದೆ. ಈ ಹಿಂದೆ 2021ರ ಆಗಸ್ಟ್‌ನಲ್ಲಿ ಐಐಪಿ ಶೇ 13ರಷ್ಟು ಗರಿಷ್ಠ ಮಟ್ಟದ ಬೆಳವಣಿಗೆ ಕಂಡಿತ್ತು.

ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಬಿಡುಗಡೆ ಮಾಡಿರುವ ಮಾಹಿತಿಯ ಪ್ರಕಾರ, ತಯಾರಿಕಾ ವಲಯವು ಏಪ್ರಿಲ್‌ನಲ್ಲಿ ಶೇ 6.3ರಷ್ಟು ಬೆಳವಣಿಗೆ ಕಂಡಿದೆ. ವಿದ್ಯುತ್ ಮತ್ತು ಗಣಿ ವಲಯಗಳು ಕ್ರಮವಾಗಿ ಶೇ 11.8 ಮತ್ತು ಶೇ 7.8ರಷ್ಟು ಬೆಳವಣಿಗೆ ಕಂಡಿವೆ.

ಬಂಡವಾಳ ಸರಕುಗಳ ವಲಯವು ಶೇ 14.7ರಷ್ಟು ಹಾಗೂ ಗ್ರಾಹಕ ಬಳಕೆ ವಸ್ತುಗಳ ವಲಯವು ಶೇ 8.5ರಷ್ಟು ಬೆಳವಣಿಗೆ ಸಾಧಿಸಿವೆ ಎಂದು ಎನ್‌ಎಸ್‌ಒ ಮಾಹಿತಿ ನಿಡಿದೆ.

'ಏಪ್ರಿಲ್‌ನ ಬೆಳವಣಿಗೆಯು ಎಂಟು ತಿಂಗಳ ಗರಿಷ್ಠ ಮಟ್ಟದಲ್ಲಿ ಇದ್ದರೂ ನಾವು ನಿರೀಕ್ಷೆ ಮಾಡಿದ್ದ ಶೇ 9.2ಕ್ಕಿಂತಲೂ ಕಡಿಮೆ ಇದೆ. ಗಣಿ ವಲಯದ ಬೆಳವಣಿಗೆ ನಿರೀಕ್ಷೆಗಿಂತಲೂ ಕಡಿಮೆ ಆಗಿರುವುದೇ ಇದಕ್ಕೆ ಕಾರಣ' ಎಂದು ಐಸಿಆರ್‌ಎನ ಆರ್ಥಿಕ ತಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

ಡಿಐಪಿಎಎಂ ಕಾರ್ಯಕ್ರಮದಲ್ಲಿ ಸಚಿವೆ ನಿರ್ಮಲಾ ಹೇಳಿಕೆ

ದಕ್ಷತೆ ಹೆಚ್ಚಿಸಲು ಷೇರುವಿಕ್ರಯ: ನಿರ್ಮಲಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರೋದ್ಯಮಗಳನ್ನು ಮುಚ್ಚುವುದು ಷೇರು ವಿಕ್ರಯ ಕಾರ್ಯಕ್ರಮದ ಉದ್ದೇಶ ಅಲ್ಲ. ಅವುಗಳ ಕಾರ್ಯದಕ್ಷತೆ ಹೆಚ್ಚಿಸುವ ಮೂಲಕ ಆರ್ಥಿಕತೆಗೆ ಕೊಡುಗೆ ನೀಡುವಂತೆ ಮಾಡಲು ಷೇರು ವಿಕ್ರಯ ನಡೆಸಲಾಗುತ್ತಿದೆ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಶುಕ್ರವಾರ ತಿಳಿಸಿದರು.

ಸ್ವತಂತ್ರ ಭಾರತದ 75ನೆಯ ವರ್ಷಾಚರಣೆಯ ಅಂಗವಾಗಿ ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆಯು (ಡಿಐಪಿಎಎಂ) ನಗರದಲ್ಲಿ ಆಯೋಜಿಸಿದ್ದ 'ಮಾರುಕಟ್ಟೆ ಮೂಲಕ ಸಂಪತ್ತಿನ ಸೃಷ್ಟಿ' ಕುರಿತು ಅವರು ಮಾತನಾಡಿದರು. ಸರ್ಕಾರಿ ವಲಯದ ಕಂಪನಿಗಳಲ್ಲಿ ಖಾಸಗಿ ವಲಯದ ಹೊಸ ಆಲೋಚನೆಗಳು ಮತ್ತು ಕಾರ್ಯದಕ್ಷತೆಯ ಅಗತ್ಯ ಇದೆ. ಸರ್ಕಾರಿ–ಖಾಸಗಿ ಸಹಭಾಗಿತ್ವದ ಕಂಪನಿಗಳು ದೇಶದ ಒಳಿತಿಗಾಗಿ ಕೆಲಸ ಮಾಡಬಲ್ಲವು ಎಂದು ಅವರು ಅಭಿಪ್ರಾಯಪಟ್ಟರು.

ಬಾಂಡ್ ಮಾರುಕಟ್ಟೆಯನ್ನು ವಿಸ್ತರಿಸುವ ನಿಟ್ಟಿನಲ್ಲಿಯೂ ಇಲಾಖೆಯ ಹೆಚ್ಚಿನ ಗಮನ ಹರಿಸುತ್ತಿದೆ ಎಂದರು. 'ಕೇಂದ್ರೋದ್ಯಮಗಳ ಭಾರತ್ ಬಾಂಡ್ ಇಟಿಎಫ್ ಇದಕ್ಕೆ ಉತ್ತಮ ಉದಾಹರಣೆ. ಮಾರುಕಟ್ಟೆಯಲ್ಲಿ ಇರುವ ಒಟ್ಟಾರೆ ಇಟಿಎಫ್‌ಗಳಲ್ಲಿ ಭಾರತ್ ಬಾಂಡ್ ಇಟಿಎಫ್ ಪಾಲು ಶೇ 84ರಷ್ಟು ಇದೆ. ಇದರ ನಿರ್ವಹಣಾ ಸಂಪತ್ತು ಮೌಲ್ಯ ₹ 53 ಸಾವಿರ ಕೋಟಿಗೂ ಹೆಚ್ಚಿಗೆ ಇದೆ' ಎಂದು ನಿರ್ಮಲಾ ಮಾಹಿತಿ ನೀಡಿದರು.

'ಬಂಡವಾಳ ಮಾರುಕಟ್ಟೆಗೆ ಜನರು ಬರದೇ ಇರಲು ಮುಖ್ಯವಾಗಿ ನಾಲ್ಕು ಕಾರಣಗಳಿವೆ. ಮಾರುಕಟ್ಟೆಯ ಬಗ್ಗೆ ತಿಳಿವಳಿಕೆ ಇಲ್ಲದಿರುವುದು ಮೊದಲ ಕಾರಣ. ಹೀಗಾಗಿಯೇ ದೇಶದಲ್ಲಿ ಶೇಕಡ 6ರಷ್ಟು ಜನ ಮಾತ್ರ ಡಿಮ್ಯಾಟ್ ಖಾತೆ ಹೊಂದಿದ್ದಾರೆ. ಇವರಲ್ಲಿ ಸಕ್ರಿಯವಾಗಿ ಹೂಡಿಕೆ ಮಾಡುತ್ತಿರುವವ ಶೇ 1ರಷ್ಟು ಮಾತ್ರ. ಎರಡನೆಯದು, ಎಫ್.ಡಿ. ತರಹದ ಸಾಂಪ್ರದಾಯಿಕ ಹೂಡಿಕೆಗಳಲ್ಲಿ ಮಾತ್ರ ಹಣ ತೊಡಗಿಸುವ ಮನೋಭಾವ. ಮೂರನೆಯದು, ಚಿನ್ನ, ಆಸ್ತಿ ಖರೀದಿಗೆ ಆದ್ಯತೆ ನೀಡುತ್ತಿರುವುದು. ನಾಲ್ಕನೆಯದು, ಮಾರುಕಟ್ಟೆಯ ಬಗ್ಗೆ ನಂಬಿಕೆ ಇಲ್ಲದಿರುವುದು' ಎಂದು ಆದಾಯ ತೆರಿಗೆ ಇಲಾಖೆಯ ಕರ್ನಾಟಕ ಮತ್ತು ಗೋವಾ ವಲಯದ ಪ್ರಧಾನ ಮುಖ್ಯ ಆಯುಕ್ತ ದಿನೇಶ್ ಚಂದ್ರ ಪಟ್ವಾರಿ ತಿಳಿಸಿದರು.

ಇ.ವಿ. ನವೋದ್ಯಮ: ರಾಜೀವ್ ವಾಗ್ದಾಳಿ

ಪುಣೆ (ಪಿಟಿಐ): ಬಜಾಜ್ ಆಟೊ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ರಾಜೀವ್ ಬಜಾಜ್ ಅವರು ವಿದ್ಯುತ್ ಚಾಲಿತ ವಾಹನ ಕ್ಷೇತ್ರದ ನವೋದ್ಯಮ ಕಂಪನಿಗಳ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಅವು ಅನುಸರಿಸುವ ವಾಹನ ತಯಾರಿಕಾ ಪ್ರಕ್ರಿಯೆಯನ್ನು ಪ್ರಶ್ನಿಸಿದ್ದಾರೆ.

ಬಜಾಜ್ ಆಟೊ ಕಂಪನಿಯ ಅಂಗಸಂಸ್ಥೆ ಚೇತಕ್ ಟೆಕ್ನಾಲಜಿ ಲಿಮಿಟೆಡ್‌ನ ಇ.ವಿ. ತಯಾರಿಕಾ ಘಟಕ ಉದ್ಘಾಟಿಸಿ ಮಾತನಾಡಿದ ಅವರು, 'ಇ.ವಿ. ತಯಾರಿಕಾ ಉದ್ಯಮದಲ್ಲಿ ಇರಬಾರದವರು ಇಲ್ಲಿ ಬರಲು ಯತ್ನಿಸುತ್ತಿರುವುದು ಏಕೆ? ಇದನ್ನು ಸರಿಪಡಿಸಬೇಕು' ಎಂದು ಹೇಳಿದ್ದಾರೆ.

ಪ್ರಯಾಣಿಕ ವಾಹನ ಸಗಟು ಮಾರಾಟ ದುಪ್ಪಟ್ಟು

ನವದೆಹಲಿ (ಪಿಟಿಐ): ಹಿಂದಿನ ವರ್ಷದ ಮೇ ತಿಂಗಳಿಗೆ ಹೋಲಿಸಿದರೆ ಪ್ರಯಾಣಿಕ ವಾಹನಗಳ ಸಗಟು ಮಾರಾಟವು ಈ ವರ್ಷದ ಮೇ ತಿಂಗಳಿನಲ್ಲಿ ಎರಡು ಪಟ್ಟು ಹೆಚ್ಚಳ ಕಂಡಿದೆ. ಹಿಂದಿನ ವರ್ಷ ಕೋವಿಡ್‌ನ ಎರಡನೆಯ ಅಲೆಯ ಕಾರಣದಿಂದಾಗಿ ಹೆಚ್ಚಿನ ಮಾರಾಟ ಆಗಿರಲಿಲ್ಲ.

ಭಾರತೀಯ ಆಟೊಮೊಬೈಲ್ ತಯಾರಕರ ಒಕ್ಕೂಟದ (ಎಸ್‌ಐಎಎಂ) ಅಂಕಿ–ಅಂಶಗಳ ಪ್ರಕಾರ, ಮೇ ತಿಂಗಳಲ್ಲಿ ಮಾರಾಟವಾಗಿರುವ ಪ್ರಯಾಣಿಕ ವಾಹನಗಳ ಸಂಖ್ಯೆ 2.51 ಲಕ್ಷ. ಇದು ಹಿಂದಿನ ವರ್ಷದ ಮೇನಲ್ಲಿ 88 ಸಾವಿರ ಆಗಿತ್ತು.

'ಈ ವರ್ಷದ ಮೇ ತಿಂಗಳಲ್ಲಿ ದ್ವಿಚಕ್ರ ಹಾಗೂ ತ್ರಿಚಕ್ರ ವಾಹನಗಳ ಮಾರಾಟವು

ವಾಹನ ಮಾರಾಟ ಪ್ರಮಾಣ

	ಮೇ 2021	ಮೇ 2022
ದ್ವಿಚಕ್ರ ವಾಹನ	3.54 ಲಕ್ಷ	12.53 ಲಕ್ಷ
ತ್ರಿಚಕ್ರ ವಾಹನ	1,262	28,542
ಪ್ರಯಾಣಿಕ ವಾಹನ	88 ಸಾವಿರ	2.51 ಲಕ್ಷ

ಕಡಿಮೆ ಇದೆ' ಎಂದು ಎಸ್‌ಐಎಎಂ ಮಹಾನಿರ್ದೇಶಕ ರಾಜೇಶ್ ಮೆನನ್ ಹೇಳಿದ್ದಾರೆ. ಪ್ರಯಾಣಿಕ ವಾಹನಗಳ ಮಾರಾಟ ಪ್ರಮಾಣವು 2018ರ ಮಟ್ಟಕ್ಕಿಂತ ಕಡಿಮೆ ಇದೆ.

'ರೆಪೊ ದರವನ್ನು ಆರ್‌ಬಿಐ ಎರಡು ಬಾರಿ ಜಾಸ್ತಿ ಮಾಡಿರುವುದು ಹಾಗೂ ಥರ್ಡ್ ಪಾರ್ಟಿ ವಿಮೆ ಮೊತ್ತ ಜಾಸ್ತಿ ಆಗಿರುವುದು ವಾಹನಗಳ ಬೇಡಿಕೆ ಮೇಲೆ ಪರಿಣಾಮ ಉಂಟುಮಾಡಬಹುದು' ಎಂದು ಮೆನನ್ ಆತಂಕ ವ್ಯಕ್ತಪಡಿಸಿದ್ದಾರೆ.

ದ್ವಿಚಕ್ರ ವಾಹನಗಳ ಮಾರಾಟವು 9 ವರ್ಷಗಳ ಹಿಂದಿನ ಮಟ್ಟಕ್ಕಿಂತ ಕಡಿಮೆ ಇದೆ. ತ್ರಿಚಕ್ರ ವಾಹನಗಳ ಮಾರಾಟವು 14 ವರ್ಷಗಳ ಹಿಂದಿನ ಮಟ್ಟಕ್ಕಿಂತ ಕಡಿಮೆ ಇದೆ ಎಂದು ಮೆನನ್ ಹೇಳಿದ್ದಾರೆ.

ರಾಜ್ಯದಾದ್ಯಂತ ಕಟ್ಟೆಚ್ಚರಕ್ಕೆ ಸಿಎಂ ಸೂಚನೆ

ಬೆಂಗಳೂರು: ಪ್ರವಾದಿ ಮಹಮ್ಮದ್ ಕುರಿತು ಬಿಜೆಪಿ ನಾಯಕಿ ನೂಪುರ್ ಶರ್ಮಾ ನೀಡಿರುವ ಹೇಳಿಕೆ ವಿರೋಧಿಸಿ ದೇಶದ ಹಲವೆಡೆ ಪ್ರತಿಭಟನೆ ನಡೆಯುತ್ತಿರುವುದರಿಂದ, ರಾಜ್ಯದಲ್ಲಿ ಕಟ್ಟೆಚ್ಚರ ವಹಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದ್ದಾರೆ.

ಹಿರಿಯ ಪೊಲೀಸ್ ಅಧಿಕಾರಿಗಳನ್ನು ಕರೆಯಿಸಿ ಶುಕ್ರವಾರ ಮಾತುಕತೆ ನಡೆಸಿದರು.

ಹಿಂದೂ ಸಂಘಟನೆಗಳ ಆಕ್ರೋಶ: ಬೆಳಗಾವಿಯಲ್ಲಿ ಬಿಗುವಿನ ವಾತಾವರಣ

ರಸ್ತೆಯಲ್ಲಿ ನೂಪುರ್ ಪ್ರತಿಕೃತಿ ನೇಣಿಗೆ

ಪ್ರಜಾವಾಣಿ ವಾರ್ತೆ

ಬೆಳಗಾವಿ/ಬಳ್ಳಾರಿ/ಮೈಸೂರು: ಪ್ರವಾದಿ ಮಹಮ್ಮದ್ ಅವರ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡಿದ ಬಿಜೆಪಿಯ ಮಾಜಿ ವಕ್ತಾರೆ ನೂಪುರ್ ಶರ್ಮಾ ಅವರ ಪ್ರತಿಕೃತಿಯನ್ನು, ಬೆಳಗಾವಿಯಲ್ಲಿ ಕೆಲವರು ನಡುರಸ್ತೆಯಲ್ಲಿ ಗಲ್ಲಿಗೇರಿಸಿದಂತೆ ನೇತುಹಾಕಿ ಪ್ರತಿಭಟಿಸಿದರು. ಮೈಸೂರು, ಮಂಡ್ಯ, ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪ್ರತಿಭಟನೆಗಳು ನಡೆದಿವೆ.

ಬೆಳಗಾವಿ ನಗರದ ಫೋರ್ಟ್ ರಸ್ತೆಯಲ್ಲಿ ಗುರುವಾರ ರಾತ್ರಿ ರಸ್ತೆಗೆ ಅಡ್ಡಲಾಗಿ ಹಗ್ಗ ಕಟ್ಟಿ ನೂಪುರ್ ಶರ್ಮಾ ಅವರ ಭಾವಚಿತ್ರದ ಸಮೇತ ಅವರ ಪ್ರತಿಕೃತಿಯನ್ನು ನೇತುಹಾಕಲಾಗಿತ್ತು. ಶುಕ್ರವಾರ ಬೆಳಿಗ್ಗೆ ಇದನ್ನು ಕಂಡು ಶ್ರೀರಾಮ ಸೇನೆ, ಕೆಲ ಪಾಲಿಕೆ ಸದಸ್ಯರು ಹಾಗೂ ವಿವಿಧ ಹಿಂದೂ ಸಂಘಟನೆಗಳ ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು. ಸ್ಥಳದಲ್ಲಿ ಹೆಚ್ಚು ಜನ ಜಮಾಯಿಸಿದ್ದರಿಂದ ಕೆಲಕಾಲ ಬಿಗುವಿನ ವಾತಾವರಣ ನಿರ್ಮಾಣವಾಯಿತು.

'ಇದು ಪ್ರಜಾಪ್ರಭುತ್ವ ದೇಶ, ತಾಲಿಬಾನ್ ಅಲ್ಲ. ಇಲ್ಲಿ ನಡುರಸ್ತೆಯಲ್ಲಿ ಗಲ್ಲಿಗೇರಿಸುವ ಪದ್ಧತಿ ಇಲ್ಲ. ಗಲ್ಲಿಗೇರಿಸುವ ಶಿಕ್ಷೆ ನೀಡುವ ಅಧಿಕಾರ ಇರುವುದು ನ್ಯಾಯಾಂಗಕ್ಕೆ ಮಾತ್ರ. ಅದರ ಅಣಕು ಮಾಡುವುದು ಸರಿಯಲ್ಲ. ನೂಪುರ್ ಶರ್ಮಾ ಅವರ ಹೇಳಿಕೆಯಲ್ಲಿ ತಪ್ಪಿದ್ದರೆ ಕಾನೂನು ಪ್ರಕಾರ ಕ್ರಮ ವಹಿಸಬೇಕು. ಪ್ರಕರಣ ದಾಖಲಿಸಿ



ಬೆಳಗಾವಿಯಲ್ಲಿ ನೂಪುರ್ ಶರ್ಮಾ ಅವರ ಪ್ರತಿಕೃತಿ ನೇತು ಹಾಕಲಾಗಿತ್ತು

ಬಂಧಿಸಬೇಕು. ಆದರೆ, ಈ ತರಹ ಗಲ್ಲಿಗೇರಿಸುವ ಮೂಲಕ ಸಮಾಜದಲ್ಲಿ ಭಯದ ವಾತಾವರಣ ಸೃಷ್ಟಿಸುವ ಹುನ್ನಾರ ನಡೆದಿದೆ' ಎಂದು ಪಾಲಿಕೆ ಸದಸ್ಯ ಶಂಕರ ಪಾಟೀಲ ಕಿಡಿಕಾರಿದರು.

'ಪೊಲೀಸರು ಈ ಪ್ರತಿಕೃತಿಯನ್ನು ತಕ್ಷಣ ತೆರವುಗೊಳಿಸಬೇಕು. ಇಲ್ಲದಿದ್ದರೆ ನಾವೇ ಅದನ್ನು ತೆರವು ಮಾಡಬೇಕಾಗುತ್ತದೆ. ಹೊಸ ವಿವಾದಕ್ಕೆ ಅವಕಾಶ ಕೊಡಬಾರದು' ಎಂದು ಕೆಲ ಮುಖಂಡರು ಆಗ್ರಹಿಸಿದರು. ನಂತರ ಸ್ಥಳಕ್ಕೆ ಧಾವಿಸಿದ ಪೊಲೀಸರು ಪ್ರತಿಕೃತಿ ತೆರವು ಮಾಡಿ, ಜನರನ್ನು ಚದುರಿಸಿದರು.

ಜಿಲ್ಲಾಧಿಕಾರಿಗೆ ಮನವಿ: ಬಳ್ಳಾರಿಯಲ್ಲಿ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ ನೇತೃತ್ವದಲ್ಲಿ



ನೂಪುರ್ ಶರ್ಮಾ, ನವೀನ್ ಕುಮಾರ್ ಜಿಂದಾಲ್ ಬಂಧನಕ್ಕೆ ಒತ್ತಾಯಿಸಿ ಶುಕ್ರವಾರ ಕಲಬುರಗಿಯಲ್ಲಿ ರಜಾ ಅಕಾಡೆಮಿ ನೇತೃತ್ವದಲ್ಲಿ ಮುಸ್ಲಿಮರು ಪ್ರತಿಭಟನೆ ನಡೆಸಿದರು

ಶುಕ್ರವಾರ ಮುಸ್ಲಿಮರು ಭಾರಿ ಪ್ರತಿಭಟನೆ ನಡೆಸಿದರು. ಮೆರವಣಿಗೆಯಲ್ಲಿ ನೂರಾರು ಮುಸ್ಲಿಮರು ಪಾಲ್ಗೊಂಡರು. ಆನಂತರ ಮೆರವಣಿಗೆಕಾರರು ಜಿಲ್ಲಾಧಿಕಾರಿ ಕಚೇರಿಗೆ ಬಂದು ಹೆಚ್ಚುವರಿ ಜಿಲ್ಲಾಧಿಕಾರಿ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಎಸ್‌ಡಿಪಿಐ ನೇತೃತ್ವದಲ್ಲಿ ಪ್ರತಿಭಟನೆ: ಮೈಸೂರಿನಲ್ಲಿ ಎಸ್‌ಡಿಪಿಐ ನೇತೃತ್ವದಲ್ಲಿ ಮುಸ್ಲಿಮರು ಮೀಲಾದ್ ಬಾಗ್ ಬಳಿ ಪ್ರತಿಭಟನೆ ನಡೆಸಿದರು. ಮಂಡ್ಯ ನಗರದ ಸರ್‌ಎಂ.ವಿ. ಪ್ರತಿಮೆ ಎದುರು ಎಸ್‌ಡಿಪಿಐ ಕಾರ್ಯಕರ್ತರು ಬಿಜೆಪಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಹಾಸನ ನಗರದ ಚಿಕ್ಕನಾಲು ಟಿಪ್ಪು ವೃತ್ತದ ಬಳಿ ನೂರಾರು ಮುಸ್ಲಿಮರು ನೂಪುರ್ ಶರ್ಮಾ ಹಾಗೂ ನವೀನ್ ಜಿಂದಾಲ್ ಫೋಟೊ ಸುಟ್ಟು ಆಕ್ರೋಶ ವ್ಯಕ್ತಪಡಿಸಿದರು. ಕೊಡಗು ಜಿಲ್ಲೆಯ ವಿರಾಜಪೇಟೆ ಹಾಗೂ ಚಾಮರಾಜನಗರದಲ್ಲಿ ಮುಸ್ಲಿಮರು ಬಿಜೆಪಿ ವಿರುದ್ಧ ಘೋಷಣೆ ಕೂಗಿದರು.

ಬಿಜೆಪಿ ನಾಯಕರ ಬಂಧನಕ್ಕೆ ಒತ್ತಾಯ (ಚಿತ್ರದುರ್ಗ ವರದಿ): ನೂಪುರ್ ಶರ್ಮಾ ಹಾಗೂ ನವೀನ್ ಜಿಂದಾಲ್ ಅವರನ್ನು ಬಂಧಿಸುವಂತೆ ಆಗ್ರಹಿಸಿ ಎಸ್‌ಡಿಪಿಐ ನೇತೃತ್ವದಲ್ಲಿ ಚಿತ್ರದುರ್ಗದ ಗಾಂಧಿ ವೃತ್ತದ ಬಳಿ ಪ್ರತಿಭಟನೆ ನಡೆಸಿದರು. ಶಿವಮೊಗ್ಗದಲ್ಲಿ ಮರ್ಕಾಜ್ಹಿ ಸುನ್ನಿ ಜಮೈತುಲ್ ಉಲ್ಮ ಸಮಿತಿ ಹಾಗೂ ಸುನ್ನಿ ಜಾಮಿಯಾ ಮಸ್ಜಿದ್ ಕಮಿಟಿ ವತಿಯಿಂದ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-520
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	470
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54500
ಚಿತ್ರದುರ್ಗ	
ಆಪಿ	48119-48559
ಬೆಟ್ಟೆ	38029-38479
ಕೆಂಪುಗೋಟು	28209-28610
ರಾಶಿ	47639-48069
ಕುಮಟ	
ಚಿಪ್ಪು	24509-28999
ಕೋಕ	18019-28189
ಹಳೆಚಾಲಿ	42019-46099
ಹೊಸಚಾಲಿ	33509-37029
ಸಿದ್ದಾಪುರ	
ಬಿಳಿಗೋಟು	23699-30899
ಚಾಲಿ	34399-37709
ಕೋಕ	20099-29199
ಕೆಂಪುಗೋಟು	28012-28499
ರಾಶಿ	44099-48799
ತಟ್ಟಿಬೆಟ್ಟೆ	37099-44599
ಶಿರಸಿ	
ಬೆಟ್ಟೆ	34518-46808
ಬಿಳಿಗೋಟು	21299-31828
ಚಾಲಿ	35018-38508
ರಾಶಿ	44700-48499
ಯಲ್ಲಾಪುರ	
ಬಿಳಿಗೋಟು	26899-31090
ಚಾಲಿ	33070-37810
ಕೋಕ	21510-29000
ಕೆಂಪುಗೋಟು	29370-34087
ರಾಶಿ	46565-52611
ತಟ್ಟಿಬೆಟ್ಟೆ	37499-45079
ಶಿವಮೊಗ್ಗ	
ಬೆಟ್ಟೆ	50029-52299
ಗೊರಬಲು	17000-37158
ರಾಶಿ	43899-49109
ಸರಕು	58619-78996

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16300	16250	16400	234.65 ಸೆಂಟ್ಸ್
ಎಸಿ	8960	8600	9025	
ಆರ್‌ಪಿ	9750	10000	10075	ಲಂಡನ್
ಆರ್‌ಸಿ	4800	4500	4625	2093 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

10-6-2022

ಜಾವಾ 70/80(ಹೊಸ)	10650-10700
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	10350-10400
ದಪ್ಪ ಗುಜರಾತ್(ಹೊಸ)	11150-11200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1625 (1625)
ಒಂದು ವಾರದ ಡೆಲಿವರಿ	1620 (1620)
ಸೋಯಾ ಕಚ್ಚಾ	1460 (1465)
ಪಾಮ್ ವಾರದ ಡೆಲಿವರಿ	1468 (1473)
ಸೂರ್ಯಕಾಂತಿ ಎಣ್ಣೆ ಕಚ್ಚಾ	1740 (1750)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,650 (50,900)
ಬೆಳ್ಳಿ ಕೆ.ಜಿ 60,800 (61,850)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮುಸ್ಲಿಮರ ದಿಢೀರ್ ಪ್ರತಿಭಟನೆ

ಒಂದನೇ ಪುಟದಿಂದ

ಜೂನ್ ಮೊದಲ ವಾರದಲ್ಲಿ ಹಿಂಸಾಚಾರಕ್ಕೆ ಸಾಕ್ಷಿಯಾಗಿದ್ದ ಕಾನ್ಪುರದಲ್ಲಿ ಗುರುವಾರ ರಾತ್ರಿಯಿಂದಲೇ ನಿಷೇಧಾಜ್ಞೆ ಜಾರಿ ಮಾಡಲಾಗಿತ್ತು.

ನೂಪುರ್ ಮತ್ತು ನವೀನ್ ಅವರ ವಿರುದ್ಧ ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿ ಕಾಶ್ಮೀರದ ಶ್ರೀನಗರ, ದೋದಾ, ಕಿಶ್ತವಾರ ಮತ್ತು ಭದೇರ್ವಾದಲ್ಲಿ ಪ್ರತಿಭಟನೆ ನಡೆದಿದೆ. ಪ್ರತಿಭಟನೆಯ ವೇಳೆ ಮೆರವಣಿಗೆ ನಡೆಸಲು ಪೊಲೀಸರು ಅನುಮತಿ ನಿರಾಕರಿಸಿದ್ದಾರೆ. ಇದರಿಂದ ಪ್ರತಿಭಟನಕಾರರು ಮತ್ತು ಪೊಲೀಸರ ಮಧ್ಯೆ ವಾಗ್ವಾದ ನಡೆದಿದೆ. ನಂತರ ಕಲ್ಲು ತೂರಾಟ ನಡೆದಿದೆ. ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರುವ ಸಲುವಾಗಿ ದೋದಾ ಮತ್ತು ಕಿಶ್ತವಾರದಲ್ಲಿ ಕರ್ಫ್ಯೂ ಜಾರಿಗೆ ತರಲಾಗಿದೆ. ಕಾಶ್ಮೀರ ಕಣಿವೆಯ ಹಲವೆಡೆ ಇಂಟರ್ನೆಟ್ ಸ್ಥಗಿತಗೊಳಿಸಲಾಗಿದೆ.

ಜಾರ್ಖಂಡ್‌ನ ರಾಜಧಾನಿ ರಾಂಚಿಯಲ್ಲೂ ಶುಕ್ರವಾರ ಮಧ್ಯಾಹ್ನದ ನಂತರ ಪ್ರತಿಭಟನೆ ನಡೆದಿದೆ. ನಗರದ ಪ್ರಮುಖ ಮಾರುಕಟ್ಟೆಗಳಲ್ಲಿ ಬೆಳಿಗ್ಗೆಯಿಂದಲೇ ಅಂಗಡಿಗಳನ್ನು ಬಂದ್ ಮಾಡಲಾಗಿತ್ತು. ಮಧ್ಯಾಹ್ನದ ನಂತರ ಕೆಲವರು ಬಲವಂತವಾಗಿ ಅಂಗಡಿಗಳ ಬಾಗಿಲನ್ನು ಹಾಕಿಸಲು ಯತ್ನಿಸಿದರು. ಅದನ್ನು ತಡೆಯಲು ಪೊಲೀಸರು ಮುಂದಾದಾಗ ಕಲ್ಲು ತೂರಾಟ ನಡೆದಿದೆ. ಆಗ ಪೊಲೀಸರು ಗಾಳಿಯಲ್ಲಿ ಗುಂಡು ಹಾರಿಸಿದ್ದಾರೆ. ಕೆಲವರಿಗೆ ಗಾಯಗಳಾಗಿವೆ. ನಿಷೇಧಾಜ್ಞೆ ಹೇರಲಾಗಿದೆ.

ಕೋಲ್ಕತ್ತದ ಧುಲಾಗಡ್, ಪಾಂಚ್ಲಾ ಮತ್ತು ಉಲೂಬೇರಿಯಾ ಪ್ರದೇಶಗಳಲ್ಲಿ ಪ್ರತಿಭಟನೆ ತೀವ್ರವಾಗಿತ್ತು. ಪ್ರತಿಭಟನಕಾರರು ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರವನ್ನು ತಡೆದರು. ಸಂಚಾರ ಸುಗಮಗೊಳಿಸಲು ಪೊಲೀಸರು ಮುಂದಾದಾಗ, ಪೊಲೀಸರು ಮತ್ತು ಪ್ರತಿಭಟನಕಾರರ ಮಧ್ಯೆ ಘರ್ಷಣೆ ನಡೆಯಿತು. ಪ್ರತಿಭಟನಕಾರರು ಹೆದ್ದಾರಿಯಲ್ಲಿದ್ದ ಹಲವು ವಾಹನಗಳಿಗೆ ಬೆಂಕಿ ಹಚ್ಚಿದ್ದಾರೆ. ಈ ವೇಳೆ ಕೆಲವರಿಗೆ ಗಾಯಗಳಾಗಿವೆ. ಪರಿಸ್ಥಿತಿ ಈಗ ನಿಯಂತ್ರಣದಲ್ಲಿದೆ. ದೆಹಲಿಯ ಜಾಮಾ ಮಸೀದಿ ಬಳಿ ಸೇರಿದ್ದ ಹಲವರು ದಿಢೀರ್ ಪ್ರತಿಭಟನೆ ನಡೆಸಿದ್ದಾರೆ. ಮಸೀದಿ ಸಮೀಪದ ಅಂಗಡಿಗಳ ಬಾಗಿಲನ್ನು ಹಾಕಿಸಿದ್ದಾರೆ. 'ಪ್ರತಿಭಟನೆಗೂ ನಮಗೂ ಸಂಬಂಧವಿಲ್ಲ. ಪ್ರತಿಭಟನೆ ನಡೆಸಿದವರು ಯಾರು ಎಂಬುದು ನಮಗೆ ಗೊತ್ತಿಲ್ಲ' ಎಂದು ಮಸೀದಿ ನಿರ್ವಹಣಾ ಸಮಿತಿ ಹೇಳಿದೆ.

ಉಳಿದಂತೆ ಹೈದರಾಬಾದ್, ಅಹಮದಾಬಾದ್, ಮುಂಬೈ, ಸೊಲ್ಲಾಪುರದಲ್ಲಿ ಪ್ರತಿಭಟನೆ ನಡೆದಿದೆ. ಆದರೆ ಯಾವುದೇ ಅಹಿತಕರ ಘಟನೆಗಳು ನಡೆದ ಬಗ್ಗೆ ವರದಿಯಾಗಿಲ್ಲ.

ಮಕ್ಕಳನ್ನು ಬಳಸಿಕೊಂಡರೆ ಕ್ರಮ: 'ಈ ಪ್ರತಿಭಟನೆಗಳಲ್ಲಿ ಮಕ್ಕಳನ್ನು ಬಳಸಿಕೊಂಡಿರುವ ಬಗ್ಗೆ ಮಾಹಿತಿ ದೊರೆತಿದೆ. ಅವನ್ನು ಪರಿಶೀಲಿಸುತ್ತಿದ್ದೇವೆ. ಇಂತಹ ಹಿಂಸಾತ್ಮಕ ಪ್ರತಿಭಟನೆಗೆ ಮಕ್ಕಳನ್ನು ಬಳಸಿಕೊಂಡವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು' ಎಂದು ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಹೇಳಿದೆ.

ಕಾಂಗ್ರೆಸ್‌ನಿಂದ ದೂರು

ನೂಪುರ್ ಶರ್ಮಾ ಮತ್ತು ನವೀನ್ ಜಿಂದಾಲ್ ವಿರುದ್ಧ ಅಸ್ಸಾಂನ ಗುವಾಹಟಿಯಲ್ಲಿ ಕಾಂಗ್ರೆಸ್ ದೂರು ದಾಖಲಿಸಿದೆ. ದ್ವೇಷಭಾಷಣ ಮತ್ತು ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದ ಆರೋಪದಲ್ಲಿ ಕಾಂಗ್ರೆಸ್ ದೂರು ನೀಡಿದೆ.

'ಟಿ.ವಿ.ಚರ್ಚೆ ಬಹಿಷ್ಕರಿಸಿ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಮುಸ್ಲಿಂ ಉಲೇಮಾಗಳು, ವಿದ್ವಾಂಸರು ಮತ್ತು ಚಿಂತಕರು ಸುದ್ದಿವಾಹಿನಿಗಳ ಚರ್ಚಾ ಕಾರ್ಯಕ್ರಮದಲ್ಲಿ ಭಾಗವಹಿಸಬಾರದು' ಎಂದು ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ ಆಗ್ರಹಿಸಿದೆ.

'ಸುದ್ದಿ ವಾಹಿನಿಗಳಲ್ಲಿ ನಡೆಯುವ ಇಂತಹ ಬಹುತೇಕ ಚರ್ಚಾ ಕಾರ್ಯಕ್ರಮಗಳಲ್ಲಿ ಇಸ್ಲಾಂ ಅನ್ನು ಅಪಹಾಸ್ಯ ಮಾಡಲಾಗುತ್ತದೆ. ಇಂತಹ ಚರ್ಚಾ ಕಾರ್ಯಕ್ರಮಗಳಲ್ಲಿ ಭಾಗಿಯಾಗುವುದರಿಂದ ಮುಸ್ಲಿಮರಿಗೆ ಮತ್ತು ಇಸ್ಲಾಂಗೆ ಯಾವುದೇ ರೀತಿಯ ಲಾಭವಿಲ್ಲ. ಇಂತಹ ಚರ್ಚೆಗಳು ಯಾವುದೇ ತಾರ್ಕಿಕ ಅಂತ್ಯವನ್ನು ಕಾಣುವುದಿಲ್ಲ. ಬದಲಿಗೆ ಧರ್ಮವನ್ನು ಹಳಿಯಲು ಹಾದಿ ಮಾಡಿಕೊಡಲಾಗುತ್ತದೆ' ಎಂದು ಮಂಡಳಿಯು ಹೇಳಿದೆ.

'ಸುದ್ದಿವಾಹಿನಿಗಳ ತಂತ್ರಕ್ಕೆ ಬಲಿ ಬೀಳುವ ಉಲೇಮಾಗಳು, ಮುಸ್ಲಿಂ ವಿದ್ವಾಂಸರು ಚರ್ಚೆಗೆ ಹೋಗುತ್ತಾರೆ. ಇಂತಹ ಕಾರ್ಯಕ್ರಮಗಳನ್ನು ಬಹಿಷ್ಕರಿಸಬೇಕು. ಅದರಿಂದ ಅವರ ಟಿಆರ್‌ಪಿ ಕುಸಿಯುತ್ತದೆ, ಜತೆಗೆ ಅವರ ಉದ್ದೇಶವೂ ವಿಫಲವಾಗುತ್ತದೆ' ಎಂದು ಮಂಡಳಿಯು ಹೇಳಿದೆ.



‘ಸೂಪರ್ ವುಮನ್ ಸಿಂಡ್ರೋಮ್’

ಅನುಕಂಪದ ಹೊಸ ಖಯಾಲಿ

ಕಚೇರಿಯಲ್ಲಿ ಯಶಸ್ವಿ ಉದ್ಯೋಗಸ್ಥೆ, ಮನೆಯಲ್ಲಿ ಮುದ್ದಿನ ಅಮ್ಮ, ಅಕ್ಕರೆಯ ಸೊಸೆ, ದುಡಿದು ಬರುವ ಗಂಡನ ದಣಿವು ತಣಿಸುವ ನಗುಮೊಗದ ಪತ್ನಿ, ಸಾಮಾಜಿಕ ವಲಯದಲ್ಲಿ ಪರಿಪೂರ್ಣ ಮಹಿಳೆ... ಏಕಕಾಲದಲ್ಲಿ ಅದೆಷ್ಟು ಪಾತ್ರಗಳು, ಪೋಷಾಕುಗಳು! ಇವೆಲ್ಲವನ್ನು ಕುಂದಿಲ್ಲದಂತೆ, ಎಲ್ಲರೂ ಸೈ ಎನ್ನುವಂತೆ ನಿಭಾಯಿಸುವ ನೊಗಕ್ಕೆ ಹೆಗಲು ಕೊಟ್ಟು, ‘ಸೂಪರ್ ವುಮನ್’ ಎನ್ನುವ ಕುಣಿಕೆಗೆ ಕತ್ತು ಕೊಡುವುದು ಎಷ್ಟು ದಿನ?

ಸುಶೀಲಾ ಡೋಣೂರ

ನಲವತ್ತಕ್ಕೆ ಇನ್ನೆರಡು ವರ್ಷ ಬಾಕಿ ಇದೆ. ಆಗಲೇ ಸುಮಲತಾ ಸೋತು ಸುಸ್ತಾಗಿದ್ದಾಳೆ. ಏಕೆಂದರೆ, ದಿನದ 24 ಗಂಟೆಯನ್ನೂ ಅವಳು ತನ್ನದಲ್ಲದಂತೆ ಕಳೆಯುತ್ತಾಳೆ. ತನಗೇನು ಬೇಕು, ತನಗೆ ಯಾವುದಿಷ್ಟ ಎನ್ನುವುದನ್ನೂ ಮರೆತಿದ್ದಾಳೆ. ಇನ್ನೊಬ್ಬರಿಗಾಗಿ ಬದುಕುವುದೇ ತನ್ನ ಆದ್ಯ ಕರ್ತವ್ಯ ಎಂದು ನಂಬಿದ್ದಾಳೆ ಮತ್ತು ಅದೆಲ್ಲದರಿಂದ ಉಂಟಾಗುವ ಮನೋಕ್ಲೇಶಕ್ಕೆ ಹೈರಾಣಾಗಿದ್ದಾಳೆ.

ವೈದ್ಯಕೀಯ ಭಾಷೆಯಲ್ಲಿ ಇದು ‘ಸೂಪರ್ ವುಮನ್ ಸಿಂಡ್ರೋಮ್’. ಇದೊಂದು ನವಯುಗದ ಹೊಸ ಕಾಯಿಲೆ. ಅದರಲ್ಲೂ ಕೊರೊನಾ ನಂತರದ ಧಾವಂತದ ಬದುಕಿನಲ್ಲಿ ಹೆಚ್ಚು ಹೆಚ್ಚು ಹೆಣ್ಣುಮಕ್ಕಳು ಇಂಥದ್ದೊಂದು ಹೊಸ ಸಂದಿಗ್ಧತೆಗೆ ಸಿಲುಕುತ್ತಿದ್ದಾರೆ.

ಎಲ್ಲವೂ ನಾನೇ. ಎಲ್ಲವೂ ನನ್ನಿಂದಲೇ. ನಾನಿಲ್ಲ ಎಂದರೆ ಏನೂ ಇಲ್ಲ. ಎಲ್ಲಾ ನನ್ನ ಎಣಿಕೆಯಂತೆ ನಡೆಯಬೇಕು ಎನ್ನುವ ಅತಿರೇಕದ ಭಾವನೆಯೇ ‘ಸೂಪರ್ ವುಮನ್ ಸಿಂಡ್ರೋಮ್’ ಎನ್ನುತ್ತಾರೆ ಫೋರ್ಟಿಸ್ ಆಸ್ಪತ್ರೆಯ ಆಪ್ತ ಸಲಹೆಗಾರ (ಮನೋವೈದ್ಯ) ಡಾ. ವೆಂಕಟೇಶ್ ಬಾಬು.

ಎಲ್ಲಾ ಕೆಲಸವನ್ನೂ ತಾನೊಬ್ಬಳೇ ಮಾಡಬೇಕು, ಕಚೇರಿಯಲ್ಲಿ ಭಿನ್ನವಾಗಿ ಕಾರ್ಯಕ್ಷಮತೆ ಪ್ರದರ್ಶಿಸಬೇಕು, ಗಂಡ–ಮಕ್ಕಳ ಯೋಗಕ್ಷೇಮ ನೋಡಿಕೊಳ್ಳಬೇಕು, ಹಿರಿಯರ ಕಾಳಜಿ ವಹಿಸಬೇಕು, ಮನೆಯವರಿಂದ, ಬಂಧುಗಳಿಂದ ಸೈ ಎನಿಸಿಕೊಳ್ಳಬೇಕು ಎನ್ನುವ ಅತಿನಿರೀಕ್ಷೆ ಸ್ವಾಭಾವಿಕವಂತೂ ಅಲ್ಲ. ಇದರಿಂದ ಮನೋದೈಹಿಕ ಆರೋಗ್ಯಕ್ಕೆ ಕುತ್ತು ಎನ್ನುತ್ತದೆ ಮನೋವಿಜ್ಞಾನ.

ಹೆಣ್ಣಿರಲಿ, ಗಂಡಿರಲಿ ಒಬ್ಬೊಬ್ಬರಿಗೆ ಒಂದೊಂದು ಸಾಮರ್ಥ್ಯವಿರುತ್ತದೆ. ಕೆಲವರು ಹಲವು ಕೆಲಸಗಳನ್ನು ಒಟ್ಟಿಗೇ ಮಾಡಬಲ್ಲರು, ಕೆಲವರು ಒಂದು ಸಮಯಕ್ಕೆ ಒಂದೇ ಕೆಲಸ ಮಾಡಬಲ್ಲರು. ಆದರೆ, ತಾನು ಹೆಣ್ಣು ಎನ್ನುವ ಕಾರಣಕ್ಕೆ ತನ್ನನ್ನು ತಾನು ನಿರ್ಲಕ್ಷಿಸಿ, ತನ್ನಿಂದ ಎಷ್ಟು ಕೆಲಸ ಸಾಧ್ಯವಾಗುತ್ತದೆ ಎನ್ನುವುದನ್ನೂ ಲೆಕ್ಕಿಸದೆ, ಎಲ್ಲದಕ್ಕೂ ತಾನೇ ಹೆಗಲು ಕೊಡಲು ಹೋದಾಗ ಆಕೆ ದೈಹಿಕವಾಗಿಯೂ–ಮಾನಸಿಕವಾಗಿಯೂ ದಣಿಯುತ್ತಾಳೆ. ‘ಎಲ್ಲವನ್ನೂ’, ‘ಏಕಕಾಲಕ್ಕೆ’, ‘ಪರಿಪೂರ್ಣತೆ’ಯಿಂದ ಮಾಡಲು ಹೋಗಿ ಆದ್ಯತೆಯ ಪಟ್ಟಿಯಲ್ಲಿ ತನ್ನನ್ನೇ ತಾನು ಕಟ್ಟಕಡೆಯ ಜಾಗದಲ್ಲಿಟ್ಟುಕೊಳ್ಳುತ್ತಾಳೆ. ಸೂಪರ್ ವುಮನ್ ಸಿಂಡ್ರೋಮ್‌ನ ಮೊದಲ ಅಧ್ಯಾಯವಿದು.

ಅನುಕಂಪದ ಶೂಲ...

ಅನಿವಾರ್ಯತೆಯೊ–ಆಯ್ಕೆಯೊ, ಒಟ್ಟಾರೆ ಆಕೆ ತನ್ನ ಮಿತಿಗಿಂತ–ಶಕ್ತಿಗಿಂತ ಹೆಚ್ಚು ಜವಾಬ್ದಾರಿಗಳಿಗೆ ಬೆನ್ನು ಬಾಗಿಸುತ್ತ, ತನ್ನ ಇತಿ–ಮಿತಿಗಳನ್ನು ಮರೆತು, ಶಕ್ತಿ ಮೀರಿ ಶ್ರಮಿಸುತ್ತಿದ್ದಾಳೆ, ಸವೆಯುತ್ತಾಳೆ. ಜೊತೆಗೆ ತನ್ನ ಈ ಎಲ್ಲಾ ತ್ಯಾಗಕ್ಕೆ–ಶ್ರಮಕ್ಕೆ ಪ್ರತಿಯಾಗಿ ಇತರರಿಂದ ಅನುಕಂಪ ಬಯಸುತ್ತಾಳೆ. ಈ ಘಟ್ಟ ಬಹಳ ಅಪಾಯಕಾರಿ ಎನ್ನುತ್ತಾರೆ ಮನೋವೈದ್ಯರು.

ಸಮಸ್ಯೆ ಆರಂಭವಾಗುವುದೆಲ್ಲಿ?

ಎಲ್ಲರಿಗೂ ಒಳ್ಳೆಯವಳಾಗಬೇಕು, ಎಲ್ಲರನ್ನೂ ಮೆಚ್ಚಿಸಬೇಕು, ಯಾರಿಗೂ ‘ನೋ’ ಹೇಳಲಾಗದು. ಎಲ್ಲವನ್ನೂ ನಾನೇ ಮಾಡಬೇಕು, ಎಲ್ಲಾ ಕೆಲಸಗಳೂ ಪರಿಪೂರ್ಣವಾಗಿರಬೇಕು ಎನ್ನುವ ಒತ್ತಡ ಅನೇಕ ಆರೋಗ್ಯ ಸಮಸ್ಯೆಗಳಿಗೆ ಬಾಗಿಲು ತೆರೆಯುತ್ತದೆ. ‘ಇದೆಲ್ಲಾ ಮನಸ್ಸಿನ ಮೂಲೆಯಲ್ಲಿ ಹುಟ್ಟಿಕೊಂಡರೂ ಮುಂದಿನ ಹೆಜ್ಜೆಯಾಗಿ ದೇಹವಿಡೀ ವ್ಯಾಪಿಸುತ್ತದೆ. ದೈಹಿಕ ಹಾಗೂ ಮಾನಸಿಕ ಆಯಾಸ, ಬೇಸರ, ಸುಸ್ತು, ಸಿಡುಕುತನ, ಅತಿಯಾದ ನಿದ್ರೆ ಅಥವಾ ನಿದ್ರಾಹೀನತೆ, ಆತಂಕ, ಸ್ನಾಯುವಿನ ಒತ್ತಡ, ಅತೃಪ್ತಿಯ ಭಾವನೆ... ಹೀಗೆ ಹತ್ತು ಹಲವು ಸಮಸ್ಯೆಗಳು ತಲೆಎತ್ತುತ್ತವೆ’ ಎನ್ನುತ್ತಾರೆ ಡಾ. ವೆಂಕಟೇಶ್ ಬಾಬು.

ಹೊರಬರುವುದು ಹೇಗೆ?

ಈ ಸಮಸ್ಯೆಯ ಮೂಲ ಅಡಗಿರುವುದು ‘ಒಂದು ಹೆಣ್ಣು ಹೀಗೇ ಇರಬೇಕು’ ಎನ್ನುವ ಗ್ರಹಿಕೆಯಲ್ಲಿ ಹಾಗೂ ನಂಬಿಕೆಯಲ್ಲಿ. ಈ ನಂಬಿಕೆಯಲ್ಲಿ ಬದಲಾವಣೆ ತಂದುಕೊಳ್ಳದ ಹೊರತು ಇದು ಸರಿಹೋಗದು. ಅತಿಯಾದ ನಿರೀಕ್ಷೆ ಹಾಗೂ ಅತಿಯಾದ ಸಮರ್ಪಣೆ ಒಂದು ಸಮಸ್ಯೆ ಎನ್ನುವುದನ್ನು ಕಂಡುಕೊಳ್ಳಬೇಕು ಮತ್ತು ಆ ಆಲೋಚನಾ ಕ್ರಮದಲ್ಲಿ ಬದಲಾಣೆ ತಂದುಕೊಳ್ಳಬೇಕು ಎನ್ನುತ್ತಾರೆ ಮನಃಶಾಸ್ತ್ರಜ್ಞೆ ಭವ್ಯಾ ವಿಶ್ವನಾಥ.

‘ಓರ್ವ ಪತ್ನಿಯಾಗಿ, ತಾಯಿಯಾಗಿ, ಸೊಸೆಯಾಗಿ, ಜವಾಬ್ದಾರಿಯುತ ಮಹಿಳೆಯಾಗಿ ತಾನು ಹೀಗೇ ಇರಬೇಕು ಎನ್ನುವ ಭಾರವನ್ನು ತಲೆಯಲ್ಲಿ ಹೊತ್ತುಕೊಂಡಿರುವಷ್ಟು ದಿನ ನೆಮ್ಮದಿ ಅವಳಿಂದ ಬಹಳ ದೂರ. ತಾನೇನು? ತನ್ನ ಇತಿಮಿತಿ ಏನು? ಯಾವುದು ತನ್ನಿಂದ ಸಾಧ್ಯ? ಯಾವುದಿಲ್ಲ ಎನ್ನುವುದನ್ನು ವಾಸ್ತವಿಕ ನೆಲೆಗಟ್ಟಿನಲ್ಲಿ ಪರಾಮರ್ಶಿಸಿ, ತನಗೆ ನಿಲುಕುವುದನ್ನಷ್ಟೇ ತನ್ನ ಪಟ್ಟಿಗೆ ಸೇರಿಸಿಕೊಳ್ಳುವುದೇ ಇದಕ್ಕೆ ಪರಿಹಾರ’ ಎನ್ನುತ್ತಾರೆ ಅವರು.

> **ಬಹಳಷ್ಟು ಹೆಣ್ಣುಮಕ್ಕಳು ತಮ್ಮಿಂದ ತಾವೇ ಶಕ್ತಿಮೀರಿದ ನಿರೀಕ್ಷೆಗಳನ್ನು ಇಟ್ಟುಕೊಳ್ಳುತ್ತಾರೆ. ಇತಿಮಿತಿಗಳನ್ನು ಮರೆತು ತಮ್ಮ ಮೇಲೆ ತಾವೇ ಒತ್ತಡ ಹೇರಿಕೊಳ್ಳುತ್ತಾರೆ. ಹೀಗೆ ಮಾಡುವುದಕ್ಕಿಂತ ಮೊದಲು ಆ ಸಂಗತಿಯ ಪೂರ್ವಾಪರ ಆಲೋಚಿಸಿ, ಸಾಧಕ–ಬಾಧಕಗಳನ್ನು ವಿಶ್ಲೇಷಿಸಿ, ನಂತರ ನಿರ್ಧಾರ ತೆಗೆದುಕೊಳ್ಳಬೇಕು.**
>
> ಭವ್ಯಾ ವಿಶ್ವನಾಥ
> ಮನಃಶಾಸ್ತ್ರಜ್ಞೆ


ತಮ್ಮನ್ನು ಮಾನಸಿಕವಾಗಿ–ದೈಹಿಕವಾಗಿ ಕುಗ್ಗಿಸುವ ಈ ಸಿಂಡ್ರೋಮ್‌ನಿಂದ ಹೊರಬರಲು ಅವರು ನೀಡುವ ಕೆಲವು ಪರಿಹಾರಾತ್ಮಕ ಕ್ರಮಗಳು ಹೀಗಿವೆ:

ನಿಮಗೆ ಏನು ಸಾಧ್ಯ? ಎಷ್ಟು ಸಾಧ್ಯ? ಎನ್ನುವುದನ್ನು ಅರಿಯಿರಿ. ಪ್ರಜ್ಞಾಪೂರ್ವಕವಾಗಿ ನಿರ್ಧಾರ ತೆಗೆದುಕೊಳ್ಳಿ. ಏನು ಮಾಡುತ್ತಿದ್ದೀರಿ? ಯಾಕೆ ಮಾಡುತ್ತಿದ್ದೀರಿ? ಅದರಿಂದ ನಿಮ್ಮ ಮೇಲೆ ಉಂಟಾಗುವ ಪರಿಣಾಮಗಳೇನು? ಎನ್ನುವುದನ್ನು ವಿಶ್ಲೇಷಣೆ ಮಾಡಿ.

- **ಸೂಚನೆಗಳನ್ನು ಅರಿಯಿರಿ:** ನಿಮ್ಮ ಮನಸ್ಸು ಹಾಗೂ ದೇಹ ಕೆಲವು ಸೂಚನೆಗಳನ್ನು ಕೊಡುತ್ತಿರುತ್ತದೆ. ನಿಮ್ಮಿಂದ ಸಾಧ್ಯವಾಗದು ಎಂಬ ಸೂಚನೆಗಳನ್ನು ಕಡೆಗಣಿಸಿ ಒತ್ತಾಯಪೂರ್ವಕವಾಗಿ ಶ್ರಮಿಸಬೇಡಿ.
- **ಕೆಲಸಗಳನ್ನು ಹಂಚಿ:** ನೀವು ಕುಟುಂಬವನ್ನು ಪೊರೆಯುವ ಆದಿಶಕ್ತಿಯಲ್ಲ ಎನ್ನುವುದನ್ನು ಅರ್ಥಮಾಡಿಕೊಳ್ಳಿ. ಎಲ್ಲರ, ಎಲ್ಲಾ ಬಯಕೆ–ಬೇಡಿಕೆಗಳನ್ನು ಈಡೇರಿಸುವುದು ಅಸಾಧ್ಯ. ನೀವು ಯಾವ ಯಾವ ಕೆಲಸಗಳನ್ನು ನಿಭಾಯಿಸಬಹುದು, ಯಾವ ಕೆಲಸಗಳನ್ನು ಮನೆಯ ಇತರ ಸದಸ್ಯರಿಗೆ ವಹಿಸಬಹುದು ಎಂದು ಆಲೋಚಿಸಿ, ಕೆಲಸಗಳನ್ನು ಹಂಚಿ.
- **ಪರಿಪೂರ್ಣತೆಯ ಹಟ ಬಿಡಿ:** ನೀವು ಮಾಡುವ ಎಲ್ಲಾ ಕೆಲಸವೂ ಪರಿಪೂರ್ಣವಾಗಿರಬೇಕು ಎನ್ನುವ ಹಟ ಬೇಡ. ಪರಿಪೂರ್ಣತೆಯ ನಿರೀಕ್ಷೆ ಮತ್ತು ವಾಸ್ತವದ ನಡುವಿನ ಸಂಘರ್ಷವೂ ಮಾನಸಿಕ ಕ್ಲೇಶಕ್ಕೆ ಕಾರಣವಾಗಬಲ್ಲದು.
- **ಸ್ವಯಂ ಕಾಳಜಿ ಸ್ವಾರ್ಥವಲ್ಲ:** ಸ್ವಾರ್ಥ–ಸ್ವಯಂ ಕಾಳಜಿಯ ನಡುವೆ ಸಾಕಷ್ಟು ಅಂತರವಿದೆ. ನಿಮ್ಮ ಬಗ್ಗೆ ನೀವು ಯೋಚಿಸುವುದು, ನಿಮ್ಮ ಖುಷಿ, ನಿಮ್ಮ ಆರೈಕೆ, ನಿಮ್ಮ ಸಂತೋಷವನ್ನು ನೀವು ಬಯಸುವುದು ಸ್ವಾರ್ಥವಲ್ಲ. ಎಲ್ಲ ಕೆಲಸಗಳ ನಡುವೆ ನಿಮಗಾಗಿ, ನಿಮ್ಮ ಸ್ವಂತ ಹಿತಾಸಕ್ತಿಗಳು, ಆಸಕ್ತಿ ಅಭಿರುಚಿಗಳಿಗೂ ಆದ್ಯತೆ ನೀಡಿ.

❖

ಭಿನ್ನ ಲೈಂಗಿಕ ಆಸಕ್ತಿ ಕಾಯಿಲೆಯಲ್ಲ



ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

- **ಯುವಕ. ನನ್ನನ್ನಲ್ಲಿ ಕೆಲವು ಗೊಂದಲಗಳಿವೆ. ನನಗೆ ಅನಿಸುವಂತೆ ಸ್ತ್ರೀಯರು ಪುರುಷರಿಗಿಂತ ದೈಹಿಕವಾಗಿ ಹೆಚ್ಚು ಪ್ರಬಲವಾಗಿರುತ್ತಾರೆ. ಏಕೆಂದರೆ ಅವರ ಲೈಂಗಿಕ ಅಂಗಾಂಗಗಳು ದೇಹದ ಒಳಗಡೆಯಿದ್ದು ಹೆಚ್ಚು ಸುರಕ್ಷಿತವಾಗಿರುತ್ತವೆ. ಆದರೆ ಪುರುಷರ ಲೈಂಗಿಕ ಅಂಗಾಂಗಗಳು ದೇಹದ ಹೊರಗಡೆಯಿರುವುದರಿಂದ ಹೆಚ್ಚಿನ ಅಪಾಯವಾಗುವ ಸಾಧ್ಯತೆಗಳಿರುತ್ತವೆ. ಹಾಗಾಗಿ ನಾನು ಹೆಣ್ಣಾಗಿ ಹುಟ್ಟಬೇಕಾಗಿತ್ತು ಎಂದು ಅನ್ನಿಸುತ್ತದೆ. ನಿಮ್ಮ ಸಲಹೆ ಏನು?**

ಹೆಸರು, ಊರು ತಿಳಿಸಿಲ್ಲ

ಲೈಂಗಿಕ ಅಂಗಾಂಗಗಳು ಮತ್ತು ಆಸಕ್ತಿಯ ಕುರಿತಾಗಿ ನಿಮ್ಮಲ್ಲಿ ಸಾಕಷ್ಟು ಗೊಂದಲಗಳು ಇರುವಂತಿದೆ. ದೇಹ ಮತ್ತು ಲೈಂಗಿಕ ಅಂಗಾಂಗಗಳ ರಚನೆಯನ್ನು ಪ್ರಕೃತಿ ಒಂದು ಸ್ಪಷ್ಟ ಉದ್ದೇಶಕ್ಕಾಗಿ ಮಾತ್ರ ರೂಪಿಸಿದೆ. ಗರ್ಭದ ಸುರಕ್ಷತೆಯ ದೃಷ್ಟಿಯಿಂದ ಅದು ದೇಹದ ಒಳಭಾಗದಲ್ಲಿರಬೇಕಾಗುತ್ತದೆ. ಹಾಗಾಗಿ ಮಹಿಳೆಯರ ಲೈಂಗಿಕ ಅಂಗಾಂಗಗಳು ದೇಹದ ಒಳಗಡೆ ಇರುತ್ತವೆ. ವೀರ್ಯಾಣುವನ್ನು ಹೆಣ್ಣಿನ ಗರ್ಭದೊಳಗೆ ತಲುಪಿಸಬೇಕಾಗಿರುವುದರಿಂದ ಪುರುಷರ ಲೈಂಗಿಕ ಅಂಗಾಂಗಗಳು ದೇಹದ ಹೊರಗಡೆಯಿರುತ್ತವೆ. ದೇಹದ ಶಾಖಕ್ಕಿಂತ ಕಡಿಮೆ ಶಾಖದಲ್ಲಿ ವೀರ್ಯಾಣುಗಳನ್ನು ರಕ್ಷಿಬೇಕಾಗಿರುವುದಿಂದ ವೃಷಣಗಳು ದೇಹದ ಹೊರಗಡೆಯಿರುತ್ತವೆ. ಹೊರಗೆ ಕಾಣುವುದಕ್ಕೆ ಪೂರಕವಾಗಿ ಪುರುಷನ ದೇಹದ ಒಳಗಡೆಯೂ ಸಾಕಷ್ಟು ಲೈಂಗಿಕ ಅಂಗಾಂಗಗಳಿರುತ್ತವೆ.

ಸಂತಾನವನ್ನು ಪಡೆಯುವ ಮತ್ತು ರಕ್ಷಿಸುವ ದೃಷ್ಟಿಯಿಂದ ಯಾರು ಬಲಶಾಲಿಗಳು ಎನ್ನುವ ಅಂಶ ಪ್ರಸ್ತುತವಲ್ಲ. ಇಬ್ಬರೂ ಪೂರಕವಾದ ಪಾತ್ರಗಳನ್ನು ನಿಭಾಯಿಸಬೇಕೆನ್ನುವುದು ಪ್ರಕೃತಿಯ ಆಶಯ.

ಹುಡುಗಿಯಾಗಿ ಹುಟ್ಟಬೇಕಾಗಿತ್ತು ಎನ್ನುವ ಅನಿಸಿಕೆಯ ಹಿಂದೆ ನಿಮಗೆ ಪುರುಷರ ಕುರಿತಾಗಿ ಲೈಂಗಿಕ ಆಕರ್ಷಣೆ ಇದೆಯೇ ಎಂದು ಪರೀಕ್ಷಿಸಿಕೊಳ್ಳಿ ಅಥವಾ ನಿಮ್ಮ ದೇಹವನ್ನೇ ಹೆಣ್ಣಾಗಿ ಬದಲಾಯಿಸಿಕೊಳ್ಳಬೇಕು ಎನ್ನುವ ಒತ್ತಡಗಳಿವೆಯೇ? ಹೀಗೆ ಭಿನ್ನ ಲೈಂಗಿಕ ಆಸಕ್ತಿ ಅಥವಾ ಒತ್ತಡಗಳಿರುವುದು ಕಾಯಿಲೆಯಲ್ಲ. ನಿಮ್ಮ ಎಲ್ಲಾ ಗೊಂದಲಗಳನ್ನು ಪರಿಹರಿಸಿಕೊಳ್ಳಲು ತಜ್ಞ ಲೈಂಗಿಕ ಮನೋಚಿಕಿತ್ಸಕರನ್ನು ಭೇಟಿಯಾಗಿ.



- **ಚಿಕ್ಕ ವಯಸ್ಸಿನಲ್ಲಿಯೇ ತಂದೆ ದೂರಹೋದರು. ನಾವು ಮೂವರು ಸಹೋದರರು. ನಮ್ಮನ್ನು ಬೆಳೆಸಲು ಅಮ್ಮ ತುಂಬಾ ಕಷ್ಟಪಟ್ಟಿದ್ದಾರೆ. ಅವರ ಭಾರವನ್ನು ಕಡಿಮೆ ಮಾಡಲು ನಾನು ಪೋಲೀಸ್ ಹುದ್ದೆಗಾಗಿ ಪ್ರಯತ್ನಿಸುತ್ತಿದ್ದೇನೆ. ಆದರೆ ಮೊಬೈಲ್‌ನಿಂದಾಗಿ ನನಗೆ ಓದಲಾಗುತ್ತಿಲ್ಲ. ಪರಿಹಾರವೇನು?**

ಹೆಸರು, ಊರು ತಿಳಿಸಿಲ್ಲ

ಪ್ರಶ್ನೆ ಸಂಕ್ಷಿಪ್ತವಾಗಿದ್ದರೂ ಅದರಲ್ಲಿ ಹಲವಾರು ಸಂದೇಶಗಳಿವೆ. ತಾಯಿಯ ಶ್ರಮಕ್ಕಾಗಿ ಕೃತಜ್ಞತೆಯಿದೆ. ಅವರ ಕಷ್ಟಗಳ ಕುರಿತಾಗಿ ಎಚ್ಚರವಿದೆ. ಅದನ್ನು ಕಡಿಮೆ ಮಾಡಬೇಕೆಂಬ ಪ್ರಾಮಾಣಿಕ ಆಸಕ್ತಿಯಿದೆ. ಆದರೆ ನನ್ನ ಪ್ರಯತ್ನಗಳಲ್ಲಿ ಸಫಲನಾಗಬಹುದೇ ಎನ್ನುವ ಆತಂಕ ಕಾಡುತ್ತಿರಬೇಕಲ್ಲವೇ? ಇಂತಹ ಆತಂಕವನ್ನು ಮರೆಯಲು ತಕ್ಷಣಕ್ಕೆ ಕೈಗೆಟುಕುವುದು ಮೊಬೈಲ್ ಮಾತ್ರ. ಅದು ಕೈಯಲ್ಲಿ ಇರುವವರೆಗೆ ಆತಂಕ ಮರೆಯಾಗಿರುತ್ತದೆ. ನಂತರ ಆತಂಕದ ಜೊತೆಗೆ ಪಾಪಪ್ರಜ್ಞೆಯೂ ಸೇರಿಕೊಳ್ಳುತ್ತದೆ. ಇಷ್ಟೇ ಅಲ್ಲದೆ ನನಗೆ ಉದ್ಯೋಗ ದೊರೆಯಬಹುದೇ ಇಲ್ಲವೇ, ಅಮ್ಮನಿಗೆ ಸಹಾಯ ಮಾಡಲು ಸಾಧ್ಯವಾಗಬಹುದೇ ಇಲ್ಲವೇ ಎನ್ನುವ ಅನಿಶ್ಚಿತತೆ ಹಿಂಜರಿಕೆಗಳೂ ಸೇರಿಕೊಂಡಿರಬಹುದಲ್ಲವೇ?

ಓದಲು ಕುಳಿತ ತಕ್ಷಣ ಹೀಗೆ ಮಾಡಿ. ಮೊಬೈಲ್‌ನ್ನು ಕಣ್ಣೆದುರಿಗೆ ಹಿಡಿದುಕೊಂಡು ದಿಟ್ಟಿಸುತ್ತಾ ಅದರ ಜೊತೆ ಮಾತನಾಡಿ. ‘ನನಗೆ ಓದೋಕೆ ಆಗದೆ ಹೋದ್ರೂ ಪರವಾಗಿಲ್ಲ, ಉದ್ಯೋಗ ಸಿಗದೆ ಹೋದ್ರೂ ತೊಂದರೆಯಿಲ್ಲ, ಅಮ್ಮನ ಕಷ್ಟಗಳು ಕಡಿಮೆಯಾಗದೆ ಹೋದ್ರೂ ನಾನು ಲೆಕ್ಕಕ್ಕೆ ತೊಗೋಳಲ್ಲ. ಆದರೆ ನಿನ್ನ ಮಾತ್ರ ಕೈಬಿಡಲ್ಲ’ ಹೀಗೆ ಹೇಳಿ ಮೊಬೈಲ್‌ನ್ನು ದಿಟ್ಟಿಸುತ್ತಾ ನಿಮ್ಮ ದೇಹ ಬಿಗಿಯಾಗುವುದನ್ನು ಗಮನಿಸಿ. ನಿಧಾನವಾಗಿ ಉಸಿರಾಡುತ್ತಾ ದೇಹವನ್ನು ಸಡಿಲಬಿಡಿ. ಜೊತೆಗೆ ನಿಮ್ಮ ಉದ್ವೇಗ ಹೆಚ್ಚಾಗಿ ದುಃಖವಾದರೆ ಕಣ್ಣೀರನ್ನು ತಡೆಯಬೇಡಿ. ಹೀಗೆ ಎಲ್ಲಾ ಭಾವನೆಗಳನ್ನು ಅನುಭವಿಸುತ್ತಾ 5 ರಿಂದ 10 ನಿಮಿಷ ಕಳೆಯಿರಿ. ಅಷ್ಟರಲ್ಲಿ ಮನಸ್ಸು ನಿರಾಳವಾಗಿರುತ್ತದೆ. ಆಗ ಓದನ್ನು ಮುಂದುವರೆಸಿ. ಈ ಪ್ರಯೋಗವನ್ನು ಸಾಕಷ್ಟು ಸಾರಿ ಮಾಡಿದರೆ ಮೊಬೈಲ್ ಕೈಗೆ ಬಂದ ತಕ್ಷಣ ನಿಮ್ಮೊಳಗೆ ಒಂದು ಎಚ್ಚರಿಕೆ ಮೂಡಿ ಆಕರ್ಷಣೆಯನ್ನು ತಡೆಯುತ್ತದೆ.

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ
bhoomika@prajavani.co.in

ಘಟಾ ಘಟ್ ಬ್ರೇಕ್ ಫಾಸ್ಟ್


ಕ್ಯಾಲ್ಸಿಯಂ, ಪೊಟ್ಯಾಸಿಯಂ ಮತ್ತು ಸಾಕಷ್ಟು ನಾರಿನ ಅಂಶಗಳನ್ನು ಒಳಗೊಂಡಿರುವ ಓಟ್ಸ್ ಜೀರ್ಣ ಕ್ರಿಯೆಯನ್ನು ಸುಗಮಗೊಳಿಸಿ ಕೆಟ್ಟ ಕೊಬ್ಬಿನ ಮಟ್ಟವನ್ನು ನಿಯಂತ್ರಿಸುತ್ತದೆ. ಓಟ್ಸ್‌ನಿಂದ ಘಟಾಫಟ್ ಉಪಾಹಾರ ತಯಾರಿಸುವ ಕುರಿತ ಮಾಹಿತಿ ಇಲ್ಲಿದೆ

ಕವಿತಾ ಹೆಗಡೆ

ಓಟ್ಸ್ ಉಪ್ಪಿಟ್ಟು

ಬೇಕಾಗುವ ಸಾಮಗ್ರಿಗಳು: 1 ಕಪ್ ಓಟ್ಸ್, 2 ಚಮಚ ಎಣ್ಣೆ, 1 ಚಮಚ ಸಾಸಿವೆ, 1 ಚಮಚ ಉದ್ದಿನ ಬೇಳೆ, 1 ಚಮಚ ಕಡಲೆಬೇಳೆ, 2 ಚಮಚ ನೆಲಗಡಲೆ, 4 ಹಸಿಮೆಣಸಿನಕಾಯಿ, 1 ಈರುಳ್ಳಿ, ½ ಚಮಚ ಅರಿಸಿನ, ½ ಕಪ್ ತುರಿದ ತೆಂಗಿನಕಾಯಿ, ರುಚಿಗೆ ತಕ್ಕಷ್ಟು ಉಪ್ಪು, ಕರಿಬೇವು, ಸ್ವಲ್ಪ ಕೊತ್ತಂಬರಿ ಸೊಪ್ಪು, ½ ನಿಂಬೆ, 1 ಕ್ಯಾರೆಟ್, ½ ಕಪ್ ಬಟಾಣಿ.

ಮಾಡುವ ವಿಧಾನ: ಒಂದು ಬಾಣಲೆಯಲ್ಲಿ ಎಣ್ಣೆ ಬಿಸಿ ಮಾಡಿ ಅದಕ್ಕೆ ಸಾಸಿವೆ, ಉದ್ದಿನ ಬೇಳೆ, ಕಡಲೆ ಬೇಳೆ ಹಾಕಿ ಹುರಿಯಿರಿ. ಬಳಿಕ ಅದಕ್ಕೆ ಹಸಿಮೆಣಸಿನ ಕಾಯಿ, ಅರಿಸಿನ, ಈರುಳ್ಳಿ, ಉಪ್ಪು, ಕರಿಬೇವು ಹಾಕಿ ಫ್ರೈ ಮಾಡಿ. ಆಮೇಲೆ ಬಟಾಣಿ, ಕ್ಯಾರೆಟ್ ಸೇರಿಸಿ ಮಿಶ್ರಣ ಮಾಡಿ ಬೇಯಿಸಿ. ಬೆಂದ ಬಳಿಕ ಓಟ್ಸ್ ಮತ್ತು ಉಪ್ಪು, ತೆಂಗಿನಕಾಯಿ ಹಾಕಿ ಮತ್ತೆ ಬೇಯಿಸಿ. ಕೊನೆಯಲ್ಲಿ ಕೊತ್ತಂಬರಿ ಸೊಪ್ಪು ಹಾಕಿ, ನಿಂಬೆ ರಸ ಬೆರೆಸಿದರೆ ಓಟ್ಸ್ ಉಪ್ಪಿಟ್ಟು ರೆಡಿ.



ಓಟ್ಸ್ ಮಿಲ್ಕ್ ಶೇಕ್

ಬೇಕಾಗುವ ಸಾಮಗ್ರಿಗಳು: ಓಟ್ಸ್ 1 ಕಪ್, ಬೀಜ ತೆಗೆದ ಖರ್ಜೂರ 1 ಕಪ್, ಐಸ್ ಕ್ಯೂಬ್ಸ್ 5-6, ಹಾಲು 1 ಕಪ್, ಫ್ರೆಶ್ ಕ್ರೀಂ 1 ಚಮಚ

ತಯಾರಿಸುವ ವಿಧಾನ: ಓಟ್ಸ್ ಮತ್ತು ಖರ್ಜೂರವನ್ನು ಪ್ರತ್ಯೇಕವಾಗಿ ಬಿಸಿನೀರಿನಲ್ಲಿ ಐದು ನಿಮಿಷ ನೆನೆಹಾಕಿರಿ. ನಂತರ ನೀರು ಬಸಿದು ಜ್ಯೂಸ್ ಜಾರ್‌ಗೆ ಹಾಕಿರಿ. ಓಟ್ಸ್ ಜೊತೆಗೆ ಖರ್ಜೂರ, ಐಸ್ ಕ್ಯೂಬ್, ಹಾಲು ಹಾಕಿಕೊಂಡು ನುಣ್ಣಗೆ ಬ್ಲೆಂಡ್ ಮಾಡಿಕೊಳ್ಳಿ. ಗ್ಲಾಸಿಗೆ ವರ್ಗಾಯಿಸಿಕೊಂಡು ಫ್ರೆಶ್ ಕ್ರೀಂ ಬೆರೆಸಿ ತಣ್ಣಗೆ ಸವಿಯಿರಿ.



ನಳಪಾಕ

ಓಟ್ಸ್ ಬಾರ್ (ಚಿಕ್ಕಿ)

ಬೇಕಾಗುವ ಸಾಮಗ್ರಿಗಳು: ರೋಲ್ಡ್ ಓಟ್ಸ್ 2 ಕಪ್, ಬಾದಾಮಿ ಚೂರು 1/2 ಕಪ್, ಕುಂಬಳಕಾಯಿ ಬೀಜ 1/2 ಕಪ್, ಸೂರ್ಯಕಾಂತಿ ಬೀಜ 1/2 ಕಪ್, ಸೀಡ್ ಲೆಸ್ ಖರ್ಜೂರ 2 ಕಪ್, ಪೀನಟ್ ಬಟರ್ 1/2 ಕಪ್, ಜೇನುತುಪ್ಪ 1/4 ಕಪ್, ವೆನಿಲ್ಲಾ ಸಾರ (EXTRACT) 1 ಚಮಚ, ಉಪ್ಪು ಚಿಟಿಕೆಯಷ್ಟು

ತಯಾರಿಸುವ ವಿಧಾನ: ಒಂದು ಬಾಣಲೆಯಲ್ಲಿ ಓಟ್ಸ್ ಹಾಕಿಕೊಂಡು ಡ್ರೈ ರೋಸ್ಟ್ ಮಾಡಿ ತೆಗೆದಿಡಿ. ನಂತರ ಅದೇ ಬಾಣಲೆಯಲ್ಲಿ ಮತ್ತೊಮ್ಮೆ ಕುಂಬಳ ಬೀಜ, ಬಾದಾಮಿ, ಸೂರ್ಯಕಾಂತಿ ಬೀಜಗಳನ್ನು ಕೆಂಪಗೆ ಹುರಿದು ಎತ್ತಿಟ್ಟುಕೊಳ್ಳಿ. ಈಗ ಮಿಕ್ಸಿ ಜಾರ್‌ಗೆ ಖರ್ಜೂರ ಹಾಕಿಕೊಂಡು ಸ್ವಲ್ಪ ನೀರು ಬೆರೆಸಿ ನುಣ್ಣಗೆ ಪೇಸ್ಟ್ ಮಾಡಿಕೊಳ್ಳಿ. ರುಬ್ಬಿದ ಖರ್ಜೂರಕ್ಕೆ ಪೀನಟ್ ಬಟರ್ ಸೇರಿಸಿ ಮಧ್ಯಮ ಉರಿಯಲ್ಲಿ ಚೆನ್ನಾಗಿ ತಿರುವಿ. ಖರ್ಜೂರ ಮತ್ತು ಪೀನಟ್ ಬಟರ್ ಮಿಶ್ರಣವಾಗಿ ತಳ ಬಿಟ್ಟಾದ ಮೇಲೆ ಸ್ಟವ್ ಆರಿಸಿ.

ಈಗ ಒಂದು ಮಿಕ್ಸಿಂಗ್ ಬೌಲ್‌ನಲ್ಲಿ ಮೊದಲೇ ಹುರಿದು ತೆಗೆದಿರಿಸಿದ ಓಟ್ಸ್ , ಡ್ರೈ ಫ್ರುಟ್ಸ್, ನಟ್ಸ್‌ಗಳನ್ನೆಲ್ಲ ಒಟ್ಟುಗೂಡಿಸಿಕೊಳ್ಳಿ. ಮಿಕ್ಸಿಂಗ್ ಬೌಲ್‌ಗೆ ಜೇನುತುಪ್ಪ, ವೆನಿಲ್ಲಾ ಸಾರ, ಸ್ವಲ್ಪ ಉಪ್ಪು ಮತ್ತು ಖರ್ಜೂರದ ಮಿಶ್ರಣ ಬೆರೆಸಿ ಚೆನ್ನಾಗಿ ಕಲಸಿಕೊಳ್ಳಿ. ಬೇಕಿಂಗ್ ಪೇಪರ್ ಇರುವ ಮೌಲ್ಡ್‌ನಲ್ಲಿ ತಯಾರಿಸಿದ ಮಿಶ್ರಣ ಸುರಿದು, ಸೆಟ್ ಮಾಡಿ. ನಾಲ್ಕು ಗಂಟೆಗಳ ಕಾಲ ಫ್ರೀಜ್ ಮಾಡಿಕೊಳ್ಳಿ. ಮಿಶ್ರಣ ಗಟ್ಟಿಯಾದ ಕೂಡಲೇ ಬೇಕಾದ ಆಕಾರದಲ್ಲಿ ಕಟ್ ಮಾಡಿ. ಸರ್ವ್ ಮಾಡಿ. ಆರೋಗ್ಯಪೂರ್ಣ ಓಟ್ಸ್ ಬಾರ್ ಸವಿಯಲು ಸಿದ್ಧ.





ಏನೀ ಸೌಂದರ್ಯವೇ... ಶಸ್ತ್ರಚಿಕಿತ್ಸೆ ಅನಿವಾರ್ಯವೇ?

ಪಲ್ಲವಿ. ಕೆ

‘**ಸೌಂದರ್ಯದ** ಮೇಲಿನ ಕಾಳಜಿ ಇರಬೇಕು. ಆದರೆ, ಅದು ಅತಿಯಾಗಬಾರದು’ ಎನ್ನುತ್ತಾರೆ ಸೆಲೆಬ್ರಿಟಿ ಜಿಮ್ ಟ್ರೈನರ್ ಪವಿ ಪಡುಕೋಣೆ.

‘ಕೇವಲ 10–15 ದಿನಗಳಲ್ಲಿ ತೂಕ ಕಡಿಮೆ ಮಾಡಿಕೊಳ್ಳುವ ಆತುರದಿಂದ ನಮ್ಮ ಜಿಮ್‌ಗೆ ಬರುತ್ತಾರೆ. ಬದಲಾದ ಜೀವನಶೈಲಿ ಮತ್ತು ಎಲ್ಲವೂ ತ್ವರಿತವಾಗಿ ಆಗಬೇಕು ಎನ್ನುವ ಒತ್ತಡದ ಮನಃಸ್ಥಿತಿಯಿಂದ ನಮ್ಮಲ್ಲಿಗೆ ಬರುವ ಯುವಜನರು ಹೆಚ್ಚು. ಇದು ಸಾಧ್ಯವೇ? ಇಂಥ ಪ್ರಯೋಗಗಳ ಪರಿಣಾಮವನ್ನು ಈಗಲೇ ನೋಡುತ್ತಿದ್ದೇವಲ್ಲಾ’ ಎಂದು ಬೇಸರ ವ್ಯಕ್ತಪಡಿಸುತ್ತಾರೆ ಅವರು.

ಸಾಮಾಜಿಕ ಜಾಲತಾಣಗಳಲ್ಲಿ ಚೆಂದವಾಗಿ ಕಾಣಿಸಿಕೊಳ್ಳುವ ಹಂಬಲ, ರೀಲ್ಸ್, ಪೋಸ್ಟ್‌ಗಳ ಟ್ರೆಂಡ್, ಧಾರಾವಾಹಿ, ಸಿನಿಮಾಗಳಿಗೆ ಸೇರುವ ಆಸೆ ಇವೆಲ್ಲವೂ ಇನ್ನಿಲ್ಲದಂತೆ ಸೌಂದರ್ಯ ಕಾಳಜಿಯತ್ತ ಜನರು ಹುಡುಕಿ ಹೋಗುವಂತೆ ಮಾಡಿದೆ. ಅದಕ್ಕೆ ತಕ್ಕಂತೆ ಸೌಂದರ್ಯ ಚಿಕಿತ್ಸೆ ಉದ್ಯಮದ ಸ್ವರೂಪ ಪಡೆದಿದೆ. ಹೀಗೆ ಅತಿಯಾದ ಕಾಳಜಿ, ದಿಢೀರ್ ಬದಲಾವಣೆಯ ಒತ್ತಡಕ್ಕೊಳಗಾಗಿ ಚಿಕಿತ್ಸೆ ಪಡೆದ ಪರಿಣಾಮವೇ ಇತ್ತೀಚೆಗೆ ಕಿರುತೆರೆ ನಟಿ ಚೇತನಾ ರಾಜ್ ಅವರ ಸಾವು ಸಂಭವಿಸಿದ್ದು.

ತಮ್ಮ ಅತಿಯಾದ ಸೌಂದರ್ಯ ಕಾಳಜಿಯಿಂದಾಗಿ ಕಾಸ್ಮೆಟಿಕ್ ಸರ್ಜರಿಗೆ ಒಳಗಾಗಿದ್ದ ಕಿರುತೆರೆ ನಟಿ ಚೇತನಾ ರಾಜ್, ಸರ್ಜರಿ ನಂತರ ಶ್ವಾಸಕೋಶದಲ್ಲಿ ನೀರು ತುಂಬಿಕೊಂಡು ಸಾವನ್ನಪ್ಪಿದರು. ಚೇತನಾ ಸಾವಿನಿಂದ ಯುವಜನತೆ ಎಚ್ಚೆತ್ತುಕೊಳ್ಳಬೇಕಾದ ಅಗತ್ಯವಿದೆ. ಇಂತಹ ಸರ್ಜರಿಗಳು, ಉಂಟು ಮಾಡುವ ದುಷ್ಪರಿಣಾಮಗಳು ಅನೇಕ ಎನ್ನುತ್ತಾರೆ ಚರ್ಮರೋಗ ತಜ್ಞ ಡಾ. ಶ್ರೀನಿವಾಸ್.

‘ಧಾರಾವಾಹಿ, ಸಿನಿಮಾ ಸೇರುವುದಕ್ಕೆ ಕನಸು ಕಾಣುವುದು, ಅದಕ್ಕಾಗಿ ಪ್ರಯತ್ನಿಸುವುದು ತಪ್ಪಲ್ಲ. ಆದರೆ, ಸರಿಯಾದ ತರಬೇತಿ ಪಡೆದು ಹೋಗಬೇಕು. ಯಾರೋ ಏನೋ ಹೇಳಿದರು ಎಂದು ಅದನ್ನೇ ಮನಸ್ಸಿಗೆ ಹಚ್ಚಿಕೊಳ್ಳ ಬಾರದು’ ಎನ್ನುತ್ತಾರೆ ಸೌಂದರ್ಯ ತಜ್ಞೆ ಪ್ರತಿಭಾ.

ಇಂಥದ್ದೊಂದು ಸೌಂದರ್ಯದ ಕಾಳಜಿಯಿರುವವರು ಹೇಗಾದರೂ ಮಾಡಿ ದೇಹದ ಕೊಬ್ಬು ಕರಗಿಸಲು ಪ್ರಯತ್ನಿಸುತ್ತಿರುತ್ತಾರೆ. ಕೊಬ್ಬು ಕರಗಿಸುವ ಚಿಕಿತ್ಸೆ ಸದ್ಯ ಟ್ರೆಂಡ್‌ನಲ್ಲಿದೆ. ಅದರಲ್ಲೂ ಎರಡು ವಿಧಗಳಿವೆ. ಅವುಗಳೆಂದರೆ ಬೇರಿಯಾಟ್ರಿಕ್ ಮತ್ತು ಕಾಸ್ಮೆಟಿಕ್ ಲೈಪೋಸಕ್ಷನ್.

ತೂಕ ಕಡಿಮೆ ಮಾಡುವುದು ಅಥವಾ ತೂಕ ಸಂಬಂಧಿತ ಸಮಸ್ಯೆಗಳನ್ನು ನಿವಾರಿಸುವ ಸಲುವಾಗಿ ಯುವಜನರು ಈ ಚಿಕಿತ್ಸೆಗೆ ಒಳಪಡುತ್ತಾರೆ. ಡಯೆಟ್ ಮತ್ತು ವ್ಯಾಯಾಮ ವ್ಯಕ್ತಿಯ ದೇಹದ ತೂಕವನ್ನು ನಿಯಂತ್ರಿಸುವಲ್ಲಿ ವಿಫಲವಾದಾಗ ಅಥವಾ ಅಧಿಕ ದೇಹ ತೂಕದಿಂದಾಗಿ ಗಂಭೀರ ಸಮಸ್ಯೆ ಎದುರಾದಾಗ ಮಾತ್ರ ಈ ಸರ್ಜರಿಗೆ ವೈದ್ಯರು ಶಿಫಾರಸು ಮಾಡ್ತಾರೆ.

ಕಾಸ್ಮೆಟಿಕ್ ಲೈಪೋಸಕ್ಷನ್– ಅನಗತ್ಯ ಕೊಬ್ಬನ್ನು ಕರಗಿಸುವ ಸರಳ ಲೇಸರ್ ಚಿಕಿತ್ಸೆ. ವಿಶೇಷವಾಗಿ ಹೊಟ್ಟೆ ಮತ್ತು ಸೊಂಟದ ಸುತ್ತ ಸಂಗ್ರಹವಾಗುವ ಬೊಜ್ಜನ್ನು ಕರಗಿಸಲು ಬಳಸಲಾಗುತ್ತದೆ.


ಸಾಮಾನ್ಯವಾಗಿ ಕಾಸ್ಮೆಟಿಕ್ ಸರ್ಜರಿಗೆ ನಿರ್ದಿಷ್ಟ ಮಾರ್ಗಸೂಚಿಗಳಿಲ್ಲ. ಆದರೆ, ಸಣ್ಣ ಕ್ಲಿನಿಕ್‌ನಲ್ಲಿ ಯಾವುದೇ ಕಾರಣಕ್ಕೂ ಸರ್ಜರಿ ಮಾಡುವ ಹಾಗಿಲ್ಲ. ಸಾಮಾನ್ಯ ಪ್ರಕ್ರಿಯೆಗಳನ್ನಷ್ಟೇ ಮಾಡಬಹುದು. ಹಾಗೆಂದು ದೊಡ್ಡ ಆಸ್ಪತ್ರೆಗಳು ಸರ್ಜರಿ ಮಾಡಬಹುದು ಎಂದಲ್ಲ. ಅವರಿಗೂ ಅದರದ್ದೇ ಆದ ಮಾನದಂಡಗಳಿವೆ. ರೋಗಿ ಚಿಕಿತ್ಸೆಗಾಗಿ ಬಂದರೂ, ಮೊದಲು ಅವರ ಒಪ್ಪಿಗೆ ತೆಗೆದುಕೊಳ್ಳಬೇಕು. ನಂತರ ಅವರ ಮನೆಯವರ ಸಹಿಯೊಂದಿಗೆ ಅನುಮತಿ ಪಡೆಯಬೇಕು. ಸರ್ಜರಿಗೆ ಒಳಪಡುವ ವ್ಯಕ್ತಿಯ ವೈದ್ಯಕೀಯ ಪ್ರಮಾಣಪತ್ರದ ಪ್ರಕಾರ ಆರೋಗ್ಯ ಸ್ಥಿತಿ ಸಮರ್ಪಕವಾಗಿದ್ದರೆ ಮಾತ್ರ ಸರ್ಜರಿ ಮಾಡಬೇಕು ಇಲ್ಲವಾದಲ್ಲಿ ಅಂತಹ ಆಸ್ಪತ್ರೆಯ ವಿರುದ್ಧ ಕ್ರಮ ತೆಗೆದುಕೊಳ್ಳುವ ಸಾಧ್ಯತೆ ಇರುತ್ತದೆ. ❖

‘ಸೌಂದರ್ಯ ಚಿಕಿತ್ಸೆ ಹೇಗಿರಬೇಕು ? ಈ ಕುರಿತು ತಜ್ಞರ ಅಭಿಪ್ರಾಯ ಮತ್ತು ವಿವರವಾದ ವರದಿಗಾಗಿ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಸರಿಯಾದ ರೀತಿಯಲ್ಲಿ ಉಪಯೋಗಿಸದೇ ಇದ್ದರೆ ಒಳ್ಳೆಯ ಗುಣವೇ ಕೆಲವೊಮ್ಮೆ ಕೆಟ್ಟದ್ದಕ್ಕೆ ಕಾರಣವಾಗಬಹುದು.

–ವಿಲಿಯಂ ಷೇಕ್ಸ್‌ಪಿಯರ್

ಅಧಿಕೃತ ಆದೇಶವಿಲ್ಲದೆ ಪಠ್ಯ ಪರಿಷ್ಕರಣೆ ಇಡೀ ಪ್ರಕ್ರಿಯೆ ನಿಯಮಬಾಹಿರ

ಸರ್ಕಾರದ ಅಧಿಕೃತ ಆದೇಶ ಇಲ್ಲದೆಯೇ ಪಠ್ಯ ಪರಿಷ್ಕರಣೆ ನಡೆದಿರುವುದು ಮಕ್ಕಳ ಶಿಕ್ಷಣದ ಕುರಿತು ಸರ್ಕಾರ ಎಷ್ಟು ಗಂಭೀರವಾಗಿದೆ ಎನ್ನುವುದನ್ನು ಸೂಚಿಸುವಂತಿದೆ. ಪಠ್ಯಪುಸ್ತಕ ಪರಿಷ್ಕರಣೆಗೆ ಸಂಬಂಧಿಸಿದಂತೆ ಸರ್ಕಾರದ ನಡವಳಿಕೆಯು ಕ್ರಮಬದ್ಧತೆಯಿಂದ ಕೂಡಿಲ್ಲ ಹಾಗೂ ಪರಿಷ್ಕರಣಾ ಪ್ರಕ್ರಿಯೆ ಪಾರದರ್ಶಕವಾಗಿಲ್ಲ. ಸಚಿವರ ಮೌಖಿಕ ಸೂಚನೆಯ ಮೇರೆಗೆ ಪರಿಷ್ಕರಣೆ ನಡೆದ ಬಳಿಕ ಘಟನೋತ್ತರ ಅನುಮತಿ ನೀಡಿ ಆದೇಶ ಹೊರಡಿಸಿರುವುದು ಅಕ್ರಮವನ್ನು ಸಕ್ರಮಗೊಳಿಸುವ ಪ್ರಯತ್ನದಂತಿದೆ. ಪರಿಶೀಲನಾ ಸಮಿತಿಯನ್ನೇ ತಜ್ಞರ ಪರಿಷ್ಕರಣಾ ಸಮಿತಿ ಎಂದು ಪರಿಗಣಿಸಿರುವುದು ಎಡವಟ್ಟಿನ ನಡೆ. ಪಠ್ಯಪುಸ್ತಕಗಳ ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಮಹತ್ವವನ್ನು ಸರ್ಕಾರ ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ ಎನ್ನುವುದನ್ನು ಸರ್ಕಾರದ ಅಪಕ್ವ ನಿಲುವುಗಳೇ ಸೂಚಿಸುತ್ತಿವೆ. ಪಠ್ಯಪುಸ್ತಕಗಳಲ್ಲಿನ ಕೆಲವು ವಿಷಯಗಳ ಬಗ್ಗೆ ಉಂಟಾದ ಆಕ್ಷೇಪಗಳ ಹಿನ್ನೆಲೆಯಲ್ಲಿ, 2021ರ ಸೆಪ್ಟೆಂಬರ್ 9ರಂದು ಪರಿಶೀಲನಾ ಸಮಿತಿ ರಚಿಸಲಾಗಿತ್ತು. ಎಸ್. ಸುರೇಶ್ ಕುಮಾರ್ ಅವರು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಾಗಿದ್ದಾಗ ನೇಮಕಗೊಂಡ ಆ ಸಮಿತಿಗೆ, 1ರಿಂದ 10ನೇ ತರಗತಿಯ ಭಾಷಾ ವಿಷಯಗಳು, ಪರಿಸರ ಅಧ್ಯಯನ ಹಾಗೂ 6ರಿಂದ 10ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಗಳಲ್ಲಿ ಇರಬಹುದಾದ ಸೂಕ್ಷ್ಮ-ಸಂಕೀರ್ಣ ವಿಷಯಗಳನ್ನು ಪರಿಶೀಲಿಸಿ ಒಂದು ತಿಂಗಳಲ್ಲಿ ವರದಿ ನೀಡುವಂತೆ ಸೂಚಿಸಲಾಗಿತ್ತು. ಪರಿಶೀಲನಾ ಸಮಿತಿಯ ವರದಿಯನ್ನು ಸರ್ಕಾರ ಒಪ್ಪಿಕೊಂಡಲ್ಲಿ, ಅದನ್ನು ಜಾರಿಗೆ ತರಲು ವಿಷಯ ತಜ್ಞರನ್ನು ಒಳಗೊಂಡ ಪರಿಷ್ಕರಣಾ ಸಮಿತಿಯನ್ನು ಪ್ರತ್ಯೇಕವಾಗಿ ರಚಿಸಬೇಕಾಗಿತ್ತು. ಇಲ್ಲವೇ ಪರಿಶೀಲನಾ ಸಮಿತಿಗೇ ಪರಿಷ್ಕರಣೆಯ ಹೊಣೆಯನ್ನೂ ನೀಡಿ ಹೊಸತಾಗಿ ಆದೇಶವನ್ನಾದರೂ ಹೊರಡಿಸಬೇಕಾಗಿತ್ತು. ಈ ಎರಡೂ ಬಗೆಯಲ್ಲಿ ಸರ್ಕಾರದ ಅಧಿಕೃತ ಆದೇಶ ಇಲ್ಲದೆಯೇ ಪರಿಷ್ಕರಣೆ ನಡೆದಿದೆ. 2022–23ನೇ ಸಾಲಿಗೆ ಪರಿಷ್ಕೃತ ಪಠ್ಯಪುಸ್ತಕಗಳನ್ನು ಮುದ್ರಿಸಿ ವಿತರಿಸುವ ಕುರಿತು ಮಾರ್ಚ್ 9ರಂದು ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ. ಆ ಆದೇಶದಲ್ಲಿ, ‘ಪಠ್ಯಪುಸ್ತಕಗಳನ್ನು ಪರಿಷ್ಕೃತಗೊಳಿಸಿರುವುದಕ್ಕೆ ಘಟನೋತ್ತರ ಅನುಮತಿ ನೀಡಿ, ಮುದ್ರಿಸಲು ಸೂಚಿಸಲಾಗಿದೆ’ ಎನ್ನುವ ಉಲ್ಲೇಖವಿದೆ. ಅಧಿಕಾರಸ್ಥರು ತಮ್ಮ ಹಿಂಬಾಲಕರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಕಾರ್ಯಾದೇಶ ಇಲ್ಲದೆಯೇ ವಿವಿಧ ಕಾಮಗಾರಿಗಳನ್ನು ನಡೆಸಲು ಅವಕಾಶ ಮಾಡಿಕೊಟ್ಟು ಆ ಬಳಿಕ ಘಟನೋತ್ತರ ಅನುಮತಿ ಕೊಡಿಸುವಂತಹ ಪರಿಪಾಟವನ್ನು ಶಿಕ್ಷಣ ಇಲಾಖೆಗೂ ಪರಿಚಯಿಸಲು ಸರ್ಕಾರ ಹೊರಟಂತಿದೆ.



ಪಠ್ಯಪುಸ್ತಕಗಳ ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಮಹತ್ವವನ್ನು ಸರ್ಕಾರ ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ ಎನ್ನುವುದನ್ನು ಅದರ ಅಪಕ್ವ ನಿಲುವುಗಳೇ ಸೂಚಿಸುತ್ತಿವೆ

ಪಠ್ಯಪುಸ್ತಕ ಪರಿಷ್ಕರಣೆಗೆ ಸಂಬಂಧಿಸಿದ ಯಾವುದೇ ಆದೇಶಗಳು ‘ಕರ್ನಾಟಕ ಪಠ್ಯಪುಸ್ತಕ ಸಂಘ’ದ ಅಂತರ್ಜಾಲ ತಾಣದಲ್ಲಿ ಇಲ್ಲದಿರುವುದು ಕೂಡ ಇಡೀ ಪ್ರಕ್ರಿಯೆ ಪಾರದರ್ಶಕವಾಗಿ ನಡೆಯದಿರುವುದನ್ನು ತೋರಿಸುವಂತಿದೆ. ಪಠ್ಯಪುಸ್ತಕ ಪರಿಷ್ಕರಣೆ, ಪರಿಶೀಲನಾ ಸಮಿತಿ ರಚನೆಗೆ ಸಂಬಂಧಿಸಿದ ಮಾಹಿತಿಯನ್ನು ವೆಬ್‌ಸೈಟ್‌ನಿಂದ ತೆಗೆಯಲಾಗಿದೆ. ‘ಪರಿಷ್ಕೃತ ಪಠ್ಯಪುಸ್ತಕಗಳಲ್ಲಿನ ಎಲ್ಲ ಬರಹಗಳು ಹಾಗೂ ಮಾಹಿತಿಗೆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರೇ ಜವಾಬ್ದಾರರು’ ಎನ್ನುವ ಉಲ್ಲೇಖ ಘಟನೋತ್ತರ ಅನುಮತಿ ಆದೇಶದಲ್ಲಿದೆ. ಸರ್ಕಾರಿ ಪಠ್ಯಪುಸ್ತಕಗಳಲ್ಲಿನ ವಿಷಯಗಳಿಗೆ ಆಕ್ಷೇಪಗಳು ಎದುರಾದಲ್ಲಿ ಉತ್ತರಿಸುವ ಹೊಣೆಗಾರಿಕೆಯು ಸಮಿತಿಯ ಅಧ್ಯಕ್ಷರದೇ ಆಗಿರುತ್ತದೆ ಎಂದೂ ಹೇಳಲಾಗಿದೆ. ಸರ್ಕಾರಿ ಪಠ್ಯಪುಸ್ತಕಗಳ ಸರಿತಪ್ಪುಗಳ ಉತ್ತರದಾಯಿತ್ವದಿಂದ ಜಾರಿಕೊಳ್ಳಲು ಸರ್ಕಾರಕ್ಕೆ ಅವಕಾಶ ಇಲ್ಲ. ಅದರ ಹೊಣೆ ಸರ್ಕಾರದ್ದೇ ಆಗಿರುತ್ತದೆ. ಹಾಗೆಯೇ, ಪರಿಷ್ಕರಿಸುವ ಸಮಿತಿಯೂ ಪಠ್ಯದಲ್ಲಿನ ತಪ್ಪು–ಒಪ್ಪುಗಳಿಗೆ ಹೊಣೆ ಹೊರಬೇಕು. ಆಕ್ಷೇಪಗಳಿಗೆ ಉತ್ತರಿಸುವ ಹೊಣೆಯನ್ನು ಸಮಿತಿಯ ಹೆಗಲಿಗೇರಿಸುವುದು, ಸರ್ಕಾರ ತನ್ನ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವ ಪ್ರಯತ್ನವಾಗಿದೆ. ಆಕ್ಷೇಪಗಳಿಗೆ ಉತ್ತರಿಸುವ ಹೊಣೆಗಾರಿಕೆಯು ಪರಿಷ್ಕರಣಾ ಸಮಿತಿಯದ್ದೇ ಎನ್ನುವುದಾದರೆ, ತಕರಾರುಗಳ ಹಿನ್ನೆಲೆಯಲ್ಲಿ ಪಠ್ಯಗಳನ್ನು ಪುನರ್ ಮುದ್ರಿಸಬೇಕಾದ ಸಂದರ್ಭ ಎದುರಾದಲ್ಲಿ ಅದಕ್ಕೆ ತಗುಲುವ ಖರ್ಚು ವೆಚ್ಚಗಳನ್ನೂ ಸಮಿತಿಯಿಂದಲೇ ಭರಿಸಬೇಕಾಗುತ್ತದೆ. ಪರಿಷ್ಕೃತ ಪಠ್ಯಪುಸ್ತಕಗಳ ಮುದ್ರಣಕ್ಕಾಗಿ ಕೋಟ್ಯಂತರ ರೂಪಾಯಿ ಖರ್ಚು ಮಾಡಲಾಗಿದೆ. ಸಾರ್ವಜನಿಕರಿಂದ ಆಕ್ಷೇಪಗಳನ್ನು ಆಹ್ವಾನಿಸಿ, ಅದರ ಆಧಾರದ ಮೇಲೆ ಪರಿಷ್ಕೃತ ಪಠ್ಯವನ್ನು ಪುನಃ ಪರಿಷ್ಕರಣೆ ಮಾಡುವುದಾಗಿ ಸರ್ಕಾರ ಹೇಳಿದೆ. ಅದಕ್ಕೆ ಮತ್ತಷ್ಟು ವೆಚ್ಚವಾಗಲಿದೆ. ಸರ್ಕಾರದ ವಿವೇಚನಾರಹಿತ ನಿರ್ಧಾರಗಳಿಂದಾಗಿ ಸಾರ್ವಜನಿಕ ಹಣದ ಅಪಬಳಕೆಯಾಗಿದೆ.

ವಿವಾದ ಹಾಗೂ ಗೊಂದಲಗಳಿಗೆ ಕಾರಣವಾಗಿರುವ ಸಂಗತಿಗಳಿಂದ ತುಂಬಿರುವ ಪರಿಷ್ಕೃತ ಪಠ್ಯಪುಸ್ತಕಗಳನ್ನು ಸಮರ್ಥಿಸಿಕೊಂಡು ಮಾತನಾಡುವುದನ್ನು ಸರ್ಕಾರ ಇನ್ನಾದರೂ ನಿಲ್ಲಿಸಬೇಕು. ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯ ಸಮಿತಿಯನ್ನು ವಿಸರ್ಜಿಸಿದ ಮಾತ್ರಕ್ಕೆ ವಿವಾದಗಳು ಕೊನೆಗೊಳ್ಳುವುದಿಲ್ಲ. ಆ ಸಮಿತಿ ಮಾಡಿರಬಹುದಾದ ತಪ್ಪುಗಳನ್ನು ಗುರುತಿಸಿ ಸರಿಪಡಿಸುವುದು ಸರ್ಕಾರದ ಕರ್ತವ್ಯ. ಪಠ್ಯಪುಸ್ತಕಗಳ ಬಗ್ಗೆ ಮಕ್ಕಳು, ಶಿಕ್ಷಕರು ಹಾಗೂ ಸಾರ್ವಜನಿಕ ವಲಯದಲ್ಲಿ ಉಂಟಾಗಿರುವ ಗೊಂದಲಗಳನ್ನು ತಿಳಿಗೊಳಿಸುವ ದಿಸೆಯಲ್ಲಿ ಸರ್ಕಾರ ತಕ್ಷಣ ಕ್ರಿಯಾಶೀಲವಾಗಬೇಕು. ವಿವಾದಕ್ಕೆ ಕಾರಣವಾಗಿರುವ ಪುಸ್ತಕಗಳನ್ನು ಹಿಂತೆಗೆದುಕೊಳ್ಳುವುದು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅಗತ್ಯವಾಗಿರುವ ಕ್ರಮ ಮಾತ್ರವಲ್ಲ, ಸರ್ಕಾರ ತನ್ನ ತಪ್ಪನ್ನು ತಿದ್ದಿಕೊಳ್ಳುವ ನಡೆಯೂ ಹೌದು. ಪರಿಷ್ಕೃತ ಪಠ್ಯಗಳನ್ನು ಪರಿಚಯಿಸುವ ಕೆಲಸವನ್ನು ಮುಂದಿನ ವರ್ಷಕ್ಕೆ ಮುಂದೂಡಿ, ಕಳೆದ ವರ್ಷದ ಪಠ್ಯಪುಸ್ತಕಗಳನ್ನೇ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಮುಂದುವರಿಸುವುದಕ್ಕೆ ಸರ್ಕಾರಕ್ಕೆ ಯಾವುದೇ ಪ್ರತಿಷ್ಠೆ ಅಡ್ಡಿಯಾಗಬಾರದು.

ದಿನದ ಟ್ವೀಟ್

ವಿರೋಧ ಯಾಕೆಂದರೆ...



‘ನಮ್ಮ ಮೆಟ್ರೊ’ ವಿಸ್ತರಣೆಯನ್ನು ನಾವು ವಿರೋಧಿಸುತ್ತಿಲ್ಲ, ಇನ್ನೂ ಬೆಂಗಳೂರಿಗೇ ಸಂಪೂರ್ಣವಾಗಿ ಮೆಟ್ರೊ ಸಂಪರ್ಕ ಕಲ್ಪಿಸಲು ಸಾಧ್ಯವಾಗಿಲ್ಲದಿರುವಾಗ ತಮಿಳುನಾಡಿನ ಹೊಸೂರಿಗೆ ಅದನ್ನು ವಿಸ್ತರಿಸಲು ಹೊರಟಿರುವುದನ್ನು ವಿರೋಧಿಸುತ್ತಿದ್ದೇವೆ. ನೆರೆಯ ರಾಜ್ಯಗಳ ಬಗ್ಗೆ ಯೋಚಿಸುವ ಮೊದಲು ನಮ್ಮ ರಾಜ್ಯದ ಒಳಗೆ, ಬೆಂಗಳೂರಿನ ಸುತ್ತಮುತ್ತಲ ಜಿಲ್ಲೆಗಳಿಗೆ ಮೆಟ್ರೊ ಸಂಪರ್ಕ ಕಲ್ಪಿಸುವಂತೆ ಆಗಬೇಕು.

ಪ್ರತಾಪ್ ಕಣಗಾಲ್, ಜೆಡಿಎಸ್ ಐ.ಟಿ. ವಿಭಾಗದ ಮುಖ್ಯಸ್ಥ

ಕಿಡಿನುಡಿ



ಭಾರತದಲ್ಲಿ ಪ್ರಜಾಪ್ರಭುತ್ವಕ್ಕೆ ಇಂದು ಮಹತ್ತರವಾದ ದಿನ. ‘ಅಡ್ಡ ಮತದಾನ’ ತಪ್ಪಿಸುವ ಸಲುವಾಗಿ ಹಲವಾರು ಶಾಸಕರು ಅವರ ಸ್ವಂತ ಪಕ್ಷಗಳಿಂದಲೇ ‘ಗೌರವಯುತ’ವಾಗಿ ಬಂಧನಕ್ಕೆ ಒಳಗಾದರು. ಮತದಾನದ ಸಮಯ ಸನ್ನಿಹಿತವಾದಾಗ ಅವರನ್ನು ಮತದಾನ ಕೇಂದ್ರದ ಬಳಿ ತಂದು ಬಿಡಲಾಗುತ್ತದೆ! ಎಷ್ಟು ದರಕ್ಕೆ ಇದೆಲ್ಲಾ ನಡೆದಿರಬಹುದು ಎಂದು ಅಚ್ಚರಿಯಾಗುತ್ತಿದೆಯೇ? #MLAsOnSale #RajyaSabhaPolls

ಶ್ರೀನಿವಾಸ್ ಅಲವಿಳ್ಳಿ, ಸದಸ್ಯ, ಜನಾಗ್ರಹ ಸಂಸ್ಥೆ

25 ವರ್ಷಗಳ ಹಿಂದೆ

ಬುಧವಾರ, 11-6-1997

● ದಳ ಅಧ್ಯಕ್ಷತೆ: ಒಮ್ಮತದ ಆಯ್ಕೆಗೆ ತೆರೆಮರೆ ಯತ್ನ

ನವದೆಹಲಿ, ಜೂನ್ 10– ವಿವಾದದ ಸುಳಿಗೆ ಸಿಕ್ಕಿ ನ್ಯಾಯಾಲಯದ ವಶವಾಗಿರುವ ಜನತಾದಳದ ಅಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಈಗಲೂ ಒಮ್ಮತದ ಅಭ್ಯರ್ಥಿಯ ಆಯ್ಕೆಗೆ ತೆರೆಮರೆಯ ಪ್ರಯತ್ನ ನಡೆಯುತ್ತಿದೆ.

ಈ ಪ್ರಯತ್ನಕ್ಕೆ ಈಗ ಕೈಹಾಕಿರುವವರು ಕರ್ನಾಟಕದ ಎಂ.ಎಸ್.ಗುರುಪಾದ ಸ್ವಾಮಿ ಅವರು. ಈಗಾಗಲೇ ಅನೇಕ ಹಿರಿಯರನ್ನು ಭೇಟಿ ಮಾಡಿರುವ ಅವರು, ಲಾಲೂ ಪ್ರಸಾದ್ ಯಾದವ್ ಮತ್ತು ಶರದ್ ಯಾದವ್ ಅವರಿಬ್ಬರನ್ನೂ ಕಣದಿಂದ ನಿವೃತ್ತಗೊಳಿಸಿ ಮೂರನೇ ಅಭ್ಯರ್ಥಿಯ ಆಯ್ಕೆಗೆ ಒಲವು ಮೂಡಿಸುವ ಕ್ರಿಯೆಯಲ್ಲಿ ತೊಡಗಿದ್ದಾರೆ.

ಈ ಮೂರನೇ ಅಭ್ಯರ್ಥಿ ಪ್ರೊ. ಮಧು ದಂಡವತೆ ಅವರಾಗಲಿ ಎಂಬುದು ಗುರುಪಾದ ಸ್ವಾಮಿ ಅವರ ಲಾಬಿ. ಪ್ರಧಾನಿ ಗುಜ್ರಾಲ್ ಅವರೇ ಅಧ್ಯಕ್ಷರಾಗಲಿ ಎನ್ನುವ ವಾದವೂ ಇದೆ.

50 ವರ್ಷಗಳ ಹಿಂದೆ

ಭಾನುವಾರ, 11-6-1972

● ಗೋಪಾಲಗೌಡರಿಗೆ ಆತ್ಮೀಯರ ಅಂತಿಮ ಬೀಳ್ಕೊಡುಗೆ

ಬೆಂಗಳೂರು, ಜೂನ್ 10– ಬರಲು ಸಾಧ್ಯವಾದವರೆಲ್ಲ ಬಂದಿದ್ದರು. ಜೀಪಿನ ಹಿಂಭಾಗದ ವೇದಿಕೆಯ ಮೇಲೆ ಚಿರನಿದ್ರೆಯಲ್ಲಿದ್ದ ಶಾಂತವೇರಿ ಗೋಪಾಲಗೌಡ ಅವರನ್ನು ಹಿಂಬಾಲಿಸುತ್ತ ಬಿಸಿಲಿನಲ್ಲಿ ನಡೆದರು.

ಮಧ್ಯಾಹ್ನ 1.30ರ ಸಮಯದಲ್ಲಿ ಶ್ರೀ ಗೌಡ ಅವರ ಪಾರ್ಥಿವ ಶರೀರವನ್ನು ವಿದ್ಯುತ್ ಚಿತೆಯ ಗೂಡಿನಲ್ಲಿ ಇಡಲಾಯಿತು. ಇದಕ್ಕೆ ಮುನ್ನ, ನೆರೆದಿದ್ದ ಗೆಳೆಯರು ಗದ್ಗದಿತ ಕಂಠದಲ್ಲಿ ‘ಸಮಾಜವಾದಿ ಗಾಂಧಿ ಗೋಪಾಲಗೌಡರು ಚಿರಾಯುವಾಗಲಿ’ ಎಂದು ಜಯಕಾರ ಹಾಕಿದರು.

ನಿನ್ನೆ ನಿಧನರಾದ ಸೋಷಲಿಸ್ಟ್ ನಾಯಕ ಶ್ರೀ ಗೋಪಾಲಗೌಡ ಅವರ ಅಂತಿಮ ಯಾತ್ರೆ ಬೆಳಿಗ್ಗೆ 11 ಗಂಟೆಗೆ ವಿಕ್ಟೋರಿಯಾ ಆಸ್ಪತ್ರೆಯನ್ನು ಬಿಟ್ಟಿತು.

ತೀವ್ರವಾಗಿ ಸವೆಯುತ್ತಿದೆ ಮೇಲ್ಮಣ್ಣು; ಕರಗುತ್ತಿದೆ ಕಾಡು, ಕಲ್ಲು, ಮರಳಿನ ನೈಸರ್ಗಿಕ ಸಂಪತ್ತು

ಕೃಷಿಗೆ ಇನ್ನೇನು ಉಳಿದೀತು ‘ಮಣ್ಣು’!



ವಿಶ್ಲೇಷಣೆ

ಡಾ. ಕೇಶವ ಎಚ್. ಕೊರ್ಸೆ

ಮಣ್ಣು ಸಂರಕ್ಷಣೆಯ ಜಾಗೃತಿಗಾಗಿ ಸದ್ಗುರು ಜಗ್ಗಿ ವಾಸುದೇವ್ ಅವರು ಕಳೆದ ಬೇಸಿಗೆಯಲ್ಲಿ ಕೈಗೊಂಡ ಜಾಗತಿಕ ಬೈಕ್ ಯಾತ್ರೆಯಿಂದಾಗಿ, ಈ ಸಂಗತಿಯು ಮತ್ತೊಮ್ಮೆ ಸಾರ್ವಜನಿಕ ಚಿಂತನೆಯ ಮುನ್ನೆಲೆಗೆ ಬರುವಂತಾಯಿತು. ಸುಮಾರು ಈ ಸಮಯದಲ್ಲಿಯೇ, ಉತ್ತರ ಕನ್ನಡದ ಅರೆಮಲೆನಾಡು ಪ್ರದೇಶವಾದ ಮುಂಡಗೋಡು ಸೀಮೆಯಲ್ಲಿ ಅಧ್ಯಯನ ಪ್ರವಾಸ ಕೈಗೊಳ್ಳುವ ಸಂದರ್ಭ ನನಗೆ ಒದಗಿಬಂತು. ಭತ್ತದ ಬೇಸಾಯ ತೊರೆದು, ಜೋಳ, ಶುಂಠಿ, ಅಡಿಕೆಯನ್ನು ಒಮ್ಮೆಲೇ ರೈತರು ಅಪ್ಪಿಕೊಳ್ಳುತ್ತಿರುವುದು ಎಲ್ಲೆಡೆ ತೋರುತ್ತಿತ್ತು.

ಕಾಡಿನ ಹಸಿರುಹೊದಿಕೆ ನಾಶ, ಕೃಷಿ ಭೂಮಿಯಲ್ಲಿ ನೆಲಮುಚ್ಚಿಗೆ ಬೆಳೆಗಳು ಮಾಯವಾಗುತ್ತಿರುವುದು, ಅಕಾಲಿಕ ಅತಿವೃಷ್ಟಿ ತರುವ ನೆರೆ, ವಿವೇಕರಹಿತ ನೆಲಬಳಕೆ ವಿಧಾನಗಳು- ಇವೆಲ್ಲವುಗಳಿಂದಾಗಿ, ಎಲ್ಲೆಡೆ ಮೇಲ್ಮಣ್ಣಿನ ಸಾರ ತೀವ್ರವಾಗಿ ಕುಸಿಯುತ್ತಿದೆ. ಹಟ್ಟಿಗೊಬ್ಬರ ಹಾಗೂ ಕೃಷಿ ತ್ಯಾಜ್ಯಗಳ ಕಂಪೋಸ್ಟ್ ಕೊರತೆಯಿಂದಾಗಿ, ರಾಸಾಯನಿಕ ಗೊಬ್ಬರದ ಅಂಗಡಿ ಎದುರು ರೈತರು ಸಾಲುಗಟ್ಟುತ್ತಿದ್ದಾರೆ. ಅರಣ್ಯದಿಂದ ಹಿತಮಿತವಾಗಿ ಸೊಪ್ಪು- ತರಗೆಲೆ ತಂದು ಹೊಲದ ಮಣ್ಣಿಗೆ ಸಾರ ತುಂಬುವ ಸಂಪ್ರದಾಯಗಳೆಲ್ಲ ಹಿನ್ನೆಲೆಗೆ ಸರಿಯುತ್ತಿವೆ. ಬದಲಾಗಿ, ಸಮೀಪದ ಕಾಡಿನಲ್ಲಿ ಜೆಸಿಬಿಯಿಂದ ಮೇಲ್ಮಣ್ಣನ್ನು ಎತ್ತಿ, ಟ್ರ್ಯಾಕ್ಟರಿನಲ್ಲಿ ಹೊಲಕ್ಕೆ ಸಾಗಿಸುವ ದೃಶ್ಯಗಳೇ ಹಲವೆಡೆ ಕಂಡವು!

ಒಳನಾಡು, ಮಲೆನಾಡು ಹಾಗೂ ಕರಾವಳಿಯ ಬಹುತೇಕ ಪ್ರದೇಶಗಳ ಕೃಷಿಭೂಮಿಯಲ್ಲಿ, ಮೇಲ್ಮಣ್ಣು ಸವಕಳಿಯು ಇದೇ ಬಗೆಯ ಗಂಭೀರ ಹಂತ ತಲುಪುತ್ತಿದೆ. ಕಾಡುನಾಶ, ನೆರೆ, ಏಕಜಾತಿ ನೆಡುತೋಪು, ನೀರು ಹಾಗೂ ಮಣ್ಣಿನ ನಿರ್ವಹಣೆಯಲ್ಲಿ ಅಶಿಸ್ತು, ಕೃಷಿಯ ಕೃತಕ ಒಳಸುರಿಗಳ ಬಳಕೆಯಲ್ಲಿ ಲಂಗುಲಗಾಮು ಇರದಿರುವುದು ಎಲ್ಲವೂ ಇದಕ್ಕೆ ಕಾರಣಗಳೇ.

ಮಣ್ಣಿನ ಕನಿಷ್ಠ ಫಲವತ್ತತೆ ಉಳಿಸಿಕೊಳ್ಳುವುದೂ ರೈತರಿಗೆ ದೊಡ್ಡ ಸವಾಲು. ಅವರ ಮೂರನೇ ಎರಡರಷ್ಟು ಕೃಷಿವೆಚ್ಚ ಇದಕ್ಕೇ ವ್ಯಯವಾಗುತ್ತಿರುವುದನ್ನು ಅಧ್ಯಯನಗಳು ದಾಖಲಿಸುತ್ತಿವೆ.

ಹೊಲದಿಂದ ಹೆದ್ದಾರಿಗೆ ಕಾಲಿಟ್ಟರೆ, ಮಲೆನಾಡಿನ ಕಾಡು-ಗುಡ್ಡಗಳನ್ನು ಬಗೆದು ಕ್ವಾರಿಗಳಿಂದ ಮೇಲೆತ್ತಿ ತಂದ ಗ್ರಾನೈಟ್ ಹಾಗೂ ನದಿತಪ್ಪಲುಗಳಿಂದ ಅಗೆದುತಂದ ಮರಳು ಸಾಗಿಸುವ ಲಾರಿಗಳು! ಪ್ರಕೃತಿಯ ಶಕ್ತಿಗೆ ಮೈಯೊಡ್ಡಿ ಪುಡಿಯಾಗಿ ಭವಿಷ್ಯದ ಮಣ್ಣಾಗಬೇಕಿದ್ದ ಈ ಬಂಡೆ-ಕಲ್ಲುಗಳು, ವರ್ತಮಾನದ ಅಭಿವೃದ್ಧಿ ಉನ್ಮಾದಕ್ಕೆ ಬಲಿಯಾಗುತ್ತಿವೆ. ಇಲ್ಲವಾದಲ್ಲಿ, ಭೂಕುಸಿತಗಳಂಥ ಅವಘಡಗಳ ಹೊರತಾಗಿಯೂ ಮಲೆನಾಡಿನ ಕಾಡು ಸೀಳುವ, ಪರ್ವತಮಾಲೆಗಳನ್ನು ಕತ್ತರಿಸುವ, ಭೂಗರ್ಭ ಬಿರಿದು ನಿರ್ಮಿಸುವ ಗಣಿ, ಜಲವಿದ್ಯುತ್, ಬೃಹತ್ ಹೆದ್ದಾರಿಗಳಂಥ ‘ಮೆಗಾ ಅಭಿವೃದ್ಧಿ ಯೋಜನೆ’ಗಳು ನಮ್ಮ ಆದ್ಯತೆಯಾಗುತ್ತಿದ್ದವೇ? ಹೊಲ-ತೋಟ, ಗೋಮಾಳ, ಕಾಡು, ನದಿತಪ್ಪಲುಗಳ ಮೇಲ್ಮಣ್ಣು ನಾಶವಾಗಿ, ಕೃಷಿ ಅಪಾಯದಂಚಿಗೆ ತಲುಪಲು ಹೆದ್ದಾರಿ ನಿರ್ಮಿಸುತ್ತಿವೆ ಅವು!

ಫಲವತ್ತಾದ ಮೇಲ್ಮಣ್ಣು ತಯಾರಾಗುವುದೇ ಒಂದು ದೀರ್ಘ ಹಾಗೂ ಸಂಕೀರ್ಣ ಪ್ರಕ್ರಿಯೆ. ಪ್ರಕೃತಿ ಒದಗಿಸುವ ಬೆಳಕು, ಉಷ್ಣತೆ, ಗಾಳಿ, ಮಳೆನೀರಿನ ಒತ್ತಡ ಹಾಗೂ ರಾಸಾಯನಿಕ ಕ್ರಿಯೆಗಳಿಂದಾಗಿ, ಕಾಲಾಂತರದಲ್ಲಿ ಬಂಡೆಕಲ್ಲುಗಳು ಬಿರಿದು ಮಣ್ಣಿನ ಕಣಗಳು ರೂಪುಗೊಳ್ಳುತ್ತವೆ. ಕ್ಯಾಲ್ಸಿಯಂ, ಮೆಗ್ನೀಶಿಯಂ, ಕಬ್ಬಿಣ, ಝಿಂಕ್ ಇತ್ಯಾದಿ ಖನಿಜಾಂಶಗಳೆಲ್ಲ ಈ ಕಲ್ಲುಗಳಿಂದಲೇ ಬರಬೇಕು. ಇದಕ್ಕೆ ಸಸ್ಯ-ಪ್ರಾಣಿಜನ್ಯ ಸಾವಯವ ವಸ್ತುಗಳು ಬೆರೆತು ಅಂತಿಮವಾಗಿ ಮಣ್ಣು ನಿರ್ಮಾಣವಾಗಲು, ಸಾವಿರಾರು ಬಗೆಯ ಶತಕೋಟಿ ಪ್ರಮಾಣದ ಸೂಕ್ಷ್ಮಾಣುಜೀವಿಗಳ ಸಾಂಗತ್ಯ ಬೇಕು. ಹೀಗೆ, ಒಂದಡಿ ಸಮೃದ್ಧ ಮೇಲ್ಮಣ್ಣು ವಿಕಾಸವಾಗುವುದೆಂದರೆ, ಹಲವು ಸಹಸ್ರ ವರ್ಷಗಳ ನಿಸರ್ಗದ ತಪಸ್ಸೇ ಸರಿ. ಬಸವನಹುಳುವಿನ ಚಲನೆಯ ರೀತಿಯಲ್ಲಿ ನಿಸರ್ಗವು ಮೇಲ್ಮಣ್ಣು ತಯಾರಿಸುತ್ತಿದ್ದರೆ, ಜೆಟ್ ವಿಮಾನದ ವೇಗದಲ್ಲಿ ನಾವು ಮಣ್ಣು ನಾಶ ಮಾಡುತ್ತಿದ್ದೇವೆ!

ಮಣ್ಣನ್ನು ಕೃತಕವಾಗಿ ತಯಾರಿಸುವ ಪ್ರಯತ್ನಗಳನ್ನೂ ವಿಜ್ಞಾನಲೋಕ ಮಾಡಿದೆ. ಕೈತೋಟಗಳು ಅಥವಾ ಹೂಕುಂಡಗಳಲ್ಲಿ ಅಂಥ ಕೃತಕಮಣ್ಣಿನ ಮಿಶ್ರಣಗಳನ್ನು ಇಂದು ಬಳಸುವುದಿದೆ. ಆದರೆ ಅದು ದುಬಾರಿ. ಇಷ್ಟಕ್ಕೂ, ಪ್ರಕೃತಿ ನೀಡುವ ತ್ಯಾಜ್ಯಗಳಿಂದಲೇ ಅದನ್ನು ತಯಾರಿಸಬೇಕು. ಹೀಗಾಗಿ, ಭೂಮಿಯಾದ್ಯಂತ ಪ್ರಕೃತಿಯೇ ಉಚಿತವಾಗಿ ನೀಡುತ್ತಿರುವ ಫಲವತ್ತಾದ ಮಣ್ಣಿಗೆ ಬದಲಿ ಎಂಬುದಿಲ್ಲ ಎಂಬುದು ವಿಜ್ಞಾನವೇ ಒಪ್ಪಿಕೊಂಡಿರುವ ಸತ್ಯ.

ಮೇಲ್ಮಣ್ಣು ಹಾಗೂ ಅದರ ಫಲವತ್ತತೆಯ ನಾಶವು ಇಂದಿನ ಗಂಭೀರ ಸಮಸ್ಯೆಗಳಲ್ಲಿ ಒಂದಾಗಿರುವುದು ಈ ಎಲ್ಲ ಕಾರಣಗಳಿಂದಾಗಿ. ಕಾಡು ಹಾಗೂ ಕೃಷಿ ಭೂಮಿಗಳ ‘ಮರುಭೂಮೀಕರಣ’ ಪ್ರಕ್ರಿಯೆಗೆ ಇದು ಎಡೆಮಾಡುತ್ತಿದೆ. ದೇಶದ ಶೇ 30ಕ್ಕೂ ಹೆಚ್ಚಿನ ಪ್ರದೇಶಗಳು ಈ ಅಪಾಯವನ್ನು ಈಗಾಗಲೇ ಎದುರಿಸುತ್ತಿವೆ. ಮಣ್ಣು ನಾಶದಿಂದಾಗಿ ಕೃಷಿ ಇಳುವರಿಯಲ್ಲಿ ವೇಗವಾಗಿ ಕುಸಿತವಾಗುತ್ತಿರುವುದನ್ನು ಕೇಂದ್ರ ಕೃಷಿ ಸಚಿವಾಲಯದ ಅಂಕಿ-ಅಂಶಗಳೇ ದೃಢಪಡಿಸಿವೆ. ಭವಿಷ್ಯದ ಕೃಷಿ ಹಾಗೂ ಆಹಾರ ಸುರಕ್ಷತೆಯ ದೃಷ್ಟಿಯಿಂದ ಅಪಾಯದ ಗಂಟೆಯಿದು.



ಇದಕ್ಕೆ ಪರಿಹಾರವಾದರೂ ಏನು? ಮೊನ್ನೆ ವಿಶ್ವ ಪರಿಸರ ದಿನಾಚರಣೆಯ ಸಂದರ್ಭದಲ್ಲಿ ಪ್ರಧಾನಿಯವರೇ ಅಭಿಪ್ರಾಯಪಟ್ಟಂತೆ, ಸೂಕ್ತವಾದ ಸರ್ಕಾರಿ ಯೋಜನೆಗಳ ಜೊತೆಗೆ, ಖಾಸಗಿ ಕ್ಷೇತ್ರ ಹಾಗೂ ಜನಮಾನಸವೂ ಕೈಜೋಡಿಸಬೇಕಿದೆ. ರೈತ ಸಮುದಾಯದ ಪಾರಂಪರಿಕ ವಿವೇಕಕ್ಕೆ, ಸೂಕ್ತವಾದ ಆಧುನಿಕ ತಂತ್ರಜ್ಞಾನ ಬೆಸೆದು ಮಣ್ಣನ್ನು ಸುಸ್ಥಿರವಾಗಿ ಬಳಸುವ ಹಲವಾರು ಮಾದರಿಗಳನ್ನೇನೋ ಸಂಶೋಧನೆಗಳು ಅಭಿವೃದ್ಧಿಪಡಿಸಿವೆ. ಸರ್ಕಾರ ಹಾಗೂ ರೈತ ಸಮುದಾಯಗಳು ಜೊತೆಯಾಗಿ, ಅವನ್ನು ತಳಮಟ್ಟದಲ್ಲಿ ಈಗ ಅನುಷ್ಠಾನ ಮಾಡಬೇಕಿದೆಯಷ್ಟೆ.

ಮೊದಲನೆಯದು, ಸರ್ಕಾರದ ಹೊಣೆಗಾರಿಕೆ. ಅರಣ್ಯ ಇಲಾಖೆಯು ಕಾಡಿನ ಅತಿಕ್ರಮಣ ಹಾಗೂ ಕಲ್ಲು-ಮಣ್ಣಿನಂಥ ನೈಸರ್ಗಿಕ ಸಂಪತ್ತಿನ ದುರ್ಬಳಕೆಯನ್ನು ತಡೆಯಬೇಕಿದೆ. ಕಂದಾಯ ಇಲಾಖೆಯು ಸೂಕ್ತ ನೆಲ-ಜಲ ಬಳಕೆ ನೀತಿ ಜಾರಿ ಮಾಡಿ, ಹೊಲ-ತೋಟ, ಹೊಳೆ-ಕೆರೆಗಳ ಅಚ್ಚುಕಟ್ಟು ಪ್ರದೇಶಗಳ ನೈಸರ್ಗಿಕ ಸ್ವರೂಪವನ್ನು ಕಾಪಾಡಿಕೊಳ್ಳಬೇಕಿದೆ. ಕೃಷಿ ಅರಣ್ಯವನ್ನು ಪ್ರೋತ್ಸಾಹಿಸಿ ಭೂಸಾರ ಹಾಗೂ ಅಂತರ್ಜಲ ರಕ್ಷಿಸುವ ಹೊಣೆ ಜಲಾನಯನ ಇಲಾಖೆಯದ್ದಾಗಬೇಕಿದೆ. ಈಗಾಗಲೇ ನಿಷೇಧವಾಗಿರುವ ಅಪಾಯಕಾರಿ ಕೃತಕ ಕ್ರಿಮಿನಾಶಕ ಹಾಗೂ ಕಳೆನಾಶಕಗಳ ಬಳಕೆಯನ್ನು ತಡೆಯುವ ಕನಿಷ್ಠ ಕಾರ್ಯಕ್ಷಮತೆಯನ್ನಾದರೂ ಕೃಷಿ ಇಲಾಖೆ ತೋರಬೇಕಿದೆ. ಸಮಗ್ರ ದೃಷ್ಟಿಕೋನ ಮತ್ತು ಬದ್ಧತೆ ಬಯಸುವ ಕಾರ್ಯಗಳಿವು.

ಇನ್ನು ರೈತರು. ಸರ್ಕಾರದ ವೈಫಲ್ಯದಲ್ಲಿ ಅವರ ವಿವೇಕವೂ ತೊಳೆದುಹೋಗಬಾರದಷ್ಟೇ? ಕಪ್ಪು, ಕೆಂಪು, ಮರಳುಮಿಶ್ರಿತ- ಯಾವ ಬಗೆಯ ಮಣ್ಣೇ ಇರಲಿ, ಹಸಿರುಗಿಡಗಳ ಹೊದಿಕೆ ಹಾಗೂ ಸಾವಯವ ತ್ಯಾಜ್ಯಗಳ ಮುಚ್ಚಿಗೆಯಂಥ ಮೇಲ್ಮಣ್ಣು ರಕ್ಷಣಾತಂತ್ರಗಳನ್ನು ಕೈಹಿಡಿಯಬೇಕಿದೆ. ಜೆಸಿಬಿ ಬಳಸಿ ಭೂಸ್ವರೂಪ ಬದಲಾಯಿಸುವುದು ಹಾಗೂ ಮಿತಿಯಿರದ ಅಂತರ್ಜಲ ಬಳಕೆಗೆ ಕಡಿವಾಣ ಬೀಳಬೇಕಿದೆ. ಅತಿಯಾದ ನೀರಾವರಿಯಿಂದ ಮಣ್ಣನ್ನು ಹುಳಿಯಾಗಿಸಿ ಸಾರ ತಗ್ಗಿಸುವ ಸಂದರ್ಭಗಳನ್ನು ತಪ್ಪಿಸಬೇಕಿದೆ. ಗೊಬ್ಬರ, ಕ್ರಿಮಿನಾಶಕಗಳಂಥ ಒಳಸುರಿ ಬಳಸುವಾಗ, ಸುರಕ್ಷತೆ ಹಾಗೂ ಕ್ಷಮತೆ ಯತ್ತಲೂ ಕಾಳಜಿ ವಹಿಸಬೇಕಿದೆ. ಕೃಷಿಯು ದಿಢೀರ್ ಹಣ ಗಳಿಸುವ ಉದ್ಯಮವಲ್ಲ; ಬದುಕನ್ನು ದೀರ್ಘಕಾಲ ಪೋಷಿಸುವ ಜೀವನವಿಧಾನ ಎಂಬುದನ್ನು ಸ್ಮರಣೆಗೆ ತಂದುಕೊಳ್ಳಬೇಕಿದೆ.

ಸರ್ಕಾರ ಹಾಗೂ ಜನಮಾನಸ, ಇವೆರಡೂ ತಪ್ಪು ಮಾಡುತ್ತಿರುವುದನ್ನು ಮುಂಡಗೋಡು ಅಧ್ಯಯನ ತೆರೆದಿಡುತ್ತಿದೆ. ಇದು ನಾಡಿನ ಬಹುತೇಕ ಎಲ್ಲ ಪ್ರದೇಶಗಳ ಚಿತ್ರಣವೂ ಹೌದೆನ್ನಲು ಆಧಾರಗಳೂ ಇವೆ. ಈ ದಿಸೆಯಲ್ಲಿ ತಕ್ಷಣ ಕಾರ್ಯಪ್ರವೃತ್ತರಾಗದಿದ್ದರೆ, ಕೃಷಿ ಪರಿಸ್ಥಿತಿ ಇನ್ನಷ್ಟು ಹಳಿತಪ್ಪಿ, ಭವಿಷ್ಯದಲ್ಲಿ ಆಹಾರ ಉತ್ಪಾದನೆ ತೀವ್ರವಾಗಿ ಕುಸಿಯುವ ಎಲ್ಲ ಸಾಧ್ಯತೆಗಳಿವೆ ಎನ್ನುತ್ತವೆ ಸಂಶೋಧನೆಗಳು. ನಾಡಿನಾದ್ಯಂತ ಅರಣ್ಯ ಹಾಗೂ ಸಾಗುವಳಿ ಪ್ರದೇಶಗಳ ನೆಲದ ರಕ್ಷಣೆಗೆ ಮುಂದಾಗದಿದ್ದಲ್ಲಿ, ರೈತರೂ ಸೇರಿದಂತೆ ನಮ್ಮೆಲ್ಲರ ಬಾಯಿಗೆ ಭವಿಷ್ಯದಲ್ಲಿ ಮಣ್ಣು ಬಿದ್ದೀತು!

ಲೇಖಕ: ನಿರ್ದೇಶಕ, ಸಂರಕ್ಷಣಾ ಜೀವಶಾಸ್ತ್ರ ಮತ್ತು ಸುಸ್ಥಿರ ಅಭಿವೃದ್ಧಿ ಅಧ್ಯಯನ ಕೇಂದ್ರ, ಶಿರಸಿ

ಚುರುಮುರಿ



ನೋಪತಿ ವ್ರತಸ್ಥೆ

● ಆನಂದ

‘ದಶರಥ ತ್ರಿಪತ್ನಿ ವ್ರತಸ್ಥ, ಅವನ ಮಗ ರಾಮ ಏಕಪತ್ನಿ ವ್ರತಸ್ಥ...’ ಹೆಂಡತಿ ಶುರು ಮಾಡಿದಳು.

‘ಈಗ ಈ ವಿಷಯ ಯಾಕೆ?’ ಎಂದೆ.

‘ಅಲ್ರೀ, ಈ ಗುಜರಾತಿನ ಹೆಣ್ಣು ಮಗಳು ‘ನೋಪತಿ ವ್ರತಸ್ಥೆ’ ಆಗುತ್ತಿದ್ದಾಳೆ’.

‘ಅಲ್ಲಮ್ಮಾ, ನಾನು ಸೀತಾಪತಿ, ಅಲೋಪಥಿ, ನ್ಯಾಚುರೋಪಥಿ, ಸಿಂಪಥಿ ಇವನ್ನೆಲ್ಲಾ ಕೇಳಿದ್ದೇನೆ. ಇದ್ಯಾವುದು ನೋಪತಿ?’

‘ಓದಲಿಲ್ಲೇನು ಪೇಪರಿನಲ್ಲಿ? ಆಕೆಗೆ ಮದುವೆ, ಆದರೆ ಗಂಡ ಇರೋಲ್ಲ’.

‘ವ್ಹಾಟ್! ಗಂಡನಿಲ್ಲದ ಮದುವೆ? ಚಟ್ನಿ ಇಲ್ಲದ ಇಡ್ಲಿ ತರಹ?’

‘ಹಾಗೇ ಅನ್ನಿ. ನಿಮಗೆ ಯಾವಾಗಲೂ ತಿಂಡೀನೆ ನೆನಪಿಗೆ ಬರುತ್ತೆ. ಆಕೆಗೆ ಮದುವೆ ಆಗಬೇಕಂತೆ. ಆದರೆ ಗಂಡ ಬೇಡವಂತೆ. ಅದಕ್ಕೇ ನಾನು ಹೇಳಿದ್ದು ನೋಪತಿ ವ್ರತಸ್ಥೆ ಅಂತ’.

‘ಇದಕ್ಕೆ ಇಂಗ್ಲಿಷಿನಲ್ಲಿ ಸೋಲೋಗಮಿ ಅಂತಾರೆ. ಮನಾಗಮಿಗೆ ರಾಮ ಉದಾಹರಣೆ. ಪಾಲಿಗಮಿಗೆ ದಶರಥ ಉದಾಹರಣೆ. ಆದರೆ ಈ ಹೆಣ್ಣು ಮಗಳೇಕೆ ಈ ನಿರ್ಧಾರಕ್ಕೆ ಬಂದಳು?’

‘ಮದುವೇನೂ ಆಗಬೇಕು ಆದರೆ ಗಂಡ ಬೇಡ. ತನಗೆ ತಾನೇ ಯಜಮಾನರು ಅಥವಾ ಯಜಮಾನಿ’.

‘ಅದಕ್ಕೇಕೆ ಮದುವೆ? ಸಿಂಗಲ್ಲಾಗಿ ಇದ್ದರೆ ಸಾಲದೆ?’

‘ಆಗ ಎಲ್ಲರೂ ಅಂತಹವರನ್ನು ಅನ್‌ಮ್ಯಾರೀಡ್ ಅಂತಾರೆ. ಹಾಗೆ ಕರೆಸಿಕೊಳ್ಳೋದು ಆಕೆಗೆ ಇಷ್ಟ ಇಲ್ಲ ಅಂತ ಕಾಣುತ್ತೆ’.

‘ಹಾಗಿದ್ದರೆ ಈಗ ಮ್ಯಾರೀಡ್ ಬಟ್ ಸಿಂಗಲ್. ನಾಳೆ ಯಾವುದಾದರೂ ಅರ್ಜಿ ತುಂಬ ಬೇಕಾದರೆ ಅಲ್ಲಿ ‘ಮ್ಯಾರೀಡ್?’ ಅನ್ನೋ ಕಡೆ ‘ಯೆಸ್’ ಅಂತ ಬರೆದು ‘ಗಂಡನ ಹೆಸರು’ ಎಂದಿರುವ ಕಡೆ ಈಕೆ ಅದನ್ನು ಖಾಲಿ ಬಿಡ್ತಾಳೋ ಅಥವಾ ತನ್ನ ಹೆಸರೇ ಬರ್ಕೊತಾಳೋ...’

‘ಅವಳ ಹೆಸರೇ ಬರೀಬೇಕೇನೊ. ಏಕೆಂದರೆ ಆಕೆ ತನ್ನನ್ನು ತಾನೇ ವರಿಸಿದ್ದಾಳಲ್ಲ? ಇದರಿಂದ ಸ್ಫೂರ್ತಿ ಪಡೆದುಕೊಂಡು ಯಾರಾದರೂ ಗಂಡಸರು ಹೀಗೆ ತಮ್ಮನ್ನು ತಾವೇ ಮದುವೆ ಆಗಬಹುದೆ?’

‘ಖಂಡಿತ. ಆದರೆ ಅವನಿಗೆ ಅಡುಗೆ ಮಾಡೋದಿಕ್ಕೆ ಬರುತ್ತಿರಬೇಕಷ್ಟೆ...’

ಸಂಗತ

ಇದು ಬರೀ ‘ಮಕ್ಕಳಾಟ’ ಅಲ್ಲ!

ಮಕ್ಕಳು ಆಡುವ ವಿಡಿಯೊ ಗೇಮ್‌ಗಳು ತಂದೊಡ್ಡುವ ಅಪಾಯಗಳ ಬಗ್ಗೆ ಗಂಭೀರವಾಗಿ ಯೋಚಿಸಬೇಕಾದ ತುರ್ತು ಈ ಹೊತ್ತಿನದು

● ಡಾ. ಕೆ.ಎಸ್.ಪವಿತ್ರ

2019ರಲ್ಲಿ ನಮ್ಮ ರಾಜ್ಯದ ಬೆಳಗಾವಿ ಜಿಲ್ಲೆಯಲ್ಲಿ ಪಬ್‌ಜಿ ಮೊದಲಾದ ವಿಡಿಯೊ ಗೇಮ್‌ಗಳಲ್ಲಿ ಮುಳುಗಿದ ಮಗ, ಅದನ್ನು ವಿರೋಧಿಸಿದ ತಂದೆಯನ್ನೇ ಕೊಂದ ಪ್ರಕರಣ ವರದಿಯಾಗಿತ್ತು. ವರದಿಯಾದಷ್ಟೇ ಬೇಗ ಅದು ಮರೆಗೂ ಸರಿದಿತ್ತು. ಇದೀಗ ಇತಿಹಾಸ ಮರುಕಳಿಸಿದೆ. ಲಖನೌದಲ್ಲಿ ಇದೇ ಕಾರಣಕ್ಕೆ 16 ವರ್ಷದ ಹುಡುಗ ತನ್ನ ತಾಯಿಯನ್ನು ಕೊಲೆ ಮಾಡಿ, ಆನಂತರ ಅದನ್ನು ಮುಚ್ಚಿಟ್ಟು, ತಂಗಿಯನ್ನೂ ಬೆದರಿಸಿರುವುದು ವರದಿಯಾಗಿದೆ.

ಹದಿಹರೆಯದಲ್ಲಿ ರಿವಾಲ್ವರ್ ಉಪಯೋಗಿಸುವ ಧೈರ್ಯ, ಕೊಲೆಯನ್ನು ಮುಚ್ಚಿಡಲು ಆತ ಬಳಸಿದ ತಂತ್ರಗಳು, ತಾಯಿಯನ್ನೇ ಕೊಲೆ ಮಾಡುವ ಮನಃಸ್ಥಿತಿಯನ್ನು ನೋಡಿದರೆ ಎಳೆಮನಸ್ಸುಗಳ ಅಕಾಲಿಕ ‘ಪ್ರಬುದ್ಧತೆ’, ಅಸಹಜ ಕ್ರೌರ್ಯ ಅರಿವಿಗೆ ಬರುತ್ತವೆ. ಜೀವನಮೌಲ್ಯ ಎನ್ನುವ ಪದ ಪ್ರಸ್ತುತ ಸಮಾಜದಲ್ಲಿ ತನ್ನ ಮೌಲ್ಯ ಕಳೆದುಕೊಂಡಿದೆ ಎಂದೆನಿಸಿಬಿಡುತ್ತದೆ.

ವಿಡಿಯೊ ಗೇಮ್‌ಗಳನ್ನು ‘ಮಕ್ಕಳಾಟ’ ಎಂದು ನಾವು ಹಿರಿಯರು ದೂರ ತಳ್ಳಬಹುದು. ಆದರೆ ಅವುಗಳ ಬಗ್ಗೆ ಗಂಭೀರವಾಗಿ ಯೋಚಿಸಬೇಕಾದ ತುರ್ತು ಈ ಹೊತ್ತಿನದು. ಪಬ್‌ಜಿ ಎಂಬ ಆಟವನ್ನೇ ಸ್ವಲ್ಪ ವಿವರವಾಗಿ ಗಮನಿಸೋಣ. ಈಗ ಪ್ರಚಲಿತದಲ್ಲಿರುವ ‘ಬ್ಯಾಟಲ್ ಗ್ರೌಂಡ್ಸ್’, ಹೆಸರು ಬದಲಿಸಿಕೊಂಡಿರುವ ಮೊದಲಿನ ಪಬ್‌ಜಿ ಆಟ. ಕ್ರಾಫ್ಟನ್ ಎಂಬ ಕಂಪನಿಯ ‘ಪ್ಲೇಯರ್ ಅನ್‌ನೋನ್ ಬ್ಯಾಟಲ್ ಗ್ರೌಂಡ್ಸ್’ ಎಂಬ ಈ ಆಟ ಜಪಾನಿ ಸಿನಿಮಾ ‘ಬ್ಯಾಟಲ್ ರಾಯೇಲ್’ ಅನ್ನು ಆಧರಿಸಿದ ‘ವರ್ಚುವಲ್ ಗೇಮ್’. ಈ ವರ್ಷದ ಏಪ್ರಿಲ್ ವೇಳೆಗೆ ಬ್ಯಾಟಲ್ ಗ್ರೌಂಡ್ಸ್ ಆಟದ ವಿವಿಧ ಅವತರಣಿಕೆಗಳು (ವಿವಿಧ ಗಾತ್ರದ ಆ್ಯಂಡ್ರಾಯ್ಡ್, ಮೊಬೈಲ್, ಡೆಸ್ಕ್‌ಟಾಪ್- ಟ್ಯಾಬ್ ಇತ್ಯಾದಿ ತೆರೆಗಳಿಗೆ ಹೊಂದಿಕೊಂಡಂತೆ) ಕಂಪನಿಗೆ ನೀಡಿದ ಅಂದಾಜು ಆದಾಯ ಸುಮಾರು ಒಂದು ಲಕ್ಷ ಕೋಟಿ ರೂಪಾಯಿಗೂ ಹೆಚ್ಚು.

ಪಬ್‌ಜಿ ಕಾರ್ಪೊರೇಷನ್‌ನಿಂದ ಹಲವು ಟೂರ್ನಮೆಂಟ್‌ಗಳು ಪಬ್‌ಜಿ ಆಟಗಾರರಿಗೆಂದೇ ನಡೆಯುತ್ತಿವೆ. ಜಗತ್ತಿನ ಶೇಕಡ 25ರಷ್ಟು ಪಬ್‌ಜಿ ಬಳಕೆದಾರರು ಭಾರತೀಯ ಯುವಜನರು ಎನ್ನುವುದು ತಂತ್ರಜ್ಞಾನದಲ್ಲಿ ದಾಪುಗಾಲಿಕ್ಕುತ್ತಿರುವ ನಮಗೆ ಅಚ್ಚರಿಯ ಮಾತೇನೂ ಅಲ್ಲ. ಹಾಗೆಯೇ ಪಬ್‌ಜಿ ವ್ಯಸನದ ಕಥೆಗಳೂ ವರದಿಯಾಗುತ್ತಲೇ ಇವೆ. ತಂದೆ, ತಾಯಿಯನ್ನು ಕೊಂದಾಗ ಅದು ಮೊದಲ ಪುಟದ ಸುದ್ದಿಯಾಗುತ್ತದೆ. ಇನ್ನುಳಿದಂತೆ ಇದರ ಇತರ ಪರಿಣಾಮಗಳ ಬಗೆಗೆ ಗಮನ ಹರಿಸಲು, ಏನಾದರೂ ಬದಲಾಗುವಂತೆ ಮಾಡಲು, ನಮ್ಮದೇ ‘ಅಂತರ್ಯುದ್ಧ’ಗಳಲ್ಲಿ ಮುಳುಗಿರುವ ನಮಗೆ ಸಮಯವೇ ಇಲ್ಲ!

ಜಮ್ಮುವಿನ ಫಿಟ್‌ನೆಸ್ ತರಬೇತುದಾರರೊಬ್ಬರು ಪಬ್‌ಜಿ ವ್ಯಸನದಿಂದ ಗಂಭೀರ ಮಾನಸಿಕ ಅಸ್ವಸ್ಥತೆಯಿಂದ ಆಸ್ಪತ್ರೆಗೆ ದಾಖಲಾದ ಉದಾಹರಣೆಯಿದೆ. ಪಂಜಾಬ್‌ನಲ್ಲಿ ಹದಿಹರೆಯದ ಬಾಲಕ ತನ್ನ ಸಾಧನಗಳನ್ನು ‘ಅಪ್‌ಗ್ರೇಡ್’ ಮಾಡಿಕೊಂಡು, ತನ್ನ ಆಟದ ಬಲ ವರ್ಧಿಸಿಕೊಳ್ಳಲು ತಂದೆ-ತಾಯಿಯರ ಬ್ಯಾಂಕ್ ಖಾತೆಯಿಂದ ₹ 16 ಲಕ್ಷ ವ್ಯಯಿಸಿದ ನಿದರ್ಶನವಿದೆ. ಇವೆಲ್ಲವೂ ಸಮಾಜ, ಕೌಟುಂಬಿಕ ವ್ಯವಸ್ಥೆ, ಹಿಂಸೆ, ಹತಾಶೆ, ಚಡಪಡಿಕೆ, ಪೋಷಕತ್ವ ಇವೆಲ್ಲದರ ಬಗೆಗೆ ಹಲವು ಪ್ರಶ್ನೆಗಳನ್ನು ಏಕಕಾಲಕ್ಕೆ ಎತ್ತುವಂತಿವೆ.

ಆಡಳಿತ ವ್ಯವಸ್ಥೆಯು ಹಿಂದಿನ ಪಬ್‌ಜಿ ಗೇಮ್ ಅನ್ನು ನಿಷೇಧಿಸಿತ್ತು. ಆದರೆ ಅದರ ಹಿಂದಿನ ಕಾರಣ ಪಬ್‌ಜಿಯಿಂದ ಒದಗಬಹುದಾದ ಆರೋಗ್ಯದ ದುಷ್ಪರಿಣಾಮಗಳಲ್ಲ. ರಾಷ್ಟ್ರೀಯ ಸುರಕ್ಷತೆ ಮತ್ತು ದತ್ತಾಂಶ ಕಳವಿನ ಕಾರಣವೇ ಪ್ರಧಾನವಾಗಿತ್ತು! ಪಬ್‌ಜಿ ಗೇಮ್‌ನಂತಹ ಆಟಗಳನ್ನು ಅನುಮತಿಯಿರದೆ ಬಿಡುಗಡೆ ಮಾಡುವುದರ ಬಗ್ಗೆ ಮಕ್ಕಳ ಹಕ್ಕುಗಳಿಗಾಗಿ ಹೋರಾಡುವ ಸಂಸ್ಥೆಗಳು ಮಾಡಿದ ಮನವಿ-ಆಗ್ರಹಗಳು ವಾಣಿಜ್ಯೋದ್ಯಮದ ಶಕ್ತಿಯ ಮುಂದೆ ಹೆಚ್ಚೇನೂ ಪರಿಣಾಮ ಬೀರಿದಂತಿಲ್ಲ.



ವಿಶ್ವ ಆರೋಗ್ಯ ಸಂಸ್ಥೆ ‘ಗೇಮಿಂಗ್ ಸಮಸ್ಯೆ’ ಎನ್ನುವ ವ್ಯಸನವನ್ನು ವಿವರಿಸಿದೆ. ಆಟವಾಡುವುದೇ ಜೀವನದ ಕೇಂದ್ರವಾಗುವುದು, ಆಟವಾಡುವ ಸಮಯದ ಮೇಲೆ ನಿಯಂತ್ರಣ ಇಲ್ಲದಿರುವುದು, ಅದರಿಂದ ಜೀವನದಲ್ಲಿ ಸಮಸ್ಯೆಗಳು ಉಂಟಾಗುತ್ತಿವೆ ಎಂಬ ಅರಿವಿನ ನಡುವೆಯೂ ಮುಂದುವರಿಸುವುದು, ಹಿಂದಿದ್ದ ಹವ್ಯಾಸಗಳು- ಮನರಂಜನೆ ಎಲ್ಲವನ್ನೂ ಬದಿಗಿರಿಸಿ ಆಟದಲ್ಲೇ ಮುಳುಗುವುದು, ಆಟವಾಡಲು ಬಿಡದಿದ್ದಾಗ ಖಿನ್ನತೆ, ಆಕ್ರೋಶ, ಕಿರಿಕಿರಿ, ಆತಂಕ, ಚಡಪಡಿಕೆಯಂತಹ ‘ಹಿಂತೆಗೆತ’ದ ಪರಿಣಾಮಗಳು– ಈ ಐದು ನಮ್ಮನ್ನು ‘ಎಚ್ಚರಿಸಬೇಕಾದ ಚಿಹ್ನೆ’ಗಳು. ಇವು ಕಂಡುಬಂದವರಿಗೆ ಚಿಕಿತ್ಸೆಯ ಅಗತ್ಯವಿದೆ.

ಮಾದಕದ್ರವ್ಯ ವ್ಯಸನದಂತೆಯೇ ‘ಗೇಮಿಂಗ್ ವ್ಯಸನ’. ಇಲ್ಲಿಯೂ ಇತರ ಎಲ್ಲಾ ವ್ಯಸನಗಳಂತೆ ಮಿದುಳಿನ ಡೋಪಮಿನ್ ವ್ಯೂಹಗಳು ಆನಂದದ ಅನುಭವ ನೀಡುತ್ತವೆ. ಆನಂದಕ್ಕಾಗಿ ಯಾವುದನ್ನೂ ಸಹಿಸುವ, ಯಾರನ್ನೂ ಲೆಕ್ಕಿಸದ ಮನಃಸ್ಥಿತಿ ಸೃಷ್ಟಿಯಾಗುತ್ತದೆ. ಮಕ್ಕಳು ಆಡುವ ಆಟದಂತೆಯೇ ನಿಜಜೀವನವನ್ನೂ ಗ್ರಹಿಸುವುದು ಸಹಜವೇ. ತಾಯಿಯನ್ನೇ ಕೊಲ್ಲುವ ಮನಃಸ್ಥಿತಿಯ ಹಿಂದಿರುವುದೂ ಇದೇ!

ಮೊಬೈಲ್ ಬಳಕೆಯ ಬಗೆಗೆ ಹಿರಿಯರಿಗೆ ಇರಬೇಕಾದ ನಿಯಂತ್ರಣ, ಮಕ್ಕಳಿಗೆ ನಿಯಂತ್ರಣ ವಿಧಿಸಬಲ್ಲ ಹಿರಿಯರ ಸಾಮರ್ಥ್ಯ, ಬದಲಿ ಆರೋಗ್ಯಕರ ಮನರಂಜನೆಗಳಿಗೆ ಮನವೊಲಿಕೆ, ವಿಡಿಯೊ ಗೇಮಿಂಗ್ ಬದಲು ಹೊರಗೆ ಹೋಗಿ ನಿಜ ಮನುಷ್ಯರೊಡನೆ ಆಟ ಇವು ಇಂಥ ಸಮಸ್ಯೆಗಳು ಮರುಕಳಿಸದಂತೆ ನಾವು ಅಗತ್ಯವಾಗಿ ರೂಢಿಸಿಕೊಳ್ಳಬೇಕಾದ ತಂತ್ರೋಪಾಯಗಳು.

ಲೇಖಕಿ: ಮನೋವೈದ್ಯೆ

ವಾಚಕರ ವಾಣಿ

ಚಿಂತಕರ ಪರ ಯಾರೂ ಇಲ್ಲ!

ಶಾಂತವೇರಿ ಗೋಪಾಲಗೌಡ ಅವರು ನಿಧನರಾಗಿ ಅರ್ಧ ಶತಮಾನ ಗತಿಸಿರುವುದು ‘50 ವರ್ಷಗಳ ಹಿಂದೆ’ (ಪ್ರ.ವಾ., ಜೂನ್ 9) ಅಂಕಣದಲ್ಲಿ ಪ್ರಕಟವಾಗಿದೆ. ಮಹಾನ್ ಮಾನವತಾವಾದಿ ಮತ್ತು ಚಿಂತಕ ರಾಮಮನೋಹರ ಲೋಹಿಯಾ ಅವರಿಂದ ಪ್ರಭಾವಿತರಾಗಿ ತಮ್ಮ ರಾಜಕೀಯ ಜೀವನವನ್ನು ರೂಪಿಸಿಕೊಂಡವರು ಗೋಪಾಲಗೌಡರು. ಜೆ.ಎಚ್.ಪಟೇಲ್, ಎಸ್. ಬಂಗಾರಪ್ಪ, ಕಾಗೋಡು ತಿಮ್ಮಪ್ಪ ಅವರಂಥ ದಿಗ್ಗಜರನ್ನು ಬೆಳಕಿಗೆ ತಂದ ಕೀರ್ತಿ ಅವರದು.

ಗೌಡರಂಥ ವ್ಯಕ್ತಿಗಳು ಒಂದು ಕಾಲದಲ್ಲಿ ಇದ್ದರೇ ಎಂದು ಈಗ ಸಂಶಯ ಮೂಡುತ್ತದೆ. ವಿಷಾದದ ಸಂಗತಿ ಎಂದರೆ, ರಾಮಮನೋಹರ ಲೋಹಿಯಾ ಮತ್ತು ಶಾಂತವೇರಿ ಗೋಪಾಲಗೌಡ ಅವರಂತಹವರ ವಿಷಯವನ್ನು ಶಾಲಾ ಪಠ್ಯಪುಸ್ತಕಗಳಲ್ಲಿ ಅಳವಡಿಸಿ ಎಂದು ಹೇಳುವವರು ಯಾರೂ ಇಲ್ಲದಿರುವುದು!

ಮುರುಗೇಶ ಹನಗೋಡಿಮಠ, ಹುಬ್ಬಳ್ಳಿ

‘ಟ್ರಾಯ್’ ಸ್ವಾಗತಾರ್ಹ ಕ್ರಮ

ನಮ್ಮ ಫೋನ್‌ಗಳಿಗೆ ಕರೆ ಬಂದಾಗ ಕರೆ ಮಾಡಿದ ವ್ಯಕ್ತಿಯ ಹೆಸರು ಸ್ಕ್ರೀನ್ ಮೇಲೆ ಕಾಣುವ ಸೌಲಭ್ಯವನ್ನು ಟೆಲಿಕಾಂ ನಿಯಂತ್ರಣ ಪ್ರಾಧಿಕಾರ (ಟ್ರಾಯ್) ಜಾರಿಗೆ ತರಲು ಮುಂದಾಗಿರುವುದು ಸ್ವಾಗತಾರ್ಹ. ಅತ್ಯಂತ ಹೆಚ್ಚು ಸ್ಪ್ಯಾಮ್ ಕರೆಗಳು ಬರುತ್ತಿರುವ ದೇಶಗಳಲ್ಲಿ ಭಾರತ ನಾಲ್ಕನೇ ಸ್ಥಾನದಲ್ಲಿರುವುದು ಇತ್ತೀಚಿನ ಸಮೀಕ್ಷೆಯಿಂದ ಬಹಿರಂಗವಾಗಿತ್ತು. ದೇಶದಲ್ಲಿ ಬ್ಯಾಂಕಿಂಗ್, ಇ- ಕಾಮರ್ಸ್ ಹೆಸರಿನಲ್ಲಿ ಅಪರಿಚಿತರಿಂದ ಸ್ಪ್ಯಾಮ್ ಕರೆಗಳು ಬರುತ್ತಿರುತ್ತವೆ. ಇಂತಹ ಕರೆಗಳ ನೈಜತೆ ತಿಳಿಯದೆ ಜನರು ಬ್ಯಾಂಕ್ ಖಾತೆ ವಿವರದಂತಹ ಗೋಪ್ಯ ಮಾಹಿತಿಯನ್ನು ನೀಡಿ ವಂಚನೆಗೆ ಒಳಗಾಗುತ್ತಲೇ ಇರುತ್ತಾರೆ. ಸಿಮ್ ಕಾರ್ಡ್ ಪಡೆಯುವಾಗ ಕಂಪನಿಗೆ ನೀಡಿದ ಕೆವೈಸಿ (ನೋ ಯುವರ್ ಕಸ್ಟಮರ್) ವಿವರದಲ್ಲಿ ನೀಡಿದ ಹೆಸರು ಮೊಬೈಲ್ ಸ್ಕ್ರೀನ್ ಮೇಲೆ ಕಾಣಲಿದೆ. ಇದರಿಂದ ಜನರನ್ನು ವಂಚನೆಯಿಂದ ತಪ್ಪಿಸಲು ಸಾಧ್ಯವಾಗಲಿದೆ.

ಚನ್ನಕೇಶವ ಜಿ.ಕೆ., ತರೀಕೆರೆ

ದುಂಡಾವರ್ತಿಗೆ ಮಣಿಯದ ಪೊಲೀಸರು

ಬೆಂಗಳೂರಿನಲ್ಲಿ ಇತ್ತೀಚೆಗೆ ರಾಜಭವನದ ಕಡೆಗೆ ನಿರ್ಲಕ್ಷ್ಯ ಮತ್ತು ಅತಿವೇಗದಿಂದ ಕಾರನ್ನು ಚಾಲನೆ ಮಾಡಿಕೊಂಡು ಬಂದ ತರುಣಿಯನ್ನು ತಡೆದು ಪೊಲೀಸರು ₹ 1,000 ದಂಡ ವಿಧಿಸಿದ್ದಾರೆ. ಈ ತರುಣಿ ಸಂಚಾರ ನಿಯಮವನ್ನು ಮೀರಿರುವುದು ಇದೇ ಮೊದಲಲ್ಲ. ಒಂಬತ್ತು ಸಾರಿ ತಪ್ಪು ಮಾಡಿದ್ದು, ಅದೂ ಸೇರಿಸಿ ಈಗ ಕಟ್ಟಿರುವ ಜುಲ್ಮಾನೆ ಹತ್ತು ಸಾವಿರ ರೂಪಾಯಿ. ತಪ್ಪು ಮಾಡಿ ಸಿಕ್ಕಿಹಾಕಿಕೊಂಡ ಮೇಲೆ ‘ನಾನು ಯಾರು ಗೊತ್ತಾ? ಶಾಸಕ ಅರವಿಂದ ಲಿಂಬಾವಳಿ ಪುತ್ರಿ. ನನ್ನಲ್ಲಿ ಎಲ್ಲ ದಾಖಲೆಗಳಿವೆ, ನನ್ನನ್ನು ತಡೆದರೆ ಪರಿಣಾಮ ನೆಟ್ಟಗಿರದು’ ಎಂದು ದುಂಡಾವರ್ತಿಯಿಂದ ಅವರು ಪೊಲೀಸರ ಮೇಲೆ ಧಮಕಿ ಹಾಕಿದ್ದಾರೆ. ತರುಣಿ ತಪ್ಪು ಎಸಗಿರುವುದಕ್ಕೆ ಅವರ ಹಿಂದಿನ 9 ಪುರಾವೆಗಳಿವೆ.

ಆದರೆ ತರುಣಿಯು ಕಾರು ಚಲಾಯಿಸುತ್ತಿರಲಿಲ್ಲ ಎಂದು ಸಮಜಾಯಿಷಿ ನೀಡುವ ಪ್ರಯತ್ನ ನಡೆದಿದೆ. ಇದು ಮೂರ್ಖತನದ ಪರಮಾವಧಿ. ಟಿ.ವಿ.ಯಲ್ಲಿ ಪ್ರಸಾರವಾದ ದೃಶ್ಯಗಳನ್ನು ನೋಡಿದರೆ ತಿಳಿಯುತ್ತದೆ, ತರುಣಿಯು ಪೊಲೀಸರ ಮೇಲೆ ಧಮಕಿ ಹಾಕಿ ನೇರವಾಗಿ ಚಾಲನಾ ಸ್ಥಳದಲ್ಲಿ ಕುಳಿತಿದ್ದು. ತರುಣಿಯದು ತಪ್ಪು ತಿಳಿಯದ ಎಳೆಯ ಪ್ರಾಯವಲ್ಲ. ತಪ್ಪೆಸಗಿ ಪೊಲೀಸರ ಜೊತೆ ಜಗಳಕ್ಕೆ ಇಳಿಯದೆ, ತಪ್ಪನ್ನು ಒಪ್ಪಿಕೊಂಡಿದ್ದರೆ ಅಂತಹ ಆದರ್ಶವು ತರುಣಿಯನ್ನು ದೊಡ್ಡ ಮನುಷ್ಯಳನ್ನಾಗಿ ಮಾಡುತ್ತಿತ್ತು. ಜನಪ್ರತಿನಿಧಿಯ ಮಗಳು ಎಂದು ಹೇಳಿದರೂ ಕಾನೂನು ಚೌಕಟ್ಟಿನಲ್ಲಿ ಕ್ರಮ ಜರುಗಿಸಿದ ಪೊಲೀಸರ ಕ್ರಮ ಅಭಿನಂದನಾರ್ಹ.

ಟಿ.ಎಂ.ಶಿವಶಂಕರ್, ಬೆಂಗಳೂರು

ಮೆರೆಸದಿದ್ದರೇನಂತೆ...?

ಪ್ರಿಯ ಸೋದರಿ ಮಿಥಾಲಿ ರಾಜ್
ನಿಮ್ಮ 23 ವರ್ಷದ ಕ್ರಿಕೆಟ್ ಲೋಕದ
ಸಾಧನೆಯ ಪಯಣಕೆ ನಮ್ಮ ನಮನ...
ಈ ಥೂತ್ ಪೇಸ್ಟ್‌ನಲ್ಲಿ ಹಲ್ಲುಜ್ಜುವೆ,
ಈ ಸೋಪು ಬಳಸುವೆ
ಎಂದೆಲ್ಲ ಹೇಳಲು ಕಂಪನಿಗಳು
ನಿಮ್ಮನ್ನು ಕರೆದು ಮೆರೆಸದಿದ್ದರೇನಂತೆ...
ಮಹಿಳಾ ಕ್ರಿಕೆಟ್ ನಭದಲ್ಲಿ
ನೀವೆಂದೆಂದೂ ಮಸುಕಾಗದ ಧ್ರುವತಾರೆ
ನಿಮ್ಮ ಸಾಧನೆಗೆ ಭಾರತವು ಸದಾ
ಹರಿಸುತ್ತಲೇ ಇರುತ್ತದೆ ಹರ್ಷಧಾರೆ.

ಜೆ.ಬಿ.ಮಂಜುನಾಥ, ಪಾಂಡವಪುರ

ಶಿಥಿಲ ಆಡಳಿತ ವ್ಯವಸ್ಥೆಯ ಅಣಕ

ಶಂಕಿತ ಉಗ್ರ ಬೆಂಗಳೂರಿನಲ್ಲಿ ನಾಲ್ಕು ವರ್ಷಗಳ ಕಾಲ ಅಡಗಿದ್ದುದನ್ನು ಪತ್ತೆ ಮಾಡಿರುವ ನಮ್ಮ ಪೊಲೀಸರ ಕಾರ್ಯ ಶ್ಲಾಘನೀಯ. ಆದರೆ ಉಗ್ರನ ಪತ್ನಿ ರಾಜ್ಯದ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಂಡಿರುವುದಲ್ಲದೆ ಆಧಾರ್ ಕಾರ್ಡ್ ಸಹ ಮಾಡಿಸಿಕೊಂಡಿರುವುದು ಶಿಥಿಲಗೊಂಡಿರುವ ನಮ್ಮ ಆಡಳಿತ ವ್ಯವಸ್ಥೆಯ ಅಣಕವಾಗಿದೆ. ಕಾಸು ಕೊಟ್ಟರೆ ರಾಜ್ಯವನ್ನೇ ಮಾರಲು ಸಿದ್ಧವಿರುವ ಕೆಲವು ಸರ್ಕಾರಿ ಅಧಿಕಾರಿಗಳು ಮತ್ತು ನೌಕರರಿಂದಾಗಿ ದೇಶವು ಇಂತಹ ಹಲವು ಅವಾಂತರಗಳನ್ನು ಎದುರಿಸಬೇಕಾಗಿದೆ.


ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಕಾಫಿ ತೋಟಗಳಲ್ಲಿ ಕಡಿಮೆ ಕೂಲಿಗೆ ದುಡಿಯಲು ಬಂದಿರುವ ಬಾಂಗ್ಲಾದೇಶದ ಪ್ರಜೆಗಳು ಅಗತ್ಯ ದಾಖಲೆಗಳನ್ನು ಮಾಡಿಸಿಕೊಂಡು ಇಲ್ಲಿಯವರೇ ಆಗುತ್ತಿದ್ದಾರೆ. ದೇಶದ ಆಂತರಿಕ ಭದ್ರತೆಗೆ ಆತಂಕ ತಂದೊಡ್ಡುವ ಸಾಧ್ಯತೆ ಇರುವ ಈ ವಿದೇಶಿಯರನ್ನು ದೇಶದೊಳಕ್ಕೆ ಬಿಟ್ಟ, ಇವರಿಗೆ ಆಧಾರ್ ಕಾರ್ಡ್, ರೇಷನ್ ಕಾರ್ಡ್, ಚುನಾವಣಾ ಗುರುತಿನ ಚೀಟಿಯಂತಹ ದಾಖಲೆಗಳನ್ನು ಮಾಡಿಸಿಕೊಟ್ಟವರಿಗೆ ಕಠಿಣ ಶಿಕ್ಷೆ ಕೊಡಿಸಬೇಕಾಗಿದೆ. ಇಲ್ಲದಿದ್ದರೆ ಕರ್ನಾಟಕವೂ ಸೇರಿದಂತೆ ಹಲವು ರಾಜ್ಯಗಳಲ್ಲಿನ ಮೂಲನಿವಾಸಿಗಳು ಅಸ್ಸಾಂನಂತಹ ರಾಜ್ಯವು ಇನ್ನೂ ಎದುರಿಸುತ್ತಿರುವ ಸಮಸ್ಯೆಗಳನ್ನು ಎದುರಿಸುವ ಕಾಲ ಬಹುದೂರ ಇರಲಾರದು ಎನಿಸುತ್ತದೆ.

ಮೋದೂರು ಮಹೇಶಾರಾಧ್ಯ, ಕಲ್ಕುಣಿಕೆ, ಹುಣಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಪರಿಷ್ಕೃತ ಪಠ್ಯದ ಕುರಿತು ಸಾರ್ವಜನಿಕರಿಂದ ಆಕ್ಷೇಪ ಆಹ್ವಾನ ಸರಿಯಾದ ಕ್ರಮವೇ?

ಆಕ್ಷೇಪ ಆಹ್ವಾನ ಜೇನುಗೂಡಿಗೆ ಕಲ್ಲೆಸೆದಂತೆ



ಸಾರ್ವಜನಿಕರ ಅಭಿಮತದ ಆಧಾರದಲ್ಲಿ ತಿದ್ದುಪಡಿಯಾದ ಪಠ್ಯವು ಎಲ್ಲರಿಗೂ ಒಪ್ಪಿತವಾಗಬಹುದೇ? ಎಷ್ಟೋ ಜಾತಿಗಳು ಮತ್ತು ಗುಂಪುಗಳು ತಮಗೆ ಸಂಬಂಧಿಸಿದ ಪಾಠವು ಪಠ್ಯದಲ್ಲಿ ಸೇರಿಲ್ಲ ಎಂದು ಗದ್ದಲ ಎಬ್ಬಿಸಬಹುದು. ಆಗ ಮತ್ತೆ ತಿದ್ದುಪಡಿ ಮಾಡಲು ಸರ್ಕಾರ ಮುಂದಾಗುವುದೇ? ಮತ್ತೆ ತಿದ್ದುಪಡಿ, ಮತ್ತೆ ಸಾರ್ವಜನಿಕ ಆಕ್ಷೇಪ ಆಹ್ವಾನ, ಮತ್ತೆ ತಿದ್ದುಪಡಿ... ಹೀಗೆ ಇದು ಕೊನೆಯಿಲ್ಲದಂತೆ ಸಾಗುತ್ತಲೇ ಇರಬಹುದು




• ಡಾ. ರಾಜಪ್ಪ ದಳವಾಯಿ

ಪಠ್ಯ ಪುಸ್ತಕಗಳು ನಮ್ಮ ಮನೋಧರ್ಮವನ್ನು ರೂಪಿಸುತ್ತವೆ. ಅವು ಕಲಿಸುವವರ-ಕಲಿಯುವವರ ಮನಸ್ಸನ್ನು ಕಟ್ಟುವ ಕೆಲಸ ಮಾಡುತ್ತವೆ. ಯಾವ ಹಂತದ ಮಗುವಿಗೆ ಏನನ್ನು ಕಲಿಸಬೇಕು ಎಂಬುದಕ್ಕೆ ಒಂದು ಲೆಕ್ಕಾಚಾರ ಇದೆ. ಪಠ್ಯ ಪುಸ್ತಕ ರಚನೆಯಲ್ಲಿ ಪಾಲಿಸಬೇಕಾದ ಆಶಯ, ಶಿಸ್ತಿಗಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಎಂಬುದಿದೆ. ಅದರಡಿಯಲ್ಲಿಯೇ ಪಠ್ಯಗಳು ರಚನೆಯಾಗಬೇಕು. ಪಠ್ಯ ಪರಿಷ್ಕರಣೆ ಎಂಬುದು ಸುಲಭವೂ ಅಲ್ಲ; ಸರ್ವಮಾನ್ಯವೂ ಅಲ್ಲ. ಎಂಥ ಪಠ್ಯವೇ ಆದರೂ ಅಸಮಾಧಾನ, ಭಿನ್ನಾಭಿಪ್ರಾಯಗಳನ್ನು ಒಳಗೊಂಡಿರುತ್ತದೆ. ಏಕೆಂದರೆ ಏಕಾಭಿಪ್ರಾಯದ ಪಠ್ಯ ತಯಾರಿಕೆ ಎಲ್ಲ ಕಾಲಕ್ಕೂ ಸವಾಲಿನದ್ದೇ ಆಗಿದೆ. ಅದರಲ್ಲೂ ಬಹುತ್ವ ಭಾರತದಲ್ಲಿ ಇದು ಸದಾ ಸಂದಿಗ್ಧವೇ ಆಗಿರುತ್ತದೆ. ಕರ್ನಾಟಕದ ಪಠ್ಯಗಳು ರಾಜಕಾರಣದಿಂದ ಮುಕ್ತವಾಗಿರಬೇಕಾಗಿತ್ತು. ಆದರೆ, ಪಠ್ಯವನ್ನೇ ರಾಜಕಾರಣಗೊಳಿಸಿದ ಕಾರಣ ಶೈಕ್ಷಣಿಕ ಚರ್ಚೆಗಳು ನಗಣ್ಯವಾಗಿ ರಾಜಕಾರಣ ಮತ್ತು ಜಾತೀಯ ಚಹರೆಗಳ ಬಗೆಗೆ ಹೆಚ್ಚು ಚರ್ಚೆಗಳಾಗಿ ಒಟ್ಟಾರೆಯಾಗಿ ದಿಕ್ಕು ತಪ್ಪಿದ ಚರ್ಚೆಗಳಾಗಿ, ಗೊಂದಲವಲ್ಲದೇ ಬೇರೇನೂ ಇಲ್ಲದಂತೆ ಕಾಣುತ್ತಿದೆ.

ಪಠ್ಯ ಪರಿಷ್ಕರಣೆ ಪೂರ್ಣಗೊಂಡ ಬಳಿಕ ಪಠ್ಯ ಪುಸ್ತಕಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಿ, ಸಾರ್ವಜನಿಕರ ಆಕ್ಷೇಪ ಆಹ್ವಾನಿಸಿ, ಅದರ ಆಧಾರದಲ್ಲಿ ಪಠ್ಯದಲ್ಲಿ ತಿದ್ದುಪಡಿ ಮಾಡಲಾಗುವುದು ಎಂದು ಸರ್ಕಾರ ಹೇಳಿದೆ. ಇದು ಹಿಂದೆಂದೂ ಕೇಳರಿಯದಂತಹ ಕ್ರಮ. ಪಠ್ಯ ರಚನೆ ಅಥವಾ ಪರಿಷ್ಕರಣೆ ಎನ್ನುವುದು ಯಾವ ಬರಹಕ್ಕೆ ಹೆಚ್ಚು ಮತ ಬಂದಿದೆ ಎಂಬುದರ ಆಧಾರದ ಮೇಲೆ ಮಾಡುವಂತಹ ಕೆಲಸ ಅಲ್ಲ. ಮಕ್ಕಳ ಪಠ್ಯ ರಚನೆ ಅಥವಾ ಪರಿಷ್ಕರಣೆಯು ಶೈಕ್ಷಣಿಕವಾಗಿ, ಮನಶ್ಶಾಸ್ತ್ರೀಯವಾಗಿ, ಸಾಂಸ್ಕೃತಿಕವಾಗಿ ಇರಬೇಕು. ಪಠ್ಯ ಪುಸ್ತಕ ರಚನೆ ಅಥವಾ ಪರಿಷ್ಕರಣೆಯು ರಾಜಕೀಯವಾದ ಪ್ರಕ್ರಿಯೆ ಅಲ್ಲ ಎಂಬುದು ಪಠ್ಯ ಪುಸ್ತಕವನ್ನು ಸಿದ್ಧಪಡಿಸುವವರ ಗಮನದಲ್ಲಿ ಸದಾ ಇರಬೇಕು. ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿಯು ಈ ವಿಚಾರಕ್ಕೆ ವಿರುದ್ಧವಾಗಿ ವರ್ತಿಸಿದ್ದೇ ರಾಜ್ಯದ ಪಠ್ಯ ಪುಸ್ತಕ ಬಿಕ್ಕಟ್ಟಿಗೆ ಕಾರಣವಾಗಿದೆ.

ಪಠ್ಯ ಪುಸ್ತಕಕ್ಕೆ ಸಂಬಂಧಿಸಿದಂತೆ ದಿನಕ್ಕೊಂದು ವಿವಾದ ಸೃಷ್ಟಿಯಾಗುತ್ತಿದೆ. ಭಗತ್ ಸಿಂಗ್ ಪಾಠ ಕೈಬಿಟ್ಟಿದ್ದಾರೆ, ನಾರಾಯಣ ಗುರು ಪಾಠ ಕೈಬಿಟ್ಟಿದ್ದಾರೆ, ಕುವೆಂಪು ಅವರಿಗೆ, ಬಸವಣ್ಣನವರಿಗೆ ಅವಮಾನ ಆಗಿದೆ ಎಂಬುದೆಲ್ಲ ಈಗ ಹಳೆಯದಾಗಿದೆ. ದಿನವೂ ಹೊಸ ಹೊಸತು ವಿವಾದಗಳು ಮುನ್ನೆಲೆಗೆ ಬರುತ್ತಿವೆ. ಒಕ್ಕಲಿಗರು, ಲಿಂಗಾಯತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪಠ್ಯ ಪುಸ್ತಕ ಪರಿಷ್ಕರಣೆ ವಿವಾದವು ಜಾತಿ ಕೇಂದ್ರಿತವೂ ರಾಜಕೀಯ ಪಕ್ಷವೊಂದರ ಸಿದ್ಧಾಂತ ಕೇಂದ್ರಿತವೂ ಆದಂತೆ ಕಾಣಿಸುತ್ತಿದೆ. ಇಂತಹ ಸಂದರ್ಭದಲ್ಲಿ ಸಾರ್ವಜನಿಕರ ಆಕ್ಷೇಪ ಆಹ್ವಾನಿಸಿ, ಅದರಂತೆ ಪಾಠ ತಿದ್ದಲು ಹೊರಟರೆ ಜೇನು ಗೂಡಿಗೆ ಕಲ್ಲೆಸೆದಂತೆ ಆಗಬಹುದು. ಕರ್ನಾಟಕದಲ್ಲಿ 1,503 ಜಾತಿ, ಉಪ ಜಾತಿಗಳಿವೆ. ಹಲವು ರಾಜಕೀಯ ಪಕ್ಷಗಳಿವೆ. ವಿವಿಧ ಸಿದ್ಧಾಂತಗಳನ್ನು ಪ್ರತಿಪಾದಿಸುವ ಗುಂಪುಗಳು ಇವೆ, ಜನರು ಇದ್ದಾರೆ. ತಮಗೆ ಸಂಬಂಧಿಸಿದ ಪಾಠವೊಂದು ಪಠ್ಯದಲ್ಲಿ ಇರಲೇಬೇಕು ಎಂದು ಈ ಎಲ್ಲರೂ ಪ್ರತಿಪಾದಿಸುವುದಿಲ್ಲ ಎಂಬುದಕ್ಕೆ ಯಾವ ಖಾತರಿಯೂ ಇಲ್ಲ.



ಈ ಎಲ್ಲರೂ ತಮ್ಮ ಅಭಿಮತಗಳನ್ನು ಸಲ್ಲಿಸಿದರೆ ಅದನ್ನು ಕ್ರೋಡೀಕರಿಸುವುದೇ ದೊಡ್ಡದೊಂದು ಕೆಲಸ. ಕ್ರೋಡೀಕರಿಸಿ, ವಿಂಗಡಿಸಿ, ಅದರ ಆಧಾರದಲ್ಲಿ ಪಠ್ಯವನ್ನು ತಿದ್ದುವವರು ಯಾರು? ಏಕೆಂದರೆ, 'ಪಠ್ಯ ಪರಿಶೀಲನಾ ಸಮಿತಿ'ಯನ್ನು ವಿಸರ್ಜಿಸಲಾಗಿದೆ. ಸರ್ಕಾರವು ಪಠ್ಯ ತಿದ್ದಲು ಹೊಸ ಸಮಿತಿ ರಚಿಸಲೇಬೇಕಾಗುತ್ತದೆ. ಹೊಸ ಸಮಿತಿ ರಚನೆಯಾಗಿ, ಪಠ್ಯ ತಿದ್ದುಪಡಿಯಾಗಲು ಎಷ್ಟು ಸಮಯ ಬೇಕಾಗಬಹುದು ಎಂಬುದನ್ನು ಈಗ ಊಹಿಸುವುದಕ್ಕೂ ಸಾಧ್ಯವಿಲ್ಲ. ಶಾಲೆಗಳು ಈಗಾಗಲೇ ಆರಂಭವಾಗಿವೆ. ಆದರೆ, ಮಕ್ಕಳ ಕೈಯಲ್ಲಿ ಪಠ್ಯ ಪುಸ್ತಕ ಇಲ್ಲ. ಈಗಿನ ಸನ್ನಿವೇಶವನ್ನು ನೋಡಿದರೆ, ಈ ವರ್ಷವಿಡೀ ಮಕ್ಕಳಿಗೆ ಪಠ್ಯ ಪುಸ್ತಕ ಸಿಗುವ ಲಕ್ಷಣವೂ ಕಾಣಿಸುತ್ತಿಲ್ಲ.

ಸಾರ್ವಜನಿಕರ ಅಭಿಮತದ ಆಧಾರದಲ್ಲಿ ತಿದ್ದುಪಡಿಯಾದ ಪಠ್ಯವು ಎಲ್ಲರಿಗೂ ಒಪ್ಪಿತವಾಗಬಹುದೇ? ಎಷ್ಟೋ ಜಾತಿಗಳು ಮತ್ತು ಗುಂಪುಗಳು ತಮಗೆ ಸಂಬಂಧಿಸಿದ ಪಾಠವು ಪಠ್ಯದಲ್ಲಿ ಸೇರಿಲ್ಲ ಎಂದು ಗದ್ದಲ ಎಬ್ಬಿಸಬಹುದು. ಆಗ ಮತ್ತೆ ತಿದ್ದುಪಡಿ ಮಾಡಲು ಸರ್ಕಾರ ಮುಂದಾಗುವುದೇ? ಮತ್ತೆ ತಿದ್ದುಪಡಿ, ಮತ್ತೆ ಸಾರ್ವಜನಿಕ ಆಕ್ಷೇಪ ಆಹ್ವಾನ, ಮತ್ತೆ ತಿದ್ದುಪಡಿ... ಹೀಗೆ ಇದು ಕೊನೆಯಿಲ್ಲದಂತೆ ಸಾಗುತ್ತಲೇ ಇರಬಹುದು.

ಸಾರ್ವಜನಿಕ ಅಭಿಮತ ಆಲಿಸಿಯೇ ಎಲ್ಲವನ್ನೂ ಮಾಡಬಹುದು ಎಂಬುದು ಹುಂಬತನ. ಪಠ್ಯ ಪರಿಷ್ಕರಣೆಯಂತಹ ವಿಚಾರ ಅಪಾರ ವಿದ್ವತ್ತು, ಶೈಕ್ಷಣಿಕ ಶಿಸ್ತು ಬೇಡುವ ಕೆಲಸ. ಯಾರೋ ಏನೋ ಅಂದರು ಎಂಬುದರ ಆಧಾರದಲ್ಲಿ ಪಠ್ಯ ಪರಿಷ್ಕರಣೆ ಮಾಡುತ್ತೇವೆ ಎನ್ನುವುದೇ ಹಾಸ್ಯಾಸ್ಪದ. ಸರ್ಕಾರವು 'ಪಠ್ಯ ಪರಿಶೀಲನೆ'ಗಾಗಿ ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯ ಸಮಿತಿ ರಚನೆ ಮಾಡುವಾಗ ಸಾರ್ವಜನಿಕರ ಅಭಿಪ್ರಾಯ ಪಡೆದುಕೊಂಡಿದೆಯೇ?

ಅಭಿಪ್ರಾಯ-ಭಿನ್ನಾಭಿಪ್ರಾಯಗಳ ನಡುವೆಯೇ ಹೆಚ್ಚು ಜನರಿಗೆ ಒಪ್ಪಿತವೆನ್ನಿಸಬಹುದಾದ ಪಠ್ಯಗಳನ್ನು ಸಿದ್ಧ ಮಾಡುವುದು ಸದ್ಯದ ಆದರ್ಶವೆಂದು ಭಾವಿಸಬೇಕಾಗುತ್ತದೆ. ಆದ್ದರಿಂದಲೇ ಪಠ್ಯಗಳ ರಚನೆಯಲ್ಲಿ ವಿದ್ವನ್ಮಂಡಳಿಯ ಪಾತ್ರ ಪ್ರಮುಖ ಆಗಬೇಕು. ಆಗ ಶಿಕ್ಷಣವೇ ಮುಖ್ಯವಾಗಿ ಉಳಿದೆಲ್ಲವನ್ನೂ ನಗಣ್ಯವಾಗಿಸುವುದು ಸಾಧ್ಯವಾಗುತ್ತದೆ.

ಮರುಪರಿಷ್ಕೃತ ಪಠ್ಯವನ್ನು ಅಳವಡಿಸಿ, ಆಕ್ಷೇಪಗಳನ್ನು ಸಲ್ಲಿಸುವ ಅವಕಾಶಗಳನ್ನು ತೆರೆದ ತಕ್ಷಣ ಸರ್ಕಾರವು ಸಮಸ್ಯೆಗಳನ್ನು ಬಗೆಹರಿಸಿದಂತಾಗುವುದಿಲ್ಲ. ಬದಲಿಗೆ ಸಮಸ್ಯೆಗಳನ್ನು ಮೈಮೇಲೆ ಎಳೆದುಕೊಂಡಂತಾಗುತ್ತದೆ. ಪಠ್ಯಪುಸ್ತಕಗಳ ಆಕ್ಷೇಪಗಳನ್ನು ನಿಂತ ನಿಲುವಿನಲ್ಲೇ ಬಗೆಹರಿಸಿಕೊಳ್ಳಬೇಕೇ ಹೊರತು ಮುಂದೂಡುತ್ತಾ ಹೋಗಬಾರದು. ಚರಿತ್ರೆ, ಮಾಹಿತಿ ಮುಂತಾದವು ತಿದ್ದಿದ ತಕ್ಷಣ ಪರಿಹಾರ ಹೊಂದುವುದಿಲ್ಲ.

ಸರ್ಕಾರವು ಪಠ್ಯಗಳ ವಿಷಯದಲ್ಲಿ ಅಂತರವನ್ನು ಕಾಯ್ದುಕೊಳ್ಳಲೇಬೇಕು. ಇಲ್ಲದಿದ್ದರೆ ಅದು ಅಭಿಪ್ರಾಯಗಳ ಹೇರಿಕೆಯ ಪರವಹಿಸಿದಂತೆ ಆಗುತ್ತದೆ. ಸರ್ಕಾರವು ಸದಾ ನಿಷ್ಪಕ್ಷಪಾತವಾಗಿಯೇ ಇರಬೇಕಾಗುವುದರಿಂದ ಪಠ್ಯದ ವಿಷಯದಲ್ಲಿಯೂ ಹಟವು ಸರಿಯಾದ ನಡೆಯಲ್ಲ. ಪಠ್ಯವು ಕೇವಲ ಮುದ್ರಿತ ಪುಸ್ತಕಗಳಲ್ಲ; ಅಥವಾ ಕೇವಲ ಸರಕೂ ಅಲ್ಲ. ಅವು ಮಕ್ಕಳ ವ್ಯಕ್ತಿತ್ವವನ್ನು ಅರಳಿಸುವ ಕುಸುಮಗಳು. ಆದ್ದರಿಂದ ಸರ್ಕಾರವು ಎಲ್ಲರ ಕ್ಷೇಮವನ್ನು ಗಮನದಲ್ಲಿಟ್ಟುಕೊಂಡು ಮುಂದುವರಿಯಬೇಕು. ನಾಡಿನ ಅಸಂಖ್ಯಾತ ಲೇಖಕರ, ಬುದ್ಧಿಜೀವಿಗಳ ಅಭಿಪ್ರಾಯವನ್ನು ಸರ್ಕಾರವು ಅನಿವಾರ್ಯವಾಗಿ ಕೇಳಬೇಕಾದ ಸಂದಿಗ್ಧದಲ್ಲಿದೆ. ಹಾಗೆ ಕೇಳಿದಲ್ಲಿ ಸರ್ಕಾರಕ್ಕೆ ಒಳಿತೇ ಹೊರತು ಕೆಡುಕಾಗುವಂಥದ್ದೇನೂ ಇಲ್ಲ.

ಆದ್ದರಿಂದ ತಿದ್ದಲ್ಪಟ್ಟ ಪಠ್ಯಗಳು ಸರ್ವಸಮ್ಮತವಾಗಿಲ್ಲವೆಂಬ ಅಂಶಗಳನ್ನು ಮನಗಂಡು ಹಳೆಯ ಪಠ್ಯಗಳನ್ನೇ ಮುಂದುವರಿಸುವುದು ಒಳಿತು. ಈ ವಿಷಯದಲ್ಲಿ ವ್ಯಕ್ತಿಗಳು ಮುಖ್ಯವಲ್ಲ. ತಿದ್ದಿರುವ ಸಮಿತಿ, ತಿದ್ದಿಸಿರುವ ಶಿಕ್ಷಣ ಮಂತ್ರಿ ಇವರೆಲ್ಲರಿಗಿಂತ ನಾಡಿನ ಮಕ್ಕಳ ಹಿತ ಮುಖ್ಯ ಆಗಬೇಕು. ಹೊಸ ಸಮಿತಿ ನೇಮಿಸಲು ಸರ್ಕಾರಕ್ಕೆ ಅವಕಾಶವಿದೆ. ಪ್ರೊ. ಬರಗೂರು ರಾಮಚಂದ್ರಪ್ಪ ನೇತೃತ್ವದ ಸಮಿತಿಯ ಪುಸ್ತಕಗಳಿಗಿಂತ ಉತ್ತಮ ಪಠ್ಯಗಳನ್ನು ನಂತರ ಮಾಡಲು ಅವಕಾಶವಿದೆ. ಉತ್ತಮ ಶೈಕ್ಷಣಿಕ ವಾತಾವರಣವನ್ನು ಕರ್ನಾಟಕದಲ್ಲಿ ಮಾಡಬೇಕಾಗಿದೆ. ಇದು ಸರ್ಕಾರದ ಆದ್ಯತೆಯಾಗಬೇಕಾಗಿದೆ.

ಲೇಖಕ: ಕನ್ನಡ ಪ್ರಾಧ್ಯಾಪಕ, ಬೆಂಗಳೂರು ವಿಶ್ವವಿದ್ಯಾಲಯ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 144

ನಾರದನಿಗೆ ಶಾಪಕೊಟ್ಟ ದಕ್ಷಬ್ರಹ್ಮ

ಬ್ರಹ್ಮ ತನ್ನ ಮಕ್ಕಳಾದ ಹರ್ಯಶ್ವರರಿಗೆ ಸಂಸಾರಿಗಳಾಗಿ ಸೃಷ್ಟಿಕಾರ್ಯ ಮಾಡುವಂತೆ ಸೂಚಿಸಿದರೆ, ದಕ್ಷನ ಮಕ್ಕಳು ನಾರದನ ಮಾತಿನಿಂದ ವಿಚಲಿತರಾಗುತ್ತಾರೆ. ನಾರದನಿಂದ ಮೋಕ್ಷಮಾರ್ಗದತ್ತ ಹೊರಟ ಮಕ್ಕಳ ನೆನೆದು ದಕ್ಷಬ್ರಹ್ಮ ತನ್ನ ತಂದೆ ಬ್ರಹ್ಮದೇವನ ಬಳಿ ಬಂದು ದುಃಖ ವ್ಯಕ್ತಪಡಿಸುತ್ತಾನೆ. ಆಗ ಬ್ರಹ್ಮ ತನ್ನ ಪುತ್ರನಾದ ದಕ್ಷನಿಗೆ ಅದೃಷ್ಟವು ಬಲವಾದುದು, ಅದನ್ನು ಪಡೆಯಲು ಶಾಂತಿಯಿಂದಿರಬೇಕೆಂದು ಉಪದೇಶಿಸಿ ಸಮಾಧಾನಮಾಡುತ್ತಾನೆ.

ಇದರಿಂದ ಶಾಂತಚಿತ್ತನಾದ ದಕ್ಷಬ್ರಹ್ಮ ತನ್ನ ಆಶ್ರಮಕ್ಕೆ ಹಿಂದಿರುಗಿ, ಪತ್ನಿಯಾದ ಅಸಿಕ್ನಿಯಲ್ಲಿ 'ಸಬಲಾಶ್ವರ' ಎಂಬ ಹೆಸರುಳ್ಳ ಸಾವಿರ ಪುತ್ರರನ್ನು ಸೃಷ್ಟಿಸುತ್ತಾನೆ. ಜಿತೇಂದ್ರಿಯರಾದ ಆ ಸಬಲಾಶ್ವರೆಂಬ ದಕ್ಷಪುತ್ರರಿಗೂ ದಕ್ಷಬ್ರಹ್ಮ ಸೃಷ್ಟಿಕ್ರಿಯೆಯಲ್ಲಿ ತೊಡಗುವಂತೆ ಆಜ್ಞಾಪಿಸುತ್ತಾನೆ. ಆಗ ಸಬಲಾಶ್ವರರು ಪ್ರಜೆಗಳನ್ನು ಸೃಷ್ಟಿಸಲು, ತಮ್ಮ ಸಹೋದರರಾದ ಹರ್ಯಶ್ವರರು ಸಿದ್ಧಿಯನ್ನು ಹೊಂದಿದ ಆ ನಾರಾಯಣ ಸರಸ್ಸಿನ ಬಳಿಗೆ ಹೋಗುತ್ತಾರೆ. ಅಲ್ಲಿ ಅವರು ಪವಿತ್ರವಾದ ತೀರ್ಥಜಲವನ್ನು ಸ್ಪರ್ಶಮಾಡಿದೊಡನೆಯೇ ಪಾಪವನ್ನು ಕಳೆದುಕೊಂಡು ಪರಿಶುದ್ಧರಾಗುತ್ತಾರೆ. ಪರಬ್ರಹ್ಮವಸ್ತುವನ್ನು ಜಪಿಸುತ್ತಾ ತಪಸ್ಸನ್ನ ಆಚರಿಸತೊಡಗುತ್ತಾರೆ. ಆಗ ನಾರದನಾದ ನೀನು, ಮತ್ತೆ ಅಲ್ಲಿಗೆ ಹೋಗಿ ಹಿಂದೆ ಹರ್ಯಶ್ವರರಿಗೆ ಹೇಳಿದಂತೆಯೇ 'ಎಲೈ ದಕ್ಷಪುತ್ರರೇ, ಭೂಮಿಯಲ್ಲಿಯ ಸೃಷ್ಟಿಯನ್ನೇ ನೋಡದ ನೀವು, ಸೃಷ್ಟಿಗಾಗಿ ತಪಸ್ಸನ್ನಾಚರಿಸುತ್ತಲಿರುವಿರಿ' ಎಂದು ಅವರಿಗೂ ಹೇಳಿದೆ. ನಿನ್ನ ಮಾತಿನ ತರ್ಕ ಒಪ್ಪಿದ ಸಬಲಾಶ್ವರರಿಗೂ ಅವರಣ್ಣಂದಿರಿಗೆ ಉಪದೇಶಿಸಿದಂತೆ ಮುಕ್ತಿಮಾರ್ಗವನ್ನು ಉಪದೇಶಿಸಿದೆ. ಆಗ ಸಬಲಾಶ್ವರರು ಸಹ ತಮ್ಮ ಅಣ್ಣಂದಿರಂತೆ ಮುಕ್ತಿಮಾರ್ಗವನ್ನ ಅನುಸರಿಸಿ ಸನ್ಯಾಸಿಗಳಾದರು ಎಂದು ತಿಳಿಸುತ್ತಾನೆ, ನಾರದನಿಗೆ ಬ್ರಹ್ಮ.

'ಆ ಕಾಲದಲ್ಲಿಯೇ ದಕ್ಷಬ್ರಹ್ಮನು ಅನೇಕ ಅನಿಷ್ಟವಾದ ಉತ್ಪಾತಗಳನ್ನು ನೋಡಿದವನು. ಅವನಿಗೆ ಆಶ್ಚರ್ಯವೂ ದುಃಖವೂ ಉಂಟಾಯಿತು. ಹಿಂದಿನಂತೆ ಈಗಲೂ ನಾರದನಿಂದಲೇ ತನ್ನ ಪುತ್ರರು ನಾಶವಾದರೆಂದು ತಿಳಿದ ದಕ್ಷ ವ್ಯಗ್ರಗೊಂಡ. ಪುತ್ರಶೋಕದಿಂದ ವ್ಯಾಕುಲಗೊಂಡ. ಆಗ ದಕ್ಷನು ನಿನ್ನನ್ನು ದುಷ್ಟನೆಂದು ಭಾವಿಸಿ, ನಿನ್ನ ಮೇಲೆ ತುಂಬಾ ಕ್ರೋಧಗೊಂಡಿದ್ದ. ನೀನು ಅಕಸ್ಮಾತ್ತಾಗಿ ದಕ್ಷನ ಬಳಿಗೆ ಬಂದೆ. ದಕ್ಷಬ್ರಹ್ಮ ನಿನ್ನನ್ನು ನೋಡಿ ಕೋಪದಿಂದ ಸಿಡಿಮಿಗೊಂಡ. 'ಛೀ ಮೂಢ! ನಿನಗೆ ನಾಚಿಕೆಯೇ ಆಗುವುದಿಲ್ಲವೆ ಈ ರೀತಿ ಅಕಾರ್ಯವನ್ನು ಮಾಡುವುದಕ್ಕೆ? ಸಾಧುವೇಷವನ್ನು ಛದ್ಮವೇಷದಂತೆ ಧರಿಸಿರುವ ನೀನು, ಅಮಾಯಕರಾದ ನನ್ನ ಪುತ್ರರ ಜೀವನ ಹಾಳು ಮಾಡಿದೆ. ತಿಳಿವಳಿಕೆಯಿಲ್ಲದಿರುವ ಮಕ್ಕಳಿಗೆ ಸನ್ಯಾಸಿಯ ಮಾರ್ಗವನ್ನ ಉಪದೇಶಿಸಿದ್ದು ನ್ಯಾಯವಾದುದಲ್ಲ. ದೇವಋಣ, ಪಿತೃಋಣ, ಋಷಿಋಣ – ಎಂಬ ಮೂರು ಋಣ ತೀರಿಸದವರಿಗೆ ಇಹಪರಗಳಲ್ಲಿ ಮುಕ್ತಿಯಿಲ್ಲವೆಂದು ತಿಳಿದಿಲ್ಲವಾ? ಆ ಋಣಗಳಿಂದ ಮುಕ್ತರಾಗದಿರುವ ನನ್ನ ಪುತ್ರರನ್ನು ಹಾಳು ಮಾಡಿದೆ. ನಿರ್ದಯನೂ ಮೂರ್ಖನೂ ಆದ ನೀನು, ಅವರು ಯೌವನದಲ್ಲಿದ್ದಾಗಲೇ ಮುಕ್ತಿಮಾರ್ಗವನ್ನು ಉಪದೇಶಿಸಿ ಅವರನ್ನು ಕೆಡಿಸಿದೆ. ಮೂರು ಋಣಗಳನ್ನು ತೀರಿಸದೇ ತಂದೆ-ತಾಯಿಗಳನ್ನು ಬಿಟ್ಟು ಯಾವನು ಮುಕ್ತಿ ಹೊಂದಲು ಸನ್ಯಾಸಿಯಾಗುವನೋ ಅವನು ಅಧೋಗತಿಯನ್ನು ಹೊಂದುವನು. ತಿಳಿವಳಿಕೆಯಿಲ್ಲದ ನನ್ನ ಚಿಕ್ಕಮಕ್ಕಳ ಮನಸ್ಸನ್ನು ಕೆಡಿಸಿ, ನಿನ್ನ ಯಶಸ್ಸನ್ನು ಸಹ ಕೆಡಿಸಿಕೊಂಡಿರುವೆ. ಇಂತಹ ಪಾಪಿಯಾದ ನೀನು ವಿಷ್ಣುವಿನ ಗಣಗಳ ಮಧ್ಯದಲ್ಲಿರಲು ಯೋಗ್ಯನಲ್ಲ. ಎಲೈ ಮೂರ್ಖ! ಪುನಃ ಪುನಃ ನನಗೆ ಕೆಡುಕನ್ನು ಮಾಡಿರುವೆ. ಆದ ಕಾರಣ ನೀನು ಯಾವಾಗಲೂ ಮೂರು ಲೋಕಗಳನ್ನು ಸಂಚರಿಸುತ್ತಲೇ ಇರು. ಒಂದುಕ್ಷಣವೂ ನಿನ್ನ ಕಾಲುಗಳು ಒಂದೆಡೆಯಲ್ಲಿ ಸ್ಥಿರವಾಗಿ ನಿಲ್ಲದಿರಲಿ' ಎಂದು ದಕ್ಷ ನಿನ್ನನ್ನು ಶಪಿಸಿದ. ಎಲೈ ನಾರದ! ಆಗ ನೀನು ಯಾವ ವಿಕಾರವೂ ಇಲ್ಲದೆ ಶಾಂತಿಯಿಂದ ದಕ್ಷನ ಶಾಪವನ್ನು ಪರಿಗ್ರಹಿಸಿದೆ. ಆಗ ನಿನ್ನ ನಡವಳಿಕೆ ನಿಜವಾದ ಬ್ರಹ್ಮನಿಷ್ಠನಾದ ಸಾಧುವಿನ ಲಕ್ಷಣವಾಗಿತ್ತು. ಸಾಧುವಾದವನು ಸಾವಧಾನದಿಂದ ಎಲ್ಲ ವಿಧವಾದ ತೊಂದರೆಗಳನ್ನೂ ಸಹನೆಯಿಂದ ಅನುಭವಿಸುವನು. ಅದರಂತೆ ನೀನು ನಡೆದುಕೊಂಡೆ' ಎಂದು ಬ್ರಹ್ಮನು ನಾರದನಿಗೆ ಹೇಳುವಲ್ಲಿಗೆ ಸತೀಖಂಡದ ಹದಿಮೂರನೆಯ ಅಧ್ಯಾಯ ಮುಗಿಯಿತು.

ಪರಿಷ್ಕರಣೆ ಪರಿಪೂರ್ಣತೆಯ ಕಡೆಗೆ ಕೊಂಡೊಯ್ಯಲಿ



ಶಿಕ್ಷಕರು, ಸಾಹಿತಿಗಳು, ಪಠ್ಯಪುಸ್ತಕಗಳ ರಚನಾಕಾರರು, ರಾಜನೀತಿಯ ಒಲವು ಹೊಂದಿದ್ದರೆ ತಪ್ಪಲ್ಲ. ಆದರೆ ರಾಜಕೀಯ ಪಕ್ಷಗಳ ಕಾರ್ಯಕರ್ತರಂತೆ ಅಥವಾ ರಾಜಕೀಯ ನಾಯಕರ ಬಾಯಾಳುಗಳ ಹಾಗೆ ವರ್ತಿಸಬಾರದು, ಪಠ್ಯ ರಚಿಸಬಾರದು. ಶಿಕ್ಷಣ ಕ್ಷೇತ್ರದಿಂದ ಗೆಲ್ಲಬೇಕಾದುದು ಪಕ್ಷಗಳಲ್ಲ ಗೆಲ್ಲಬೇಕಾದುದು ದೇಶ ಮತ್ತು ಮನುಷ್ಯತ್ವ. ಯಾರು ಏನೇ ಬರೆದರೂ ಕಡೆಗೂ ಉಳಿಯುವುದು ಸತ್ಯ ಮಾತ್ರ

• ಡಾ.ಬಿ.ವಿ.ವಸಂತಕುಮಾರ್

ಅರಿವು ಎನ್ನುವುದು ಮನುಷ್ಯನ ಮತ್ತು ಎಲ್ಲಾ ಜೀವಿಗಳ ಅನುಭವ ಶೋಧನೆ ಹಾಗೂ ಸಾಧನೆಗಳ ಫಲ. ಅರಿವು ಅನುಭವಗಳು ಶಿಕ್ಷಣ ಕ್ಷೇತ್ರವನ್ನು ಜೀವಂತವಾಗಿಯೂ ಚಲನಶೀಲವಾಗಿಯೂ ಇಟ್ಟಿವೆ. ಶಿಕ್ಷಣದಲ್ಲಿ ಔಪಚಾರಿಕ ಹಾಗೂ ಅನೌಪಚಾರಿಕ ಎಂದು ಎರಡು ವಿಧ. ಭಾಷಾ ರಚನೆಯಲ್ಲಿ ಮೌಖಿಕ ಹಾಗೂ ಗ್ರಾಂಥಿಕ ಎಂದು ಎರಡು ವಿಧ. ಎಲ್ಲ ಕಡೆಯೂ ಪಠ್ಯಗಳಿರುತ್ತವೆ. ಅವುಗಳ ಇತಿಹಾಸವನ್ನು ಗಮನಿಸಿದರೆ ರಚನೆ/ಪರಿಷ್ಕರಣೆ/ಪುನರ್ ರಚನೆ/ಪುನರ್ ಪರಿಷ್ಕರಣೆ /ಪುನರ್ ರಚನೆ ಎಂಬ ದಾರಿಯಲ್ಲಿ ಸಾಗಿರುವುದು ಹೆಚ್ಚಾಗಿ ಮೌಖಿಕ ಸಾಹಿತ್ಯದಲ್ಲಿ, ಕಡಿಮೆ ಪ್ರಮಾಣದಲ್ಲಿ ಗ್ರಾಂಥಿಕ ಸಾಹಿತ್ಯದಲ್ಲಿ ನಡೆದಿರುವುದು ಕಂಡುಬರುತ್ತದೆ. ಔಪಚಾರಿಕ ಶಿಕ್ಷಣದಲ್ಲಿ ಪಠ್ಯಪುಸ್ತಕಗಳು ಬೋಧನೆಗೆ ಆಧಾರ ಗ್ರಂಥಗಳು. ಅವುಗಳ ರಚನೆ ಮತ್ತು ಪರಿಷ್ಕರಣೆಗಳು ನಿರಂತರವಾಗಿ ನಡೆದುಕೊಂಡು ಬಂದಿವೆ. ಈ ಸಂಗತಿಯೇ ಶಿಕ್ಷಣದ ಏಳ್ಗೆಗೆ ಹಾಗೂ ಅರಿವಿನ ಪರಿಪೂರ್ಣತೆಗೆ ಸಾಗುವ ದಾರಿಯನ್ನು ನಿರ್ಮಿಸಿದೆ.

ಪ್ರಸ್ತುತ ಕರ್ನಾಟಕದ ಪಠ್ಯಪುಸ್ತಕಗಳ ಬಗ್ಗೆ ಎದ್ದಿರುವ ವಾದ-ವಿವಾದಗಳ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವು ಜನರ ಅಭಿಪ್ರಾಯಗಳನ್ನು ಆಹ್ವಾನಿಸಿ ಮತ್ತೆ ಪರಿಷ್ಕರಣೆ ಮಾಡಲಾಗುವುದು ಎಂದಿರುವುದನ್ನು ಸ್ವಾಗತಿಸುತ್ತೇನೆ. ಇದೊಂದು ಪ್ರಾಮಾಣಿಕವಾದ ಶೈಕ್ಷಣಿಕ ಹಾಗೂ ಪ್ರಜಾಸತ್ತಾತ್ಮಕ ನಡೆ ಎಂದು ಅಭಿನಂದಿಸುತ್ತೇನೆ.

ಹಿಂದೆ ಡಾ.ಜಿ.ಎಸ್.ಮುಡಂಬಡಿತ್ತಾಯ ಅವರ ನೇತೃತ್ವದ ಸಮಿತಿ ರಚಿಸಿದ ಪಠ್ಯಗಳ ಬಗ್ಗೆ ದೂರುಗಳು ಬಂದ ಕಾರಣವನ್ನು ಒಡ್ಡಿ, ಅನಂತರ ಬಂದ ಸರ್ಕಾರವು ಪ್ರೊ.ಬರಗೂರು ರಾಮಚಂದ್ರಪ್ಪನವರ ಸರ್ವಾಧ್ಯಕ್ಷತೆಯಲ್ಲಿ ಪರಿಷ್ಕರಣ ಸಮಿತಿಯನ್ನು ರಚಿಸಿದೆ. ಅವರು ನಡೆಸಿದ ಪರಿಷ್ಕರಣೆಯ ಬಗ್ಗೆ ದೂರುಗಳು ಬಂದ ಕಾರಣ ಇಂದಿನ ಕರ್ನಾಟಕ ಸರ್ಕಾರವು ರೋಹಿತ್ ಚಕ್ರತೀರ್ಥ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿದೆ. ಇದೀಗ ದೂರುಗಳು ಬಂದ ಕಾರಣ ಇದೇ ಸರ್ಕಾರ ಮರುಪರಿಷ್ಕರಣೆಗೆ ಮುಂದಾಗಿರುವಂತೆ, ಹಿಂದಿನ ಸರ್ಕಾರ ಪ್ರೊ. ಬರಗೂರು ರಾಮಚಂದ್ರಪ್ಪ ಅವರ ಪಠ್ಯದಲ್ಲಿದ್ದ ಆಕ್ಷೇಪಾರ್ಹ ಸಂಗತಿಗಳನ್ನು ಮರುಪರಿಷ್ಕರಣೆಗೆ ಒಳಪಡಿಸಿದ್ದರೆ ಬಹುಶಃ ರೋಹಿತ್ ಚಕ್ರತೀರ್ಥ ಸಮಿತಿ ರಚನೆ ಆಗುತ್ತಿರಲಿಲ್ಲ. ಸರ್ಕಾರಗಳಿಗೆ, ಸಮಿತಿಗಳಿಗೆ ಶೈಕ್ಷಣಿಕ ಕಾಳಜಿ ಹಾಗೂ ಪ್ರಜಾಸತ್ತಾತ್ಮಕ ನಡವಳಿಕೆ ಅತ್ಯಗತ್ಯ. ಆಗ ಸಹಮತವನ್ನು ಸಾಧಿಸಬಹುದು.

ಬ್ರಾಹ್ಮಣ ವಿರೋಧಿ, ವೈದಿಕ ವಿರೋಧಿ, ಹಿಂದೂ ವಿರೋಧಿ, ರಾಷ್ಟ್ರೀಯತೆ ವಿರೋಧಿಯಾದ ಅಹಿಂದಪರವಾದ, ಮತಾಂತರಕ್ಕೆ ಪ್ರಚೋದಿಸುವ, ಮುಸ್ಲಿಂ ಮತ ತುಷ್ಟೀಕರಣದ ಕಮ್ಯುನಿಸ್ಟ್ ವರ್ಗ ಸಂಘರ್ಷ ಪ್ರಣೀತವಾಗಿರುವ ಪಠ್ಯಗಳನ್ನು ಪ್ರೊ. ಬರಗೂರು ರಾಮಚಂದ್ರಪ್ಪ ಅವರ ಸಮಿತಿಯು ರೂಪಿಸಿದೆ ಎಂಬ ಆರೋಪಗಳು ಕೇಳಿಬಂದಾಗ ಒಂದು ಪ್ರಜಾಪ್ರಭುತ್ವವಾದಿ ಸರ್ಕಾರ ತನ್ನ ಶೈಕ್ಷಣಿಕ ಜವಾಬ್ದಾರಿಯನ್ನು ರಾಜಕೀಯ ಕಾರಣಕ್ಕೆ ಬಲಿಗೊಡಬಾರದು. ಬ್ರಾಹ್ಮಣ ವಿರೋಧವೇ ಜಾತಿ ವಿನಾಶವಲ್ಲ. ಶಾಲೆಯಲ್ಲಿರುವ ಒಂದು ಬ್ರಾಹ್ಮಣ ಮಗು ಆ ಪಾಠಗಳನ್ನು ಓದಿ ಬ್ರಾಹ್ಮಣೇತರರನ್ನು ಮತ್ತಷ್ಟು ದ್ವೇಷಿಸುತ್ತದೆ. ಅದೇ ಹೊತ್ತಿನಲ್ಲಿ ಅಬ್ರಾಹ್ಮಣ ಮಗು ತನ್ನ ಈ ಸ್ಥಿತಿಗೆ ಬ್ರಾಹ್ಮಣರು ಮಾತ್ರ ಕಾರಣ ಎಂದು ತಿಳಿಯುತ್ತದೆ. ಬ್ರಾಹ್ಮಣರ ಜಾತಿವಾದವನ್ನು ಮಾತ್ರ ವಿರೋಧಿಸುತ್ತಾ ಬ್ರಾಹ್ಮಣ ದ್ವೇಷಿಯಾಗುತ್ತದೆ. ಅದೇ ಹೊತ್ತಿನಲ್ಲಿ ಬ್ರಾಹ್ಮಣರ ಅನಂತರದ ಶ್ರೇಣಿಯಲ್ಲಿರುವ ಜಾತಿಯವರ ಜಾತಿವಾದಕ್ಕೆ ಬಲಿಯಾಗುತ್ತದೆ. ಆ ಕಾರಣದಿಂದಾಗಿಯೇ ಶತಶತಮಾನಗಳಿಂದ ಬುದ್ಧ ಬಸವಾದಿ ಶರಣರು ಸಂತರು ಎಷ್ಟೇ ಪ್ರಯತ್ನಿಸಿದರೂ ಅಸ್ಪೃಶ್ಯತೆ ಜಾತೀಯತೆ ಹೋಗಿಲ್ಲ ಸಮಾನತೆ ಮಾನವೀಯತೆ ಬಂದಿಲ್ಲ. ಅದರಿಂದಲೂ ಪಠ್ಯಪುಸ್ತಕ ರಚನಾ ಸಮಿತಿಗಳು ಪಾಠ ಕಲಿತು ಪರಿಷ್ಕರಣೆಗೆ ಸಿದ್ಧರಾಗಬೇಕು.

ರೋಹಿತ್ ಚಕ್ರತೀರ್ಥ ಅವರ ಸಮಿತಿಯ ಪಠ್ಯಗಳು ಬ್ರಾಹ್ಮಣೀಕರಣ, ವೈದಿಕಪರ, ಹಿಂದೂಪರ, ರಾಷ್ಟ್ರಭಕ್ತಿಯೆಂಬ ಸರ್ವಾಧಿಕಾರಿಪರ, ಅಹಿಂದ ವಿರೋಧಿ, ಮತಾಂತರ ವಿರೋಧಿ, ಕಮ್ಯುನಿಸ್ಟ್ ವಿರೋಧಿ ಪಠ್ಯಗಳಾಗಿವೆ ಎಂಬ ಆರೋಪಗಳಿಗೆ ಒಳಗಾಗಿದೆ. ಆದಕಾರಣ ಈ ಸಮಿತಿಯನ್ನು ರಚಿಸಿದ ಸರ್ಕಾರವೇ ಈ ಪಠ್ಯಗಳನ್ನು ಮರುಪರಿಷ್ಕರಣೆಗೆ ಒಳಗು ಮಾಡುತ್ತಿರುವುದು, ಆ ಕಾರ್ಯಕ್ಕೆ ಮುಂದಾಗಿರುವುದು ಶಿಕ್ಷಣದ ಪಠ್ಯಪುಸ್ತಕಗಳ ಸುಧಾರಣೆಗೆ ಪರಿಪೂರ್ಣತೆಯ ಸಾಧನೆಗೆ ಸಹಮತ, ಸಹಬಾಳ್ವೆಗೆ ಕಾರಣವಾಗುವುದರಲ್ಲಿ ಅನುಮಾನವಿಲ್ಲ. ಇದೊಂದು ಸ್ವಾಗತಾರ್ಹವಾದ ನಡೆ. ಈ ಎಡಪಂಥ-ಬಲಪಂಥಗಳ ಚರ್ಚೆ ಇಂದು ಹುಟ್ಟಿದ್ದಲ್ಲ, ನಾಳೆಗೆ ಮುಗಿಯುವುದಿಲ್ಲ. ಪಂಪನ ಆದಿಪುರಾಣದಲ್ಲಿ ಸ್ವಯಂಬುದ್ಧ ಹಾಗೂ ಶತಮತಿ, ಸಂಭಿನ್ನಮತಿ, ಮಹಾಮತಿ ಎಂಬ ಮಂತ್ರಿಗಳಲ್ಲೇ ನೋಡಬಹುದು. ಹೆಗಲ್ ಮತ್ತು ಕಾರ್ಲ್‌ಮಾರ್ಕ್ಸ್; ಲೆನಿನ್ ಮತ್ತು ಸ್ಟಾಲಿನ್‌ರ ನಡುವೆಯೂ ನೋಡಬಹುದು. ಅದನ್ನೇ ನಾವು ಪ್ರೊ. ಬರಗೂರು ರಾಮಚಂದ್ರಪ್ಪ- ರೋಹಿತ್ ಚಕ್ರತೀರ್ಥ ಸಮಿತಿ ಪಠ್ಯಗಳ ಪರ-ವಿರೋಧಗಳ ನಡುವೆಯೂ ನೋಡಬಹುದು. ಈ ವಾಗ್ವಾದ ವ್ಯಕ್ತಿನಿಂದನೆ ದ್ವೇಷಭಾವನೆಗೆ ಇಳಿಯದಿದ್ದರೆ ಇದು ಶಿಕ್ಷಣದ ಸುಧಾರಣೆಗೆ, ಮನುಷ್ಯನ ಕಲ್ಯಾಣಕ್ಕೆ ಕಾರಣವಾಗುತ್ತದೆ. ಮೊಸರನ್ನು ಕಡೆಯದಿದ್ದರೆ ಬೆಣ್ಣೆ ಬರುವುದಿಲ್ಲ. ಮಡಕೆಯನ್ನು ಒಡೆದರೆ ಬೆಣ್ಣೆ ಇರಲಿ ಮಜ್ಜಿಗೆಯೂ ಉಳಿಯುವುದಿಲ್ಲ.

ಈ ಎಚ್ಚರವು ಪರಿಷ್ಕರಣೆ-ಪುನರ್‌ರಚನೆ-ಪುನರ್ ಪರಿಷ್ಕರಣೆ - ಮತ್ತೆ ರಚನೆ ಈ ಎಲ್ಲಾ ಸಂದರ್ಭಗಳಲ್ಲೂ ಇರಬೇಕಾದುದು ಅತ್ಯಗತ್ಯ. ಶಿಕ್ಷಕರು, ಸಾಹಿತಿಗಳು, ಪಠ್ಯಪುಸ್ತಕಗಳ ರಚನಾಕಾರರು, ರಾಜನೀತಿಯ ಒಲವು-ನಿಲುವುಗಳಿಂದ ಕೂಡಿದ್ದರೆ ತಪ್ಪಲ್ಲ. ಆದರೆ ರಾಜಕೀಯ ಪಕ್ಷಗಳ ಕಾರ್ಯಕರ್ತರಂತೆ ಅಥವಾ ರಾಜಕೀಯ ನಾಯಕರ ಬಾಯಾಳುಗಳ ಹಾಗೆ ವರ್ತಿಸಬಾರದು, ಪಠ್ಯ ರಚಿಸಬಾರದು. ಶಿಕ್ಷಣ ಕ್ಷೇತ್ರದಿಂದ ಗೆಲ್ಲಬೇಕಾದುದು ಪಕ್ಷಗಳಲ್ಲ ಗೆಲ್ಲಬೇಕಾದುದು ದೇಶ ಮತ್ತು ಮನುಷ್ಯತ್ವ. ಯಾರು ಏನೇ ಬರೆದರೂ ಕಡೆಗೂ ಉಳಿಯುವುದು ಸತ್ಯ ಮಾತ್ರ. ಲೇಖಕರಾದವರಿಗೆ ಅದು ತಿಳಿದಿರಬೇಕು. ಆ ಪ್ರಜ್ಞೆ ಸರ್ಕಾರಗಳಿಗೂ ಇರಬೇಕು. ಆ ದೃಷ್ಟಿಯಿಂದ ಈಗಿನ ಕರ್ನಾಟಕ ಸರ್ಕಾರ ತನ್ನ ಕಾಲದ ಪಠ್ಯಪುಸ್ತಕಗಳನ್ನು ತಾನೇ ಮರುಪರಿಷ್ಕರಣೆಗೆ ಒಳಗು ಮಾಡುವ ನಿರ್ಧಾರವನ್ನು ಕೈಗೊಂಡಿರುವುದು ಸ್ವಾಗತಾರ್ಹ. ಅದನ್ನೂ ಯಾರಾದರೂ ವಿರೋಧಿಸಿದರೆ ಅವರ ಉದ್ದೇಶ ಶಿಕ್ಷಣ ಸುಧಾರಣೆಯಲ್ಲ, ಬದಲಿಗೆ ಜಾತಿಗಳನ್ನು ಎತ್ತಿಕಟ್ಟುವ ಮೂಲಕ ಜಾತಿರಾಜಕಾರಣ ಮಾಡುವುದೇ ಆಗಿದೆ ಎಂಬುದು ಸ್ಪಷ್ಟವಾಗುತ್ತದೆ. ಈ ಮೂರು ಅಧ್ಯಕ್ಷರ ಪಠ್ಯಗಳನ್ನು ಪರಿಶೀಲಿಸಿದರೆ ಶೇಕಡಾ 85ರಷ್ಟು ಪಠ್ಯಗಳು ಮೂವರಲ್ಲೂ ಉಳಿದುಬಂದಿವೆ. ವಿವಾದವಿರುವುದು ಕೇವಲ ಶೇ 15ರಷ್ಟು ಪಠ್ಯ, ಸಾಲು, ವಿಷಯಗಳ ಬಗ್ಗೆ. ಅದನ್ನೂ ಸರಿಪಡಿಸುವಂತಾದರೆ ಎಡ-ಬಲಗಳಿಲ್ಲದ ಭರತಭೂಮಿನ್ನು ಸಾಮರಸ್ಯದ ಸಮಾಜ, ಸಾಹಿತ್ಯ, ಸಂಸ್ಕೃತಿಯನ್ನು ನಾವಿಂದು ಸೃಷ್ಟಿಸಬಹುದು. ಎಲ್ಲರೂ ನಮ್ಮನಮ್ಮ ಎದೆ ಮಿದುಳು ಕರುಳುಗಳನ್ನು ಪ್ರೀತಿಯಿಂದ ತಿಳಿಗೊಳಿಸಿಕೊಳ್ಳಬೇಕಾಗಿದೆ.

ಲೇಖಕ: ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ

ಪದಬಂಧ 4985

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹೆರಿಗೆ ಕೋಣೆಯಿದು (5)
4.ಬಿಡಿಸಲು ಕಷ್ಟವಾಗಿರುವ ಪ್ರಶ್ನೆ (3)
5.ವರ ಮಾಡಿರುವ ಒತ್ತಾಯ (3)
6.ವನದಲ್ಲಿ ಮುಖ ಕಾಣಿಸುತ್ತಿದೆಯಲ್ಲಾ! (3)
7.ಲೋಹದ ಹಾಳೆ (3)
9.ತೊಡೆ ತಟ್ಟುತ್ತಾ ಹಾಕಿದ ಕಡಿವಾಣ! (2)
10.ಪ್ರಹರಿಗೆ ಪ್ರತ್ಯಕ್ಷ್ಯನಾಗಿರುವ ವಿಷ್ಣು (2)
12.ಇದು ಶ್ರೇಷ್ಠವಾದುದು (3)
14.ಭಾವ ಬೀರಿರುವ ವರ್ಚಸ್ಸು! (3)
15.ಇದು ಕಷ್ಟವೇ ಅಲ್ಲ ಬಿಡಿ! (3)
16.ತಪರಾಕು ಆದ ಮೇಲೆಯೇ ಈ ಹೊಗಳಿಕೆ! (3)
17.ಈತ ಮಾತಿಗೆ ತಪ್ಪುವವನು (5)

ಮೇಲಿಂದ ಕೆಳಕ್ಕೆ

1.ಪ್ರವಾಸದಲ್ಲಿ ಮಾಡಿಕೊಂಡಿರುವ ಅಲಂಕಾರ (4)
2.ಅರಿವಳಿಕೆ ಕೊಟ್ಟ ನಂತರ ಬಂದಿರುವ ಅರಿವು (5)
3.ವನದಲ್ಲಿ ಮಾಡಿರುವ ಯಜ್ಞ (3)
4.ನಿರಂತರ ಎಂದು ಹೀಗೆನ್ನಿ (3)
8.ದೊಡ್ಡ ಹಾರೆಯಿದು (3)
9.ಬರವಿದ್ದಾಗ ನೋಡುತ್ತಿರುವ ಆಕಾಶ (3)
10.ಇದು ಕುದುರೆಯ ಮುಖ (5)
11.ದೃಢಕಾಯವನ್ನು ಈ ರೀತಿಯಲ್ಲಿ ಹೇಳಿ (4)
13.ಅಸ್ಪಷ್ಟವಾಗಿ ಕಾಣುವುದು (3)
14.ಹಿಂದೂ ಸಂವತ್ಸರದಲ್ಲಿ ಮೊದಲನೆಯದು (3)

1		2		3	■	4		
	■		■	5			■	■
	■	6			■	7	8	
	■		■	■	■	■		■
■	9		■	■	■	10		■
■		■	■	■	■		■	11
12		13	■	14			■	
■	■	15			■		■	
16			■	17				

4984ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸರಸ್ವತಿ
3.ಅಂತರ್ಯಾಮಿ
4.ಮಿಡಿತ, 5.ವನಚರ
7.ರಕುತ, 9.ಕಾನನ
10.ಅಬಲೆ, 11.ಸುಗಮ
13.ಮನೋಹರ
15.ಮಲರು, 16.ಮಾದಕತೆ
17.ಕಡಿವಾಣ

ಮೇಲಿಂದ ಕೆಳಕ್ಕೆ:
1.ಸಚಿವ, 2.ತಿಮಿರ
3.ಅಂತರ, 6.ನಳನಳಿಸು
8.ತಲೆಬರಹ, 12.ಮಮತೆ
13.ಮರುಕ, 14.ರಮಣ

ಸುಡೊಕು 5371

2		6					5	9
			5		6	3		2
3							6	
	2				5			4
			2		7			6
	7					5		
7		9			8		4	
4				3			8	
	6		4		2	7		3


5370 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಜೂನ್ 11, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ–ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ಏಕಾದಶಿ ಗಂ. 05-46, ದ್ವಾದಶಿ ಗಂ. 27-24 **ನಕ್ಷತ್ರ:** ಸ್ವಾತಿ ಗಂ. 26-05 **ಯೋಗ:** ಪರಿಘ ಗಂ. 20-46, **ಕರಣ:** ವಿಷ್ಟಿ ಗಂ. 05-46, ವೃಷಭ ಮಾಸದ 27 ನೇ ದಿನ.
ರಾಹುಕಾಲ: ಬೆಳಿಗ್ಗೆ 09:00–10:30
ಸೂರ್ಯೋದಯ: 06-07 **ಸೂರ್ಯಾಸ್ತ:** 06-53
ಮುಸ್ಲಿಂ ದಿನಾಂಕ: 11 ಜುಲ್ಕಾಯದ್
ದಿನ ವಿಶೇಷ: ಚಂಪಕ ದ್ವಾದಶಿ, ತ್ರಿಸ್ಪೃಷ ಮಹಾದ್ವಾದಶಿ
ಅದೃಷ್ಟ ಸಂಖ್ಯೆ: 1, 6

ಮೇಷ: ನಿರೀಕ್ಷಿತ ಬೆಳವಣಿಗೆಯಿಂದ ತೃಪ್ತಿ ಹೊಂದುವಿರಿ. ವಾಹನ ವ್ಯವಹಾರಗಳಲ್ಲಿ ವಿಶೇಷ ಲಾಭ. ನೀವು ಪ್ರಯತ್ನಿಸಿದ ಕಾರ್ಯಗಳು ಗುರು-ಹಿರಿಯರ ಅನುಗ್ರಹದಿಂದ ಕೈಗೂಡುತ್ತವೆ. ಸ್ವತ್ತು ವಿವಾದಗಳಲ್ಲಿ ಜಯ.

ವೃಷಭ: ಸಮಾಜದಲ್ಲಿ ಈಗಿನ ಕಾಲ ಘಟ್ಟಕ್ಕೆ ಸರಿ ಸಮಾನ ಸ್ಥಾನ ಮಾನಗಳು ದೊರಕುವ ಬಗ್ಗೆ ನಿಮ್ಮ ಪ್ರಯತ್ನವಿರಲಿ. ಜವಳಿ ವ್ಯಾಪಾರದ ಅಭಿವೃದ್ಧಿಗಾಗಿ ಪರಿಚಿತರಿಂದ ಹೆಚ್ಚಿನ ಸಹಾಯವನ್ನು ಪಡೆದುಕೊಳ್ಳುವಲ್ಲಿ ಯಶಸ್ವಿ.

ಮಿಥುನ: ಸಂಬಂಧಿಕರ ಆಗಮನದಿಂದ ಮನೆಯಲ್ಲಿ ಸಂಭ್ರಮದ ವಾತಾವರಣ ಉಂಟಾಗುವುದು. ಆಲಸ್ಯತನವನ್ನು ದೂರ ಮಾಡಿಕೊಳ್ಳುವುದರಿಂದ ಯಾವುದೇ ರೀತಿಯ ಸಮಸ್ಯೆಗಳು ಬರಲಾರದು.

ಕರ್ಕಾಟಕ: ವೃತ್ತಿ ಬದುಕಿನಲ್ಲಿ ತಪ್ಪುಗಳು ನಡೆಯುವ ಸಂಭವವು ಹೆಚ್ಚಿರುವುದರಿಂದ ಜಾಗರೂಕತೆ ವಹಿಸಬೇಕಾಗುತ್ತದೆ.

ಸಿಂಹ: ನಿಮ್ಮ ವ್ಯವಹಾರಗಳ ಬಗ್ಗೆ ಗಮನ ಹರಿಸುವುದು ಮುಖ್ಯ. ಹೊಸ ಸ್ಥಾನ ಅಥವಾ ಹೊಸ ಮನೆಗೆ ಹೋಗಬಹುದು. ಈ ಸಂಜೆ ನೀವು ಪ್ರೀತಿ ಪಾತ್ರರೊಡನೆ ಸಮಯ ಕಳೆಯುವಿರಿ. ಮಕ್ಕಳಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳುವಿರಿ.

ಕನ್ಯಾ: ಸಂದರ್ಶನಕಾರರಿಗೆ ಪ್ರಭಾವಿ ವ್ಯಕ್ತಿಗಳನ್ನು ಸಂದರ್ಶಿಸಲು ಒಂದು ಅವಕಾಶ ಸಿಗುವುದು. ಸಾಮಾಜಿಕ ಬದುಕಿನಲ್ಲಿ ಉತ್ತಮ ಸಾಧನೆ ಮಾಡುವಿರಿ. ಸೋದರರ ಓದಿಗಾಗಿ ಖರ್ಚು ಮಾಡಬೇಕಾಗುವುದು.

ತುಲಾ: ಹಳೆಯ ವಿಷಯಗಳನ್ನು ನೆನಪಿಸಿಕೊಂಡು ದುಃಖ ಪಡುವುದು ಸರಿಯಲ್ಲ. ನೀವು ಆರಿಸಿಕೊಂಡ ಮಾರ್ಗದಲ್ಲಿ ಸರಿ ತಪ್ಪುಗಳ ಬಗ್ಗೆ ಯೋಚಿಸಿ ಏಕಾಗ್ರತೆಯಿಂದ ಮುನ್ನಡೆಯಿರಿ.

ವೃಶ್ಚಿಕ: ನಿಮ್ಮ ವ್ಯವಹಾರಗಳಲ್ಲಿ ಹಿಡಿತವನ್ನು ಸಾಧಿಸಿದ್ದೀರಿ. ಉತ್ಸಾಹದಿಂದ ಮುಂದಿನ ಹೆಜ್ಜೆಗಳನ್ನಿರಿಸುವಿರಿ. ಬಟ್ಟೆ ವ್ಯಾಪಾರಿಗಳಿಗೆ ಇಂದು ಉತ್ತಮ ಮಾರಾಟ ಹಾಗೂ ಉತ್ತಮ ಲಾಭವಾಗುವುದು.

ಧನು: ಪರೋಪಕಾರದ ಫಲವಾಗಿ ಈ ದಿನ ನಿಮಗೆ ಬೆಟ್ಟದಂತೆ ಕಂಡು ಬಂದ ಒಂದು ಸಮಸ್ಯೆಯು ನಿಮ್ಮ ಬುದ್ಧಿವಂತಿಕೆಯಿಂದ ಮಂಜಿನಂತೆ ಕರಗಿ ಹೋಗುವುದು.

ಮಕರ: ನೈತಿಕವಾಗಿ ಪರಸ್ಪರ ಬೆಂಬಲವಾಗಿರುವ ಸ್ನೇಹ ಸಂಬಂಧಕ್ಕೆ ಇನ್ನೂ ಹೆಚ್ಚಿನ ಪೌಷ್ಠಿಕತೆ ಸಿಕ್ಕಿ ಮುಂದುವರೆಯಲಿ. ಮನೆಯ ಪರಿಸ್ಥಿತಿಯು ಸುಧಾರಿಸುವುದು. ಹಣಕಾಸಿನ ಬಗ್ಗೆ ಚಿಂತಿಸುವ ಅಗತ್ಯವಿಲ್ಲ.

ಕುಂಭ: ಈ ದಿನ ಹಣಕಾಸಿನ ವ್ಯವಹಾರದಲ್ಲಿ ಪಾಲುದಾರಿಕೆಯನ್ನು ಪಡೆಯುವಿರಿ. ಮಾತಾ-ಪಿತೃಗಳಿಂದ ನಿಮ್ಮ ಆಸೆಗಳಿಗೆ ಹೆಚ್ಚು ಪ್ರೋತ್ಸಾಹವನ್ನು ಹೊಂದುವಿರಿ. ಪರರಿಗೆ ಸಹಾಯ ಮಾಡುವ ಮನೋಭಾವದಿಂದ ಮುನ್ನಡೆ.

ಮೀನ: ತಾಂತ್ರಿಕ ವಿದ್ಯೆಯನ್ನು ವ್ಯಾಸಾಂಗ ಮಾಡುವವರಿಗೆ ಉತ್ತಮ ಫಲಿತಾಂಶ ಲಭಿಸಿ ಸಂತೋಷವಾಗುವುದು. ವೈದ್ಯ ವೃತ್ತಿಯವರಿಗೆ ತೃಪ್ತಿಕರವಾದ ವರಮಾನ ಪ್ರಾಪ್ತಿಯಾಗುತ್ತದೆ.



'ಗುಜರಾತ್ ಗೌರವ ಅಭಿಯಾನ' ರ‍್ಯಾಲಿಯಲ್ಲಿ ಪ್ರಧಾನಿ ಮೋದಿ

'ಬುಡಕಟ್ಟು ಪ್ರದೇಶಗಳ ನಿರ್ಲಕ್ಷ್ಯ'

ಪ್ರಜಾವಾಣಿ ವಾರ್ತೆ

ನವಸಾರಿ, ಗುಜರಾತ್ (ಪಿಟಿಐ): ಸ್ವಾತಂತ್ರ್ಯ ನಂತರ ದೇಶದಲ್ಲಿ ದೀರ್ಘಕಾಲ ಅಧಿಕಾರದಲ್ಲಿದ್ದವರು ಎಂದಿಗೂ ಬುಡಕಟ್ಟು ಪ್ರದೇಶಗಳ ಅಭಿವೃದ್ಧಿಗೆ ಆದ್ಯತೆ ನೀಡಲಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಪರೋಕ್ಷವಾಗಿ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.


ಬುಡಕಟ್ಟು ಸಮುದಾಯದ ಪ್ರಾಬಲ್ಯವಿರುವ ನವಸಾರಿ ಜಿಲ್ಲೆಯ ಖುದ್ವೆಲ್ ಗ್ರಾಮದಲ್ಲಿ 'ಗುಜರಾತ್ ಗೌರವ ಅಭಿಯಾನ' ರ‍್ಯಾಲಿ ಉದ್ದೇಶಿಸಿ ಅವರು ಮಾತನಾಡಿದರು.

ಬುಡಕಟ್ಟು ಪ್ರದೇಶದ ಅಭಿವೃದ್ಧಿಗಾಗಿ ಸುಮಾರು ₹3,050 ಕೋಟಿಯ ವಿವಿಧ ಯೋಜನೆಗಳಿಗೆ ಪ್ರಧಾನಿ ಶಂಕುಸ್ಥಾಪನೆ ನೆರವೇರಿಸಿದರು.

'ಮತ ಪಡೆಯಲು ಅಥವಾ ಚುನಾವಣೆ ಗೆಲ್ಲಲು ಅಭಿವೃದ್ಧಿ ಕಾರ್ಯಗಳನ್ನು ನಾನು ಪ್ರಾರಂಭಿಸುವುದಿಲ್ಲ. ಆದರೆ, ಜನರ ಜೀವನ ಮಟ್ಟ ಸುಧಾರಿಸುವ ಉದ್ದೇಶದಿಂದ ಅಭಿವೃದ್ಧಿ ಕೆಲಸ ಮಾಡುತ್ತೇನೆ. ನಾನು ಎರಡು ದಶಕಗಳಿಂದ ಸಾರ್ವಜನಿಕ ಜೀವನದಲ್ಲಿ ಇದ್ದೇನೆ. ನಾನು ಅಭಿವೃದ್ಧಿ ಯೋಜನೆಗಳನ್ನು ಪ್ರಾರಂಭಿಸದ ಒಂದೇ ಒಂದು ವಾರ ಇದ್ದರೇ ನನಗೆ ತೋರಿಸಲಿ' ಎಂದು ಸವಾಲು ಹಾಕಿದರು.

'ದೇಶದಲ್ಲಿ ದೀರ್ಘ ಕಾಲ ಅಧಿಕಾರದಲ್ಲಿದ್ದವರು ಬುಡಕಟ್ಟು ಪ್ರದೇಶಗಳ ಅಭಿವೃದ್ಧಿಗೆ ಗಮನ ಹರಿಸಲೇ ಇಲ್ಲ. ಏಕೆಂದರೆ ಅದಕ್ಕಾಗಿ ಕಠಿಣ ಪರಿಶ್ರಮಪಡಬೇಕಿತ್ತು. ಹಾಗಾಗಿ ಬುಡಕಟ್ಟು ಪ್ರದೇಶಗಳಲ್ಲಿ ಸರಿಯಾದ ರಸ್ತೆಗಳು, ಅಭಿವೃದ್ಧಿ ಕಾರ್ಯಗಳು ಆಗಲಿಲ್ಲ' ಎಂದು ಮೋದಿ ಅವರು ಯಾವುದೇ ಪಕ್ಷದ ಹೆಸರು ಉಲ್ಲೇಖಿಸದೇ ಟೀಕಾಪ್ರಹಾರ ನಡೆಸಿದರು.

ಮೋದಿ ಅವರ ತವರು ರಾಜ್ಯ ಗುಜರಾತ್‌ನಲ್ಲಿ ಈ ವರ್ಷದ ಕೊನೆಯಲ್ಲಿ ವಿಧಾನಸಭೆ ಚುನಾವಣೆ ಎದುರಾಗಲಿದ್ದು, ಆಡಳಿತರೂಢ ಬಿಜೆಪಿ ಅಧಿಕಾರ ಉಳಿಸಿಕೊಳ್ಳುವ ಪ್ರಯತ್ನದಲ್ಲಿದೆ.



ಗುಜರಾತ್‌ನ ನವಸಾರಿಯಲ್ಲಿ ಶುಕ್ರವಾರ ಪ್ರಧಾನಿ ನರೇಂದ್ರ ಮೋದಿ ಅವರು ಎ.ಎಂ. ನಾಯಕ್ ಹೆಲ್ತ್‌ಕೇರ್ ಕಾಂಪ್ಲೆಕ್ಸ್ ಮತ್ತು ನಿರಾಲಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಉದ್ಘಾಟಿಸಿದ ನಂತರ ವೈದ್ಯಕೀಯ ಸೌಲಭ್ಯಗಳನ್ನು ಪರಿಶೀಲಿಸಿದರು – ಪಿಟಿಐ ಚಿತ್ರ

'ಬಾಹ್ಯಾಕಾಶ ಕ್ಷೇತ್ರದಲ್ಲಿ ನಿರಂತರ ಸುಧಾರಣೆ'

ಅಹಮದಾಬಾದ್ (ಪಿಟಿಐ): ಬಾಹ್ಯಾಕಾಶ ಕ್ಷೇತ್ರದಲ್ಲಿ ಖಾಸಗಿ ಹೂಡಿಕೆ ಮತ್ತು ಆವಿಷ್ಕಾರ ಉತ್ತೇಜಿಸಲು ಸ್ಥಾಪಿಸಿರುವ ಭಾರತೀಯ ಬಾಹ್ಯಾಕಾಶ ಉತ್ತೇಜನ ಮತ್ತು ಮಾನ್ಯತಾ ಕೇಂದ್ರದ (ಇಂಡಿಯನ್ ಸ್ಪೇಸ್ ಪ್ರೊಮೋಷನ್ ಆ್ಯಂಡ್ ಆಥರೈಜೇಷನ್ ಸೆಂಟರ್–ಇನ್ ಸ್ಪೇಸ್) ಪ್ರಧಾನ ಕಚೇರಿಯನ್ನು ಪ್ರಧಾನಿ ಮೋದಿ ಶುಕ್ರವಾರ ಉದ್ಘಾಟಿಸಿದರು.

'21ನೇ ಶತಮಾನದಲ್ಲಿ ಬಾಹ್ಯಾಕಾಶ ತಂತ್ರಜ್ಞಾನವು ವಿಶ್ವದಲ್ಲಿ ದೊಡ್ಡ ಕ್ರಾಂತಿ ತರಲಿದೆ. ನಮ್ಮ ಸರ್ಕಾರವು ಬಾಹ್ಯಾಕಾಶ ಕ್ಷೇತ್ರದಲ್ಲಿ ಸುಧಾರಣೆಗಳನ್ನು ಪ್ರಾರಂಭಿಸಿದೆ. ಅಲ್ಲದೇ, ಅದನ್ನು ಖಾಸಗಿ ವಲಯಕ್ಕೂ ಮುಕ್ತವಾಗಿ ತೆರೆದಿದೆ. ಐ.ಟಿ ವಲಯದಂತೆ, ನಮ್ಮ ಬಾಹ್ಯಾಕಾಶ ಉದ್ಯಮವು ಜಾಗತಿಕ ಬಾಹ್ಯಾಕಾಶ ಕ್ಷೇತ್ರದಲ್ಲಿಯೂ ಮುಂದಾಳತ್ವ ವಹಿಸುವ ಭರವಸೆ ನನಗಿದೆ. ಈ ಕ್ಷೇತ್ರದಲ್ಲಿ ಸುಧಾರಣೆಗಳು ನಿರಂತರ ಮುಂದುವರಿಯಲಿವೆ' ಎಂದು ಅವರು ಭರವಸೆ ನೀಡಿದರು.

'8 ವರ್ಷಗಳಲ್ಲಿ ಆರೋಗ್ಯ ಕ್ಷೇತ್ರದ ಸಮಗ್ರ ಅಭಿವೃದ್ಧಿ'

'ಕಳೆದ ಎಂಟು ವರ್ಷಗಳಲ್ಲಿ ನಮ್ಮ ಸರ್ಕಾರವು ದೇಶದ ಆರೋಗ್ಯ ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಪ್ರಯತ್ನಿಸಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಹೇಳಿದರು.

ಎಂಜಿನಿಯರಿಂಗ್ ಸಮೂಹ ಸಂಸ್ಥೆಗಳಾದ ಲಾರ್ಸನ್ ಮತ್ತು ಟೂರ್ಬೊದ ಎ.ಎಂ. ನಾಯ್ಕ್ ನೇತೃತ್ವದ ಟ್ರಸ್ಟ್ ನಿರ್ಮಿಸಿರುವ ಎ.ಎಂ. ನಾಯಕ್ ಹೆಲ್ತ್‌ಕೇರ್ ಕಾಂಪ್ಲೆಕ್ಸ್ ಮತ್ತು ನಿರಾಲಿ ಆಸ್ಪತ್ರೆ ಉದ್ಘಾಟಿಸಿ ಅವರು ಮಾತನಾಡಿದರು.

'ಗುಜರಾತ್‌ನ ಮುಖ್ಯಮಂತ್ರಿಯಾಗಿದ್ದಾಗಿನ ನನ್ನ ಅನುಭವವು ದೇಶದಲ್ಲಿ ಮಾದರಿ ಆರೋಗ್ಯ ನೀತಿ ರೂಪಿಸಲು ನೆರವಾಗಿದೆ. ಮುಖ್ಯಮಂತ್ರಿ ಅಮೃತಂ ಯೋಜನೆ ಪರಿಚಯಿಸಿದ್ದೇನೆ. ಇದು ರಾಜ್ಯದ ಬಡ ಜನರಿಗೆ ₹2 ಲಕ್ಷ ವರೆಗಿನ ವೈದ್ಯಕೀಯ ವೆಚ್ಚ ಭರಿಸುತ್ತದೆ. ದೇಶದ ಬಡಜನರ ಆರೋಗ್ಯಕ್ಕೆ ₹5 ಲಕ್ಷದವರೆಗೆ ವೆಚ್ಚ ಭರಿಸುವ ಆಯುಷ್ಮಾನ್ ಭಾರತ್ ಯೋಜನೆಯನ್ನು ಕೇಂದ್ರ ಸರ್ಕಾರದಿಂದ ಪರಿಚಯಿಸಿದ್ದೇವೆ' ಎಂದು ಮೋದಿ ಹೇಳಿದರು.

ದಾರಿತಪ್ಪಿಸುವ ಜಾಹೀರಾತು ತಡೆಗೆ ಹೊಸ ಮಾರ್ಗಸೂಚಿ

ನವದೆಹಲಿ (ಪಿಟಿಐ): ಮುದ್ರಣ, ಟಿ.ವಿ ವಾಹಿನಿಗಳು ಹಾಗೂ ಆನ್‌ಲೈನ್ ವೇದಿಕೆಗಳಲ್ಲಿ ರಿಯಾಯಿತಿಗಳು ಮತ್ತು ಉಚಿತ ತ್ವರೆಗಳನ್ನು ನೀಡುವ ಮೂಲಕ ಗ್ರಾಹಕರಿಗೆ ಅದರಲ್ಲೂ ಮಕ್ಕಳಿಗೆ ಆಮಿಷ ಒಡ್ಡುವ, ತಪ್ಪು ದಾರಿಗೆ ಎಳೆಯುವ ಜಾಹೀರಾತುಗಳಿಗೆ ಕಟ್ಟುನಿಟ್ಟಿನ ನಿರ್ಬಂಧ ವಿಧಿಸಿ, ಕೇಂದ್ರ ಸರ್ಕಾರ ಶುಕ್ರವಾರ ತಕ್ಷಣದಿಂದಲೇ ಜಾರಿಗೆ ಬರುವಂತೆ ಹೊಸ ಮಾರ್ಗಸೂಚಿಗಳನ್ನು ಪ್ರಕಟಿಸಿದೆ.

ಗ್ರಾಹಕ ವ್ಯವಹಾರಗಳ ಸಚಿವಾಲಯವು ತಕ್ಷಣದಿಂದಲೇ ಜಾರಿಗೆ ತಂದಿರುವ ಮಾರ್ಗಸೂಚಿಗಳು, ಮುದ್ರಣ, ಟಿ.ವಿ ವಾಹಿನಿಗಳು ಹಾಗೂ ಆನ್‌ಲೈನ್ ವೇದಿಕೆಗಳಲ್ಲಿ ಪ್ರಕಟವಾಗುವ ಎಲ್ಲ ಜಾಹೀರಾತುಗಳಿಗೆ ಅನ್ವಯವಾಗಲಿವೆ. ಜಾಹೀರಾತುಗಳನ್ನು ಬಿಂಬಿಸುವವರೂ ಕೈಗೊಳ್ಳಬೇಕಾದ ಬದ್ಧತೆಯನ್ನು ಸೂಚಿಸಿವೆ.

ಹೊಸ ಮಾರ್ಗಸೂಚಿಗಳ ಉಲ್ಲಂಘನೆಯ ವಿರುದ್ಧ ಗ್ರಾಹಕ ಸಂರಕ್ಷಣಾ ಕಾಯ್ದೆಯ (ಸಿಪಿಎ) ನಿಬಂಧನೆಗಳ ಪ್ರಕಾರ ಕ್ರಮ ಜರುಗಿಸಲಾಗುತ್ತದೆ. ಮೊದಲ ಬಾರಿಯ ಉಲ್ಲಂಘನೆಯ ಅಪರಾಧಕ್ಕೆ ₹10 ಲಕ್ಷ, ಅಪರಾಧ ಪುನರಾವರ್ತನೆಯಾದರೆ ₹50 ಲಕ್ಷ ದಂಡ ವಿಧಿಸಲು ಅವಕಾಶ ಮಾಡಿಕೊಟ್ಟಿದೆ.

ಮಾರ್ಗಸೂಚಿಗಳನ್ನು ಪ್ರಕಟಿಸಿದ ಗ್ರಾಹಕ ವ್ಯವಹಾರಗಳ ಕಾರ್ಯದರ್ಶಿ ರೋಹಿತ್ ಕುಮಾರ್ ಸಿಂಗ್ 'ಜಾಹೀರಾತುಗಳ ಪ್ರಭಾವ ಗ್ರಾಹಕರ ಮೇಲೆ ಹೆಚ್ಚಿದೆ. ಸಿಸಿಪಿಎ ಕಾಯ್ದೆಯಡಿ, ಗ್ರಾಹಕರ ಹಕ್ಕುಗಳು ಮತ್ತು ಹಿತಾಸಕ್ತಿ ಮೇಲೆ ಪರಿಣಾಮ ಬೀರುವ, ದಾರಿತಪ್ಪಿಸುವ ಜಾಹೀರಾತುಗಳನ್ನು ನಿಯಂತ್ರಿಸಲು ನಿಬಂಧನೆಗಳಿವೆ. ಇವುಗಳ ಬಗ್ಗೆ ಉದ್ಯಮಕ್ಕೆ ಸ್ಪಷ್ಟ ಅರಿವು ಮೂಡಿಸಲು, ಇಂದಿನಿಂದ ಜಾರಿಗೆ ಬರುವಂತೆ ನ್ಯಾಯಯುತ ಜಾಹೀರಾತಿಗಾಗಿ ಸರ್ಕಾರವು ಮಾರ್ಗಸೂಚಿಗಳನ್ನು ಹೊರತಂದಿದೆ' ಎಂದು ಹೇಳಿದರು.

ಗ್ರಾಹಕ ಸೇವೆಗಳನ್ನು ಒದಗಿಸುವಲ್ಲಿ ತೊಡಗಿರುವ ಸಾರ್ವಜನಿಕ ವಲಯದ ಘಟಕಗಳು (ಪಿಎಸ್‌ಯು) ನೀಡುವ ಸರ್ಕಾರಿ ಜಾಹೀರಾತುಗಳಿಗೂ ಈ ಮಾರ್ಗಸೂಚಿಗಳು ಅನ್ವಯಿಸುತ್ತವೆ. ಅಡ್ವರ್ಟೈಸಿಂಗ್ ಸ್ಟ್ಯಾಂಡರ್ಡ್ಸ್ ಕೌನ್ಸಿಲ್ ಆಫ್ ಇಂಡಿಯಾ (ಎಎಸ್‌ಸಿಐ) ಸ್ವಯಂ ನಿಯಂತ್ರಣಕ್ಕಾಗಿ ಹೊರಡಿಸಿದ ಜಾಹೀರಾತು ಮಾರ್ಗಸೂಚಿಗಳು ಸಹ ಸಮಾನಾಂತರವಾಗಿ ಜಾರಿಯಲ್ಲಿರುತ್ತವೆ ಎಂದು ಅವರು ಹೇಳಿದರು.

ಸರ್ಕಾರ ಹೊರಡಿಸಿರುವ 'ತಪ್ಪು ದಾರಿಗೆಳೆಯುವ ಜಾಹೀರಾತುಗಳು ಮತ್ತು ಅವುಗಳ ಅನುಮೋದನೆಗಳನ್ನು ತಡೆಗಟ್ಟುವಿಕೆ 2022' ಹೊಸ ಮಾರ್ಗಸೂಚಿಗಳು, ಮಕ್ಕಳನ್ನು ಗುರಿಯಾಗಿಸುವ ಜಾಹೀರಾತುಗಳನ್ನು ನಿಯಂತ್ರಿಸಲಿದೆ. ಜತೆಗೆ ಬಾಡಿಗೆ ಜಾಹೀರಾತುಗಳನ್ನೂ ನಿಷೇಧಿಸಲಿದೆ. ತಪ್ಪುದಾರಿಗೆಳೆಯುವ ಜಾಹೀರಾತುಗಳ ವಿರುದ್ಧ ದೂರುಗಳನ್ನು ಸಲ್ಲಿಸಲು ಗ್ರಾಹಕರು ಮತ್ತು ಗ್ರಾಹಕ ಸಂಸ್ಥೆಗಳಿಗೆ ಅಧಿಕಾರ ನೀಡಲಾಗಿದೆ.

ಮಕ್ಕಳಿಗೆ ದಾರಿ ತಪ್ಪಿಸದಂತೆಯೂ ಕಟ್ಟೆಚ್ಚರ

'ತಪ್ಪುದಾರಿಗೆಳೆಯುವ ಜಾಹೀರಾತನ್ನು ಈಗಾಗಲೇ ಗ್ರಾಹಕ ಸಂರಕ್ಷಣಾ ಕಾಯ್ದೆ 2019 ರ ಸೆಕ್ಷನ್ 2(28) ಅಡಿಯಲ್ಲಿ ವ್ಯಾಖ್ಯಾನಿಸಲಾಗಿದ್ದು, 'ಬೈಟ್ ಜಾಹೀರಾತು', ಮತ್ತು 'ಬಾಡಿಗೆ ಜಾಹೀರಾತು'ಗಳೆಂದು ವ್ಯಾಖ್ಯಾನಿಸಲಾಗಿದೆ. ಬೈಟ್ ಜಾಹೀರಾತು ಎಂದರೆ ಗ್ರಾಹಕರನ್ನು ಆಕರ್ಷಿಸಲು ಕಡಿಮೆ ಬೆಲೆಗೆ ಸರಕುಗಳು, ಉತ್ಪನ್ನಗಳು ಅಥವಾ ಸೇವೆಗಳ ಮಾರಾಟಕ್ಕೆ ನೀಡುವ ಜಾಹೀರಾತಾಗಿದೆ. 'ಉಚಿತ ಕ್ಲೈಮ್ ಜಾಹೀರಾತುಗಳು' ಎಂದೂ ವ್ಯಾಖ್ಯಾನಿಸಿರುವ 'ಬಾಡಿಗೆ ಜಾಹೀರಾತು' ಮತ್ತು ಬೈಟ್ ಜಾಹೀರಾತು ನೀಡುವಾಗ ಅನುಸರಿಸಬೇಕಾದ ಷರತ್ತುಗಳನ್ನು ಈ ಮಾರ್ಗಸೂಚಿ ಒಳಗೊಂಡಿದೆ.

ಉತ್ಪನ್ನ ಅಥವಾ ಸೇವೆಯ ಬಗ್ಗೆ ಮಕ್ಕಳು ಅವಾಸ್ತವಿಕ ನಿರೀಕ್ಷೆಗಳನ್ನು ಹೊಂದುವಂತೆ ಮತ್ತು ಮಾನ್ಯತೆ ಪಡೆದ ಸಂಸ್ಥೆಯಿಂದ ಸಮರ್ಪಕವಾಗಿ ಮತ್ತು ವೈಜ್ಞಾನಿಕವಾಗಿ ದೃಢೀಕರಿಸದೆ ಯಾವುದೇ ಆರೋಗ್ಯ ಅಥವಾ ಪೋಷಕಾಂಶದ ಪ್ರಯೋಜನಗಳನ್ನು ಪಡೆಯಲು ಕಾರಣವಾಗುವಂತೆ ಉತ್ಪನ್ನ ಅಥವಾ ಸೇವೆಯ ವೈಶಿಷ್ಟ್ಯಗಳನ್ನು ಉತ್ಪ್ರೇಕ್ಷಿಸುವುದನ್ನು ಮಾರ್ಗಸೂಚಿಗಳು ನಿರ್ಬಂಧಿಸಿವೆ ಎಂದು ಕೇಂದ್ರ ಗ್ರಾಹಕ ಸಂರಕ್ಷಣಾ ಪ್ರಾಧಿಕಾರ ನಿಯಂತ್ರಕದ (ಸಿಸಿಪಿಎ) ಮುಖ್ಯ ಆಯುಕ್ತರು ಮತ್ತು ಗ್ರಾಹಕ ವ್ಯವಹಾರಗಳ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ನಿಧಿ ಖರೆ ತಿಳಿಸಿದರು.

ಮಕ್ಕಳನ್ನು ಗುರಿಯಾಗಿಸುವ ಜಾಹೀರಾತುಗಳು ಕ್ರೀಡೆ, ಸಂಗೀತ ಅಥವಾ ಸಿನಿಮಾ ಕ್ಷೇತ್ರದ ಯಾವುದೇ ವ್ಯಕ್ತಿಗಳನ್ನು ಒಳಗೊಂಡಿರಬಾರದು. ಯಾವುದೇ ಕಾನೂನಿನ ಅಡಿಯಲ್ಲಿ ಅಂತಹ ಜಾಹೀರಾತುಗಳಿಗೆ ಆರೋಗ್ಯ ಎಚ್ಚರಿಕೆ ಸಂದೇಶ ಅಗತ್ಯ ಎಂದು ಸರ್ಕಾರ ಹೇಳಿದೆ.

ಇದಲ್ಲದೆ, ತಯಾರಕರು, ಸೇವಾ ಪೂರೈಕೆದಾರರು, ಜಾಹೀರಾತುದಾರರು ಮತ್ತು ಜಾಹೀರಾತು ಏಜೆನ್ಸಿಯ ಕರ್ತವ್ಯಗಳಿಗೆ ಸ್ಪಷ್ಟ ಮಾರ್ಗಸೂಚಿಗಳನ್ನು ವಿಧಿಸಲಾಗಿದೆ.

ಭಾರತೀಯ ವೃತ್ತಿಪರರು ಯಾವುದೇ ಜಾಹೀರಾತು ಬಿಂಬಿಸುವುದನ್ನು ಯಾವುದೇ ಕಾನೂನಿನ ಅಡಿ ನಿರ್ಬಂಧಿಸಿದರೆ, ಅಂತಹ ವೃತ್ತಿಯ ವಿದೇಶಿ ವೃತ್ತಿಪರರು ಆ ಜಾಹೀರಾತುಗಳನ್ನು ಬಿಂಬಿಸುವುದಕ್ಕೆ ಅನುಮತಿ ನೀಡಲಾಗದು ಎಂದು ಮಾರ್ಗಸೂಚಿಯಲ್ಲಿ ಹೇಳಿದೆ.

ಸಂಕ್ಷಿಪ್ತ ಸುದ್ದಿ

ಇತಿಹಾಸ ತಜ್ಞರಿಂದ ಮೊಘಲರಿಗೆ ಹೆಚ್ಚು ಪ್ರಾಶಸ್ತ್ಯ: ಶಾ ಕಿಡಿ



ನವದೆಹಲಿ(ಪಿಟಿಐ): ಭಾರತದ ಇತಿಹಾಸ ತಜ್ಞರು ಮೊಘಲ್ ಇತಿಹಾಸದ ದಾಖಲೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದು, ವೈಭವಯುತವಾದ ರಾಜವಂಶಗಳಾದ ಪಾಂಡ್ಯ, ಚೋಳ, ಮೌರ್ಯ, ಗುಪ್ತ ಮತ್ತು ಅಹೋಮ್ ಸಾಮ್ರಾಜ್ಯಗಳನ್ನು ಕಡಣೆಗಣಿಸಿದ್ದರು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಅಸಮಾಧಾನ ವ್ಯಕ್ತಪಡಿಸಿದರು.

ಶುಕ್ರವಾರ ಇಲ್ಲಿ ನಡೆದ 'ಮಹಾರಾಣಾ: ಸಹಸ್ತ್ರ ವರ್ಷೋರಂಕಾ ಧರ್ಮ ಯುದ್ಧ' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ವಿಶ್ವದ ಎದುರು ಭಾರತವು ಗೌರವಕ್ಕೆ ಪಾತ್ರವಾಗಿದ್ದು, ಭಾರತ ವೈಭವವನ್ನು ಗುರುತಿಸಲಾಗಿದೆ. ಹೀಗಾಗಿ 1,000 ವರ್ಷಗಳ ಕಾಲ ಸಂಸ್ಕೃತಿ, ಭಾಷೆ ಮತ್ತು ಧಾರ್ಮಿಕತೆಗಳ ರಕ್ಷಣೆಗಾಗಿ ನಡೆದ ಯುದ್ಧಗಳು ವ್ಯರ್ಥವಾಗಿಲ್ಲ' ಎಂದರು.

'ಮೌರ್ಯರು ಅಫ್ಘಾನಿಸ್ತಾನದಿಂದ ಹಿಡಿದು ಲಂಕಾದವರೆಗಿನ ಇಡೀ ದೇಶವನ್ನು 550 ವರ್ಷಗಳ ಕಾಲ ಆಳಿದರು. ಆದರೆ, ಈ ಕುರಿತು ಯಾವುದೇ ಪುಸ್ತಕಗಳಲ್ಲಿ ಉಲ್ಲೇಖವೇ ಇಲ್ಲ' ಎಂದು ಅಮಿತ್ ಶಾ ಅಸಮಾಧಾನ ವ್ಯಕ್ತಪಡಿಸಿದರು.

23ಕ್ಕೆ ಹಾಜರಾಗಲು ಸೋನಿಯಾಗೆ ಇ.ಡಿ ಸಮನ್ಸ್



ನವದೆಹಲಿ (ಪಿಟಿಐ): ನ್ಯಾಷನಲ್ ಹೆರಾಲ್ಡ್ ಪತ್ರಿಕೆಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜೂನ್ 23ರಂದು ವಿಚಾರಣೆಗೆ ಹಾಜರಾಗುವಂತೆ ಜಾರಿ ನಿರ್ದೇಶನಾಲಯ (ಇ.ಡಿ) ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಹೊಸ ಸಮನ್ಸ್ ಜಾರಿ ಮಾಡಿದೆ.

ಜೂನ್ 8ರಂದು ಸೋನಿಯಾಗೆ ಹಾಜರಾಗುವಂತೆ ಸೂಚಿಸಲಾಗಿತ್ತು. ಆದರೆ, ಕೋವಿಡ್ ಸೋಂಕು ತಗುಲಿದೆ ಕಾರಣ, ಹೊಸ ದಿನಾಂಕ ಕೋರಿದ್ದರು. 23ರಂದು ನವದೆಹಲಿಯ ಇ.ಡಿ ಕಚೇರಿಯಲ್ಲಿ ಅವರ ಹೇಳಿಕೆ ದಾಖಲಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಪ್ರಕರಣದಲ್ಲಿ ಸೋನಿಯಾ ಅವರ ಪುತ್ರ ರಾಹುಲ್ ಗಾಂಧಿ ಅವರನ್ನು ಇದೇ 13ರಂದು ಪ್ರಶ್ನಿಸಲಾಗುತ್ತದೆ.

ಅಗರ್ತಲಾ–ಕೋಲ್ಕತ್ತ ಬಸ್ ಸಂಚಾರ ಪುನರಾರಂಭ

ಅಗರ್ತಲಾ (ಪಿಟಿಐ): ಕೊರೊನಾ ಕಾರಣದಿಂದ ಸ್ಥಗಿತಗೊಂಡಿದ್ದ ಢಾಕಾ ಮಾರ್ಗವಾಗಿ ತೆರಳುವ ಅಗರ್ತಲಾ–ಕೋಲ್ಕತ್ತ ನಡುವಿನ ಬಸ್ ಸೇವೆ ಎರಡು ವರ್ಷಗಳ ಬಳಿಕ ಪುನಾರಂಭಗೊಂಡಿದೆ.

ರಾಜ್ಯ ಸಾರಿಗೆ ಸಚಿವ ಪ್ರಣಜಿತ್ ಸಿಂಘಾರಾಯ್ ಅವರು ಶುಕ್ರವಾರ ಅಖೌರಾದಲ್ಲಿ ಅಂತರರಾಷ್ಟ್ರೀಯ ಬಸ್ ಸೇವೆಗೆ ಹಸಿರು ನಿಶಾನೆ ತೋರಿದರು. ಬಳಿಕ ಮಾತನಾಡಿ, 'ಅಂತರ ಗಡಿಯ ಬಸ್ ಸೇವೆಯು ಭಾರತ ಮತ್ತು ಬಾಂಗ್ಲಾದೇಶದ ನಡುವಿನ ಸಹಕಾರಕ್ಕೆ ಮತ್ತಷ್ಟು ಬಲ ತುಂಬಲಿದೆ' ಎಂದರು. ಅಗರ್ತಲಾದಿಂದ ಕೋಲ್ಕತ್ತ ವರೆಗಿನ ಸುಮಾರು 500 ಕಿ.ಮೀ. ಅಂತರವನ್ನು ಬಸ್ 19 ಗಂಟೆಗಳಲ್ಲಿ ಕ್ರಮಿಸಲಿದೆ.ವಾರದಲ್ಲಿ 6 ದಿನಗಳ ಕಾಲ ಈ ಬಸ್ ಸೇವೆ ಲಭ್ಯವಿರಲಿದೆ.







ಐಪಿಎಲ್ ಟೂರ್ನಿ ಪ್ರಸಾರ ಹಕ್ಕು ಮಾರಾಟ; ಹರಾಜು ಪ್ರಕ್ರಿಯೆ ನಾಳೆಯಿಂದ

ಬಿಸಿಸಿಐಗೆ ₹ 45 ಸಾವಿರ ಕೋಟಿ ನಿರೀಕ್ಷೆ



ಐಪಿಎಲ್ ಪಂದ್ಯವೊಂದರಲ್ಲಿ ಅಭಿಮಾನಿಗಳ ಉತ್ಸಾಹ

ನವದೆಹಲಿ (ಪಿಟಿಐ): ವಿಶ್ವದ ಅತ್ಯಂತ ಶ್ರೀಮಂತ ಕ್ರಿಕೆಟ್ ಲೀಗ್ ಎನಿಸಿಕೊಂಡಿರುವ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟ್ವೆಂಟಿ–20 ಟೂರ್ನಿಯ ಮುಂದಿನ ಐದು ವರ್ಷಗಳ ಪ್ರಸಾರ ಹಕ್ಕು ಮಾರಾಟದ ಹರಾಜು ಪ್ರಕ್ರಿಯೆ ಜೂನ್ 12 ಮತ್ತು 13ರಂದು ನಡೆಯಲಿದೆ.

ಇ-ಹರಾಜು ಮೂಲಕ ಪ್ರಸಾರ ಹಕ್ಕುಗಳ ಮಾರಾಟಕ್ಕೆ ಸಿದ್ಧತೆ ನಡೆದಿದ್ದು, ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಸುಮಾರು ₹ 45 ಸಾವಿರ ಕೋಟಿ ಗಳಿಸುವ ನಿರೀಕ್ಷೆಯಿದೆ.

ಇ-ಕಾಮರ್ಸ್ ದೈತ್ಯ ಅಮೆಜಾನ್ ಕಂಪನಿ ಹರಾಜು ಪ್ರಕ್ರಿಯೆಯಿಂದ ಹಿಂದೆ ಸರಿದಿದೆ. ರಿಲಯನ್ಸ್ ಇಂಡಸ್ಟ್ರೀಸ್ ಒಡೆತನದ 'ವಯಾಕಾಮ್ 18' ಟಿ.ವಿ ಪ್ರಸಾರ ಮತ್ತು ಡಿಜಿಟಲ್ ಸೇರಿದಂತೆ ಎರಡೂ ಹಕ್ಕುಗಳನ್ನು ತನ್ನದಾಗಿಸಿಕೊಳ್ಳುವ ಮುಂಚೂಣಿಯಲ್ಲಿರುವ ಕಂಪನಿ ಎನಿಸಿಕೊಂಡಿದೆ.

ನಾಲ್ಕು ಪ್ಯಾಕೇಜ್: ಈ ಬಾರಿ ಪ್ರಸಾರ ಹಕ್ಕುಗಳ ಮಾರಾಟ ನಾಲ್ಕು ಪ್ಯಾಕೇಜ್‌ಗಳಲ್ಲಿ ನಡೆಯಲಿದೆ. ಭಾರತ ಉಪಭೂಖಂಡದಲ್ಲಿ ಟಿ.ವಿ ಪ್ರಸಾರ ಹಕ್ಕು, ಭಾರತ ಉಪಭೂಖಂಡದಲ್ಲಿ ಡಿಜಿಟಲ್ ಪ್ರಸಾರ ಹಕ್ಕು, ಪ್ರತಿ ಋತುವಿನಲ್ಲಿ ಪ್ಲೇಆಫ್ ಒಳಗೊಂಡಂತೆ ಆಯ್ದ 18 ಪಂದ್ಯಗಳ ಪ್ರಸಾರ ಹಕ್ಕು ಹಾಗೂ ವಿದೇಶಗಳಲ್ಲಿ ನೇರ ಪ್ರಸಾರ ಹಕ್ಕು- ಈ ರೀತಿ ನಾಲ್ಕು ವಿಭಾಗಗಳಲ್ಲಿ ಹರಾಜು ಆಯೋಜಿಸಲಾಗಿದೆ.

'ಅಮೆಜಾನ್ ಸ್ಪರ್ಧೆಯಿಂದ ಹಿಂದೆ ಸರಿದಿರುವುದು ನಿಜ. ಶುಕ್ರವಾರ ನಡೆದ ತಾಂತ್ರಿಕ ಬಿಡ್ ಪ್ರಕ್ರಿಯೆಯಲ್ಲಿ ಅವರು ಪಾಲ್ಗೊಳ್ಳಲಿಲ್ಲ. ಗೂಗಲ್ (ಯೂಟ್ಯೂಬ್) ಕಂಪನಿ ಹರಾಜು ಪ್ರಕ್ರಿಯೆಯ ಅರ್ಜಿ ಪಡೆದುಕೊಂಡಿದ್ದರೂ, ಸಲ್ಲಿಸಿಲ್ಲ. ಟಿ.ವಿ ಪ್ರಸಾರ ಮತ್ತು ಡಿಜಿಟಲ್ ಹಕ್ಕುಗಳನ್ನು ಪಡೆದುಕೊಳ್ಳಲು 10 ಕಂಪನಿಗಳು ಸ್ಪರ್ಧೆಯಲ್ಲಿವೆ' ಎಂದು ಬಿಸಿಸಿಐನ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

'ರಿಲಯನ್ಸ್ ಮಾಲೀಕತ್ವದ ವಯಾಕಾಂ 18, ಹಾಲಿ ಪ್ರಸಾರದ ಹಕ್ಕು ಹೊಂದಿರುವ ವಾಲ್ಟ್ ಡಿಸ್ನಿ (ಸ್ಟಾರ್), ಝೀ ಹಾಗೂ ಸೋನಿ ಕಂಪನಿಗಳು ಕಣದಲ್ಲಿರುವ ಪ್ರಮುಖ ಕಂಪನಿಗಳಾಗಿವೆ' ಎಂದು ಅವರು ಮಾಹಿತಿ ನೀಡಿದರು.

'ಈ ಕಂಪನಿಗಳು ಮಾತ್ರವಲ್ಲದೆ, ಡಿಜಿಟಲ್ ಪ್ರಸಾರ ಹಕ್ಕುಗಳಿಗಾಗಿ ಟೈಮ್ಸ್ ಇಂಟರ್‌ನೆಟ್, ಫ್ಯಾನ್ ಕೋಡ್, ಫನ್‌ಏಷ್ಯಾ ಮತ್ತು ಡ್ರೀಮ್ ಇಲೆವೆನ್ ಹಾಗೂ ವಿದೇಶಗಳಲ್ಲಿ ಟಿ.ವಿ ಪ್ರಸಾರ, ಡಿಜಿಟಲ್ ಪ್ರಸಾರದ ಹಕ್ಕುಗಳನ್ನು ಪಡೆಯಲು ಸೂಪರ್‌ಸ್ಪೋರ್ಟ್ಸ್ (ದಕ್ಷಿಣ ಆಫ್ರಿಕಾ) ಮತ್ತು ಸ್ಕೈಸ್ಪೋರ್ಟ್ಸ್ (ಯುಕೆ) ಪೈಪೋಟಿಯಲ್ಲಿವೆ' ಎಂದು ಹೇಳಿದರು.

ಮುಖ್ಯಾಂಶಗಳು

- 2023 ರಿಂದ 2027ರ ಅವಧಿಗೆ ಮಾರಾಟ
- ಕಣದಲ್ಲಿ ವಯಾಕಾಮ್ 18, ಸ್ಟಾರ್, ಝೀ, ಸೋನಿ
- ನಾಲ್ಕು ಪ್ಯಾಕೇಜ್‌ಗಳಲ್ಲಿ ಹರಾಜು

₹ 32 ಸಾವಿರ ಕೋಟಿ ಮೂಲಬೆಲೆ

ಐಪಿಎಲ್ ಪ್ರಸಾರ ಹಕ್ಕು ಹರಾಜಿನ ಮೂಲಬೆಲೆ ₹ 32 ಸಾವಿರ ಕೋಟಿ ನಿಗದಿಪಡಿಸಲಾಗಿದೆ. ಹರಾಜಿನಲ್ಲಿ ಪಾಲ್ಗೊಳ್ಳುವವರು ನಾಲ್ಕು ಪ್ಯಾಕೇಜ್‌ಗಳಿಗೆ ಪ್ರತ್ಯೇಕವಾಗಿ ಬಿಡ್ ಸಲ್ಲಿಸಬೇಕಾಗುತ್ತದೆ. 2018 ರಿಂದ 2022ರ ವರೆಗಿನ ಐದು ವರ್ಷಗಳ ಪ್ರಸಾರದ ಹಕ್ಕನ್ನು ಸ್ಟಾರ್ ಇಂಡಿಯಾ ₹ 16,347 ಕೋಟಿಗೆ ತನ್ನದಾಗಿಸಿಕೊಂಡಿತ್ತು.

'ಐಪಿಎಲ್ ತಂಡಗಳ ಸಂಖ್ಯೆ ಹೆಚ್ಚಾಗಿರುವುರಿಂದ ಪಂದ್ಯಗಳ ಸಂಖ್ಯೆ ಹೆಚ್ಚಿದೆ. ಆದ್ದರಿಂದ ಬಿಸಿಸಿಐ, ಪ್ರಸಾರ ಹಕ್ಕು ಮಾರಾಟದಿಂದ ಕಳೆದ ಬಾರಿಗಿಂತ ಮೂರು ಪಟ್ಟು ಅಧಿಕ ಹಣ ಗಳಿಸಬಹುದು. ₹ 45 ಸಾವಿರ ಕೋಟಿಯಷ್ಟು ಹಣ ಗಳಿಸುವ ನಿರೀಕ್ಷೆಯಿದೆ' ಎಂದು ಮಾರುಕಟ್ಟೆ ತಜ್ಞರೊಬ್ಬರು ಹೇಳಿದ್ದಾರೆ.

ಅಂಬಾನಿ– ಬೆಜೋಸ್ 'ಪೈಪೋಟಿ' ಇಲ್ಲ

ಐಪಿಎಲ್ ಪ್ರಸಾರ ಹಕ್ಕು ಪಡೆಯುವ ಪೈಪೋಟಿಯಿಂದ ಅಮೆಜಾನ್ ಹಿಂದೆ ಸರಿದಿರುವುದರಿಂದ ಕಂಪನಿಯ ಸಂಸ್ಥಾಪಕ ಜೆಫ್ ಬೆಜೋಸ್ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಅಧ್ಯಕ್ಷ ಮುಕೇಶ್ ಅಂಬಾನಿ ನಡುವಿನ 'ಪೈಪೋಟಿ' ಇಲ್ಲವಾಗಿದೆ. ಐಪಿಎಲ್ ಪ್ರಸಾರ ಹಕ್ಕು ಪಡೆಯಲು ರಿಲಯನ್ಸ್ ಮತ್ತು ಅಮೆಜಾನ್ ನಡುವೆ ಸ್ಪರ್ಧೆ ನಿರೀಕ್ಷಿಸಲಾಗಿತ್ತು.

'ಐಪಿಎಲ್ ಪ್ರಸಾರ ಹಕ್ಕು ಪಡೆಯುವುದು ಭಾರತದಲ್ಲಿ ಕಂಪನಿಯ ಬೆಳವಣಿಗೆಯ ನಿಟ್ಟಿನಲ್ಲಿ ಕಾರ್ಯಸಾಧ್ಯವಾದ ಆಯ್ಕೆಯಲ್ಲ ಎಂಬುದನ್ನು ಮನಗಂಡು ಬಿಡ್ಡಿಂಗ್‌ನಲ್ಲಿ ಪಾಲ್ಗೊಳ್ಳದಿರಲು ನಿರ್ಧರಿಸಿದೆ' ಎಂದು ಕಂಪನಿಯ ಮೂಲಗಳು ಹೇಳಿವೆ.

ಕೈಕೊಟ್ಟ ಬೌಲಿಂಗ್: ರಿಷಭ್ ಪಂತ್


ರಿಷಭ್ ಪಂತ್

ನವದೆಹಲಿ (ಪಿಟಿಐ): ದೊಡ್ಡ ಮೊತ್ತ ಗಳಿಸಿದ್ದರೂ ಬೌಲಿಂಗ್‌ನಲ್ಲಿ ಎಡವಿದ್ದರಿಂದ ಮೊದಲ ಟ್ವೆಂಟಿ-20 ಕ್ರಿಕೆಟ್ ಪಂದ್ಯದಲ್ಲಿ ಸೋಲಬೇಕಾಯಿತು ಎಂದು ಭಾರತ ತಂಡದ ನಾಯಕ ರಿಷಭ್ ಪಂತ್ ಅಭಿಪ್ರಾಯಪಟ್ಟಿದ್ದಾರೆ.

ಗುರುವಾರ ದಕ್ಷಿಣ ಆಫ್ರಿಕಾ ಎದುರಿನ ಪಂದ್ಯದಲ್ಲಿ ಭಾರತ ತಂಡವು ಏಳು ವಿಕೆಟ್‌ಗಳಿಂದ ಸೋಲು ಅನುಭವಿಸಿತ್ತು. ಮೊದಲು ಬ್ಯಾಟ್ ಮಾಡಿದ್ದ ಭಾರತ ಇಶಾನ್ ಕಿಶನ್ (76) ಅಮೋಘ ಅರ್ಧಶತಕದ ಬಲದಿಂದ 211 ರನ್ ಕಲೆಹಾಕಿತ್ತು. ಪ್ರವಾಸಿ ತಂಡವು ಮೂರು ವಿಕೆಟ್ ಕಳೆದುಕೊಂಡು ಈ ಗುರಿ ತಲುಪಿತ್ತು.

ರಸಿ ವ್ಯಾನ್ ಡರ್ ಡಸಿ (ಔಟಾಗದೆ 75) ಮತ್ತು ಡೇವಿಡ್ ಮಿಲ್ಲರ್ (ಔಟಾಗದೆ 64) ದಕ್ಷಿಣ ಆಫ್ರಿಕಾ ತಂಡದ ಗೆಲುವಿನ ರೂವಾರಿಗಳಾಗಿದ್ದರು. ಇವರಿಬ್ಬರು ಮುರಿಯದ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 131 ರನ್ ಸೇರಿಸಿದ್ದರು.

'ನಾವು ಸಾಕಷ್ಟು ರನ್ ಗಳಿಸಿದ್ದೆವು. ಆದರೆ ಆ ಮೊತ್ತವನ್ನು ರಕ್ಷಿಸಿಕೊಳ್ಳುವಲ್ಲಿ ಎಡವಿದೆವು. ಎದುರಾಳಿ ತಂಡಕ್ಕೆ ಗೆಲುವಿನ ಶ್ರೇಯ ಸಲ್ಲಬೇಕು. ಮುಂದಿನ ಪಂದ್ಯದಲ್ಲಿ ಉತ್ತಮ ಸಾಮರ್ಥ್ಯ ತೋರುವೆವು' ಎಂದು ಪಂದ್ಯದ ನಂತರ ಪತ್ರಿಕಾಗೋಷ್ಠಿಯಲ್ಲಿ ಪಂತ್ ನುಡಿದರು.

ದಕ್ಷಿಣ ಆಫ್ರಿಕಾ ನಾಯಕ ತೆಂಬಾ ಬವುಮಾ ಮಾತನಾಡಿ 'ಮಿಲ್ಲರ್ ಉತ್ತಮ ಲಯದಲ್ಲಿದ್ದಾರೆ. ಅವರಿಗೆ ರಸಿಯ ಬೆಂಬಲ ಲಭಿಸಿತು. ಇಬ್ಬರೂ ಉತ್ತಮ ಸಾಮರ್ಥ್ಯ ತೋರಿದರು' ಎಂದರು.

ಒಡಿಶಾಗೆ ಆಟಗಾರರು

ಭಾರತ ಮತ್ತು ದಕ್ಷಿಣ ಆಫ್ರಿಕಾ ತಂಡಗಳು ಎರಡನೇ ಟಿ20 ಪಂದ್ಯವಾಡಲು ಶುಕ್ರವಾರ ಬಿಗಿ ಭದ್ರತೆಯೊಂದಿಗೆ ಒಡಿಶಾ ತಲುಪಿದವು. ಕಟಕ್‌ನ ಬಾರಾಬತಿ ಕ್ರೀಡಾಂಗಣದಲ್ಲಿ ಭಾನುವಾರ ಪಂದ್ಯ ನಡೆಯಲಿದೆ.

ಭುವನೇಶ್ವರದ ಬಿಜು ಪಟ್ನಾಯಕ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಹೊರಗಡೆ ಆಟಗಾರರನ್ನು ಸ್ವಾಗತಿಸಲು ನೂರಾರು ಅಭಿಮಾನಿಗಳು ಸೇರಿದ್ದರು.

ಖೇಲೊ ಇಂಡಿಯಾ: ಚೈತ್ರಾಗೆ ಸೈಕ್ಲಿಂಗ್ ಚಿನ್ನ


ಚೈತ್ರಾ ಬೋರ್ಜಿ

ಬೆಂಗಳೂರು: ಕರ್ನಾಟಕದ ಚೈತ್ರಾ ಬೋರ್ಜಿ ಖೇಲೊ ಇಂಡಿಯಾ ಯೂತ್ ಗೇಮ್ಸ್‌ನ ಸೈಕ್ಲಿಂಗ್‌ನಲ್ಲಿ ಚಿನ್ನದ ಪದಕಕ್ಕೆ ಮುತ್ತಿಟ್ಟಿದ್ದಾರೆ.

ಹರಿಯಾಣದ ಪಂಚಕುಲಾದಲ್ಲಿ ನಡೆ ಯುತ್ತಿರುವ ಗೇಮ್ಸ್‌ನ 18 ವರ್ಷದೊಳಗಿನ ಬಾಲಕಿಯರ ವಿಭಾಗದ 20 ಕಿ.ಮೀ ವೈಯಕ್ತಿಕ ಟೈಮ್ ಟ್ರಯಲ್ಸ್‌ನಲ್ಲಿ ಚೈತ್ರಾಗೆ ಪದಕ ಒಲಿಯಿತು. ಬಾಗಲಕೋಟೆ ಜಿಲ್ಲೆಯ ಜಮಖಂಡಿಯ ಚೈತ್ರಾ 32 ನಿಮಿಷ 51.84 ಸೆಕೆಂಡುಗಳಲ್ಲಿ ಗುರಿ ತಲುಪಿದರು.

ಈಜಿನಲ್ಲಿ ಮತ್ತೆ ರಿಧಿಮಾ ಮಿಂಚು: ಬಾಲಕಿಯರ 50 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ ರಿಧಿಮಾ ವೀರೇಂದ್ರ ಕುಮಾರ್ ದಾಖಲೆಯೊಂದಿಗೆ ಚಿನ್ನ ಗೆದ್ದರು. 29.88 ಸೆಕೆಂಡುಗಳಲ್ಲಿ ಅವರು ಗುರಿ ತಲುಪಿದರು. ಇದೇ ವಿಭಾಗದಲ್ಲಿ ನೀನಾ ವೆಂಕಟೇಶ್ ಬೆಳ್ಳಿ ಮತ್ತು ಶಾಲಿನಿ ದೀಕ್ಷಿತ್ ಕಂಚು ಜಯಿಸಿದರು.

400 ಮೀ. ವೈಯಕ್ತಿಕ ಮೆಡ್ಲೆಯಲ್ಲಿ (5 ನಿ.13.1 ಸೆ.) ಹಷಿಕಾ ರಾಮಚಂದ್ರ ಚಿನ್ನ, ಎ. ಜೆದಿಹಾ ಕಂಚು ಜಯಿಸಿದರು. 100 ಮೀ. ಫ್ರೀಸ್ಟೈಲ್‌ನಲ್ಲಿ ರಿಧಿಮಾ ಕಂಚು ಗೆದ್ದರು.

ಅನೀಶ್ ಗೌಡ ಬಾಲಕರ 400 ಮೀ. ಫ್ರೀಸ್ಟೈಲ್‌ನಲ್ಲಿ (3 ನಿ. 59.37ಸೆ.), ಉತ್ಕರ್ಷ್ ಪಾಟೀಲ್ 50 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ (27. 52 ಸೆ.), ಸಂಭವ್ ಆರ್. 100 ಮೀ. ಫ್ರೀಸ್ಟೈಲ್‌ನಲ್ಲಿ (52.57ಸೆ.) ಚಿನ್ನದ ಪದಕಕ್ಕೆ ಕೊರಳೊಡ್ಡಿದರು.

ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿ: ಜಾರ್ಖಂಡ್‌ಗೆ ನಿರಾಸೆ

'ಸಚಿವ' ಶತಕ: ಸೆಮಿಗೆ ಬಂಗಾಳ

ಪ್ರಜಾವಾಣಿ ವಾರ್ತೆ


ಮನೋಜ್ ತಿವಾರಿ

ಬೆಂಗಳೂರು: 88 ವರ್ಷಗಳ ರಣಜಿ ಟ್ರೋಫಿ ಇತಿಹಾಸದಲ್ಲಿ ಯಾರೂ ಮಾಡದ ಸಾಧನೆಯೊಂದಕ್ಕೆ ಬಂಗಾಳದ ಮನೋಜ್ ತಿವಾರಿ ಭಾಜನರಾದರು.

ಹಾಲಿ ಕ್ರೀಡಾ ಮಂತ್ರಿಯಾಗಿ ಟೂರ್ನಿಯ ಪಂದ್ಯದಲ್ಲಿ ಶತಕ ಗಳಿಸಿದ ಮೊದಲ ಆಟಗಾರ ಎನಿಸಿಕೊಂಡರು. ಇಲ್ಲಿನ ಜಸ್ಟ್ ಕ್ರಿಕೆಟ್ ಮೈದಾನದಲ್ಲಿ ಶುಕ್ರವಾರ ಕೊನೆಗೊಂಡ ಕ್ವಾರ್ಟರ್‌ಫೈನಲ್ ಪಂದ್ಯವನ್ನು ಡ್ರಾ ಮಾಡಿಕೊಂಡ ಬಂಗಾಳ ತಂಡವು, ಮೊದಲ ಇನಿಂಗ್ಸ್ ಮುನ್ನಡೆಯ ಆಧಾರದಲ್ಲಿ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿತು.

ಬಂಗಾಳ ತಂಡದ ಎರಡನೇ ಇನಿಂಗ್ಸ್‌ನಲ್ಲಿ 136 ರನ್ ಗಳಿಸಿದ ಪಶ್ಚಿಮ ಬಂಗಾಳದ ಸಚಿವ ಮನೋಜ್, 19 ಬೌಂಡರಿ ಎರಡು ಸಿಕ್ಸರ್ ಸಿಡಿಸಿದರು.

ಮೊದಲ ಇನಿಂಗ್ಸ್‌ನಲ್ಲಿಯೂ 73 ರನ್‌ಗಳ ಕೊಡುಗೆ ನೀಡಿದ್ದರು.

ಬಂಗಾಳ ತಂಡವು ಸೆಮಿಫೈನಲ್‌ನಲ್ಲಿ ಮಧ್ಯಪ್ರದೇಶ ಎದುರು ಸೆಣಸಲಿದೆ. ನಾಲ್ಕರ ಘಟ್ಟದ ಮತ್ತೊಂದು ಪಂದ್ಯದಲ್ಲಿ ಮುಂಬೈ ಮತ್ತು ಉತ್ತರಪ್ರದೇಶ ಮುಖಾಮುಖಿಯಾಗಲಿವೆ. ಇವೆರಡೂ ಪಂದ್ಯಗಳು ಇದೇ 14ರಂದು ಬೆಂಗಳೂರಿನಲ್ಲಿ ನಡೆಯಲಿವೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಬಂಗಾಳ: 218.4 ಓವರ್‌ಗಳಲ್ಲಿ 7ಕ್ಕೆ 773 ಡಿಕ್ಲೇರ್: ಜಾರ್ಖಂಡ್: 96 ಓವರ್‌ಗಳಲ್ಲಿ 298; ಎರಡನೇ ಇನಿಂಗ್ಸ್: ಬಂಗಾಳ: 85.1 ಓವರ್‌ಗಳಲ್ಲಿ 7ಕ್ಕೆ 318 ಡಿಕ್ಲೇರ್ (ಮನೋಜ್ ತಿವಾರಿ 136, ಶಾಬಾಜ್ ಅಹಮದ್ 46, ಅಭಿಷೇಕ್ ಪೊರೆಲ್ 34; ಶಾಬಾಜ್ ನದೀಮ್ 59ಕ್ಕೆ 5). ಫಲಿತಾಂಶ: ಪಂದ್ಯ ಡ್ರಾ, ಮೊದಲ ಇನಿಂಗ್ಸ್ ಮುನ್ನಡೆಯ ಆಧಾರದಲ್ಲಿ ಬಂಗಾಳ ತಂಡ ಸೆಮಿಫೈನಲ್‌ಗೆ ಪ್ರವೇಶ.


ಶ್ರೀನಿತಿ ಮತ್ತು ಪ್ರಣವ್

ಟೆನಿಸ್: ಪ್ರಣವ್, ಶ್ರೀನಿತಿಗೆ ಪ್ರಶಸ್ತಿ

ಬೆಂಗಳೂರು: ಪ್ರಣವ್ ಎಂ.ಎಸ್. ಮತ್ತು ಶ್ರೀನಿತಿ ಚೌಧರಿ ಅವರು ಎಐಟಿಎ ಸಿಎಸ್7 16 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.

ಶ್ರೀನಿತಿ, ಶುಕ್ರವಾರ ಬಾಲಕಿಯರ ಸಿಂಗಲ್ಸ್ ಫೈನಲ್ ಪಂದ್ಯದಲ್ಲಿ 6-0, 7-5ರಿಂದ ಕಸ್ತೂರಿ ಜಿ. ಅವರನ್ನು ಸೋಲಿಸಿದರು. ಬಾಲಕರ ಫೈನಲ್‌ನಲ್ಲಿ ಪ್ರಣವ್ 6-4, 0-6, 7-6 (5)ರಿಂದ ಅಭ್ರದೀಪ್ ಭಟ್ಟಾಚಾರ್ಯ ಅವರನ್ನು ಸೋಲಿಸಿದರು.

ಬೆಂಗಳೂರು ರೇಸ್

ಗೋಲ್ಡನ್ ಓಕ್ಸ್ ಗೆಲ್ಲುವ ನಿರೀಕ್ಷೆ

ರೇಸಿಂಗ್ ಪ್ಯಾಟ್ರನ್ಸ್ ಟ್ರೋಫಿ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಗೋಲ್ಡನ್ ಓಕ್ಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಬ್ಲ್ಯಾಕ್ ವಿರ್ಭ್ 2, ಫಿಯರ್ಸ್ ಫೈಟರ್ 10, ಸ್ಟ್ಯಾಂಡ್ ಕ್ಯಾಸಲ್ಸ್ 9
2ನೇ ರೇಸ್: ಬ್ಲ್ಯಾಕ್ ಈಗಲ್ 1, ಟ್ರ್ಯಾಂಕ್ವಿಲೊ 6, ರ‍್ಯಾಪಿಡ್ಸ್ 5
3ನೇ ರೇಸ್: ಪಿಸ್ಸಾರೊ 3, ಲಾಡಿಡ 4
4ನೇ ರೇಸ್: ಗೋಲ್ಡನ್ ಓಕ್ಸ್ 1, ಅಗಸ್ಟಸ್ ಸೀಸರ್ 2, ಸ್ವಾಥಿಂಗ್ ಬ್ಲೂ 4
5ನೇ ರೇಸ್: ಥೌಸಂಡ್ ವರ್ಡ್ಸ್ 3, ಕೆನ್ಸಿಂಗ್ಟನ್ ಕೋರ್ಟ್ 6, ಡೆವಿಲ್ಸ್ ಮ್ಯಾಜಿಕ್ 5
6ನೇ ರೇಸ್: ಅಶ್ವ ಯುದ್ಧೀರ್ 1, ಮಿಟ್ಸುರೊ 2 ಸಿಲ್ವರಿಟ 3
7ನೇ ರೇಸ್: ಟೈಗರ್ ರಿಟರ್ನ್ಸ್ 5, ಒಜಾರ್ಕ್ 1, ಕಂಟ್ರೆಸ್ ಜ್ಯೂಯೆಲ್ 10

ಉತ್ತಮ ಬೆಟ್: ಅಶ್ವ ಯುದ್ಧೀರ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4,	5,6,7

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಆರು ಬಾರಿಯ ವಿಶ್ವ ಚಾಂಪಿಯನ್ ಬಾಕ್ಸರ್

ಮೇರಿ ಅವರು ಈ ಕೂಟದ ಮೇಲೆ ಗಮನ ಕೇಂದ್ರೀಕರಿಸಲು ವಿಶ್ವ ಚಾಂಪಿಯನ್‌ಶಿಪ್ ಮತ್ತು ಏಷ್ಯನ್ ಗೇಮ್ಸ್‌ನಿಂದ ಹಿಂದೆ ಸರಿದಿದ್ದರು.

ಕಾಮನ್‌ವೆಲ್ತ್ ಗೇಮ್ಸ್ ಮೇರಿ ಕನಸು ಭಗ್ನ

ನವದೆಹಲಿ (ಪಿಟಿಐ): ಮುಂದಿನ ತಿಂಗಳು ನಡೆಯಲಿರುವ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಪಾಲ್ಗೊಳ್ಳಬೇಕೆಂಬ ಭಾರತದ ಮಹಿಳಾ ಬಾಕ್ಸರ್ ಮೇರಿ ಕೋಮ್ ಅವರ ಕನಸು ಭಗ್ನಗೊಂಡಿದೆ.



ಇಲ್ಲಿನ ಇಂದಿರಾಗಾಂಧಿ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಆಯ್ಕೆ ಟ್ರಯಲ್ಸ್‌ನಲ್ಲಿ ಅವರು ಮಂಡಿನೋವಿಗೆ ಒಳಗಾಗಿ ಅರ್ಧದಲ್ಲೇ ಕಣದಿಂದ ಹಿಂದೆ ಸರಿದರು.

48 ಕೆ.ಜಿ ವಿಭಾಗದ ಸೆಮಿಫೈನಲ್‌ನಲ್ಲಿ ಹರಿಯಾಣದ ನೀತು ವಿರುದ್ಧದ ಸೆಣಸಾಟದ ವೇಳೆ ಅವರು ಗಾಯಗೊಂಡರು. ಮೊದಲ ಸುತ್ತಿನಲ್ಲೇ ನೆಲಕ್ಕುರುಳಿದ ಅವರು ಬಳಿಕ ಎದ್ದು ಕೆಲಹೊತ್ತು ಹೋರಾಟ ಮುಂದುವರಿಸಿದರಾದರೂ, ದೇಹದ ಮೇಲೆ ನಿಯಂತ್ರಣ ಸಾಧಿಸಲಾಗದೆ ಹಿಂದೆ ಸರಿದರು. ಪಂದ್ಯ ನಿಲ್ಲಿಸಿದ ರೆಫರಿ, ನೀತು ಅವರನ್ನು ವಿಜೇತೆ ಎಂದು ಘೋಷಿಸಿದರು.

ಕಾಮನ್‌ವೆಲ್ತ್ ಕೂಟ ಮುಂದಿನ ತಿಂಗಳು ಇಂಗ್ಲೆಂಡ್‌ನ ಬರ್ಮಿಂಗ್‌ಹ್ಯಾಂನಲ್ಲಿ ನಡೆಯಲಿದೆ.

2018ರ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಚಿನ್ನ ಗೆದ್ದಿದ್ದ ಮೇರಿ, ಈ ಸಾಧನೆ ಮಾಡಿದ ಭಾರತದ ಮೊದಲ ಮಹಿಳಾ ಬಾಕ್ಸರ್ ಎಂಬ ಗೌರವ ತಮ್ಮದಾಗಿಸಿಕೊಂಡಿದ್ದರು.

'ಆರು ಬಾರಿಯ ವಿಶ್ವಚಾಂಪಿಯನ್ ಮೇರಿ ಕೋಮ್ ಅವರು ಕಾಮನ್‌ವೆಲ್ತ್ ಗೇಮ್ಸ್‌ನ ಆಯ್ಕೆಗಾಗಿ ನಡೆಯುತ್ತಿದ್ದ ಟ್ರಯಲ್ಸ್‌ನಿಂದ ಗಾಯದ ಕಾರಣ ಹಿಂದೆ ಸರಿದರು' ಎಂದು ಭಾರತ ಬಾಕ್ಸಿಂಗ್ ಫೆಡರೇಷನ್ ಪ್ರಕಟಣೆ ತಿಳಿಸಿದೆ.

ಟೆಸ್ಟ್: ನ್ಯೂಜಿಲೆಂಡ್ ಉತ್ತಮ ಮೊತ್ತ

ನಾಟಿಂಗ್‌ಹ್ಯಾಂ (ಪಿಟಿಐ): ಅಗ್ರ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳ ಉತ್ತಮ ಆಟದ ನೆರವಿನಿಂದ ನ್ಯೂಜಿಲೆಂಡ್ ತಂಡ, ಇಂಗ್ಲೆಂಡ್ ವಿರುದ್ಧದ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಉತ್ತಮ ಮೊತ್ತದತ್ತ ಹೆಜ್ಜೆಯಿಟ್ಟಿದೆ.

ಟಾಸ್ ಗೆದ್ದ ಇಂಗ್ಲೆಂಡ್ ತಂಡ ಫೀಲ್ಡಿಂಗ್ ಆಯ್ಕೆ ಮಾಡಿತು. ನ್ಯೂಜಿಲೆಂಡ್ ತಂಡ ಮೊದಲ ದಿನದಾಟದ ಅಂತ್ಯಕ್ಕೆ 87 ಓವರ್‌ಗಳಲ್ಲಿ 4ಕ್ಕೆ 318 ರನ್ ಗಳಿಸಿದೆ. ಟಾಮ್ ಲಥಾಮ್ ಮತ್ತು ವಿಲ್ ಯಂಗ್ ಮೊದಲ ವಿಕೆಟ್‌ಗೆ 84 ರನ್ ಸೇರಿಸಿ ಉತ್ತಮ ಆರಂಭ ನೀಡಿದರು. ಬಳಿಕ ಡೆರಿಲ್ ಮಿಚೆಲ್, ಟಾಮ್ ಬ್ಲಂಡೆಲ್ ಉತ್ತಮ ಆಟವಾಡಿದರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್; ನ್ಯೂಜಿಲೆಂಡ್ 87 ಓವರ್‌ಗಳಲ್ಲಿ 4ಕ್ಕೆ 318 (ಟಾಮ್ ಲಥಾಮ್ 26, ವಿಲ್ ಯಂಗ್ 47, ಡೆವೊನ್ ಕಾನ್ವೆ 46, ಹೆನ್ರಿ ನಿಕೊಲಸ್ 30, ಡೆರಿಲ್ ಮಿಚೆಲ್ ಬ್ಯಾಟಿಂಗ್ 81, ಟಾಮ್ ಬ್ಲಂಡೆಲ್ ಬ್ಯಾಟಿಂಗ್ 67, ಜೇಮ್ಸ್ ಆ್ಯಂಡರ್ಸನ್ 42ಕ್ಕೆ 2, ಬೆನ್ ಸ್ಟೋಕ್ಸ್ 40ಕ್ಕೆ 2).

ಜೂಡೊ: ಆಡಳಿತಾಧಿಕಾರಿ ನೇಮಕ

ನವದೆಹಲಿ (ಪಿಟಿಐ): ಭಾರತ ಜೂಡೊ ಫೆಡರೇಷನ್‌ನ ಆಡಳಿತ ನೋಡಿಕೊಳ್ಳಲು ಅಲಹಾಬಾದ್ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಪಂಕಜ್ ನಖ್ವಿ ಅವರನ್ನು, ದೆಹಲಿ ಹೈಕೋರ್ಟ್ ಆಡಳಿತಾಧಿಕಾರಿಯಾಗಿ ನೇಮಿಸಿದೆ.

ಜೂಡೊ ಫೆಡರೇಷನ್‌ನ ಪದಾಧಿಕಾರಿಗಳ ನಡುವೆ ಕೆಲವೊಂದು ವಿವಾದಗಳು ತಲೆದೋರಿವೆ ಎಂದು ಹೇಳಿ ಕರ್ನಾಟಕ, ಹರಿಯಾಣ ರಾಜ್ಯಗಳ ಜೂಡೊ ಸಂಸ್ಥೆಗಳು ಹಾಗೂ ಬಾಂಬೆ ಜೂಡೊ ಸಂಸ್ಥೆ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿತ್ತು. ಅದರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಯಶ್ವಂತ್ ವರ್ಮಾ ಅವರು ಆಡಳಿತಾಧಿಕಾರಿಯನ್ನು ನೇಮಿಸಿ, ತೀರ್ಪು ಹೊರಡಿಸಿದರು.

'ಜೂಡೊ ಫೆಡರೇಷನ್‌ನ ಆಡಳಿತ ನೋಡಿಕೊಳ್ಳುತ್ತಿದ್ದ ಸಮಿತಿಯು ತನ್ನ ಅಧಿಕಾರವನ್ನು ಆಡಳಿತಾಧಿಕಾರಿಗೆ ಹಸ್ತಾಂತರಿಸಬೇಕು. ನ್ಯಾಯಾಲಯದ ಮುಂದಿನ ಆದೇಶದವರೆಗೂ ಆಡಳಿತಾಧಿಕಾರಿ, ಫೆಡರೇಷನ್‌ನ ದೈನಂದಿನ ವ್ಯವಹಾರ ನೋಡಿಕೊಳ್ಳಬೇಕು' ಎಂದು ತನ್ನ ಆದೇಶದಲ್ಲಿ ತಿಳಿಸಿದೆ. 'ಅಡಳಿತಾಧಿಕಾರಿಯು ಫೆಡ ರೇಷನ್‌ನ ಈಗಿನ ನಿಯಮಗಳ ಪುನ ರಾವಲೋಕನ ನಡೆಸಬೇಕು' ಎಂದು ಹೇಳಿದೆ.

ಫುಟ್‌ಬಾಲ್: ಭಾರತಕ್ಕೆ ಅಫ್ಗಾನ್ ಸವಾಲು

ಕೋಲ್ಕತ್ತ (ಪಿಟಿಐ): ಏಷ್ಯಾ ಕಪ್ ಫುಟ್‌ಬಾಲ್ ಟೂರ್ನಿಯ ಅರ್ಹತಾ ಹಂತದ ಎರಡನೇ ಪಂದ್ಯದಲ್ಲಿ ಭಾರತ ತಂಡ, ಶನಿವಾರ ಅಫ್ಗಾನಿಸ್ತಾನದ ಸವಾಲು ಎದುರಿಸಲಿದೆ.

ಮೊದಲ ಪಂದ್ಯದಲ್ಲಿ ಕಾಂಬೊಡಿಯಾ ತಂಡವನ್ನು ಮಣಿಸಿದ್ದ ಭಾರತ, ಗೆಲುವಿನ ಓಟ ಮುಂದುವರಿಸುವ ವಿಶ್ವಾಸದಲ್ಲಿದೆ. ಈ ಪಂದ್ಯದಲ್ಲೂ ಆತಿಥೇಯ ತಂಡದವರು ನಾಯಕ ಸುನಿಲ್ ಚೆಟ್ರಿ ಮೇಲೆ ಹೆಚ್ಚಿನ ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಕಾಂಬೋಡಿಯಾ ವಿರುದ್ಧ ಎರಡು ಗೋಲು ಗಳಿಸಿದ್ದ ಅವರು ಗೆಲುವಿನ ರೂವಾರಿ ಎನಿಸಿದ್ದರು.

ಭಾರತ– ಅಫ್ಗಾನಿಸ್ತಾನ ಇದುವರೆಗೆ 10 ಸಲ ಎದುರಾಗಿದ್ದು, ಆರರಲ್ಲಿ ಭಾರತ ಗೆದ್ದಿದೆ. ಅಫ್ಗಾನಿಸ್ತಾನ ಒಂದು ಪಂದ್ಯದಲ್ಲಿ ಗೆಲುವು ಪಡೆದಿದ್ದು, ಇತರ ಪಂದ್ಯಗಳು ಡ್ರಾದಲ್ಲಿ ಕೊನೆಗೊಂಡಿವೆ. ಆದರೆ 2016ರ ಸ್ಯಾಫ್ ಚಾಂಪಿಯನ್‌ಷಿಪ್ ಬಳಿಕ, ಭಾರತ ತಂಡ ತನ್ನ ನೆರೆಯ ರಾಷ್ಟ್ರದ ವಿರುದ್ಧ ಜಯ ಪಡೆದಿಲ್ಲ.

2016ರ ನಂತರ ಉಭಯ ತಂಡ ಗಳು ವಿಶ್ವಕಪ್ ಟೂರ್ನಿಯ ಅರ್ಹತಾ ಪಂದ್ಯಗಳಲ್ಲಿ ಎರಡು ಸಲ ಎದುರಾಗಿವೆ. ಎರಡೂ ಪಂದ್ಯಗಳು 1–1 ಡ್ರಾದಲ್ಲಿ ಕೊನೆಗೊಂಡಿತ್ತು. ಭಾರತದ ಆಟಗಾರರಿಗಿಂತ ದೈಹಿಕವಾಗಿ ಬಲಿಷ್ಠರಾಗಿರುವ ಅಫ್ಗನ್ ತಂಡದವರು ಪ್ರಬಲ ಪೈಪೋಟಿ ಒಡ್ಡುವ ಸಾಧ್ಯತೆಯಿದೆ. ಭಾರತ ತಂಡ ಅರ್ಹತಾ ಹಂತದ ಕೊನೆಯ ಪಂದ್ಯದಲ್ಲಿ ಹಾಂಕಾಂಗ್‌ನ ಸವಾಲು ಎದುರಿಸಲಿದೆ. ಅಫ್ಗನ್ ತನ್ನ ಮೊದಲ ಪಂದ್ಯದಲ್ಲಿ ಹಾಂಕಾಂಗ್ ಎದುರು 1–2ರಿಂದ ಸೋತಿತ್ತು.

ಉಕ್ರೇನ್ ಸೇನಾ ಬತ್ತಳಿಕೆ ಬರಿದು?

ವಾಷಿಂಗ್ಟನ್/ಕೀವ್ (ಎಎಫ್‌ಪಿ/ರಾಯಿಟರ್ಸ್): 'ಸೋವಿಯತ್, ರಷ್ಯಾ ವಿನ್ಯಾಸಗೊಳಿಸಿದ್ದ ತನ್ನಲ್ಲಿದ್ದ ಶಸ್ತ್ರಾಸ್ತ್ರಗಳನ್ನು ಉಕ್ರೇನ್ ಖಾಲಿ ಮಾಡಿಕೊಂಡಿದ್ದು, ಈಗ ದೇಶ ರಕ್ಷಣೆಗೆ ಶಸ್ತ್ರಾಸ್ತ್ರಗಳಿಗಾಗಿ ಮಿತ್ರರಾಷ್ಟ್ರಗಳ ಮೇಲೆ ಸಂಪೂರ್ಣ ಅವಲಂಬಿತವಾಗಿದೆ' ಎಂದು ಅಮೆರಿಕದ ಸೇನಾ ಮೂಲಗಳು ತಿಳಿಸಿವೆ.

'ಮೂರು ತಿಂಗಳಿಗೂ ಹೆಚ್ಚು ಅವಧಿಯಿಂದ ರಷ್ಯಾದ ಆಕ್ರಮಣ ನಡೆಯುತ್ತಿದ್ದು, ಉಕ್ರೇನ್ ತನ್ನ ಬತ್ತಳಿಕೆಯಲ್ಲಿದ್ದ ಯುದ್ಧೋಪಕರಣಗಳನ್ನು ಬಳಸಿ ಬರಿದು ಮಾಡಿಕೊಂಡಿದೆ ಅಥವಾ ಅವುಗಳನ್ನು ರಷ್ಯಾ ಸೇನೆ ನಾಶಪಡಿಸಿದೆ. ಉಕ್ರೇನ್ ಪಡೆಗಳು ಅಮೆರಿಕ ಮತ್ತು ಅದರ ಮಿತ್ರರಾಷ್ಟ್ರಗಳು ಹಾಗೂ ನ್ಯಾಟೊ ರಾಷ್ಟ್ರಗಳು ಪೂರೈಸಿದ ಶಸ್ತ್ರಾಸ್ತ್ರಗಳನ್ನು ಬಳಸುತ್ತಿವೆ' ಎಂದು ಸೇನಾ ಮೂಲಗಳು ಹೇಳಿವೆ.

ಒಂದು ಕಾಲಕ್ಕೆ ಸೋವಿಯತ್ ಒಕ್ಕೂಟದ ಭಾಗವಾಗಿದ್ದ ಉಕ್ರೇನ್‌ನ ಸೇನೆ ಮತ್ತು ಅದರ ರಕ್ಷಣಾ ಉದ್ಯಮವು ಸೋವಿಯತ್ ಮತ್ತು ರಷ್ಯಾದ ಪ್ರಮಾಣಿತ ಉಪಕರಣಗಳು, ಸಣ್ಣ ಶಸ್ತ್ರಾಸ್ತ್ರಗಳು, ಟ್ಯಾಂಕ್‌ಗಳು, ಹೊವಿಟ್ಜರ್‌ಗಳು ಮತ್ತು ಇತರ ಆಯುಧಗಳನ್ನು ಅವಲಂಬಿಸಿತ್ತು. ಈ ಶಸ್ತ್ರಾಸ್ತ್ರಗಳನ್ನು ಪಶ್ಚಿಮದ ನೆರೆಹೊರೆಯ ದೇಶಗಳ ತಂತ್ರಜ್ಞಾನದೊಂದಿಗೆ ಹೊಂದಿಸಿಕೊಳ್ಳಲು ಮತ್ತು ಉನ್ನತೀಕರಿಸಿಕೊಳ್ಳಲು ಸಾಧ್ಯವಿಲ್ಲದಂತಾಗಿದೆ. ಇದಕ್ಕೆ ರಷ್ಯಾವನ್ನೇ ಅವಲಂಬಿಸಬೇಕಾಗಿದೆ ಎಂದು ಮೂಲಗಳು ಹೇಳಿವೆ.

ನ್ಯಾಟೊ ಶೃಂಗಸಭೆಗೆ ಝೆಲೆನ್‌ಸ್ಕಿ: ಸ್ಪೇನ್‌ನ ಮ್ಯಾಡ್ರಿಡ್‌ನಲ್ಲಿ ಇದೇ 28 ಮತ್ತು 29ರಂದು ನಡೆಯುವ ನ್ಯಾಟೊ ಶೃಂಗಸಭೆಗೆ ಉಕ್ರೇನ್‌ನ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರನ್ನು ಆಹ್ವಾನಿಸಲಾಗಿದೆ ಎಂದು ನ್ಯಾಟೊ ಉಪ ಮಹಾಪ್ರಧಾನ ಕಾರ್ಯದರ್ಶಿ ಮಿರ್ಚಾ ಜೋನೆ ತಿಳಿಸಿದ್ದಾರೆ.

ಉಕ್ರೇನ್ ಆಕ್ರಮಣ; ನಾರ್ದರ್ನ್ ಯುದ್ಧಕ್ಕೆ ಸಮೀಕರಣ

ಮಾಸ್ಕೊದಲ್ಲಿ ನಡೆದ ರಷ್ಯಾದ ಝಾರ್ ದೊರೆ ಪೀಟರ್ ಅವರ 350ನೇ ಜಯಂತಿಯಲ್ಲಿ ಮಾತನಾಡಿದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್, ರಷ್ಯಾದ ಐತಿಹಾಸಿಕ ಭೂಮಿಯನ್ನು ಮರಳಿ ಗೆಲ್ಲಲು ನಡೆಸುತ್ತಿರುವ ತಮ್ಮ ಸೇನಾ ಕಾರ್ಯಾಚರಣೆಯನ್ನು ನಾರ್ದರ್ನ್ ಮಹಾ ಯುದ್ಧಕ್ಕೆ ಸಮೀಕರಿಸಿದರು.

'ಪೀಟರ್ 21 ವರ್ಷ ಕಾಲ ಗ್ರೇಟ್ ನಾರ್ದರ್ನ್ ಯುದ್ಧ ನಡೆಸಿದರು. ಅವರು ಸ್ವೀಡನ್ ಜತೆಗಿನ ಯುದ್ಧದಲ್ಲಿ ಅವರಿಂದ ಕಸಿದುಕೊಂಡರು. ಆದರೆ, ಇವರಿಂದ (ರಷ್ಯಾ ಕಡೆಯಿಂದ) ಎದುರಾಳಿಗಳಿಗೆ ಏನನ್ನೂ ತೆಗೆದುಕೊಳ್ಳಲಾಗದೆ ಹಿಂದಿರುಗಿದರು' ಎಂದು ಪುಟಿನ್ ಹೇಳಿದರು.


ಪ್ರಣವಿ ಅರಸ್

ಗಾಲ್ಫ್: ಪ್ರಣವಿ ಅರಸ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರಿನ ಯುವ ಗಾಲ್ಫರ್ ಪ್ರಣವಿ ಅರಸ್ ಅವರು ಇಲ್ಲಿ ನಡೆದ ಏಳನೇ ಲೆಗ್ ಮಹಿಳಾ ಗಾಲ್ಫ್ ಟೂರ್‌ನಲ್ಲಿ ಪ್ರಶಸ್ತಿ ಜಯಿಸಿದ್ದಾರೆ.

ಇಲ್ಲಿನ ಪ್ರೆಸ್ಟೀಜ್ ಗಾಲ್ಫ್‌ಶೈರ್ ಅಂಗಣದಲ್ಲಿ 18 ವರ್ಷದ ಆಟಗಾರ್ತಿ, ಟೂರ್ನಿಯ ಕೊನೆಯ ದಿನವಾದ ಶುಕ್ರವಾರ ಸಮೀಪದ ಪ್ರತಿಸ್ಪರ್ಧಿ ಜಾಹ್ನವಿ ಬಕ್ಷಿ ಅವರನ್ನು ಹಿಂದಿಕ್ಕಿದರು.

ಪ್ರಣವಿ ಅವರಿಗೆ ಈ ಋತುವಿನಲ್ಲಿ ಇದು ಮೂರನೇ ಪ್ರಶಸ್ತಿ. ಮೊದಲ ಎರಡು ಲೆಗ್‌ಗಳಲ್ಲಿ ಅವರಿಗೆ ಪ್ರಶಸ್ತಿ ಒಲಿದಿತ್ತು.

ಟೂರ್ನಿಯಲ್ಲಿ ಅಸ್ಮಿತಾ ಸತೀಶ್ ಎರಡನೇ ಸ್ಥಾನ ಗಳಿಸಿದರೆ, ವಿಧಾತ್ರಿ ಅರಸ್ ಮತ್ತು ಜಾಹ್ನವಿ ಜಂಟಿ ಮೂರನೇ ಸ್ಥಾನ ಗಳಿಸಿದರು. ನೇಹಾ ತ್ರಿಪಾಠಿ ಐದನೇ ಸ್ಥಾನ ಗಳಿಸಿದರು. ಆರನೇ ಸ್ಥಾನವನ್ನು ದುರ್ಗಾ ನಿಟ್ಟೂರ್ ಮತ್ತು ಹೀನಾ ಕಾಂಗ್ ಜಂಟಿಯಾಗಿ ಪಡೆದರು.

ಎಂಟನೇ ಲೆಗ್ ಟೂರ್ನಿಯು ಇದೇ 14ರಿಂದ 17ರವರೆಗೆ ಬೆಂಗಳೂರಿನಲ್ಲಿಯೇ ನಡೆಯಲಿದೆ.

ಸಂಕ್ಷಿಪ್ತ ಸುದ್ದಿ

'ತೈವಾನ್ ಚೀನಾದ ಭಾಗ'

ಬೀಜಿಂಗ್: 'ತೈವಾನ್ ಸ್ವತಂತ್ರ ರಾಷ್ಟ್ರ ಎಂದು ಘೋಷಿಸಿಕೊಂಡಲ್ಲಿ, ಅದರ ವಿರುದ್ಧ ಯುದ್ಧ ಸಾರಲೂ ಹಿಂಜರಿಯುವುದಿಲ್ಲ' ಎಂದು ಚೀನಾದ ರಕ್ಷಣಾ ಸಚಿವ ವೀ ಫೆಂಗೆ ಶುಕ್ರವಾರ ಎಚ್ಚರಿಸಿದ್ದಾರೆ.

ಸಿಂಗಪುರದಲ್ಲಿ ಅಮೆರಿಕದ ರಕ್ಷಣಾ ಸಚಿವ ಲಾಯ್ಡ್ ಆಸ್ಟಿನ್ ಅವರ ಜೊತೆಗೆ ನಡೆದ ಮಾತುಕತೆ ನಡೆಸುವ ಸಂದರ್ಭದಲ್ಲಿ ಈ ಎಚ್ಚರಿಕೆ ನೀಡಿದ್ದಾರೆ ಎಂದು ಎನ್‌ಡಿಟಿವಿ ವರದಿ ಮಾಡಿದೆ.

'ತೈವಾನ್ ಅನ್ನು ಅಸ್ಥಿರಗೊಳಿಸುವ ಕ್ರಮಗಳಿಂದ ಚೀನಾ ದೂರವಿರಬೇಕು' ಎಂದು ಭೇಟಿಯ ವೇಳೆ ಆಸ್ಟಿನ್ ಅವರು ಹೇಳಿದ್ದಾರೆ ಎಂದು ಇದಕ್ಕೂ ಮುನ್ನ ಅಮೆರಿಕದ ರಕ್ಷಣಾ ಇಲಾಖೆಯು ಪ್ರತಿಪಾದಿಸಿತ್ತು.

ಏಳು ಪ್ರಯಾಣಿಕರಿದ್ದ ಹೆಲಿಕಾಪ್ಟರ್ ನಾಪತ್ತೆ

ರೋಮ್ (ಎಎಫ್‌ಪಿ): ಪೈಲಟ್ ಸೇರಿ ಏಳು ಮಂದಿ ಇದ್ದ ಹೆಲಿಕಾಪ್ಟರ್ ಶುಕ್ರವಾರ ಇಟಲಿಯಲ್ಲಿ ನಾಪತ್ತೆಯಾಗಿದ್ದು, ಅದಕ್ಕಾಗಿ ಶೋಧ ಕಾರ್ಯ ನಡೆದಿದೆ ಎಂದು ಅಲ್ಪೈನ್ ರಕ್ಷಣಾ ಸೇವೆಯ ವಕ್ತಾರರು ತಿಳಿಸಿದ್ದಾರೆ.

ಲೆಬನೈಸ್‌ನ ನಾಲ್ವರು, ಟರ್ಕಿಯೆಯ ಇಬ್ಬರು ಪ್ರಜೆಗಳು ಹೆಲಿಕಾಪ್ಟರ್‌ನಲ್ಲಿ ಪ್ರಯಾಣಿಸುತ್ತಿದ್ದರು. ಇದು, ಇಟಲಿಯ ಉತ್ತರ ಭಾಗದಲ್ಲಿನ ಬೆಟ್ಟ ಪ್ರದೇಶದಲ್ಲಿ ಹೆಲಿಕಾಪ್ಟರ್ ನಾಪತ್ತೆಯಾಗಿದೆ ಎಂದು ಮಾಧ್ಯಮ ವರದಿಗಳು ತಿಳಿಸಿವೆ.

ವಾಯುಪಡೆ, ಪೊಲೀಸ್, ವೈದ್ಯಕೀಯ ನೆರವು ಸೇವೆ ಸೇರಿದಂತೆ ಒಟ್ಟು 7 ಹೆಲಿಕಾಪ್ಟರ್‌ಗಳು ಶೋಧ ಕಾರ್ಯಾಚರಣೆಯಲ್ಲಿ ತೊಡಗಿವೆ. ಕಾಡಿನ ಪ್ರದೇಶವಾದ್ದರಿಂದ ಶೋಧ ಕಾರ್ಯ ಕಷ್ಟವಾಗಿದೆ ಎಂದು ವಕ್ತಾರರು ತಿಳಿಸಿದ್ದಾರೆ.

ಗವರ್ನರ್ ಪುತ್ರನ ಮೃತದೇಹ ಸ್ವಿಟ್ಜರ್ಲೆಂಡ್‌ನಲ್ಲಿ ಪತ್ತೆ

ಜಿನೆವಾ (ಎಪಿ): ಈಜಲು ಹೋಗಿ ಎರಡು ವಾರಗಳ ಹಿಂದೆ ನದಿಯಲ್ಲಿ ನಾಪತ್ತೆಯಾಗಿದ್ದ ಇಂಡೋನೇಷ್ಯಾದ ಗವರ್ನರ್ ಪುತ್ರನ ಮೃತದೇಹ ಪತ್ತೆಯಾಗಿದೆ ಎಂದು ಸ್ವಿಟ್ಜರ್‌ಲೆಂಡ್‌ನ ಅಧಿಕಾರಿಗಳು ತಿಳಿಸಿದ್ದಾರೆ.

'ವೆಸ್ಟ್ ಜಾವಾ ಗವರ್ನರ್ ರಿದ್ವಾನ್ ಕಮಿಲ್ ಮುಮ್ತಾಜ್ ಅವರ ಪುತ್ರ ಎಮೆರಿಲ್ ಎರಿಲ್ ಕಾನ್ ಮುಮ್ತಾಜ್ (22) ಅವರ ಮೃತದೇಹ ಆರೆ ನದಿಯ ಅಣೆಕಟ್ಟೆಯಲ್ಲಿ ಪತ್ತೆಯಾಗಿದೆ. ಇವರು ಮೇ 26ರಂದು ನಾಪತ್ತೆಯಾಗಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

ನಾಪತ್ತೆ ಆದಂದಿನಿಂದಲೂ ಡ್ರೋನ್, ಬೋಟ್ ಅನ್ನು ಬಳಸಿ ಶೋಧ ಕಾರ್ಯ ನಡೆಸಲಾಗುತ್ತಿತ್ತು ಎಂದೂ ತಿಳಿಸಿದ್ದಾರೆ.

ಮುಷರಫ್ ಆರೋಗ್ಯ ಸ್ಥಿತಿ ಗಂಭೀರ



ಲಾಹೋರ್/ದುಬೈ (ಪಿಟಿಐ): 'ಪಾಕಿಸ್ತಾನದ ಮಾಜಿ ಅಧ್ಯಕ್ಷ ಜನರಲ್ ಪರ್ವೇಜ್ ಮುಷರಫ್ ಆರೋಗ್ಯ ಸ್ಥಿತಿ ಗಂಭೀರವಾಗಿದೆ. ಯುಎಇ ಆಸ್ಪತ್ರೆಗೆ ದಾಖಲಾಗಿದ್ದು, ವೆಂಟಿಲೇಟರ್‌ನಲ್ಲಿದ್ದಾರೆ' ಎಂದು ಪಾಕ್‌ನ ಮಾಜಿ ಸಚಿವ ಫವಾದ್ ಚೌಧರಿ ತಿಳಿಸಿದ್ದಾರೆ.

'ದುಬೈನಲ್ಲಿರುವ ಮುಷರಫ್ ಅವರ ಪುತ್ರ ಬಿಲಾಲ್ ಜೊತೆಗೆ ಮಾತನಾಡಿದ್ದೇನೆ. ಮುಷರಫ್ ಅವರ ಆರೋಗ್ಯ ಸ್ಥಿತಿ ಗಂಭೀರವಾಗಿದೆ ಎಂಬುದನ್ನು ಅವರು ಖಚಿತಪಡಿಸಿದ್ದಾರೆ' ಮುಷರಫ್ ಅವರ ಆಪ್ತರಾಗಿರುವ ಚೌಧರಿ ತಿಳಿಸಿದ್ದಾರೆ.

ಮುಷರಫ್ ಅವರ ಕುಟುಂಬವು ಈ ಕುರಿತು ಟ್ವೀಟ್ ಮಾಡಿದ್ದು, ಮೂರು ವಾರದಿಂದ ಅವರು ಆಸ್ಪತ್ರೆಯಲ್ಲಿ ಇದ್ದಾರೆ.

ಮುಷರಫ್ ಅವರ ಅಂಗಾಂಗಗಳು ದುರ್ಬಲಗೊಂಡಿದ್ದು, ಚೇತರಿಸಿಕೊಳ್ಳಲಾಗದ ಸ್ಥಿತಿ ಇದೆ.' ಎಂದು ತಿಳಿಸಿದ್ದಾರೆ.

ಈ ವರದಿ ಕುರಿತು ಪ್ರತಿಕ್ರಿಯಿಸಿದ ಮುಷರಫ್ ಸ್ಥಾಪಿಸಿರುವ ಎಪಿಎಂಎಲ್ ಪಕ್ಷದ ಅಧ್ಯಕ್ಷ ಇಫ್ಜಾಲ್ ಸಿದ್ದಿಕಿ, 'ಮುಷರಫ್ ಅವರಿಗೆ ಕೊಂಚ ಅನಾರೋಗ್ಯವಾಗಿದ್ದು, ಸುಸ್ಥಿರವಾಗಿದೆ' ಎಂದು ಹೇಳಿದ್ದಾರೆ.

1999ರಿಂದ 2008ರವರೆಗೆ ಮುಷರಫ್ ಅವರು ಪಾಕಿಸ್ತಾನದ ಅಧ್ಯಕ್ಷರಾಗಿದ್ದರು. 2007ರಲ್ಲಿ ಸಂವಿಧಾನ ಅಮಾನತುಗೊಳಿಸಿದ್ದ ಘಟನೆಗೆ ಸಂಬಂಧಿಸಿ ಅವರ ವಿರುದ್ಧ ದೇಶದ್ರೋಹದ ಪ್ರಕರಣವಿದೆ. 2016ರಿಂದ ಅವರು ದುಬೈನಲ್ಲಿ ವಾಸವಿದ್ದಾರೆ.


ಇಂಡೊನೇಷ್ಯಾ ಬ್ಯಾಡ್ಮಿಂಟನ್: ಭಾರತದ ಸವಾಲು ಅಂತ್ಯ

ಲಕ್ಷ್ಯ ಸೇನ್, ಸಿಂಧುಗೆ ನಿರಾಸೆ

ಜಕಾರ್ತ (ಪಿಟಿಐ): ಪಿ.ವಿ.ಸಿಂಧು ಮತ್ತು ಲಕ್ಷ್ಯ ಸೇನ್ ಅವರು ಇಂಡೊನೇಷ್ಯಾ ಓಪನ್ ಸೂಪರ್ ಸೀರಿಸ್ ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಸೋಲು ಅನುಭವಿಸಿದರು. ಇದರೊಂದಿಗೆ ಭಾರತದ ಸವಾಲು ಕೊನೆಗೊಂಡಿದೆ.

ಶುಕ್ರವಾರ ನಡೆದ ಮಹಿಳೆಯರ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಸಿಂಧು 12-21, 10-21 ರಲ್ಲಿ ಥಾಯ್ಲೆಂಡ್‌ನ ರಚನೊಕ್ ಇಂತನನ್ ಎದುರು ಸೋತರು. ಈ ಪಂದ್ಯ 33 ನಿಮಿಷಗಳಲ್ಲಿ ಕೊನೆಗೊಂಡಿತು.

ಸಿಂಧು ಅವರಿಗೆ ಥಾಯ್ಲೆಂಡ್‌ನ ಆಟಗಾರ್ತಿ ಕೈಯಲ್ಲಿ ಎದುರಾದ ಸತತ ಐದನೇ ಸೋಲು ಇದು. ಇವರಿಬ್ಬರ ನಡುವಿನ ಒಟ್ಟಾರೆ ಹಣಾಹಣಿಯಲ್ಲಿ ರಚನೊಕ್ 9-4 ರಲ್ಲಿ ಮೇಲುಗೈ ಸಾಧಿಸಿದ್ದಾರೆ.


ಪಿ.ವಿ. ಸಿಂಧು

ಕಳೆದ ತಿಂಗಳು ನಡೆದ ಥಾಯ್ಲೆಂಡ್ ಓಪನ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಸೋತಿದ್ದ ಸಿಂಧು, ಇಲ್ಲಿ ಎರಡೂ ಗೇಮ್‌ಗಳಲ್ಲಿ ಎದುರಾಳಿಗೆ ಪೈಪೋಟಿ ನೀಡುವಲ್ಲಿ ವಿಫಲರಾದರು. ಮೊದಲ ಗೇಮ್ ಸುಲಭದಲ್ಲಿ ಗೆದ್ದ ರಚನೊಕ್, ಎರಡನೇ ಗೇಮ್‌ನ ಆರಂಭದಲ್ಲೇ 10 ಪಾಯಿಂಟ್‌ಗಳ ಮುನ್ನಡೆ ಗಳಿಸಿದರು. ಆ ಬಳಿಕವೂ ಆಕ್ರಮಣಕಾರಿ ಆಟ ಮುಂದುವರೆಸಿ ಸೆಮಿಫೈನಲ್‌ಗೆ ಲಗ್ಗೆಯಿಟ್ಟರು.

ಭಾರತದ ಯುವ ಆಟಗಾರ ಲಕ್ಷ್ಯ 16-21, 21-12, 14-21 ರಲ್ಲಿ ಚೀನಾ ತೈಪೆಯ ಚೌ ಟಿಯೆನ್ ಚೆನ್ ಕೈಯಲ್ಲಿ ಪರಾಭವಗೊಂಡರು. ಮೊದಲ ಗೇಮ್ ಸೋತ ಭಾರತದ ಆಟಗಾರ ಎರಡೇ ಗೇಮ್ ಗೆದ್ದು ಸಮಬಲ ಸಾಧಿಸಿದರು. ಮೂರನೇ ಗೇಮ್‌ನಲ್ಲಿ ನಿರಾಸೆ ಅನುಭವಿಸಿದರು.

ಸೇನ್ ಅವರು ಒಂದು ತಿಂಗಳ ಅವಧಿಯಲ್ಲಿ ಎರಡನೇ ಬಾರಿ ಚೌ ಎದುರು ಸೋತಿದ್ದಾರೆ. ಥಾಮಸ್ ಕಪ್ ಟೂರ್ನಿಯಲ್ಲೂ ಅವರು ಇದೇ ಎದುರಾಳಿ ಕೈಯಲ್ಲಿ ಪರಾಭವಗೊಂಡಿದ್ದರು.

ವಿಶ್ವದ ಅಗ್ರ ರ‍್ಯಾಂಕಿಂಗ್‌ನ ಆಟಗಾರ ಡೆನ್ಮಾರ್ಕ್‌ನ ವಿಕ್ಟರ್ ಅಕ್ಸೆಲ್ಸನ್ ಅವರು 21-13, 21-9 ರಲ್ಲಿ ಹಾಂಕಾಂಗ್‌ನ ಅಂಗಸ್ ಕಾ ಲಾಂಗ್ ವಿರುದ್ಧ ಗೆದ್ದು ಸೆಮಿಫೈನಲ್ ಪ್ರವೇಶಿಸಿದರು.

ಚೆಸ್: ಆನಂದ್‌ಗೆ ಆಘಾತ

ಸ್ಟಾವೆಂಜರ್, ನಾರ್ವೆ (ಪಿಟಿಐ): ವಿಶ್ವನಾಥನ್ ಆನಂದ್ ಅವರ ನಾರ್ವೆ ಚೆಸ್ ಟೂರ್ನಿಯ 8ನೇ ಸುತ್ತಿನಲ್ಲಿ ಸೋಲು ಅನುಭವಿಸಿದ್ದು, ಪ್ರಶಸ್ತಿ ಗೆಲ್ಲುವ ಸಾಧ್ಯತೆ ಕ್ಷೀಣಿಸಿದೆ.

ಭಾರತದ ಗ್ರ್ಯಾಂಡ್‌ಮಾಸ್ಟ‌ರ್ ಗುರುವಾರ ನಡೆದ ಕ್ಲಾಸಿಕಲ್ ಪಂದ್ಯದಲ್ಲಿ ಅಜರ್‌ಬೈಜಾನ್‌ನ ಶಕ್ರಿಯಾರ್ ಮಮೆದ್ಯರೊವ್ ಕೈಯಲ್ಲಿ 22 ನಡೆಗಳಲ್ಲಿ ಪರಾಭವಗೊಂಡರು. ಇದೀಗ 13 ಪಾಯಿಂಟ್‌ಗಳನ್ನು ಹೊಂದಿರುವ ಅವರು ಮೂರನೇ ಸ್ಥಾನಕ್ಕೆ ಕುಸಿತ ಕಂಡರು.

ಟೂರ್ನಿಯಲ್ಲಿ ಇನ್ನೊಂದು ಸುತ್ತಿನ ಹಣಾಹಣಿ ಬಾಕಿಯುಳಿದಿದ್ದು, ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಗೆಲುವಿನ ಓಟ ಮುಂದುವರಿಸಿ 15 ಪಾಯಿಂಟ್‌ಗಳೊಂದಿಗೆ ಅಗ್ರಸ್ಥಾನ ಭದ್ರಪಡಿಸಿಕೊಂಡರು. ಎಂಟನೇ ಸುತ್ತಿನಲ್ಲಿ ಅವರು ಫ್ರಾನ್ಸ್‌ನ ಮ್ಯಾಕ್ಸಿಮ್ ವಾಶಿರ್ ಲಗ್ರಾವ್ ವಿರುದ್ಧ ಗೆದ್ದರು.

ಕ್ರೀಡಾ ಸಚಿವಾಲಯಕ್ಕೆ ನೋಟಿಸ್

ನವದೆಹಲಿ (ಪಿಟಿಐ): ಮಹಿಳಾ ಸೈಕ್ಲಿಸ್ಟ್‌ವೊಬ್ಬರು ರಾಷ್ಟ್ರೀಯ ತಂಡದ ಕೋಚ್ ವಿರುದ್ಧ ಮಾಡಿರುವ ಲೈಂಗಿಕ ದೌರ್ಜನ್ಯ ಆರೋಪಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು (ಎನ್‌ಎಚ್‌ಆರ್‌ಸಿ) ಕೇಂದ್ರ ಕ್ರೀಡಾ ಸಚಿವಾಲಯ ಮತ್ತು ಭಾರತ ಕ್ರೀಡಾ ಪ್ರಾಧಿಕಾರಕ್ಕೆ (ಸಾಯ್) ನೋಟಿಸ್ ಜಾರಿಗೊಳಿಸಿದೆ.

ಘಟನೆಯನ್ನು ಸ್ವಯಂಪ್ರೇರಿತವಾಗಿ ತನಿಖೆಗೆ ಎತ್ತಿಕೊಂಡಿರುವ ಆಯೋಗವು, ಈ ಬಗ್ಗೆ ಕ್ರೀಡಾ ಸಚಿವಾಲಯ ಮತ್ತು ಪ್ರಾಧಿಕಾರದಿಂದ ವಿವರವಾದ ವರದಿ ಕೇಳಿದೆ.

‘ಲೈಂಗಿಕ ದೌರ್ಜನ್ಯದ ಬಗ್ಗೆ ದೂರು ನೀಡಿದ್ದ ಸೈಕ್ಲಿಸ್ಟ್‌ಅನ್ನು ವಿದೇಶದಿಂದ ವಾಪಸ್ ಕರೆಸಲಾಗಿತ್ತು. ಕಿರುಕುಳದ ಆರೋಪ ಹೊತ್ತಿರುವ ಕೋಚ್‌ಅನ್ನು ವಾಪಸ್ ಕರೆಸುವ ಬದಲು, ಸಂತ್ರಸ್ತೆಯನ್ನು ಕರೆಸಿದ್ದು ಸರಿಯಲ್ಲ. ಇದರಿಂದ ಆಕೆ ತರಬೇತಿಯಿಂದ ವಂಚಿತಳಾಗಿದ್ದಾಳೆ’ ಎಂದು ಆಯೋಗ ಹೇಳಿದೆ.

ಪ್ಯಾರಾ ಶೂಟಿಂಗ್: ರಾಹುಲ್‌ಗೆ ಎರಡು ಚಿನ್ನ

ನವದೆಹಲಿ (ಪಿಟಿಐ): ಭಾರತದ ರಾಹುಲ್ ಜಾಖರ್ ಅವರು ಫ್ರಾನ್ಸ್‌ನಲ್ಲಿ ನಡೆಯುತ್ತಿರುವ ವಿಶ್ವಕಪ್ ಪ್ಯಾರಾ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಎರಡು ಚಿನ್ನದ ಪದಕ ಗೆದ್ದುಕೊಂಡರು.

ಶುಕ್ರವಾರ ನಡೆದ 10 ಮೀ. ಏರ್ ಪಿಸ್ತೂಲ್ ವಿಭಾಗದಲ್ಲಿ ಅವರು 367 ಪಾಯಿಂಟ್ಸ್‌ಗಳೊಂದಿಗೆ ಅಗ್ರಸ್ಥಾನ ಪಡೆದರು. ಭಾರತದ ರುಬಿನ್ ಫ್ರಾನ್ಸಿಸ್ ಬೆಳ್ಳಿ ಗೆದ್ದರು. ಜಾಖರ್ ಅವರನ್ನೊಳಗೊಂಡ ಭಾರತ ತಂಡ ಇದೇ ವಿಭಾಗದಲ್ಲಿ ಚಿನ್ನ ಜಯಿಸಿತು.

ಜಿಲ್ಲಾ ಪಂಚಾಯತ್ ತುಮಕೂರು,
ಕಾರ್ಯಪಾಲಕ ಅಭಿಯಂತರರವರ ಕಚೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ತುಮಕೂರು ವಿಭಾಗ.
ದೂ:0816-2252937
ಸಂಖ್ಯೆ:10/ಕಾಪಾಅ/ಗ್ರಾಕು.ನೀ.ನೈ ವಿ/ತುಮ/ಟೆಂಡರ್/2022–23/639 ದಿನಾಂಕ 09.06.2022

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 10/2022–23
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ ಮತ್ತು ನೈರ್ಮಲ್ಯ ವಿಭಾಗ, ತುಮಕೂರು ಇವರು 2022–23 ನೇ ಸಾಲಿಗೆ ಏಕ–ಲಕೋಟೆ ಮತ್ತು ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಸೂಕ್ತ ನೊಂದಾಯಿತ ಗುತ್ತಿಗೆದಾರರಿಂದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್‌ನ ವಿವರ ಈ ಕೆಳಕಂಡಂತಿರುತ್ತದೆ. ತುಮಕೂರು ಜಿಲ್ಲೆ ವ್ಯಾಪ್ತಿಯಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಅನುಮೋದನೆಗೊಂಡಿರುವ ಪಾವಗಡ ತಾಲ್ಲೂಕಿನ 43 ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ (https://www.eproc.karnataka.gov.in) ಬಿಡ್ ಸಲ್ಲಿಸಬಹುದು ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ಅ) ಕನಿಷ್ಠ ಕಾಮಗಾರಿ ಮೊತ್ತ ರೂ.16.48 ಲಕ್ಷಗಳು, ಇ.ಎಂ.ಡಿ ಮೊತ್ತ ರೂ.20600/–ಗಳು ಹಾಗೂ ಆ) ಗರಿಷ್ಠ ಮೊತ್ತ ರೂ.85.90 ಲಕ್ಷಗಳು, ಇ.ಎಂ.ಡಿ ಮೊತ್ತ ರೂ.1,71,800/– ಗಳು (1) ಭರ್ತಿಮಾಡಿದ ಟೆಂಡರ್‌ನ್ನು ಸಲ್ಲಿಸುವ ಅಂತಿಮ ದಿನಾಂಕ : **18.06.2022** ಸಂಜೆ 5:00 ಘಂಟೆ ವರೆಗೆ (2) ಪೂರ್ವಭಾವಿ ಸಭೆ (KW–3 ಕಾಮಗಾರಿಗಳಿಗೆ) ದಿನಾಂಕ: **15.06.2022** ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ & ನೈರ್ಮಲ್ಯ ವಿಭಾಗ ತುಮಕೂರು (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **20.06.2022** ಸಂಜೆ 05.30 ಘಂಟೆಯ ನಂತರ (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: **24.06.2022** ಬೆಳಿಗ್ಗೆ 11.00 ಘಂಟೆಯ ನಂತರ.

ಸಹಿ/– ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,
ತುಮಕೂರು ವಿಭಾಗ, ತುಮಕೂರು

DIPR/TMK/194/MCA/2022-23